" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತಾರನೆಯ ಅಧಿವೇಶನ

24ನೇ ಮಾರ್ಚ್ 2022
ಗುರುವಾರ

## ವಿಷಯಾನುಕ್ರಮಣಿಕೆ {INDEX}

01. ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

2577– ಕೊಡಗು ಜಿಲ್ಲೆಯ ಭಾಗಮಂಡಲದಲ್ಲಿ ನಿರ್ಮಾಣಗೊಳ್ಳುತ್ತಿರುವ ಮೇಲು ಸೇತುವೆ ಕಾಮಗಾರಿ ಕುರಿತು

– ಶ್ರೀಮತಿ ಎಸ್.ವೀಣಾ ಅಚ್ಚಯ್ಯ

– ಶ್ರೀ ಗೋವಿಂದ ಎಂ.ಕಾರಜೋಳ (ಜಲಸಂಪನ್ಮೂಲ ಸಚಿವರು)

2590– ರಾಜ್ಯದ ಜಲಾಶಯಗಳ ಸಂಖ್ಯೆ ಮತ್ತು ಹೂಳು ತೆಗೆಯುವ ಬಗ್ಗೆ

– ಶ್ರೀ ಸಿ.ಎನ್.ಮಂಜೇಗೌಡ

– ಶ್ರೀ ಗೋವಿಂದ ಎಂ.ಕಾರಜೋಳ (ಜಲಸಂಪನ್ಮೂಲ ಸಚಿವರು)

2612– ರಾಜ್ಯದಲ್ಲಿರುವ ಕೆರೆಗಳ ಸಂಗ್ರಹವಾರು ಕುರಿತು

– ಶ್ರೀಮತಿ ಭಾರತಿ ಶೆಟ್ಟಿ

– ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು)

2596 – ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾಮಗಾರಿಗಳನ್ನು ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ (ಕೆ.ಆರ್.ಐ.ಡಿ.ಎಲ್) ಅಭಿವೃದ್ಧಿಪಡಿಸುತ್ತಿರುಗ ಬಗ್ಗೆ

– ಡಾ: ಕೆ. ಗೋವಿಂದರಾಜ್

– ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು)

---

**2601 – ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಬಗ್ಗೆ**

– ಶ್ರೀ ನಸೀರ್ ಅಹಮದ್

– ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು)

**2563 – ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ರಸ್ತೆಗಳ ಅಭಿವೃದ್ಧಿ ಮತ್ತು ನಿರ್ವಹಣೆ ಬಗ್ಗೆ**

– ಶ್ರೀ ಎಸ್.ರವಿ

– ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು)

**2540 – ಭೂ ಪರಿವರ್ತನೆಗೊಂಡ ಏಕ ನಿವೇಶನಗಳ ವಿಭಜನೆ ಕುರಿತು**

– ಶ್ರೀ ಯು.ಬಿ.ವೆಂಕಟೇಶ್

– ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು)

**2611 – ಸರ್ಕಾರಿ ನಿವೃತ್ತ ನೌಕರರ ಮೂಲ ಪಿಂಚಣಿ ಹೆಚ್ಚಳದ ಬಗ್ಗೆ**

– ಶ್ರೀ ಆಯನೂರು ಮಂಜುನಾಥ್

– ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು)

**2616 – BMRCL ನಲ್ಲಿ ನೇಮಕಾತಿ ಅಧಿಸೂಚನೆ ರದ್ದು ಮಾಡಿರುವ ಬಗ್ಗೆ**

– ಶ್ರೀ ಕೆ.ಟಿ.ಶ್ರೀಕಂಠೇಗೌಡ

– ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯ ಮಂತ್ರಿಗಳು)

**2560 – ಪೋಲೀಸ್ ಇಲಾಖೆಯ ಆರ್.ಪಿ.ಸಿ. ಹುದ್ದೆಯ ನೇಮಕಾತಿ ಕುರಿತು**

– ಶ್ರೀ ಅಡಗೂರ್ ಹೆಚ್.ವಿಶ್ವನಾಥ್

– ಶ್ರೀ ಅರಗ ಜ್ಞಾನೇಂದ್ರ (ಗೃಹ ಸಚಿವರು)

**2634 – ಚಾಮರಾಜಸಾಗರ ಜಲಾಶಯ ಹೂಳು ಎತ್ತಿ ನೀರನ್ನು ಬಿಡುವ ಬಗ್ಗೆ**

– ಶ್ರೀ ಕೆ.ಟಿ.ಶ್ರೀಕಂಠೇಗೌಡ

– ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು)

**2625– ನೀರಾವರಿ ಯೋಜನೆಗಳಿಗೆ ಬಿಡುಗಡೆ ಮಾಡಲಾದ ಅನುದಾನದ ಕುರಿತು**

– ಶ್ರೀ ಯು.ಬಿ.ವೆಂಕಟೇಶ್ (ಶ್ರೀ ಅಲ್ಲಂ ವೀರಭದ್ರಪ್ಪರವರ ಪರವಾಗಿ)

– ಶ್ರೀ ಗೋವಿಂದ ಎಂ.ಕಾರಜೋಳ (ಜಲಸಂಪನ್ಮೂಲ ಸಚಿವರು)

**2608 – ವಿವಿಐಪಿ ಮತ್ತು ವಿಐಪಿ ಗಣ್ಯ ವ್ಯಕ್ತಿಗಳ ಭದ್ರತೆ ಕುರಿತು**

– ಶ್ರೀ ಆರ್.ಬಿ.ತಿಮ್ಮಾಪೂರ

– ಶ್ರೀ ಅರಗ ಜ್ಞಾನೇಂದ್ರ (ಗೃಹ ಸಚಿವರು)

**1441 – ಅಲ್ಪಸಂಖ್ಯಾತರ ಸಾಮಾಜಿಕ ಅಭಿವೃದ್ಧಿಗಾಗಿ ಕಲ್ಯಾಣ ಕಾರ್ಯಕ್ರಮಗಳ ಕುರಿತು**

– ಶ್ರೀ ಸಿ.ಎಂ.ಇಬ್ರಾಹಿಂ

– ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು)

**2014 – ರಾಜ್ಯದಲ್ಲಿ ಗ್ರಾಹಕರ ಕಲ್ಯಾಣ ನಿಧಿ ಸ್ಥಾಪನೆ ಕುರಿತು**

– ಶ್ರೀ ಕೆ.ಎ.ತಿಪ್ಪೇಸ್ವಾಮಿ

– ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು)

**2049 – ಬೆಂಗಳೂರು ಮಹಾನಗರದ ರಸ್ತೆಗಳನ್ನು ವೈಜ್ಞಾನಿಕವಾಗಿ ಸುಸ್ಥಿತಿಗೆ ತರುವ ಬಗ್ಗೆ**

– ಡಾ: ಕೆ. ಗೋವಿಂದರಾಜ್

– ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು)

**2034 – ಸರ್ಕಾರಿ ಹುದ್ದೆಗಳನ್ನು ತುಂಬಲು ವಿಳಂಬ ಮಾಡುತ್ತಿರುವ ಬಗ್ಗೆ**

– ಶ್ರೀ ಎಸ್.ರವಿ

– ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**02. ವಿತ್ತೀಯ ಕಾರ್ಯಕಲಾಪಗಳು**

**2021-22ನೇ ಸಾಲಿನ ಪೂರಕ ಅಂದಾಜುಗಳ (ಮೂರನೇ ಹಾಗೂ ಅಂತಿಮ ಕಂತು) ಮಂಡನೆ**

**03. ಪ್ರಕಟಣೆ**

ಸದನದಲ್ಲಿ ಕಡ್ಡಾಯವಾಗಿ ಉಪಸ್ಥಿತರಿರಬೇಕಾದ ಸಚಿವರುಗಳು ಹಾಗೂ ಇಲಾಖಾಧಿಕಾರಿಗಳ ಕುರಿತು

**04. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ವಿಷಯ:- ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕಿನ ದೇವರಾಯನ ಸಮುದ್ರ ಗ್ರಾಮದಲ್ಲಿನ ವೃಷಬಾದ್ರಿ ಬೆಟ್ಟದ ಬಳಿ ಗಣಿಗಾರಿಕೆ ನಡೆಸುತ್ತಿರುವ ಬಗ್ಗೆ.**

- ಶ್ರೀ ಗೋವಿಂದ ರಾಜು
- ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

**ಆ) ವಿಷಯ: ಸಿ.ಟಿ.ಇ ಮತ್ತು ಡಯಟ್‌ಗಳಲ್ಲಿನ ಇ.ಎಲ್.ಟಿ.ಸಿ. ಬೋಧಕ ಹುದ್ದೆಗಳನ್ನು ರದ್ದುಪಡಿಸಿ ಬೇರೆಡೆಗೆ ಸ್ಥಳಾಂತರಿಸುವ ಬಗ್ಗೆ**

- ಶ್ರೀ ಮರಿತಿಬ್ಬೇಗೌಡ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಇ) ವಿಷಯ: 2018-19ನೇ ಮತ್ತು 2019-20ನೇ ಸಾಲಿನಲ್ಲಿ ಮಂಡ್ಯ ಜಿಲ್ಲೆಯಲ್ಲಿ ಪ್ರಾಯೋಜಿತ ಕಾರ್ಯಕ್ರಮಗಳ ಕಲಾವಿದರಿಗೆ ಗೌರವ ಸಂಭಾವನೆ ಪಾವತಿಸದೇ ಬಾಕಿ ಇರುವ ಬಗ್ಗೆ.**

- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಈ) ವಿಷಯ: ದಕ್ಷಿಣ ಕನ್ನಡ ಜಿಲ್ಲೆ ದೇವಸ್ಥಾನಗಳ ಜಾತ್ರೋತ್ಸವದಲ್ಲಿ ಹಿಂದುಗಳೇತರರಿಗೆ ಜಾತ್ರಾ ವ್ಯಾಪಾರಕ್ಕೆ ಅವಕಾಶ ಇಲ್ಲದಿರುವ ಬಗ್ಗೆ**

- ಶ್ರೀ ಸಿ.ಎಂ.ಇಬ್ರಾಹಿಂ
- ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು)

**ಉ) ವಿಷಯ: ಬೀದರ್ ಜಿಲ್ಲೆಯಲ್ಲಿರುವ ಪಾಪನಾಶ ಲಿಂಗೇಶ್ವರ ದೇವಸ್ಥಾನ ಕಟ್ಟಡ ಶಿಥಿಲಾವಸ್ಥೆಯಲ್ಲಿರುವ ಬಗ್ಗೆ.**

- ಶ್ರೀ ಅರವಿಂದ ಕುಮಾರ್ ಅರಳಿ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಊ) ವಿಷಯ: ಬೆಂಗಳೂರು ನಗರದ ಕಂಚಿಪುರ ಗ್ರಾಮದಲ್ಲಿ ಹರಿಯುತ್ತಿರುವ ವೃಷಭಾವತಿ ನದಿಗೆ ಖಾಸಗಿ ಕಟ್ಟಡ ಮಾಲೀಕರು ಅವಶೇಷಗಳನ್ನು ಸುರಿದು ಕೃಷಿ ಜಮೀನುಗಳಿಗೆ ಕೊಳವೆ ನೀರು ಹೋಗಿರುವ ಬಗ್ಗೆ**

- ಶ್ರೀ ಹೆಚ್.ಎಸ್.ಗೋಪಿನಾಥ್
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

---

**ಋ) ವಿಷಯ: ಪಾವಗಡದ ಅಪಘಾತದ ಹಿನ್ನೆಲೆಯಲ್ಲಿ ಬೆಳಗ್ಗೆ ಮತ್ತು ಪೀಕ್ ಅವರ್‌ನಲ್ಲಿ ಸರ್ಕಾರಿ ಬಸ್‌ಗಳ ಟ್ರಿಪ್ ಹೆಚ್ಚು ಮಾಡುವ ಬಗ್ಗೆ**

– ಶ್ರೀ ಕೆ.ಹರೀಶ್ ಕುಮಾರ್

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಎ) ವಿಷಯ: ವಿಜಯಪುರ, ಬಾಗಲಕೋಟೆ, ಗದಗ, ಕಲಬುರಗಿ, ಯಾದಗಿರಿ ಜಿಲ್ಲೆಗಳಲ್ಲಿ ಹಿಮೋಫಿಲಿಯಾ ರೋಗಕ್ಕೆ ಸಾರ್ವಜನಿಕರಿಗೆ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಿಸುವ ಬಗ್ಗೆ**

– ಶ್ರೀ ಯು.ಬಿ.ವೆಂಕಟೇಶ್

– ಶ್ರೀ ಡಾ: ಕೆ.ಸುಧಾಕರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು)

**ಏ) ವಿಷಯ: ಬೆಂಗಳೂರು ನಗರದ ಮಂಗನಹಳ್ಳಿಯ ಸೇತುವೆ ಬಳಿ ಇರುವ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಸ್ಫೋಟಗೊಂಡು ಶಿವರಾಜ್ ಮತ್ತು ಚೈತನ್ಯ ಇವರುಗಳಿಗೆ ಬೆಂಕಿ ತಗುಲಿ ಮೃತರಾಗಿರುವ ಬಗ್ಗೆ**

– ಶ್ರೀ ಮಂಜುನಾಥ ಭಂಡಾರಿ

– ಶ್ರೀ ವಿ.ಸುನೀಲ್ ಕುಮಾರ್

(ಇಂಧನ, ಕನ್ನಡ ಮತ್ತು ಸಂಸ್ಕೃತಿ ಸಚಿವರು )

**ಐ) ವಿಷಯ: ರಾಷ್ಟ್ರೀಯ ಆರೋಗ್ಯ ಅಭಿಯಾನದಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿರುವ 676 ಆಯುಷ್ ವೈದ್ಯರಿಗೆ ಕನಿಷ್ಠ ವೇತನ ನಿಗದಿ ಮಾಡದಿರುವ ಬಗ್ಗೆ**

– ಶ್ರೀ ಎಸ್.ವ್ಹಿ.ಸಂಕನೂರ

– ಶ್ರೀ ಡಾ: ಕೆ.ಸುಧಾಕರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು)

**ಒ) ವಿಷಯ: ಕೇಂದ್ರ ಸರ್ಕಾರದ ಕಛೇರಿಗಳಲ್ಲಿನ ಹುದ್ದೆಗಳಿಗೆ ಕನ್ನಡಿಗರಿಗೆ ಆದ್ಯತೆ ನೀಡುವ ಬಗ್ಗೆ**

– ಶ್ರೀ ಶಶೀಲ್ ಜಿ.ನಮೋಶಿ

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಓ) ವಿಷಯ: ರಾಜ್ಯ ಸರ್ಕಾರದ ಉಗ್ರಾಣ ನಿಗಮಕ್ಕೆ ರೈತ ಕಣಜ ಯೋಜನೆ ಪೂರ್ಣಗೊಳ್ಳದೇ ಇರುವ ಬಗ್ಗೆ**

– ಶ್ರೀ ಕೆ.ಎ.ತಿಪ್ಪೇಸ್ವಾಮಿ

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**೦5. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಪಟ್ಟ ಸಚಿವರ ಹೇಳಿಕೆಗಳು**

**ಅ) ದಿನಾಂಕ ೦9-೦3-2೦22ರಂದು ಶ್ರೀ ಸಲೀಂ ಅಹಮದ್‌ರವರು ದೇಶದ ವಿವಿಧ ವಿಶ್ವವಿದ್ಯಾಲಯಗಳ ನಕಲಿ ಅಂಕಪಟ್ಟಿ ಹಾಗೂ ಪ್ರಮಾಣ ಪತ್ರಗಳನ್ನು ನಕಲಿ ತಯಾರಿಸಿ ಹಣದ ಆಮಿಷಕ್ಕಾಗಿ ಮಾರಾಟ ಮಾಡುತ್ತಿರುವ ಜಾಲದ ಬಗ್ಗೆ ಪ್ರಸ್ತಾಪಿಸಿರುವ ವಿಷಯ**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

(ಉನ್ನತ ಶಿಕ್ಷಣ, ಐಟಿ ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಪರವಾಗಿ)

**ಆ) ದಿನಾಂಕ 22-೦3-2೦22ರಂದು ಶ್ರೀ ಮರಿತಿಬ್ಬೇಗೌಡರವರು ರಾಜ್ಯದ ಸರ್ಕಾರಿ ಹಾಗೂ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿನ ಬೋಧಕರಿಗೆ ವೇತನ ಬಿಡುಗಡೆ ಬಗ್ಗೆ ಪ್ರಸ್ತಾಪಿಸಿರುವ ವಿಷಯ**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

(ಉನ್ನತ ಶಿಕ್ಷಣ, ಐಟಿ ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಪರವಾಗಿ)

**ಇ) ದಿನಾಂಕ 22-03-2022ರಂದು ಶ್ರೀ ಚಿದಾನಂದ ಎಂ.ಗೌಡರವರು ಚಿತ್ರದುರ್ಗ ಜಿಲ್ಲೆಯ ಶಿರಾ ನಗರ ಪ್ರಾಚೀನ ಕಸ್ತೂರಿ ರಂಗಪ್ಪ ನಾಯಕ ಕೋಟೆ ರಕ್ಷಣೆಯ ಬಗ್ಗೆ ಪ್ರಸ್ತಾಪಿಸಿರುವ ವಿಷಯ**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು)
ಪ್ರವಾಸೋದ್ಯಮ ಹಾಗೂ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರ ಪರವಾಗಿ)

**ಈ) ದಿನಾಂಕ 23-03-2022ರಂದು ಶ್ರೀ ಪ್ರಕಾಶ್ ಕೆ.ರಾಥೋಡ್‌ರವರು ಬಸವ ಜಯಂತಿಯನ್ನು ಬಸವನ ಬಾಗೇವಾಡಿಯಲ್ಲಿ ವಿಜೃಂಭಣೆಯಿಂದ ಆಚರಿಸುವ ಬಗ್ಗೆ ಪ್ರಸ್ತಾಪಿಸಿರುವ ವಿಷಯ**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
(ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ)

**ಉ) ದಿನಾಂಕ 23-03-2022ರಂದು ಶ್ರೀ ಶಾಂತಾರಾಮ್ ಬುಡ್ನ ಸಿದ್ದಿರವರು ವಲಯ ಅರಣ್ಯಾಧಿಕಾರಿ ಹುದ್ದೆಯ ನೇರ ನೇಮಕಾತಿಯಲ್ಲಿ ಅರಣ್ಯ ಪದವೀಧರರಿಗೆ ಮೀಸಲಾತಿಯನ್ನು ಶೇ.75ರಿಂದ ಶೇ.50ಕ್ಕೆ ಕಡಿತಗೊಳಿಸಿರುವ ಬಗ್ಗೆ ಪ್ರಸ್ತಾಪಿಸಿರುವ ವಿಷಯ**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
(ಅರಣ್ಯ ಹಾಗೂ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರ ಪರವಾಗಿ)

**ಊ) ದಿನಾಂಕ 23-03-2022ರಂದು ಶ್ರೀ ಕೆ.ಹರೀಶ್ ಕುಮಾರ್‌ರವರು ಕಲ್ಲಿದ್ದಲು ಕೊರತೆಯಿಂದ ವಿದ್ಯುತ್ ಉತ್ಪಾದನೆ ಸ್ಥಗಿತಗೊಳಿಸಲಾಗಿರುವ ಬಗ್ಗೆ ಪ್ರಸ್ತಾಪಿಸಿರುವ ವಿಷಯ**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
(ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ)

**೦6. ಪ್ರಕಟಣೆ**

**ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಸಚಿವರುಗಳ ಕುರಿತು**

**೦7. ಅರ್ಧಗಂಟೆ ಕಾಲಾವಧಿ ಚರ್ಚೆ**

**ಅ) ವಿಷಯ: ಬೆಮಲ್ ಕಾರ್ಖಾನೆ ಖಾಸಗೀಕರಣ ಮಾಡುತ್ತಿರುವ ಬಗ್ಗೆ**

- ಶ್ರೀ ಗೋವಿಂದ ರಾಜು
- ಶ್ರೀ ನಸೀರ್ ಅಹಮದ್
- ಡಾ: ಮುರುಗೇಶ್ ಆರ್. ನಿರಾಣಿ
  (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು)
- ಶ್ರೀ ಎಂ.ಎಲ್.ಅನಿಲ್‌ಕುಮಾರ್
- ಶ್ರೀ ಮುನಿರಾಜು ಗೌಡ ಪಿ.ಎಂ.
- ಶ್ರೀ ಎಸ್.ಎಲ್.ಭೋಜೇಗೌಡ

ಆ) **ವಿಷಯ: ರಾಜ್ಯದಲ್ಲಿರುವ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಅಗ್ನಿ ಸುರಕ್ಷತೆ ಬಗ್ಗೆ**

- ಶ್ರೀ ಕೆ.ಹರೀಶ್‌ಕುಮಾರ್
- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಎಸ್.ವ್ಹಿ.ಸಂಕನೂರ
- ಶ್ರೀ ಮಂಜುನಾಥ್ ಭಂಡಾರಿ
- ಶ್ರೀ ಶಶೀಲ್ ಜಿ. ನಮೋಶಿ
- ಶ್ರೀ ಅರುಣ ಶಹಾಪೂರ
- ಶ್ರೀ ಮರಿತಿಬ್ಬೇಗೌಡ
- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಬಿ.ಸಿ. ನಾಗೇಶ್
  (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

**೦8. ಬೆಂಗಳೂರು ನಗರದ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಮತ್ತು ವಸಿಷ್ಠ ಸೌಹಾರ್ದ ಸಹಕಾರ ಬ್ಯಾಂಕ್‌ನ ಅವ್ಯವಹಾರ ಕುರಿತು**

– ಶ್ರೀ ಯು.ಬಿ.ವೆಂಕಟೇಶ್

– ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು)

– ಶ್ರೀ ಬಿ.ಕೆ. ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು)

**೦9. ನಿಯಮ 72ರ ಮೇರೆಗೆ**

**ಗಮನ ಸೆಳೆಯುವ ಸೂಚನೆಗಳು**

**(ಅ) ವಿಷಯ: ಮಂಡ್ಯ ವೈದ್ಯಕೀಯ ವಿಜ್ಞಾನ ಶಿಕ್ಷಣ ಸಂಸ್ಥೆಯಲ್ಲಿ ಅಸೋಸಿಯೇಟ್ ಪ್ರೊಫೆಸರ್‌ಗಳಿಗೆ ನಿವೃತ್ತಿ ವೇತನವನ್ನು ಮಂಜೂರು ಮಾಡುವ ಕುರಿತು**

– ಶ್ರೀ ಮರಿತಿಬ್ಬೇಗೌಡ

– ಶ್ರೀ ಡಾ: ಕೆ.ಸುಧಾಕರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು)

– ಶ್ರೀ ಆಯನೂರು ಮಂಜುನಾಥ್

– ಶ್ರೀ ಲಕ್ಷ್ಮಣ ಸಂಗಪ್ಪ ಸವದಿ

**10. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಚರ್ಚೆ**

**ವಿಷಯ: ಬಿ.ಎಮ್.ಆರ್.ಸಿ.ಎಲ್‌ಗೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿರುವ ಜಮೀನುಗಳನ್ನು ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸೆಸ್ ಸಂಸ್ಥೆಗೆ ಸೇರಿದ ಭೂಮಿಯನ್ನು ಕೆ.ಐ.ಎ.ಡಿ.ಬಿ. ವತಿಯಿಂದ ಪಡೆದಿರುವ ಕುರಿತು ಮುಂದುವರೆದ ಚರ್ಚೆ**

– ಶ್ರೀ ಕೆ.ಟಿ.ಶ್ರೀಕಂಠೇಗೌಡ

– ಶ್ರೀ ಪಿ.ಆರ್.ರಮೇಶ್

– ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು)

– ಶ್ರೀ ಎಸ್.ಎಲ್.ಭೋಜೇಗೌಡ

– ಶ್ರೀ ಹೆಚ್.ಎಸ್.ಗೋಪಿನಾಥ್

– ಶ್ರೀ ಮುನಿರಾಜು ಗೌಡ ಪಿ.ಎಂ.

– ಡಾ: ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು)

– ಶ್ರೀ ಕೆ.ಎ.ತಿಪ್ಪೇಸ್ವಾಮಿ

– ಶ್ರೀ ಸಿ.ಸಿ.ಪಾಟೀಲ್ (ಲೋಕೋಪಯೋಗಿ ಸಚಿವರು)

**11. ನಿಯಮ 72ರ ಮೇರೆಗೆ ಚರ್ಚೆ**

**ಗಮನ ಸೆಳೆಯುವ ಸೂಚನೆಗಳು**

**(ಆ) ವಿಷಯ: ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಂಬತ್ತಳ್ಳಿ ಸರ್ವೆ ನಂ.85 ನೆಲ್ಲೂ ರೆಡ್ಡಿ ಕ್ವಾರಿ ಪ್ರದೇಶದಲ್ಲಿ ಅನಧಿಕೃತ ಜೈವಿಕ ತ್ಯಾಜ್ಯದ ವಿಲೇವಾರಿಯಿಂದ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಾಸಿಸುತ್ತಿರುವ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಕುರಿತು**

– ಶ್ರೀ ಮುನಿರಾಜುಗೌಡ ಪಿ.ಎಂ.

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು)
(ಮುಖ್ಯ ಮಂತ್ರಿಗಳ ಪರವಾಗಿ)

– ಶ್ರೀ ಮೋಹನ್‌ಕುಮಾರ್ ಕೊಂಡಜ್ಜಿ

**ಇ) ವಿಷಯ: ಮೈಸೂರು ನಗರದಲ್ಲಿ ಚಿತ್ರ ನಗರಿ (ಫಿಲಂ ಸಿಟಿ) ನಿರ್ಮಾಣಕ್ಕೆ ಸರ್ಕಾರದಿಂದ ಆಗುತ್ತಿರುವ ವಿಳಂಬದ ಕುರಿತು**

– ಶ್ರೀ ಸಿ.ಎನ್.ಮಂಜೇಗೌಡ

– ಶ್ರೀ ಕೋಟ ಶ್ರೀನಿವಾಸ ಪೂಜಾರಿ
(ಸಭಾನಾಯಕರು) (ಮುಖ್ಯಮಂತ್ರಿಗಳ ಪರವಾಗಿ)

~*~*~*~*~

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

---

(584)24.3.2022/10.40/ಎಂ.ಎಂ-ಎ.ಕೆ

## ಕರ್ನಾಟಕ ವಿಧಾನ ಪರಿಷತ್ತು

ಗುರುವಾರ, 24 ಮಾರ್ಚ್ 2022

ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಗ್ಗೆ 10 ಗಂಟೆ 41 ನಿಮಿಷಕ್ಕೆ ಸಮಾವೇಶಗೊಂಡಿತು.

ಸಭಾಪತಿ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಯವರು ಸದನಕ್ಕೆ ಎರಡು ನಿಮಿಷ ತಡವಾಗಿ ಬರುತ್ತೇನೆಂದು ಹೇಳಿದ್ದಾರೆ.

೦1. **ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಪ್ರಶ್ನೆ ಸಂಖ್ಯೆ: 2577**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೇ, ಕೊಡಗು ಜಿಲ್ಲೆಯ ಭಾಗಮಂಡಲದಲ್ಲಿ ಕಾವೇರಿ ನೀರಾವರಿ ನಿಗಮದ ವತಿಯಿಂದ ಮೇಲುಸೇತುವೆ ನಿರ್ಮಾಣವಾಗಿದೆ. ಆ ಕಾಮಗಾರಿ ಪೂರ್ಣಗೊಂಡಿದೆಯೇ ಎಂದು ಕೇಳಿದ್ದೇನೆ, ಅದಕ್ಕೆ ಕಾಮಗಾರಿ ಪ್ರಗತಿಯಲ್ಲಿದೆ ಎಂದು ಉತ್ತರ ಕೊಟ್ಟಿದ್ದಾರೆ. ಇದರ ಕಾಮಗಾರಿಯನ್ನು ದಿನಾಂಕ 26-2-2018ರಂದು ಪ್ರಾರಂಭ ಮಾಡಿದ್ದಾರೆ. ಆ ಕಾಮಗಾರಿ 2018ಕ್ಕೆ ಮುಕ್ತಾಯವಾಗಬೇಕೆಂದು ಇತ್ತು. ಕಾಮಗಾರಿಯನ್ನು ದಿನಾಂಕ 25-8-2019ರೊಳಗೆ ಪೂರ್ಣಗೊಳಿಸಬೇಕಾಗಿತ್ತು. ಮಳೆಗಾಲದಲ್ಲಿ ನಮ್ಮ ಕಡೆ 4-5 ತಿಂಗಳು ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಈಗ ಕೆಲಸ ಮಾಡುತ್ತಿದ್ದಾರೆ. ಅದಕ್ಕೆ ಹೆಚ್ಚಿನ ಒತ್ತು ಕೊಡಬೇಕೆಂದು ಕೇಳಬಯಸುತ್ತೇನೆ. ನಾವು 2016 ರಿಂದಲೂ ಮೇಲುಸೇತುವೆಗಾಗಿ ಕಾಯುತ್ತಿದ್ದೇವೆ. ನಿಮಗೆಲ್ಲರಿಗೂ ಗೊತ್ತಿರುವ ಹಾಗೆ ಮಳೆಗಾಲದಲ್ಲಿ ವಿಪರೀತ ಮಳೆಯಾದರೆ ಅಲ್ಲಿನ ಜನರಿಗೆ ಓಡಾಡಲೂ ಸಹ ತೊಂದರೆಯಾಗುತ್ತದೆ. ಹಾಗಾಗಿ ಈ ಕಾಮಗಾರಿಯನ್ನು ಚುರುಕುಗೊಳಿಸಬೇಕೆಂದು ಕಳೆದ ಬಾರಿ ಸದನ ನಡೆದಾಗಲೂ ಕೇಳಿದ್ದೇನೆ. ಹಾಗಾಗಿ ಈ ಕಾಮಗಾರಿಯನ್ನು ಆದಷ್ಟು ಶೀಘ್ರವಾಗಿ ಮಾಡಿಕೊಡಬೇಕು. ಕೆಲವು ಅವೈಜ್ಞಾನಿಕ ಕಾಮಗಾರಿಗಳು ಅಂದರೆ ಒಳಚರಂಡಿ ವ್ಯವಸ್ಥೆ ಇರಬಹುದು ಯಾವುದೇ ಕಾರಣಕ್ಕೂ ಕಲುಷಿತ ನೀರು ಸಂಗಮಕ್ಕೆ ಸೇರದ ಹಾಗೆ ತಾವು ಮುತುವರ್ಜಿ ವಹಿಸಬೇಕೆಂದು ಕೋರುತ್ತೇನೆ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ದಿನಾಂಕ 04-10-2018ರಂದು 30 ಕೋಟಿ ವೆಚ್ಚದ ಟೆಂಡರ್ ಆಗಿತ್ತು. 18 ತಿಂಗಳ ಕಾಲಾವಧಿಯಲ್ಲಿ ಆ ಕಾಮಗಾರಿಯನ್ನು ಮುಗಿಸಬೇಕಾಗಿತ್ತು. ಆದರೆ ಕಳೆದ ಎರಡು ವರ್ಷ ಮಳೆ ಜಾಸ್ತಿಯಾದುದರಿಂದ ನಮಗೆ ಕೆಲಸ ಮಾಡುವುದಕ್ಕೆ ಅನುಕೂಲತೆಯಾಗಲಿಲ್ಲ. ಅದಲ್ಲದೇ ಅಲ್ಲಿ ಭೂಸ್ವಾಧೀನದ ತೊಂದರೆಯೂ ಇತ್ತು. ವಿದ್ಯುತ್ ಕಂಬಗಳನ್ನು ಶಿಫ್ಟ್ ಮಾಡುವುದು ಕೂಡ ಸಮಸ್ಯೆಯಾಗಿ ಪರಿಣಮಿಸಿತ್ತು. ಈಗ ಭೂಸ್ವಾಧೀನ ಸೇರಿದಂತೆ ಅವೆಲ್ಲವನ್ನೂ ಅಟೆಂಡ್ ಮಾಡಿದ್ದೇವೆ. ಜುಲೈ 2022ರೊಳಗೆ ಮುಗಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

**ಶ್ರೀ ಎಸ್. ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಲ್ಲಿ ನನ್ನದೊಂದು ಮನವಿ. ಅಲ್ಲಿ ಖಾಸಗಿ ಜಾಗ ಕೊಟ್ಟವರಿಗೆಲ್ಲಾ ಹಣಪಾವತಿ ಮಾಡಿದ್ದಾರೆ. ಅಲ್ಲಿ ದೇವಸ್ಥಾನದ ಸ್ವಲ್ಪ ಜಾಗವನ್ನೂ ಕೂಡ ಮೇಲುಸೇತುವೆಗಾಗಿ ಬಿಟ್ಟುಕೊಟ್ಟಿದ್ದಾರೆ. ಆದ್ದರಿಂದ ದೇವಸ್ಥಾನಕ್ಕು ಕೂಡ ಸ್ವಲ್ಪ ಹಣವನ್ನು ಬಿಡುಗಡೆ ಮಾಡಬೇಕೆಂದು ತಮ್ಮಲ್ಲಿ ಕೇಳಬಯಸುತ್ತೇನೆ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ದೇವಸ್ಥಾನದ್ದಾಗಿರಬಹುದು ಅಥವಾ ಯಾರದಾದರೂ ಖಾಸಗಿ ಆಸ್ತಿ ಆಗಿರಬಹುದು ಇನ್ನೊಂದು ಇಲಾಖೆಗೆ ಸೇರಿದ ಸರ್ಕಾರದ ಆಸ್ತಿಯಾಗಿರಬಹುದು land acquisition payment ಅನ್ನು ಖಂಡಿತವಾಗಿಯೂ ಮಾಡುತ್ತೇವೆ. ಆ ಮಾಹಿತಿಯನ್ನು ತರಿಸಿಕೊಳ್ಳುತ್ತೇನೆ ಅಥವಾ ತಮ್ಮ ಬಳಿ ಮಾಹಿತಿ ಇದ್ದರೆ ಕೊಡಿ, ನಾನು ನಿರ್ದೇಶನ ಕೊಡುತ್ತೇನೆ.

**ಪ್ರಶ್ನೆ ಸಂಖ್ಯೆ: 2608**

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಆರ್.ಬಿ. ತಿಮ್ಮಾಪೂರರವರು ಗೈರುಹಾಜರಾಗಿದ್ದರು)**

---

**ಪ್ರಶ್ನೆ ಸಂಖ್ಯೆ: 2590**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಸಿ.ಎನ್. ಮಂಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಕೇಳಿದಂತಹ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ನೀಡಿದ್ದಾರೆ. ಆದರೆ ಕೆ.ಆರ್.ಎಸ್ ನಿರ್ಮಾಣದ ಬಗ್ಗೆ ಮಾನ್ಯ ಸಚಿವರಿಗೆ ದಿನಾಂಕ ಗೊತ್ತಿಲ್ಲವೆಂದು ನಮೂನೆಯಲ್ಲಿ ತಿಳಿಸಿದ್ದಾರೆ. ಇವತ್ತಿನ ದಿವಸ ಸುಮಾರು 133 ಟಿ.ಎಂ.ಸಿ ನೀರು ತುಂಬಿರುವ ಕೆರೆ ಕಟ್ಟೆಗಳು, ಅಣೆಕಟ್ಟೆಗಳು ಏನಿವೆ ಅದರಲ್ಲಿ ಸುಮಾರು 33 ಟಿ.ಎಂ.ಸಿ ಅಷ್ಟು ಹೂಳು ತುಂಬಿರುತ್ತದೆ. ಅವೆಲ್ಲವನ್ನೂ ಗಮನಿಸಿದಾಗ ಪ್ರತಿ ವರ್ಷ ಜಲ ತುಂಬುವ ಸಮಯದಲ್ಲಿ ನೀರು ವ್ಯರ್ಥವಾಗಿ ಹರಿದು ಸಮುದ್ರವನ್ನು ಸೇರುತ್ತಿದೆ. ಇದರಿಂದ ರೈತರಿಗೆ ಅನುಕೂಲವಾಗುತ್ತಿಲ್ಲವೆಂದು ಮಾನ್ಯ ಸಚಿವರಲ್ಲಿ ಪ್ರಶ್ನೆ ಕೇಳಿದ್ದೆ. ಅದಕ್ಕೆ ಯಾವುದೇ ರೀತಿಯ ಉತ್ತರವನ್ನು ಸಚಿವರು ಕೊಟ್ಟಿಲ್ಲ. ಇದೇ ರೀತಿಯಲ್ಲಿ ಮೈಸೂರು ಮತ್ತು ಚಾಮರಾಜನಗರ ಕ್ಷೇತ್ರದಲ್ಲಿ ಎಲ್ಲಾ ಜಲಾಶಯಗಳು ತುಂಬಿದ್ದರೂ ಕೂಡ ಅದರಲ್ಲಿ ಹೂಳಿನ ಪ್ರಮಾಣ ಜಾಸ್ತಿ ಇರುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಅದನ್ನು ಸಾಬೀತುಪಡಿಸಬೇಕೆಂದರೆ ಅದಕ್ಕೆ ನಾನು ವ್ಯವಸ್ಥೆ ಮಾಡುತ್ತೇನೆ. ಏಕೆಂದರೆ ಅಲ್ಲಿ ಹೂಳನ್ನು ತೆಗೆದಿಲ್ಲ. ತಾವು ಅನುಬಂಧದಲ್ಲಿ ತಿಳಿಸಿರುವಂತೆ ಎಲ್ಲಾ ಹೂಳನ್ನೂ ತೆಗೆದಿದ್ದೇವೆ ಎಂದು ತಿಳಿಸಲಾಗಿದೆ. ಆದರೆ, ಕೆಲವು ಕೆರೆಕಟ್ಟೆಗಳಲ್ಲಿ ಮತ್ತು ಡ್ಯಾಂ ಗಳಲ್ಲಿ ತುಂಬಿರುವ ಹೂಳನ್ನು ತೆಗೆದರೆ ಬಹಳ ಅನುಕೂಲವಾಗುತ್ತದೆಂದು ತಮ್ಮಲ್ಲಿ ಕೇಳಬಯಸುತ್ತೇನೆ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಕೊಟ್ಟಿದ್ದೇವೆ ಆದರೆ ಮಾನ್ಯ ಸದಸ್ಯರು ಏತಕ್ಕೋ ಗೊಂದಲದಲ್ಲಿದ್ದಾರೆ ಎಂದು ಕಾಣುತ್ತದೆ.

**ಶ್ರೀ ಸಿ.ಎನ್. ಮಂಜೇಗೌಡ:-** ನಾನು confuse ಆಗಿಲ್ಲ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ನಾನು ಉತ್ತರ ಹೇಳಿದ ಮೇಲೆ ಅವರಿಗೆ ಸಮಾಧಾನವಾಗಿಲ್ಲ ಎಂದರೆ ಕೇಳಬಹುದು. 58 ಜಲಾಶಯಗಳಲ್ಲಿ ಎರಡು ಜಲಾಶಯದಲ್ಲಿ ಹೂಳಿದೆ. ಮೊದಲನೆಯದಾಗಿ ಹಾರಂಗಿ ಜಲಾಶಯದಲ್ಲಿ ಸುಮಾರು 1.2 ಟಿ.ಎಂ.ಸಿ

ಅಷ್ಟು ಹೂಳು ಸಂಗ್ರಹವಾಗಿದೆ. ಎರಡನೆಯದು ತುಂಗಭದ್ರಾ ಜಲಾಶಯದಲ್ಲಿ ಸುಮಾರು 30 ಟಿ.ಎಂ.ಸಿ., ಗಿಂತಲೂ ಹೆಚ್ಚು ಹೂಳು ಸಂಗ್ರಹವಾಗಿದೆ. ಇನ್ನುಳಿದ ಯಾವುದೇ ಜಲಾಶಯಗಳಲ್ಲಿ ಹೂಳಿನ ಪ್ರಮಾಣ ಇಲ್ಲ. ಅದಕ್ಕಾಗಿ ಎರಡು ಜಲಾಶಯಗಳನ್ನು ಹೊರತುಪಡಿಸಿ ಎಲ್ಲೂ ಕೂಡ ಹೂಳು ಸಂಗ್ರಹವಾಗಿಲ್ಲ ಎಂದು ಹೇಳಿದ್ದೇವೆ. ಅಲ್ಪಸ್ವಲ್ಪ ಇದ್ದರೆ ಅದು ಲೆಕ್ಕಕ್ಕೆ ಬರುವುದಿಲ್ಲ. ಟಿ.ಎಂ.ಸಿ ಅಷ್ಟು ನೀರು ಸಂಗ್ರಹ ಮಾಡುವುದು ಕಡಿಮೆಯಾಗುವುದು ಎರಡು ಜಲಾಶಯಗಳಲ್ಲಿ ಮಾತ್ರ. ತುಂಗಭದ್ರಾ ಜಲಾಶಯದಲ್ಲಿ 30 ಟಿ.ಎಂ.ಸಿ ಗಿಂತಲೂ ಅಧಿಕವಾಗಿದೆ ಮತ್ತು ಹಾರಂಗಿ ಜಲಾಶಯದಲ್ಲಿ 1.2 ಟಿ.ಎಂ.ಸಿ ಅಷ್ಟು ಹೂಳು ಸಂಗ್ರಹವಾಗಿದೆ. ಇನ್ನುಳಿದಂತೆ ಯಾವುದೇ ಜಲಾಶಯಗಳಲ್ಲ. ಮಾನ್ಯ ಸದಸ್ಯರ ಬಳಿ ಮಾಹಿತಿ ಇದ್ದರೆ ಸರ್ಕಾರಕ್ಕೆ ಕಳುಹಿಸಲಿ ಖಂಡಿತವಾಗಿಯೂ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಸಿ.ಎನ್. ಮಂಜೇಗೌಡ:-** ಮಾನ್ಯ ಸಭಾಪತಿಯವರೇ, ಹೂಳು ತುಂಬಿರುವ ಬಗ್ಗೆ ತಿಳಿಯಲು ನಾವು ಒಂದು ಪಾತ್ರೆಯಲ್ಲಿ ನೀರು ತುಂಬಿಟ್ಟರೆ ಸಾಕು ಅದರಲ್ಲಿ ಶೇ.20ರಷ್ಟು ಹೂಳು ಪಾತ್ರೆಯ ತಳದಲ್ಲಿ ಕುಳಿತಿರುತ್ತದೆ.

**ಸಭಾಪತಿಯವರು:-** ಮಾನ್ಯ ಮಂಜೇಗೌಡರೇ, ನಿಮ್ಮ ಕಡೆ ಮಾಹಿತಿ ಇದ್ದರೆ ಕೊಡಿ.

**ಶ್ರೀ ಸಿ.ಎನ್. ಮಂಜೇಗೌಡ:-** ಈ ಡ್ಯಾಂ ನಲ್ಲಿ ಹೂಳು ತುಂಬಿಕೊಂಡು ರೈತರಿಗೆ ಅನುಕೂಲವಾಗುತ್ತಿಲ್ಲ, ನೀರು ಹೊಳೆಗೆ ಸೇರುತ್ತಿದೆ. ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಹೇಳುವುದೇನೆಂದರೆ, 2018-19ರಲ್ಲಿ ಹಣ ಶೇಖರಣೆಯಾಗಿರುವ ಬಗ್ಗೆ ಏನು ಮಾಹಿತಿ ನೀಡಿದ್ದಾರೆ 2020ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ ಎಂದು ಹೇಳಿದ್ದಾರೆ. ಆದರೆ ದಿನಾಂಕ 16.05-2020 ರಿಂದ ಇದುವರೆಗೂ ಕೂಡ ಆ ಕಾಮಗಾರಿಯನ್ನು ಏತಕ್ಕೆ ಇನ್ನೂ ಪೂರ್ಣಗೊಳಿಸಿಲ್ಲ? ಅದನ್ನು ಪೂರ್ಣಗೊಳಿಸಲು ಎರಡು ವರ್ಷ ಬೇಕೇ ಎಂದು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಮಳೆ ನೀರು ಹರಿದು ಬರುವಾಗ ರಾಡಿ ನೀರು ಬರುತ್ತದೆ. ಅದನ್ನು silt ಎಂದು consider ಮಾಡುವುದಕ್ಕಾಗುವುದಿಲ್ಲ.

ಮಾನ್ಯ ಶಾಸಕರಿಗೆ ಹೇಳಬಯಸುವುದೇನೆಂದರೆ, ಅದು silt ಎಂದು consider ಆಗುವುದಿಲ್ಲ, ಆ ಪ್ರಮಾಣದಲ್ಲಿ silt ಬರುವುದಿಲ್ಲ. ಎರಡನೆಯದಾಗಿ ತಾವು ಟೆಂಡರ್ ಬಗ್ಗೆ ಹೇಳಿದಿರಿ, ೩೯ ಕೋಟಿ ರೂಪಾಯಿ ಟೆಂಡರ್ ಕರೆಯುವುದಕ್ಕೆ ಸೂಚನೆ ಕೊಟ್ಟಿದ್ದೇವೆ, ಈಗಾಗಲೇ ಪ್ರಕ್ರಿಯೆ ಪ್ರಾರಂಭದಲ್ಲಿದೆ, ಏಪ್ರಿಲ್ ನಲ್ಲಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುತ್ತದೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(585) 24-03-2022 KH/RN 10-50

**(ಸಭಾಪತಿಯವರ ಉಪಸ್ಥಿತಿ)**

**ಪ್ರಶ್ನೆ ಸಂಖ್ಯೆ: 2612**

**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು 3670 ಕೆರೆಗಳ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಇವತ್ತು ಅರ್ಧಕ್ಕಿಂತ ಹೆಚ್ಚು ಕೆರೆಗಳಲ್ಲಿ ಶೇಕಡಾ 50 ಕ್ಕಿಂತ ಕಡಿಮೆ ನೀರು ಸಂಗ್ರಹವಾಗಿದೆ. 347 ಕೆರೆಗಳಲ್ಲಿ ನೀರಿನ ಸಂಗ್ರಹ ಇರುವುದಿಲ್ಲ ಎಂದು ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಇವತ್ತು "ಮಿಲಟರಿ ಸಿದ್ಧತಾ ವ್ಯವಸ್ಥೆ" ಯನ್ನು ಸರ್ಕಾರ ಹಾಗೂ ಸಮುದಾಯ ಪರಿಗಣಿಸಬೇಕು. ಕೇವಲ NREGA (National Rural Employment Guarantee Act) ಅಡಿಯಲ್ಲಿ ಕೆರೆಗಳ ಹೂಳೆತ್ತುವುದು, ಅದು-ಇದು ಕೆಲಸಗಳು ಆಗುತ್ತದೆ. ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿಗೆ ಸಾವಿರ ಸಾವಿರ ಕೋಟಿ ರೂಪಾಯಿಗಳನ್ನು ಇಡುತ್ತಾರೆ. ಇದು ಜೀವನದಿ. ಒಂದು ಕೆರೆ ಸಮೃದ್ಧಿಯಾದರೆ, 10 ರಿಂದ 30 ಹಳ್ಳಿಗಳು ಅಭಿವೃದ್ಧಿಯಾಗುತ್ತದೆ. ಆದ್ದರಿಂದ, ಇದಕ್ಕೆ ತಾವು ಒತ್ತು ಕೊಡಬೇಕು. ದಯವಿಟ್ಟು, ಮಾನ್ಯ ಸಚಿವರು ಇದರ ಬಗ್ಗೆ ಯೋಚಿಸಬೇಕು. "ಎಲ್ಲಾ ಕೆರೆಗಳನ್ನು ಸಮಗ್ರವಾಗಿ ಸಂಪೂರ್ಣ ಸುಸ್ಥಿತಿಗೆ ತರಲು ಅವಶ್ಯವಿರುವ ಹಣಕಾಸಿನ ಬೇಡಿಕೆ ಮಾಹಿತಿಯನ್ನು ನಿಖರವಾಗಿ ಲೆಕ್ಕಾಚಾರ ಮಾಡುವುದು ಕಷ್ಟ ಸಾಧ್ಯ" ಎಂದು ಮಾನ್ಯ ಸಚಿವರು ಉತ್ತರದಲ್ಲಿ ಕೊಟ್ಟಿದ್ದಾರೆ. ದಯವಿಟ್ಟು, ಮಾನ್ಯ ಸಚಿವರು ಇದರ ಬಗ್ಗೆ ಉದಾಸೀನ ಮಾಡಬಾರದು. ಕೆರೆವಾರು ಅಂದಾಜನ್ನು ಸಿದ್ಧಪಡಿಸಲು ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ? ಎನ್ನುವ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ತಿಳಿಸಬೇಕು. ಅದೇ ರೀತಿ "ಕೇಂದ್ರ ಪುರಸ್ಕೃತ ಯೋಜನೆ"ಗಳನ್ನು ಮಾರ್ಗಸೂಚಿಯನ್ವಯ ಪ್ರಸ್ತಾವನೆಗಳನ್ನು ಮತ್ತಷ್ಟು ಕ್ರಿಯಾಶೀಲರನ್ನಾಗಿ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ತೆರೆದ ಕಾಲುವೆ ಮೂಲಕ ಹೋಗುವಂತಹ ನೀರಿಗೂ ಮತ್ತು ಕೆರೆಯಿಂದ ಹೋಗುವ ನೀರು ಜಾಸ್ತಿ ಪೋಲಾಗುತ್ತದೆ. ಉದಾಹರಣೆಗೆ ತೆರೆದ ಕಾಲುವೆಯಿಂದ ಹೋಗುವ ನೀರನ್ನು ರೈತರ ಗದ್ದೆಗೆ ಬಿಟ್ಟರೆ, 24 ಗಂಟೆಗಳ ಕಾಲ ನೀರು ಪೋಲಾಗುತ್ತಾ ಹೋಗುತ್ತದೆ. ನಾನು

ಒಂದು ಪತ್ರಿಕೆಯಲ್ಲಿ ಓದಿದ್ದೆ. ಮಹಾರಾಷ್ಟ್ರದಲ್ಲಿ ಪೈಪ್‌ಗಳ ಮೂಲಕ ಇದನ್ನು ಹಾಕುವುದಕ್ಕೆ ಆಗುತ್ತದೆಯೇ ಎನ್ನುವ ಬಗ್ಗೆ ಸರ್ಕಾರ ಯೋಚನೆ ಮಾಡಬೇಕೆಂದು ವಿನಂತಿ ಮಾಡುತ್ತೇನೆ. ನನಗೆ ನೆನಪಿರುವ ಪ್ರಕಾರ 3-4 ವರ್ಷಗಳ ಹಿಂದೆ ಮಧುಗಿರಿಯ ಶಾಸಕ ರಾಜಣ್ಣ ಎನ್ನುವವರು ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದರು. ದನಕರುಗಳು ಮತ್ತು ಮನುಷ್ಯರು ಕುಡಿಯುವುದಕ್ಕೆ ಮಾತ್ರ ನೀರನ್ನು ಬಳಸುವಂತಹ ವ್ಯವಸ್ಥೆ ಮಾಡಿದ್ದರು. ಈ ರೀತಿಯ ಕಾಳಜಿಯನ್ನು ಬರಗಾಲದ ಪರಿಸ್ಥಿತಿಯಲ್ಲಿ ಮಾಡಿದರು. ಇವತ್ತು ನಾನು ಸರ್ಕಾರದಲ್ಲಿ ತಮ್ಮ ಮೂಲಕ ವಿನಂತಿ ಮಾಡುವುದೇನೆಂದರೆ, ನೀರು ಹರಿಯುವ ಪಥಗಳು, ಸಕಾಲಕ್ಕೆ ಎಲ್ಲೆಲ್ಲಿ ನೀರು ಕೆರೆಗೆ ಬಂದು ಸೇರುತ್ತದೆಯೋ, ಅಲ್ಲಿ ಜಮೀನುಗಳನ್ನು ಮಾಡುವಂತಹದ್ದು ಆಗಬೇಕು. ಇವತ್ತು ಆ ಪಥವನ್ನು ಹಾಳು ಮಾಡುವಂತಹ ವ್ಯವಸ್ಥೆಯಾಗಿದೆ. ಇದನ್ನು ಕಂಡುಹಿಡಿದು ಅವರಿಗೆ ತೀವ್ರವಾದ ಶಿಕ್ಷೆ ಕೊಡಬೇಕು. ಅದನ್ನು ತೆರವು ಮಾಡಬೇಕು. ಈ ಕೆರೆಗಳನ್ನು ನಮ್ಮ ರಾಜರು, ಮಹಾರಾಜರು ಮಾಡಿರುವಂತಹ ಕೆರೆಗಳಾಗಿದ್ದು, ಇವತ್ತು ಹೊಸ ಕೆರೆಗಳನ್ನು ಯಾರು ಸಹಾ ಸೃಷ್ಟಿ ಮಾಡಿಲ್ಲ? ಇವತ್ತು ಆ ಕೆರೆಗಳನ್ನು ಉಳಿಸುವುದಕ್ಕೆ ಆಗುತ್ತಿಲ್ಲವೆನ್ನುವ ನೋವು ನನಗೆ ಇದೆ. ಇದು ಬಹಳ ಮುಖ್ಯ. ಮಿಲಟರಿ ಸಿದ್ಧತೆಯಲ್ಲಿ ಈ ಕೆರೆಗಳನ್ನು ಅಭಿವೃದ್ಧಿ ಮಾಡಿದರೆ, ಇವತ್ತು ಮಹಾದಾಯಿ ಯೋಜನೆಯ ಬಗ್ಗೆ ಬಹಳ ಒತ್ತು ಕೊಡುತ್ತೇವೆ. ಆದರೆ, ಇವತ್ತು ಕೆರೆಗಳು ಹಳ್ಳಿ ಹಳ್ಳಿಯ ಜೀವನದಿ. ಆದ್ದರಿಂದ, ಅದಕ್ಕೆ ಒತ್ತು ಕೊಟ್ಟಂತಹ ರೀತಿಯಲ್ಲಿಯೇ ಈ ಕೆರೆಗಳ ಅಭಿವೃದ್ಧಿ ಬಗ್ಗೆಯೂ ಸಹ ಒತ್ತು ಕೊಡಬೇಕೆಂದು ತಮ್ಮ ಮೂಲಕ ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರಿಗೆ ಕೊಟ್ಟಷ್ಟು ಸಮಯ ನನಗೆ ಕೊಟ್ಟರೆ ನಾನು ಇದಕ್ಕೆ ಉತ್ತರ ಕೊಡುತ್ತೇನೆ. ಮಾನ್ಯ ಭಾರತಿ ಶೆಟ್ಟಿಯವರು ಹೇಳಿರುವುದು ನಿಜ. ನಮ್ಮ ರಾಜ್ಯದಲ್ಲಿ 35 ರಿಂದ 36 ಸಾವಿರ ಕೆರೆಗಳು ಇವೆ. ಅದರಲ್ಲಿ 3670 ಕೆರೆಗಳು ಸಣ್ಣ ನೀರಾವರಿ ಇಲಾಖೆಗೆ ಬರುತ್ತದೆ. ಇದನ್ನು ಕೆಲವು ಕಡೆ ಕೆನಾಲ್ ನೀರು, ಮತ್ತೊಂದು ಕಡೆ ನೀರು ಇದ್ದರೆ ನಮ್ಮ ಇಲಾಖೆಯಿಂದ ತುಂಬಿಸುವಂತಹ ಕೆಲಸ ಮಾಡುತ್ತೇವೆ. ಇನ್ನುಳಿದಿರುವುದೆಲ್ಲಾ ನೈಸರ್ಗಿಕವಾಗಿ ಮಳೆ ಬಂದು ಕೆರೆ ತುಂಬುತ್ತದೆ. ಇದ್ದರಿಂದ, ಎಷ್ಟು ಕೆರೆ

ತುಂಬಿದೆ, ಎಷ್ಟು ಕೆರೆ ತುಂಬಿಲ್ಲ ಎನ್ನುವ ಬಗ್ಗೆ ಉತ್ತರ ಕೊಡಬಹುದು. ನಮ್ಮ ಕೆರೆಗಳಿಗೆಲ್ಲಾ ನೀರನ್ನು ಪಂಪ್ ಮಾಡುವುದಕ್ಕೆ ಆಗುತ್ತಿಲ್ಲ. ಇತ್ತೀಚೆಗೆ ನಾವು ಬಹಳ ಶ್ರಮ ತೆಗೆದುಕೊಂಡು ಎಲ್ಲೆಲ್ಲಿ ಸಾಧ್ಯವೋ, ಅಲ್ಲಿಗೆ ಶೇಕಡಾ 50 ರಷ್ಟು ಕೆರೆಗಳನ್ನು ತುಂಬಿಸುವಂತಹ ಕಾರ್ಯಕ್ರಮಗಳನ್ನು ಸಣ್ಣ ನೀರಾವರಿ ಇಲಾಖೆ ಮತ್ತು ಬೃಹತ್ ನೀರಾವರಿ ಇಲಾಖೆ ಈ ಎರಡು ಇಲಾಖೆಯಿಂದಲೂ ಮಾಡುತ್ತಿದ್ದೇವೆ. ಏಕೆಂದರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಗ್ರಾಮೀಣ ಪ್ರದೇಶದಲ್ಲಿ ಅಂತರ್ಜಲ ಅಭಿವೃದ್ಧಿ ಮಾಡುವುದು ನಮ್ಮ ಇಲಾಖೆಯ ಮುಖ್ಯವಾದ ಕಾರ್ಯಕ್ರಮವಾಗಿದೆ. ಆ ಕಾರ್ಯಕ್ರಮಕ್ಕೆ ಅನುದಾನ ಬಹಳಷ್ಟು ಬೇಕಾಗುತ್ತದೆ. ಮಾನ್ಯ ಭಾರತಿಶೆಟ್ಟಿಯವರು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿ ಇನ್ನಷ್ಟು ಅನುದಾನವನ್ನು ಕೊಡಿಸಿದರೆ, ಅವರು ಹೇಳಿರುವ ಎಲ್ಲಾ ಕೆಲಸಗಳನ್ನು ಮಾಡಿಕೊಡುತ್ತೇವೆ. ಎರಡನೆಯದಾಗಿ, ಕೆರೆಯಿಂದ ಕೆರೆಗೆ ನೀರು ಹೋಗುವುದು, ಮಾನ್ಯ ಸರ್.ಎಂ.ವಿಶ್ವೇಶ್ವರಯ್ಯನವರು ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಆದಂತಹ ಕಾರ್ಯಕ್ರಮವಾಗಿದೆ. Series of tanks ಎಂದು ಕರೆಯುತ್ತೇವೆ. ಅದರಿಂದ, ಹಳ್ಳದಲ್ಲಿ ನೀರು ಹರಿದರೆ ಮಾತ್ರ ಅಂತರ್ಜಲ ಅಭಿವೃದ್ಧಿಯಾಗುತ್ತದೆ. ಕೇವಲ ಕೆರೆಯಲ್ಲಿ ನೀರು ನಿಂತರೆ ಅಂತರ್ಜಲ ಅಭಿವೃದ್ಧಿಯಾಗುವುದಿಲ್ಲ. ನೀರು ಹಳ್ಳದಲ್ಲಿ ಹರಿಯುತ್ತಾ ಹೋದರೆ, ಎರಡು ಕಡೆಯಲ್ಲಿ ಅಂತರ್ಜಲ ಅಭಿವೃದ್ಧಿಯಾಗುತ್ತದೆ. ಅಂತರ್ಜಲ ಅಭಿವೃದ್ಧಿಯಾಗಬೇಕಾದರೆ ಹಳ್ಳದಲ್ಲಿ ನೀರು ಹರಿಯಲೇ ಬೇಕು. ಹಾಗಾಗಿ, ಪೈಪ್‌ನಲ್ಲಿ ಕೆರೆಯಿಂದ ಕೆರೆಗೆ ನೀರನ್ನು ತೆಗೆದುಕೊಂಡು ಹೋಗುವ ಕಾರ್ಯಕ್ರಮದ ವಿರೋಧಿಗಳು ಹಳ್ಳ ಹರಿಯಬೇಕು, ಹಳ್ಳದಲ್ಲಿ ನೀರು ಹರಿದರೆ ಮಾತ್ರ ಅಂತರ್ಜಲ ಅಭಿವೃದ್ಧಿಯಾಗುವುದರಿಂದ, ಆ ಕಾರ್ಯಕ್ರಮದ ವಿರುದ್ಧವಾಗಿ ಮಾತನಾಡುವುದಕ್ಕೆ ಆಗುವುದಿಲ್ಲ. ನಾನು ಎಲ್ಲಿ ನೀರನ್ನು ಪಂಪ್ ಮಾಡುತ್ತೇವೆ ಎಂದರೆ, ಯಾವುದಾದರೂ ಕೆನಾಲ್‌ನಿಂದ, reservoir ನಿಂದ ಅದನ್ನೆಲ್ಲಾ ಪೈಪ್‌ನಲ್ಲಿಯೇ ಮಾಡುತ್ತಿದ್ದೇವೆ. ಆ ನೀರನ್ನು ವ್ಯರ್ಥ ಮಾಡುವುದಿಲ್ಲ. ಕೋಡಿ ಬಿದ್ದ ನೀರು, ಕೆರೆಯಿಂದ ಕೆರೆಗೆ ಹೋಗುವ ನೀರನ್ನು ನಾವು ಮಾಡುತ್ತಿದ್ದೇವೆ. ಈ ಬಾರಿ ಮಾನ್ಯ ಮುಖ್ಯಮಂತ್ರಿಯವರು 500 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಘೋಷಣೆ ಮಾಡಿದ್ದಾರೆ. ಈ ಕೆರೆ ಸಂರಕ್ಷಣೆ ಮಾಡಬೇಕು, ಕೆರೆಯಲ್ಲಿ ನೀರು ನಿಲ್ಲುವಂತಹ ಸಾಮರ್ಥ್ಯವನ್ನು ಹೆಚ್ಚು ಮಾಡಬೇಕು. ನೀರು ಅನಗತ್ಯವಾಗಿ ಹೊರಗೆ ಹೋಗುತ್ತಿದ್ದರೆ, ಅದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳಬೇಕು. ಪ್ರತಿ ಕೆರೆಯಲ್ಲಿ ಸ್ವಲ್ಪ ನೀರನ್ನು ಸಂಗ್ರಹಣೆ ಮಾಡಬೇಕೆಂದು

ನಾವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಮೊದಲನೆಯ ಆದ್ಯತೆಯಾಗಿ ನಾವು ನೀರನ್ನು ಎಲ್ಲಿ ಪಂಪ್ ಮಾಡುತ್ತೇವೆ, ಆ ಕೆರೆಗಳನ್ನು ಈ ವರ್ಷ ತೆಗೆದುಕೊಳ್ಳುತ್ತಿದ್ದೇವೆ. ಇದಕ್ಕೆ ೫೦೦ ರಿಂದ ೬೦೦ ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಮಾಡಿ, ಕೆರೆಗಳನ್ನು ಆಳವಾಗಿ ಮಾಡುವುದು, ಮಾನ್ಯ ಸದಸ್ಯರು ಹೇಳಿದ ಹಾಗೆ desilt ಮಾಡುವುದು, ಬಂಡೆಯನ್ನು ಬಿಗಿ ಮಾಡುವುದು, ಈ ಎಲ್ಲಾ ಕಾರ್ಯಕ್ರಮಗಳು ಈ ವರ್ಷದ ಯೋಜನೆಯೊಳಗೆ ಸೇರಿದೆ. ಸಾಧ್ಯವಾದಷ್ಟು ಸಾಮರ್ಥ್ಯವನ್ನು ವೃದ್ಧಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಮಾನ್ಯ ಗೋವಿಂದ ಕೆ ಕಾರಜೋಳರವರ ಅಧಿಕಾರಿಗಳನ್ನು ಕರೆಸಿ ಹೇಳಿದ್ದೇನೆ. ಕನಿಷ್ಠ ಕೆರೆಗಳಲ್ಲಿ ನೀರನ್ನು ಹೆಚ್ಚು ನಿಲ್ಲಿಸಿಕೊಂಡು ಹೋದರೆ, ಕರ್ನಾಟಕಕ್ಕೆ ನೀರಿನ ಲಭ್ಯತೆ ಜಾಸ್ತಿಯಾಗುತ್ತದೆ. ಇದನ್ನು ಯಾವುದೋ dispute ತೆಗೆದುಕೊಳ್ಳುವುದು ಬೇಡ ಎಂದು that we are doing. ಈಗ ಸದನಕ್ಕೆ ಮಾನ್ಯ ಮುಖ್ಯಮಂತ್ರಿಯವರು ಬಂದಿದ್ದಾರೆ. ಅವರು, ನಾವು ಕುಳಿತುಕೊಂಡು ೫೦೦ ಕೋಟಿ ರೂಪಾಯಿಗಳನ್ನು ಈ ಬಾರಿ ಬಜೆಟ್‌ನಲ್ಲಿ ಘೋಷಣೆ ಮಾಡಿದ್ದು, ಈ ಬಾರಿ ಕೆರೆಗಳನ್ನು ವಿಸ್ತೀರ್ಣವಾಗಿ ಮಾಡುವುದಕ್ಕೆ ಮತ್ತು ಸಾಮರ್ಥ್ಯಗೊಳಿಸುವುದಕ್ಕೆ ಮೊದಲ ಬಾರಿ ಅವರು ಅನುದಾನ ಕೊಟ್ಟಿದ್ದಾರೆ. ನಾವು ಈ ಕಾರ್ಯಕ್ರಮವನ್ನು ಕೈಗೊಳ್ಳುತ್ತಿದ್ದೇವೆ.

**ಶ್ರೀ ಭಾರತಿಶೆಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಸದನಕ್ಕೆ ಬಂದಿದ್ದಾರೆ. ಮಾನ್ಯ ಸಚಿವರು ನನಗೆ ಹೆಚ್ಚು ಅನುದಾನ ಕೊಟ್ಟರೆ, ಹೆಚ್ಚು ಮಾಡುತ್ತೇನೆ ಎಂದು ಹೇಳಿದರು. ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡುತ್ತೇನೆ. ಗ್ರಾಮೀಣ ಪ್ರದೇಶದ ಜನರ ಬದುಕೇ ನೀರು ಆಗಿದ್ದು, ಆ ಕೆರೆಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತನ್ನು ಕೊಡುವುದರ ಜೊತೆಗೆ ನಾನು ಇನ್ನೊಂದು ಪ್ರಶ್ನೆಯನ್ನು ಕೇಳುತ್ತೇನೆ. "ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (ಪಿ.ಎಂ.ಕೆ.ಎಸ್.ವೈ) ಯಲ್ಲಿ ಕೇಂದ್ರ ಪುರಸ್ಕೃತ ಯೋಜನೆಯ ಮಾರ್ಗಸೂಚಿಗಳನ್ವಯ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲು ಕ್ರಮ ವಹಿಸಲಾಗುವುದು" ಎಂದು ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಇದನ್ನು ಬಹಳಷ್ಟು ಕ್ರಿಯಾಶೀಲರಾಗಿ ಮಾಡಬೇಕು. ಇದು ವಿಳಂಬವಾದರೆ "ಹರ್ ಖೇತ್ ಕೋ ಪಾನಿ (ಹೆಚ್.ಕೆ.ಕೆ.ಪಿ) ಯೋಜನೆ ಸಕಾರವಾಗುತ್ತದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಶೇಖಾವತ್‌ರವರ ಜೊತೆ 2 –3 ಸಭೆಗಳನ್ನು ಮಾಡಿದ್ದೇನೆ. "ಅಟಲ್ ಭೂಜಲ್ ಯೋಜನೆ"ಗೂ ಸೇರಿಸಿ ಕೆರೆ ತುಂಬಿಸುವ ಕಾರ್ಯಕ್ರಮ, ಬೆಂಗಳೂರು sewage ಅನ್ನು ಟ್ರೀಟ್ ಮಾಡಿಕೊಡುವ ಕಾರ್ಯಕ್ರಮ ಮತ್ತು west–flowing reservoirs ಗೆ vented dam ಹಾಕುತ್ತಿದ್ದೇವೆ. ಇದಕ್ಕೆಲ್ಲಾ government assistance ಬೇಕು. Car land  ಗೂ ನಾವು ಕೇಳಿದ್ದೇವೆ. ಅವರು ಈಗ ಸಿಡಬ್ಲ್ಯೂಸಿ.ಗೆ ಸೂಚನೆ ಕೊಟ್ಟು, ಇದನ್ನು ಪ್ರೋಸಸ್ ಮಾಡಿ ಕಳುಹಿಸಿ ಎಂದು ಹೇಳಿದ್ದಾರೆ. ಏಪ್ರಿಲ್ ತಿಂಗಳಿನಲ್ಲಿ ನಮ್ಮ ಯೋಜನೆಗಳು ಏನಿವೆ, ಅದನ್ನು ಕೇಂದ್ರ ಸರ್ಕಾರಕ್ಕೆ ಸಬ್ಮಿಟ್ ಮಾಡುತ್ತಿದ್ದೇವೆ. ಇದಕ್ಕೆ ಅವರು ಅಪ್ರೂವಲ್ ಕೊಟ್ಟ ಮೇಲೆ ನಾವು ಅನುದಾನವನ್ನು ತೆಗೆದುಕೊಂಡು ಕಾರ್ಯಕ್ರಮ ಮಾಡುವುದಕ್ಕೆ ಸಿದ್ಧರಿದ್ದೇವೆ. "ಅಟಲ್ ಭೂಜಲ್ ಯೋಜನೆ"ಯಲ್ಲಿ ಈಗಾಗಲೇ ಕೇಂದ್ರ ಸರ್ಕಾರ ಅಂತರ್ಜಲ ಅಭಿವೃದ್ಧಿಗೆ 1,102 ಕೋಟಿ ರೂಪಾಯಿಗಳ ಅನುದಾನ ಕೊಟ್ಟಿದೆ. ಅದನ್ನು 4 ವರ್ಷಗಳಲ್ಲಿ ಖರ್ಚು ಮಾಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ನಾನು ಮತ್ತು ಮಾನ್ಯ ಮುಖ್ಯಮಂತ್ರಿಗಳು constant touch ನಲ್ಲಿ ಕೇಂದ್ರ ಸರ್ಕಾರದ ಜಲ ಸಂಪನ್ಮೂಲ ಸಚಿವರ ಜೊತೆಯಲ್ಲಿ ಇದ್ದೇವೆ. ಈ ಎಲ್ಲಾ ಕಾರ್ಯಕ್ರಮಗಳನ್ನು ನಾವು ಬಳಸಿಕೊಳ್ಳುತ್ತೇವೆ.

## ಪ್ರಶ್ನೆ ಸಂಖ್ಯೆ: 2596

## (ಉತ್ತರವನ್ನು ಒದಗಿಸಲಾಗಿದೆ)

**ಡಾ॥ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಈಗ ಉತ್ತರವನ್ನು ಕೊಟ್ಟಿದ್ದಾರೆ. ಇದನ್ನು ಓದುವುದಕ್ಕೆ 15 ದಿವಸ ಬೇಕಾಗುತ್ತದೆ. ಇದನ್ನು ಎರಡು ಸಾಲಿನಲ್ಲಿ ಹೇಳಿಬಿಡುತ್ತೇನೆ.

**ಸಭಾಪತಿಯವರು:-** ಮಾನ್ಯ ಕೆ.ಗೋವಿಂದರಾಜ್‌ರವರೇ, ಈ ಪ್ರಶ್ನೆಯನ್ನು ಮುಂದಕ್ಕೆ ಹಾಕುವುದೇ?

**ಡಾ॥ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಯನ್ನು ಮುಂದಕ್ಕೆ ಹಾಕಬೇಡಿ.

**ಸಭಾಪತಿಯವರು:-** ಮಾನ್ಯ ಕೆ.ಗೋವಿಂದರಾಜ್‌ರವರೇ, ತಾವು ಓದುವುದಕ್ಕೆ 15 ದಿವಸ ಬೇಕು ಎಂದು ಹೇಳಿದರಲ್ಲವೇ?

**ಡಾ॥ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಓದುವುದಕ್ಕೆ 15 ದಿವಸ ಬೇಕು ಎಂದು ಹೇಳಿದೆ ಅಷ್ಟೇ. ಆದರೂ ಎರಡು ವಿಚಾರಗಳನ್ನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಕೆ.ಗೋವಿಂದರಾಜ್‌ರವರೇ, ಒಂದು ನಿಮಿಷ. ಮಾನ್ಯ ಕೆ.ಗೋವಿಂದರಾಜ್‌ರವರು ಈ ಮಾಹಿತಿ ಇಲ್ಲದೇ ಎಂದಿಗೂ ಪ್ರಶ್ನೆ ಕೇಳುವುದಿಲ್ಲ. ಅವರಿಗೆ ಅವರದೇ ಆದಂತಹ ಮಾಹಿತಿಗಳು ಇರುತ್ತವೆ. ಅದರ ಆಧಾರದ ಮೇಲೆ ಕೇಳುತ್ತಾರೆ. ತಮ್ಮ ಮಾಹಿತಿ ಏನಿದೆ, ಅದರ ಮೇಲೆ ಪ್ರಶ್ನೆ ಕೇಳಿ.

**ಡಾ॥ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ಕಾಮಗಾರಿಯನ್ನು ಬಿ.ಬಿ.ಎಂ.ಪಿ.ಗೆ ಕೊಡುವುದರ ಬಗ್ಗೆ ನನ್ನ ಪ್ರಶ್ನೆಯಾಗಿದ್ದು, ಮಾನ್ಯ ಮುಖ್ಯಮಂತ್ರಿಗಳು ದಿನಾಂಕ:28-04-2020 ರಲ್ಲಿ ನ್ಯಾಯಾಲಯದಿಂದ ಆದೇಶವಾದ ಮೇಲೆ ಯಾವುದೇ ಕಾಮಗಾರಿ ಕೊಟ್ಟಿಲ್ಲ ಎಂದು ಹೇಳುತ್ತಿದ್ದಾರೆ. ಆದರೆ, ಇನ್ನೊಂದು ಉತ್ತರದಲ್ಲಿ ಆದಾದ

ಮೇಲೂ ಬೇಕಾದಷ್ಟು ಕೆಲಸ ಕೊಟ್ಟಿದ್ದಾರೆ. ಅದು ಸಂದರ್ಭಾನುಸಾರ ಮತ್ತು ತುರ್ತು ಅನುಷ್ಠಾನದ ಮೇಲೆ ಕೊಟ್ಟಿದ್ದೇವೆ ಎಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಜನರು ಮಾತನಾಡುವುದೇನೆಂದರೆ, ಇದನ್ನು ಕೆ.ಆರ್.ಐ.ಡಿ.ಎಲ್.,ನವರಿಗೆ ಏಕೆ ಕೊಡಬೇಕೆನ್ನುವುದು ನನ್ನ ಪ್ರಶ್ನೆ.

(ಮುಂದು)

(586)/24-3-2022/11-00/ಎಲ್ಎಂ/ಆರ್ಎನ್

**ಡಾ: ಕೆ ಗೋವಿಂದರಾಜ್**(ಮುಂದು):-

ಸಾವಿರಾರು ಕೋಟಿ ರೂಪಾಯಿಗಳ ಕೆಲಸವನ್ನು ಕೊಟ್ಟರು. ಎಲ್ಲ ಕಡೆ ರಸ್ತೆ ಗುಂಡಿಗಳು ಹಾಗೆ ಇವೆ. Old Airport Road ಕಾಮಗಾರಿ ಸರಿಯಾಗಿಲ್ಲ ಎಂದು ನಾನು ಬೆಳಗಾವಿ ಅಧಿವೇಶನದಲ್ಲಿ ಪ್ರಶ್ನೆ ಹಾಕಿದೆ. ಅಂದು ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟ ಮಾರನೇ ದಿನವೇ ರಸ್ತೆ ರಿಪೇರಿಯಾಗಿತ್ತು. ಅಂದರೆ ಆ ಕಾಮಗಾರಿ ಗುಣಮಟ್ಟದಿಂದ ಕೂಡಿರುವುದಿಲ್ಲ ಎನ್ನುವುದು ಖಚಿತವಾಯಿತು. ಆ ಕಾಮಗಾರಿಯನ್ನು ಕೆಆರ್ಐಡಿಎಲ್ ಗೆ ಕೊಟ್ಟಿದ್ದಾರೆ. ಇದರಲ್ಲಿ 12% ಹೋಗಿಬಿಡುತ್ತದೆ. ಏತಕ್ಕೆ ಇಷ್ಟೊಂದು ಹಣವನ್ನು ಕೊಡಬೇಕು, ಇಲ್ಲಿ ಅನೇಕ ಅವ್ಯವಹಾರಗಳು ನಡೆಯುತ್ತಿವೆ ಎಂದು ಜನರು ಮಾತನಾಡುತ್ತಿದ್ದಾರೆ. ಇದರ ಬಗ್ಗೆ ತಮ್ಮ ಗಮನಕ್ಕೆ ತಂದಿದ್ದೇನೆ. ಬಿಬಿಎಂಪಿ ಯಲ್ಲಿ ಸಾಕಷ್ಟು ಇಂಜಿನೀಯರ್‌ಗಳು ಇದ್ದಾರೆ, ಅವರಿಂದ ಕೆಲಸವನ್ನು ಮಾಡಿಸಬಹುದು ಎನ್ನುವುದನ್ನು ಹೇಳಬಯಸುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಗಳೆ, ಕೆಆರ್ಐಡಿಎಲ್‌ಗೆ ಕೆಲಸ ಕೊಡುವುದನ್ನು ನಾವು ಬಂದಮೇಲೆ ನಿಲ್ಲಿಸಿದ್ದೇವೆ. ನಿರ್ಮಿತಿ ಕೇಂದ್ರ, ಕೆಆರ್ಐಡಿಎಲ್ ಇವೆಲ್ಲವು ಚಿಕ್ಕಪ್ಪ-ದೊಡ್ಡಪ್ಪ ಇದ್ದಹಾಗೆ. ವಿರೋಧ ಪಕ್ಷದಲ್ಲಿದಾಗ ಇವುಗಳಿಗೆ ಏಕೆ ಕೊಡಬೇಕು ನಿಲ್ಲಿಸಿ ಎನ್ನುತ್ತಾರೆ, ಆಡಳಿತ ಪಕ್ಷಕ್ಕೆ ಬಂದಾಗ ಅವೇ ಬೇಕಾಗುತ್ತದೆ. KTTP Act ನಲ್ಲಿಯು 4(G) exemption ಮಾಡಿ ಅದರ ಮುಖಾಂತರ ಕೊಡುತ್ತಿದ್ದಾರೆ. ನಾವು ಅಧಿಕಾರಕ್ಕೆ ಬಂದಮೇಲೆ review ಮಾಡಿ ಕೆಆರ್ಐಡಿಎಲ್ ಮಾಡಿರುವ ಕಾಮಗಾರಿಯ ಗುಣಮಟ್ಟ ನಮಗೆ ಸಮಾಧಾನಕರವಾಗಿಲ್ಲ ಎಂದು

ಕೆಲವು ಟೆಂಡರ್‌ಗಳನ್ನು ಕ್ಯಾನ್ಸಲ್ ಮಾಡಿದ್ದೇನೆ. 12 High density corridor ಏನಿವೆ ಅದನ್ನು ಕ್ಯಾನ್ಸಲ್ ಮಾಡಿ ಮತ್ತೆ ಟೆಂಡರ್ ಕರೆದು conditions ಬದಲಾವಣೆ ಮಾಡಿ ಎಂದು ಕಟ್ಟುನಿಟ್ಟಾಗಿ ಆದೇಶ ಮಾಡಿದ್ದೇನೆ. ಈಗ ಕೆಆರ್‌ಐಡಿಎಲ್ ಗೆ ಕೊಟ್ಟಿರುವ ಕಾಮಗಾರಿಗಳನ್ನು ಪೂರ್ಣಗೊಳಿಸುವುದು ಮತ್ತು ಗುಣಮಟ್ಟವನ್ನು ಕಾಯ್ದುಕೊಳ್ಳಲು ವಿಶೇಷವಾದ ಗಮನವನ್ನು ಹರಿಸುತ್ತಿದ್ದೇವೆ. ಬಿಬಿಎಂಪಿ ಯಿಂದ ಆಗಿರುವ ಕಾಮಗಾರಿಗಳೆಲ್ಲವು ಗುಣಮಟ್ಟದ್ದಾಗಿರುತ್ತವೆ ಎಂದು ಹೇಳಲು ಆಗುವುದಿಲ್ಲ. ಕೆಲವು project mode ನಲ್ಲಿ ಇರುತ್ತವೆ, ಅವೆಲ್ಲವು ಬೇಗ ಆಗಬೇಕು; ಕೆಲವು ಸರ್ಕಾರದ ಅನುದಾನದಲ್ಲಿರುತ್ತವೆ, ಅಂತಹವುಗಳನ್ನು ಕೊಟ್ಟಿದ್ದಾರೆ. ಆ ಕಾಮಗಾರಿಗಳನ್ನು ಪೂರ್ಣಗೊಳಿಸುವಂತೆ ಮತ್ತು ಗುಣಮಟ್ಟವನ್ನು ಕಾಯ್ದುಕೊಳ್ಳುವಂತೆ ನೋಡಿಕೊಳ್ಳುತ್ತೇವೆ. ಮುಂದಿನ ದಿನಗಳಲ್ಲಿ ಕೆಆರ್‌ಐಡಿಎಲ್‌ಗೆ ಕಾಮಗಾರಿ ಕೊಡುವುದನ್ನು avoid ಮಾಡಿ ಆದಷ್ಟು ಬಿಬಿಎಂಪಿ ಯಿಂದ ಕಾಮಗಾರಿಯನ್ನು ಮಾಡಿಸಲಾಗುತ್ತದೆ.

**ಡಾ: ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಗಳೆ, ನಿರ್ಮಿತಿ ಕೇಂದ್ರವನ್ನು ಸಂಪೂರ್ಣವಾಗಿ ನಿಲ್ಲಿಸಬೇಕು ಎನ್ನುವುದು ನನ್ನ ಮನವಿ.

**ಪ್ರಶ್ನೆ ಸಂಖ್ಯೆ: 2601**

**(ಉತ್ತರವನ್ನು ಲಗತ್ತಿಸಲಾಗಿದೆ)**

ಶ್ರೀ ನಸೀರ್ ಅಹ್ಮದ್ :- ಮಾನ್ಯ ಸಭಾಪತಿಗಳೆ, 2015ಲ್ಲಿ ಕೆಪಿಎಸ್‌ಸಿ ಯಿಂದ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ ಪರೀಕ್ಷೆ ನಡೆದಿದ್ದು, ಅದರ ಫಲಿತಾಂಶ ಬಂದಿರುವುದು 2019ರಲ್ಲಿ. ಇದರಲ್ಲಿ ಈಗಾಗಲೇ selection ಆಗಿ probationary training ಕೂಡಾ ನಡೆಯುತ್ತಿದೆ. ಆದರೆ ಕೆಲವು ವಿದ್ಯಾರ್ಥಿಗಳು ನಾವು ಚೆನ್ನಾಗಿ ಪರೀಕ್ಷೆ ಬರೆದಿದ್ದೇವೆ. ಆದರೆ ನಾವು ಅಂದುಕೊಂಡಷ್ಟು ಅಂಕಗಳು ಬಂದಿರುವುದಿಲ್ಲ ಎನ್ನುವುದು ಅವರ ಸಂಶಯವಾಗಿದೆ. ಅವರು Right to Information Act ನಲ್ಲಿ ಅಪೀಲ್ ಹಾಕಿದ್ದಾರೆ. ಕೋರ್ಟ್‌ನಿಂದ ಕೆಪಿಎಸ್‌ಸಿಗೆ ಕಳುಹಿಸಿಕೊಟ್ಟಿದ್ದಾರೆ. ಕೆಪಿಎಸ್‌ಸಿ ಯವರು ಹೈಕೋರ್ಟ್‌ಗೆ ರಿಟ್ ಪಿಟಿಶನ್ ಹಾಕಿ ಉತ್ತರ ಪತ್ರಿಕೆಗಳನ್ನು ಕೊಡಲು ಬರುವುದಿಲ್ಲ ಎಂದು ಹೇಳಿದ್ದಾರೆ. ಹೈಕೋರ್ಟ್‌ನಿಂದ "A candidate who has appeared for examination conducted by a public service commission can seek for copies of his own evaluated answer scripts along with the marks allotted to each question" ಎಂದು speaking order ಕೊಟ್ಟಿದ್ದಾರೆ. ಕೊಟ್ಟರು ಸಹ they have gone on appeal. Agnesh Kumar's ಎನ್ನುವವರ ಪ್ರಕರಣದಲ್ಲಿ 2016ರಲ್ಲಿ ಸುಪ್ರಿಮ್ ಕೋರ್ಟ್‌ನಿಂದ ಒಂದು ಆದೇಶವಾಗಿದೆ, ಇದು ಆದ ಮೇಲೆ ಎರಡು ಆದೇಶಗಳು ಸುಪ್ರಿಮ್ ಕೋರ್ಟ್‌ನಿಂದ ಬಂದಿವೆ. ಆ ಎರಡು ಆದೇಶಗಳಲ್ಲಿಯು they have made it very clear that it can be we have consider the decision rendered in aforesaid ಎಂದು ಹೇಳಿ ಅದನ್ನು it is very clearly they have mentioned that ; In our opinion, permitting a candidate to inspect the answer sheet does not involve any public interest nor does it affect the efficient operation of the Government. ಸುಪ್ರಿಮ್ ಕೋರ್ಟ್‌ನಿಂದ ನಂತರ ಬಂದಿರುವಂತಹ ಆದೇಶವಿದು. ಇನ್ನೊಂದು ಆದೇಶ ಬಂದಿದೆ. ಇದರಲ್ಲಿ ಸಹ ಕ್ಲೀಯರ್ ಆಗಿ ನಿರ್ದೇಶನ ಕೊಟ್ಟಿದ್ದಾರೆ; please fix the date, time within fifteen days and allow the students to come and inspect the answer sheet. It is another order. ಎರಡು ಆದೇಶಗಳು ಇದರೂ ಸಹ

they are not considering. 2013 Civil Appeal ಆದಮೇಲೆ ಬಂದಿರುವುದು ಒಂದು, ಇದು N.V.Ramana ರವರ judgment. ಆದರೂ ಸಹ ಅದನ್ನು ಪರಿಗಣನೆ ಮಾಡದೆ they have already gone on appeal. My only request to you is see everywhere it is there. BCom, MBA., ಯಾವದೇ ಪರೀಕ್ಷೆಯಾಗಿರಲಿ ಅನುಮಾನವಿದ್ದಾಗ prescribed forms ಇರುತ್ತದೆ, ಅದನ್ನು apply ಮಾಡಿದ ಮೇಲೆ ಉತ್ತರ ಪತ್ರಿಕೆಗಳನ್ನು ಕೊಡುತ್ತಾರೆ. ವಿದ್ಯಾರ್ಥಿಗಳು ಅದನ್ನು ಓದಿದ ಮೇಲೆ ಅವರಿಗೆ satisfaction ಆಗುತ್ತದೆ. They are asking only for that. 2012-13ನೇ ಸಾಲಿನ ಬ್ಯಾಚ್ ಸಂದರ್ಭದಲ್ಲಿ ದೊಡ್ಡ ಹೋರಾಟವನ್ನೆ ಮಾಡಲಾಗಿದೆ. ಅದರ ಬಗ್ಗೆ ಬಿಲ್ ಪಾಸ್ ಮಾಡಿ ಅನುಕೂಲ ಮಾಡಿಕೊಡಲಾಗಿದೆ. ಅದೇ ರೀತಿ ಇಲ್ಲಿ 50 ರಿಂದ 60 ಅಭ್ಯರ್ಥಿಗಳು ಇದ್ದಾರೆ they are asking just further valuation. ಎಷ್ಟು ಅಂಕಗಳು ಸಿಕ್ಕಿವೆ ಎನ್ನುವುದನ್ನು ನೋಡುತ್ತಾರೆ ಅಷ್ಟೆ. ಅದಕ್ಕೆ ಒಂದು ಆದೇಶ ಮಾಡಿ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. Let them withdraw that Writ Appeal.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಗಳೆ, limited question ಇದೆ. ಕೆಪಿಎಸ್‌ಸಿ ಯಲ್ಲಿ ಪರೀಕ್ಷೆ ಬರೆದು ಫಲಿತಾಂಶ ಬಂದಮೇಲೆ ಯಾರು ಅಭರ್ಥಿಗಳು ಪರೀಕ್ಷೆಯನ್ನು ಬರೆದಿದ್ದಾರೆ, ಅವರಿಗೆ ಅವರ ಉತ್ತರ ಪತ್ರಿಕೆಯನ್ನು ನೋಡಲು ಅವಕಾಶ ಕೊಡಬೇಕು ಎನ್ನುವುದು ಮಾನ್ಯ ಸದಸ್ಯರ ಪ್ರಶ್ನೆ. ನನಗೆ ಇರುವ ಮಾಹಿತಿ ಪ್ರಕಾರ ಇದರ ಬಗ್ಗೆ ಹಲವಾರು judgments ಆಗಿವೆ. ಸುಪ್ರಿಮ್ ಕೋರ್ಟ್‌ನಲ್ಲಿ, ಹೈಕೋರ್ಟ್‌ನಲ್ಲಿ ಒಂದೊಂದು ಸಂದರ್ಭದಲ್ಲಿ ಒಂದೊಂದು ರೀತಿ judgments ಬಂದಿವೆ. ಯುಪಿಎಸ್‌ಸಿ ಕೇಸ್‌ನಲ್ಲಿ ಸುಪ್ರಿಮ್ ಕೋರ್ಟ್ ಉತ್ತರ ಪತ್ರಿಕೆಗಳನ್ನು ಕೊಡುವ ಅವಶ್ಯಕತೆ ಇಲ್ಲ ಎಂದು ಕ್ಲೀಯರ್ ಆಗಿ ಹೇಳಿದೆ. ನಂತರ ಅಭ್ಯರ್ಥಿಗಳು ಆರ್‌ಟಿಐ ಮುಖಾಂತರ ಕೇಳಿದಾಗ ಕೆಪಿಎಸ್‌ಸಿ ಕೊಟ್ಟಿರುವ endorsement ಮೇಲೆ ಮತ್ತೆ ಕೋರ್ಟ್‌ಗೆ ಹೋಗಿದ್ದಾರೆ. ಕೋರ್ಟ್‌ನಲ್ಲಿ ರಿಟ್ ಇದೆ. Endorsement ಮೇಲೆ ಕೊಡಬೇಕು ಎಂದು ಕೋರ್ಟ್‌ನಲ್ಲಿ ಏನು ಆದೇಶವಾಗಿತ್ತು ಅದರ ಮೇಲೆ ಈಗ ಸ್ಟೇ ಇದೆ. Basically, matter is in

the Court. ಮತ್ತೊಂದು ಆದೇಶ ಕೊಡಬಹುದು ಎನ್ನುವಂತೆ ಸುಪ್ರೀಮ್ ಕೋರ್ಟ್ ಆದೇಶವಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಆ ಎಲ್ಲಾ ಮಾಹಿತಿಗಳು ನನ್ನ ಹತ್ತಿರ ಇಲ್ಲ. ಆ ಎಲ್ಲಾ ಮಾಹಿತಿಗಳನ್ನು ತರಿಸಿಕೊಂಡು ಮತ್ತು ಈಗ ಇರುವ ಕೇಸ್‌ನ ಮಾಹಿತಿಯನ್ನು ತೆಗೆದುಕೊಂಡು ಕೆ.ಪಿ.ಎಸ್.ಸಿ ಕಡೆಯಿಂದ ವಿದ್ಯಾರ್ಥಿಗಳಿಗೆ ಯಾವ ರೀತಿ ಅನುಕೂಲವಾಗುವುದು ಮತ್ತು ಯಾವ ನಿಲುವನ್ನು ನಾವು ತೆಗೆದುಕೊಳ್ಳಬಹುದು ಎನ್ನುವುದನ್ನು ನ್ಯಾಯಾಲಯದ ಮುಂದೆ ಹೇಳುತ್ತೇವೆ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಗಳೆ, 2011, 2012 ಮತ್ತು 2014 ರವರೆಗೆ ಕೊಟ್ಟಿದ್ದಾರೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಗಳೆ, ಎಲ್ಲಾ ಮಾಹಿತಿಯನ್ನು ತರಿಸಿಕೊಳ್ಳುತ್ತೇನೆ. Latest judgment which is prevailing ಅದರ ಅನುಗುಣವಾಗಿ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

**ಪ್ರಶ್ನೆ ಸಂಖ್ಯೆ: 2563**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಗಳೆ, ನಾನು ಬಹಳ ಮುಖ್ಯವಾಗಿ ಕೇಳಿರುವುದು, ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕಳೆದ 5 ವರ್ಷಗಳಲ್ಲಿ ಎಷ್ಟು white topping ಕೆಲಸವನ್ನು ಮಾಡಲಾಗಿದೆ; ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ; ರಸ್ತೆಗಳ ನಿರ್ವಹಣೆಗೆ 5 ವರ್ಷಗಳಲ್ಲಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ; ಬೇರೆ ಯೋಜನೆಗಳ ಅಡಿಯಲ್ಲಿ ಎಷ್ಟು ಕೆಲಸವನ್ನು ಮಾಡಲಾಗಿದೆ ಎನ್ನುವ ಪ್ರಶ್ನೆಯನ್ನು ಕೇಳಿದ್ದೇನೆ. ಈ ಪ್ರಶ್ನೆಗೆ ಬಹಳ ದೀರ್ಘವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಅದು ಅಲ್ಲದೆ, ಸಿ.ಡಿ ಯನ್ನು ಒದಗಿಸಿದ್ದಾರೆ. ಈ ಉತ್ತರವನ್ನು ಓದಲು ಬಹಳ ಸಮಯ ಬೇಕಾಗುತ್ತದೆ. ಆದ್ದರಿಂದ ನಾನು ನೇರವಾಗಿ ವಿಷಯಕ್ಕೆ ಬರುತ್ತೇನೆ. ರಸ್ತೆ ಗುಂಡಿಗೆ ಬಿದ್ದು ಎಷ್ಟು ಸಾವು-ನೋವುಗಳಾಗಿವೆ ಎಂದು ಕೇಳಿದ್ದೇನೆ. 11 ಜನರು ಸಾವಿಗೀಡಾಗಿದ್ದಾರೆ ಎಂದು ಉತ್ತರ ಕೊಟ್ಟಿದ್ದಾರೆ. ನೋವಿಗೆ ಒಳಗಾದವರ ಸಂಖ್ಯೆಯನ್ನು ಕೊಟ್ಟಿರುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳ ಕ್ಷೇತ್ರವಾದ ಹಾವೇರಿ ಜಿಲ್ಲೆಯ ಅಶ್ವಿನ್ ಎನ್ನುವ ಹುಡುಗ ರಸ್ತೆ ಗುಂಡಿಗೆ ಬಿದ್ದು ಸತ್ತಿರುತ್ತಾನೆ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ರಸ್ತೆಗಳನ್ನು ನಿರ್ವಹಣೆ ಮಾಡಲು ಏನು ಸಮಸ್ಯೆ? Python ಎನ್ನುವಂತಹ ಯಂತ್ರ ಸ್ವಯಂ ಚಾಲಿತವಾಗಿ ಗುಂಡಿಗಳನ್ನು ಮುಚ್ಚುತ್ತದೆ. ಆ ಯಂತ್ರವನ್ನು ಖರೀದಿ ಮಾಡಲು ಸರ್ಕಾರಕ್ಕೆ ಏನು ತೊಂದರೆ?

(ಮುಂದು)

(587)24-03-2022(11-10)bsd-vk

**ಶ್ರೀ ಎಸ್. ರವಿ (ಮುಂದು)**

ಇದಾದ ನಂತರ ನೋವಿಗೆ ಒಳಗಾದವರು ಅಂದರೆ ಗಾಯಾಳುಗಳ ಸಂಖ್ಯೆ ಎಷ್ಟು? ಮತ್ತು ಅವರ ಕುಟುಂಬದವರಿಗೆ ಏನು ಪರಿಹಾರ ನೀಡಿದ್ದಾರೆ? ಯಾರೂ ಗುಂಡಿಗೆ ಬಿದ್ದು ಕಾಲು-ಕೈ ಮುರಿದುಕೊಳ್ಳಲಿಲ್ಲವೇ? High density roads ಬಗ್ಗೆ ಪ್ರಸ್ತಾಪ ಮಾಡಿದ್ದು, 12 ರಸ್ತೆಗಳನ್ನು high density roads ಮಾಡಲು ರೂ.800 ಕೋಟಿಗಳ tender ಕರೆದು, ಈ tender ಯಾವ

stage ನಲ್ಲಿದೆ? ಏಕೆ tender cancel ಆಯಿತು? ಈ ರೂ.800 ಕೋಟಿಗಳದ್ದರಲ್ಲಿ ಅವ್ಯವಹಾರದ ವಾಸನೆ ದಟ್ಟವಾಗಿ ಹೊಡೆಯುತ್ತಿದೆ. 2 ಬಾರಿ tender cancel ಆಗಿರಬೇಕು. ಯಾವಾಗ tender ಅನ್ನು complete ಮಾಡುತ್ತಾರೆ. Completion ಮಾಡುವುದಕ್ಕೆ ಅವರಿರುವ ಸಮಸ್ಯೆ ಏನು? ಈ ವೆಚ್ಚ ರೂ.800 ಕೋಟಿಯಿಂದ ರೂ. 400 ಕೋಟಿಗಳಿಗೆ ಬಂದಿದೆ ಎಂದು ನನಗೆ ಇರುವ ಮಾಹಿತಿಯಾಗಿದೆ. ಇದರ ಜೊತೆಗೆ ಈ ಕಾಮಗಾರಿಗೆ 2 ವರ್ಷಗಳಾಗಿರುವುದರಿಂದ ಬೇರೆ ಬೇರೆ ಯೋಜನೆಗಳ ಕಾಮಗಾರಿಗಳು ಮುಗಿಯುತ್ತಿದೆ. ಇದರ overlap ಕೂಡ ಆಗುತ್ತದೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಮಾನ್ಯ ರವಿ ರವರಿಗೆ ಬೆಂಗಳೂರು ರಸ್ತೆಗಳ ಬಗ್ಗೆ ಮತ್ತು in the interest of Bangalore development ಬಗ್ಗೆ ಇರುವ ಕಳಕಳಿಗೆ ನಾನು ಮೆಚ್ಚುಗೆ ವ್ಯಕ್ತ ಮಾಡುತ್ತೇನೆ. ನಾನು ಉತ್ತರದಲ್ಲಿ ಎಲ್ಲವನ್ನು ಹೇಳಿದ್ದು, ಒಟ್ಟು 5 ವರ್ಷಗಳಲ್ಲಿ white topping ಎಷ್ಟಾಗಿದೆ, ಎಷ್ಟು ಖರ್ಚಾಗಿದೆ ಎಂಬುದನ್ನು ಕೊಟ್ಟಿದ್ದೇನೆ. ಈ ಉತ್ತರದಿಂದ ಸಾರ್ವಜನಿಕರ ಗಮನದಲ್ಲಿ ಇರಲಿ ಎಂದು ಎಲ್ಲವನ್ನು ಪಾರದರ್ಶಕವಾಗಿ ಇರಲಿ ಎಂದು ಕೆಲಸ ಮಾಡುತ್ತೇನೆ. ರಸ್ತೆಗಳ regular asphalting ಮಾಡಿದರೆ ರೂ.75 ಲಕ್ಷಗಳಿಂದ ರೂ.1 ಕೋಟಿ ಒಂದು kilometer ಗೆ ಆಗುತ್ತದೆ. White topping ಗೆ ರೂ.9 ರಿಂದ 10 ಕೋಟಿಗಳು ಆಗುತ್ತದೆ. ಅದಕ್ಕೆ ಕಾರಣವೆಂದರೆ ಅದರ utilities ಗಳು ಅಥವಾ ಇನ್ನೊಂದನ್ನು ಬೇರೆಡೆಗೆ shift ಮಾಡಬೇಕು, ಇನ್ನೊಂದು ಮಾಡಬೇಕು, it is not just a road ಎಂದು ಹಲವಾರು ಕಾರಣಗಳನ್ನು ಕೊಡಲಾಗಿದೆ. ಇದರಲ್ಲಿ maintenance ಇರುವುದಿಲ್ಲ. ಇದರಲ್ಲಿ plus points ಇದೆ. ಒಟ್ಟಾರೆ cost ten times ಹೆಚ್ಚಾಗುತ್ತಿರುವುದರ ಬಗ್ಗೆ ಎಲ್ಲರೂ ಮರುಚಿಂತನೆ ಮಾಡುವ ಅಗತ್ಯತೆ ಇದೆ ಎಂದು ನನ್ನ ಭಾವನೆ. White topping ಬೇಕು ಎನ್ನುವುದು ಬೇರೆ ವಿಚಾರ. For long term ಇದು ಬೇಕು. ಗ್ರಾಮೀಣ ಪ್ರದೇಶಗಳಲ್ಲಿಯೂ ನಾವು concrete ರಸ್ತೆಗಳನ್ನು ಮಾಡುತ್ತೇವೆ. But, at what cost ಎನ್ನುವುದರ ಬಗ್ಗೆ ನಾನು ಮರುಚಿಂತನೆ ಮಾಡುವುದಕ್ಕೆ ಪ್ರಾರಂಭಿಸಿದ್ದೇನೆ.

ಇನ್ನು ಎರಡನೆಯದಾಗಿ ಗುಂಡಿಗಳಲ್ಲಿ ಬಿದ್ದು ಉಂಟಾಗಿರುವ ಸಾವು-ನೋವುಗಳ ಬಗ್ಗೆ ಅಥವಾ ಗಾಯಾಳುಗಳ ಬಗ್ಗೆ ಹೇಳಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದ್ದು, ಅದರ ಮಾಹಿತಿಯನ್ನು ನಂತರ ಖಂಡಿತವಾಗಿ ಒದಗಿಸಿಕೊಡುತ್ತೇನೆ. ಇನ್ನು ಪೈತಾನ್ ಅನ್ನು ತೆಗೆದುಕೊಳ್ಳದಿರುವ ಬಗ್ಗೆ ಪ್ರಸ್ತಾಪಿಸಿದ್ದು, ಈಗಾಗಲೇ 182 kilometer ಗಳನ್ನು main arterial road ನಲ್ಲಿ ನಾವು ಪೈತಾನ್ ಮೂಲಕವೇ ಕೆಲಸ ಮಾಡಿಸುತ್ತಿದ್ದೇವೆ. ಅದು private ನವರ ಕಡೆಯಿದ್ದು, Contract basis ಮೇಲೆ ತೆಗೆದುಕೊಂಡು 182 kilometer ಗಳನ್ನು ಮಾಡುತ್ತಿದ್ದೇವೆ. ಗುಂಡಿ ಮುಚ್ಚಿದ ಕೆಲವೇ ದಿನಗಳಲ್ಲಿ ತಗ್ಗು ಬೀಳುವುದನ್ನು ನೋಡುತ್ತಿದ್ದೇವೆ. ಅದಕ್ಕೆ ಬೇರೆ ಬೇರೆ ಕಾರಣಗಳನ್ನು ಹೇಳುತ್ತಾರೆ. ಅಂದರೆ underline pipe ಅಗೆದಿರುತ್ತೇವೆ, ಇದು ಅಗೆದಿರುತ್ತೇವೆ ಎಂದೆಲ್ಲಾ ಹೇಳುತ್ತಾರೆ. ಆದರೆ ಏನೇ ಆದರೂ ಒಮ್ಮೆ fill up ಆದಮೇಲೆ ಮತ್ತೆ ಅದಕ್ಕೆ ಖರ್ಚು ಬೀಳಬಾರದು. ಆದ್ದರಿಂದ ನಾನು ಈ machine ಅನ್ನು ಉಪಯೋಗಿ ಮಾಡಿಕೊಂಡು ಮಾಡಿಸುತ್ತಿದ್ದು, ಇದರಿಂದ perfect ಆಗುತ್ತದೆ ಮತ್ತು ಬೇರೆ ಬೇರೆ ಮಹಾನಗರ ಪಾಲಿಕೆಗಳಲ್ಲಿ ಉಪಯೋಗವಾಗಿದೆ ಎಂಬುದನ್ನು ಮನಗಂಡು ಈಗಾಗಲೇ ಈ machine ಮುಖಾಂತರ ಗುಂಡಿ ಮುಚ್ಚುವ ಕೆಲಸ ಮಾಡುವುದಕ್ಕೆ ಹೇಳಿದ್ದೇನೆ. ಇದಲ್ಲದೇ ಇದರಿಂದ ವೇಗವಾಗಿ ಅಂದರೆ fast ಆಗಿ ಕೆಲಸ ಆಗುತ್ತದೆ. ಇದನ್ನು 442 kilometer ಗಳಿಗೆ ವಿಸ್ತರಣೆ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು 12 high density corridor ಬಗ್ಗೆ ಕೂಡ ಪ್ರಸ್ತಾಪಿಸಿ, ಅದರ tender cancel ಆಯಿತು ಎಂಬುದನ್ನು ಕೇಳಿದರು. Yes, ಅವರು ಹೇಳುವುದು ನಿಜವಾಗಿದ್ದು, ರೂ.800 ಕೋಟಿಗಳಿಗೆ estimate ಮಾಡಿ tender ಕೂಡ ಆಗಿತ್ತು. ನಮ್ಮ ಹಿಂದಿನ ಮುಖ್ಯಮಂತ್ರಿಗಳು 800 ಕೋಟಿ ಅಗತ್ಯವಿಲ್ಲ, ಅದಕ್ಕೆ ಸೀಮಿತವಾಗಿ ಸುಮಾರು 432 ಕೋಟಿಗೆ ಮಾಡಬೇಕು ಎಂದು ಮಾಡಿದ್ದರು. ನಾನು tender ಅನ್ನು ಏಕೆ cancel ಮಾಡಿದ್ದೇನೆಂದರೆ, road ಗಳನ್ನು ಮಾಡುವುದಕ್ಕೆ ಸುಮಾರು ರೂ.350 ಕೋಟಿಗಳಾಗುತ್ತದೆ. ಆದರೆ ಅವುಗಳ 5 ವರ್ಷಗಳ maintenance ಗಾಗಿ ರೂ.500 ಕೋಟಿ ಆಗುವುದು ಸರಿಯಲ್ಲ. ನಾನು ಇದು ಸರಿಯಲ್ಲ, maintenance ಹೆಸರಿನಲ್ಲಿ road ಗಿಂತ ಹೆಚ್ಚು ಖರ್ಚು ಮಾಡುವುದು ಅರ್ಥವಿಲ್ಲ. ಇದು No. 1. No. 2. ಈಗಿನ ನಮ್ಮ PWD Code ಪ್ರಕಾರ ಯಾವ road ಮಾಡುತ್ತಾರೆ, 2 ವರ್ಷ ಅಂತಹ road ಗಳನ್ನು ಆ contractor ಗಳೇ

maintain ಮಾಡಬೇಕು. ಅದನ್ನು package ನಲ್ಲಿಯೇ ಮಾಡಬೇಕು. Third year Act cost, ಅದನ್ನು maintain ಮಾಡಬೇಕು. ಈ 2 ವರ್ಷಗಳಲ್ಲಿ ಅವರು maintain ಮಾಡುವುದಕ್ಕೂ ದುಡ್ಡು ಹಾಕಿದ್ದಾರೆ ಎಂದು objection ತೆಗೆದು, plus ಕೆಲವರು eligible ಇಲ್ಲದೇ ಇರುವವರನ್ನು eligible ಮಾಡುವ ಪ್ರಯತ್ನಗಳು ಆಗಿವೆ, ಅಂದರೆ ಬೇರೆ ಕಡೆ eligible ಇಲ್ಲದೇ ಇರುವವರನ್ನು ಇಲ್ಲಿ ಮಾತ್ರ eligible ಮಾಡಿದ್ದರು. ಈ ಎಲ್ಲವನ್ನು ಕಂಡು, ಐದಾರು ಕಾರಣಗಳಿಂದ ನಾನು tender cancel ಮಾಡಿದ್ದೇನೆ. ಮರು tender ಆಗುತ್ತಿದ್ದು, ಆದಷ್ಟು ಬೇಗನೇ ಕೆಲಸವನ್ನು ಮಾಡುತ್ತೇನೆ. ಅದರ cost ಕೂಡ ಕಡಿಮೆ ಮಾಡಿ, Conditions ಗಳನ್ನು simplify ಮಾಡಿದ್ದೇನೆ. ಎಲ್ಲರೂ participate ಮಾಡುವಂತೆ ಮಾಡಿ, ಪಾರದರ್ಶಕವಾಗಿ ಮಾಡುತ್ತಿದ್ದು, ಇದನ್ನು ಪತ್ರಿಕೆಗಳಿಗೂ ಹೇಳಿದ್ದೇನೆ. ಆದ್ದರಿಂದ ಬೆಂಗಳೂರು road ಗಳ ಬಗ್ಗೆ ಹಲವಾರು ಪ್ರಶ್ನೆಗಳು ಬರುತ್ತವೆ. ಮಾನ್ಯ ಸದಸ್ಯರಾದ ರಮೇಶ್ ಹಾಗೂ ಇತರರು ಪ್ರಸ್ತಾಪಿಸುತ್ತಾರೆ. ಇದಕ್ಕೆ ಸಮಗ್ರವಾದ ಪರಿಹಾರ ಕೊಡುವುದಕ್ಕೆ, ಆಗಾಗ ಕೆಲವು ಕ್ರಮಗಳನ್ನು ತೆಗೆದುಕೊಂಡಿದ್ದೇನೆ. ಆದರೆ ಪ್ರತಿ ಬಾರಿ ಹೊಸ ಹೊಸ challenge ಗಳು ಬರುತ್ತಿವೆ. ಆದ್ದರಿಂದ ರಸ್ತೆ ನಿರ್ವಹಣೆಗೆ ವಿಶೇಷವಾದ code ಗಳನ್ನು ಮಾಡಿ, ಮುಂದಿನ ದಿನಗಳಲ್ಲಿ ರಸ್ತೆ repair ಇರಬಹುದು, ಹೊಸ ರಸ್ತೆ lane ಇರಬಹುದು, white topping ಎಲ್ಲಿ ಮಾಡಬೇಕು, ಏನು ಮಾಡಬೇಕು ಎನ್ನುವುದನ್ನು ಗಮನಿಸುತ್ತೇನೆ. 12 high density corridor ಗಳಲ್ಲಿ white topping ಗಾಗಿ ಒಂದು stretch ಅನ್ನು ತೆಗೆದುಕೊಂಡಿದ್ದೇವೆ. White topping ರಸ್ತೆಗಳಿಗೆ ಹತ್ತನ್ನೆರಡು ವರ್ಷಗಳು maintenance ಬೇಕಾಗಿರುವುದಿಲ್ಲ. ಅದನ್ನು ಕೂಡ maintenance ಖರ್ಚಿನಲ್ಲಿ ತೆಗೆದುಕೊಂಡಿದ್ದು, ಇವೆಲ್ಲಾ ಕಾರಣಗಳಿಂದ change ಮಾಡಿದ್ದೇವೆ. White topping ಮಾಡಲು ಕೆಲವು norms ಅನ್ನು fix ಮಾಡಬೇಕು, ಏಕೆಂದರೆ high cost ಇದೆ, ಎಲ್ಲಿ ಮಾಡಬೇಕು, ಎಲ್ಲಿ load ಜಾಸ್ತಿ ಇದೆ, ಎಲ್ಲಿ multiaxial vehicles ಗಳು ಓಡಾಡುತ್ತವೆ. ಅಂತಹ ಕಡೆಗಳಲ್ಲಿ first priority ಮೇಲೆ ಮಾಡಬೇಕಾಗುತ್ತದೆ. ಇದನ್ನು normal roads, within the ward roads ಗಳಿಗೆ asphalting ಮಾಡಬೇಕಾಗುತ್ತದೆ. ಈ ರೀತಿ ಒಂದು ಹೊಸ code ತರುವುದಕ್ಕೆ ಮಾಡುತ್ತಿದ್ದೇವೆ.

**ಶ್ರೀ ಎಸ್. ರವಿ:-** ಮಾನ್ಯ ಸಭಾಪತಿಯವರೇ, ಬಹುಮುಖ್ಯವಾದ ಪ್ರಶ್ನೆ ಏನೆಂದರೆ KRIDL (Karnataka Rural Infrastructure Development Limited) ಬಗ್ಗೆ ಲೋಕಾಯುಕ್ತ ತನಿಖೆ ಮಾಡಿ ಸ್ಪಷ್ಟವಾದ ವರದಿಯನ್ನು ಕೊಟ್ಟಿದೆ, ಇದು ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿದೆ. 126 ಕಾಮಗಾರಿಗಳ ಪೈಕಿ 114 ಕಾಮಗಾರಿಗಳಲ್ಲಿ ಲೋಪವಾಗಿರುವ ಬಗ್ಗೆ ಲೋಕಾಯುಕ್ತ ಸ್ಪಷ್ಟವಾಗಿ ವರದಿ ಕೊಟ್ಟಿದೆ. ಅದರ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳುತ್ತಾರೆ? KRIDL ಅನ್ನು ಕಪ್ಪುಪಟ್ಟಿಗೆ ವಹಿಸಿ ಎಂದು ಹೇಳಿದ್ದಾರೆ. High Court ನಲ್ಲಿ Advocate General ರವರು ವಾದ ಮಾಡುವಾಗ BBMP ರಸ್ತೆಗಳ ಅದ್ವಾನದ ಬಗ್ಗೆ ಮೊನ್ನೆ ನ್ಯಾಯಮೂರ್ತಿಗಳ ಮುಂದೆ ಹೇಳಿದ್ದಾರೆ. “ ಸಾರ್, ನ್ಯಾಯಮೂರ್ತಿಗಳಾದ ತಾವು ಕೃಷ್ಣನ role ಮಾಡಿ, BBMP ಕಂಸನ role ಆಗಿಬಿಡಲಿ, ಕೃಷ್ಣ 99 ತಪ್ಪುಗಳನ್ನು ಮಾಡಿದ ಶಿಶುಪಾಲನಿಗೆ ಕ್ಷಮೆ ಕೊಡುತ್ತಾನೆ, ಇದೊಂದು ತಪ್ಪಿಗೆ ಕ್ಷಮೆ ಕೊಡಿ” ಎಂದು ಕೇಳುತ್ತಾರೆ. ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಕೇಳುವುದೇನೆಂದರೆ ಅವರು ಶಿಶುಪಾಲ ಆಗಬಾರದು, ಕೃಷ್ಣ ಆಗಬೇಕು. BBMP ಯ 99 ತಪ್ಪುಗಳು ಆಗಿಹೋಗಿ, 101 ತಪ್ಪುಗಳಿಗೆ ಬಂದುಬಿಟ್ಟಿದೆ. ಈ KRIDL ವಿಚಾರದಲ್ಲಿಯಾದರೂ ಅವರ ಬದ್ಧತೆಯನ್ನು ತೋರಿಸಬೇಕು. ಲೋಕಾಯುಕ್ತ ಕೊಟ್ಟಿರುವ ವರದಿಯನ್ನು ಸದನದಲ್ಲಿ ಹೇಳಲಿ, ಈ ಖಾತೆ ಅವರಿಗೆ ಬರುತ್ತದೆ. ಅದನ್ನು ಕಪ್ಪುಪಟ್ಟಿಗೆ ವಹಿಸಿ, ಸಂಬಂಧಪಟ್ಟ ಅಧಿಕಾರಿಗಳನ್ನು ಬಂಧಿಸುತ್ತೇನೆ, ಅವರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡು ಸರ್ಕಾರದ ಮತ್ತು ತೆರಿಗೆದಾರರ ಹಣ ಲೂಟಿ ಮಾಡಿರುವವರ ಬಳಿ ಪೈಸೆ ಹಣವನ್ನು ಬಿಡದೇ ವಸೂಲಿ ಮಾಡುತ್ತೇನೆ ಎನ್ನುವ ಬದ್ಧತೆ ಅವರಿಂದ ಪ್ರದರ್ಶನ ಆಗಬೇಕು.

**ಶ್ರೀ ಬಸವರಾಜ ಬೊಮ್ಮಾಯಿ:-** ಬಹಳ ಒಳ್ಳೆಯ ಭಾಷಣ ಮಾಡುತ್ತಿದ್ದಾರೆ.

**ಶ್ರೀ ಎಸ್. ರವಿ:-** ಇಂತಹ ಸ್ಪಷ್ಟವಾದ ಉತ್ತರ ಅವರಿಂದ ಬರಬೇಕು.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸದಸ್ಯರು ಭಾಷಣವನ್ನು ಬಹಳ ಚೆನ್ನಾಗಿ ಮಾಡುತ್ತಾರೆ.

**ಶ್ರೀ ಎಸ್. ರವಿ:–** ಹಾಗಾದರೆ ಲೋಕಾಯುಕ್ತಕ್ಕೆ ಬೆಲೆ ಇಲ್ಲವೇ? ಭಾಷಣವನ್ನು ನಾನು ಅವರ ಬಳಿಯೇ ಕಲಿತಿರುವುದು, ನನಗೆ starting ಅವರ ಪಕ್ಕದಲ್ಲಿಯೇ ಕುಳಿತು ಅವರೇ ನನಗೆ training ಕೊಟ್ಟಿದ್ದಾರೆ.

**ಶ್ರೀ ಬಸವರಾಜ ಬೊಮ್ಮಾಯಿ:–** ನನಗೆ ಗೊತ್ತಿದೆ, ನಾನು ಹೇಳುವುದೇನೆಂದರೆ ಇವೆಲ್ಲಾ ಕೆಲಸಗಳು ಯಾರ್ಯಾರ ಕಾಲದಲ್ಲಿ ಆಗಿವೆ, ಯಾರು KRIDL ಗೆ ಕೊಟ್ಟರು, ಏಕೆ ಕೊಟ್ಟರು, ಅಧಿಕಾರಿಗಳು ಯಾರಿದ್ದರು, ಯಾವ ಅಧಿಕಾರಿ ಯಾವ ಸರ್ಕಾರದ ಮೇಲೆ ಯಾವರೀತಿ ಪ್ರಭಾವ ಮಾಡಿದ್ದರು, ಏನೆಲ್ಲ ನಡೆದಿದೆ ಎಂಬುದೆಲ್ಲವನ್ನು ತನಿಖೆ ಮಾಡಿ, KRIDL ಇರಲಿ ಅಥವಾ BBMP ಇರಲಿ, ಯಾರೇ ತಪ್ಪಿತಸ್ಥರಿದ್ದರೂ ಬಲಿ ಹಾಕುತ್ತೇನೆ.

**ಶ್ರೀ ಎಸ್. ರವಿ:–** ಲೋಕಾಯುಕ್ತ ವರದಿ ಕೊಟ್ಟಿದ್ದಾರೆ, (ಗೊಂದಲ)

**ಶ್ರೀ ಬಸವರಾಜ ಬೊಮ್ಮಾಯಿ:–** ಲೋಕಾಯುಕ್ತ ವರದಿಯಲ್ಲಿ ಕೆಲಸಗಳ ಕಾಮಗಾರಿ ಬಗ್ಗೆ ಮಾತ್ರ ಹೇಳಿದ್ದಾರೆ.

**ಶ್ರೀ ಎಸ್. ರವಿ:–** ಕಪ್ಪುಪಟ್ಟಿಗೆ ಸೇರಿಸುವ ಬಗ್ಗೆ ಶಿಫಾರಸ್ಸು ಮಾಡಿದ್ದಾರೆ. ಖಡಕ್ ಉತ್ತರ ಕೊಡಬೇಕು ಸಾರ್.

**ಶ್ರೀ ಬಸವರಾಜ ಬೊಮ್ಮಾಯಿ:–** ಈ ಕೆಲಸವನ್ನು ಅವರು ಅಧಿಕಾರದಲ್ಲಿದ್ದಾಗ ಮಾಡಬಹುದಾಗಿತ್ತಲ್ಲವೇ? ಇದೆಲ್ಲವೂ ಅವರ ಕಾಲದಲ್ಲಿ ನಡೆದಿದೆ.

**ಶ್ರೀ ಎಸ್. ರವಿ:–** ಅನುಭವಿಸಿದೆವು. ಸಾರ್, ದಯಮಾಡಿ ಮುಚ್ಚಿಹಾಕಬೇಡಿ. ಅವರು ಕೃಷ್ಣ ಆಗಬೇಕು, ಕೃಷ್ಣನ ಪಾತ್ರವನ್ನು ನಿರ್ವಹಣೆ ಮಾಡಬೇಕು, ಚಕ್ರವನ್ನು ಎತ್ತಿಕೊಳ್ಳಲಿ (ಗೊಂದಲ)

**ಶ್ರೀ ಬಸವರಾಜ ಬೊಮ್ಮಾಯಿ:–** ಯಾರ್ಯಾರು ಯಾವಾಗ ಏನು ಪಾತ್ರ ನಿರ್ವಹಣೆ ಮಾಡಿದರು ಎಂದು ಗೊತ್ತಿದೆ, ಆ ಕಡೆ ಇದ್ದಾಗ ಒಂದು ಪಾತ್ರ ಮತ್ತು ಈ ಕಡೆ ಇರುವಾಗ ಒಂದು ಪಾತ್ರ, ಅವರಿಗೆ ಕೃಷ್ಣ ಆಗುವ ಅವಕಾಶ ಇರಲಿಲ್ಲವೇ?

(588) 24.03.2022 11.20 hv.vk

ಶ್ರೀ ಬಸವರಾಜ ಬೊಮ್ಮಾಯಿ:- ಸನ್ಮಾನ್ಯ ಸಭಾಪತಿಯವರೇ, ಯಾರು, ಯಾವಾಗ, ಯಾವ ಪಾತ್ರವನ್ನು ನಿರ್ವಹಿಸಿದ್ದಾರೆನ್ನುವುದು ನನಗೆ ಗೊತ್ತಿದೆ. ಆಡಳಿತ ಪಕ್ಷದಲ್ಲಿದ್ದಾಗ ಒಂದು ಪಾತ್ರ, ವಿರೋಧ ಪಕ್ಷಕ್ಕೆ ಬಂದಾಗ ಮತ್ತೊಂದು ಪಾತ್ರವನ್ನು ನಿರ್ವಹಿಸುತ್ತಿದ್ದಾರೆ. ಮಾನ್ಯ ರವಿಯವರು, ಈ ಕಡೆ ಬಂದಿದ್ದರೆ ಕೃಷ್ಣಾ ಆಗಬಹುದಾಗಿತ್ತು. ಈಗ ಬೇರೆ ಕೃಷ್ಣನ ಪಾತ್ರ ನಿರ್ವಹಿಸುತ್ತಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಲೋಕಾಯುಕ್ತದವರು ಕೊಟ್ಟಿರುವ ವರದಿಯ ಆಧಾರದ ಮೇಲೆ ಕೆ.ಆರ್.ಐ.ಡಿ.ಎಲ್. ನಿಗಮಕ್ಕೆ ವಹಿಸಿದ್ದ ಎಲ್ಲ ಕಾಮಗಾರಿಗಳನ್ನು ರದ್ದುಗೊಳಿಸಿ ಕೆಲಸವನ್ನು ನಿಲ್ಲಿಸಿದ್ದೇವೆ. ಸಂಪೂರ್ಣವಾದ ಮಾಹಿತಿಯನ್ನು ತರಿಸುತ್ತಿದ್ದೇನೆ. ಲೋಕಾಯುಕ್ತದವರು ಕಾಮಗಾರಿಗೆ ಸಂಬಂಧಪಟ್ಟಂತೆ ಮಾತ್ರ ವರದಿ ಕೊಟ್ಟಿದ್ದಾರೆ. ಆದರೆ, ನಾನು ಒಂದು ಹೆಜ್ಜೆ ಮುಂದೆ ಹೋಗಿ ಕೆ.ಆರ್.ಐ.ಡಿ.ಎಲ್. ನಿಗಮಕ್ಕೆ ಯಾರು ಕಾಮಗಾರಿಗಳನ್ನು ನೀಡಿದ್ದಾರೆ; ಯಾವ ಆಧಾರದ ಮೇಲೆ ನೀಡಿದ್ದಾರೆ; ಯಾವ ಕಾರಣಕ್ಕಾಗಿ ನೀಡಿದ್ದಾರೆ; ಯಾವ ನಿಬಂಧನೆಗಳ ಆಧಾರದ ಮೇಲೆ ಅವರಿಗೆ ಕಾಮಗಾರಿಗಳನ್ನು ವಹಿಸಿಕೊಟ್ಟಿದ್ದಾರೆ; ಆಗ ಯಾವ ಅಧಿಕಾರಿಗಳಿದ್ದರು ಮತ್ತು ಈಗ ಆ ಕಾಮಗಾರಿ ಯಾವ ಹಂತದಲ್ಲಿದೆ ಎನ್ನುವುದರ ಬಗ್ಗೆ ಸಮಗ್ರವಾಗಿ ತನಿಖೆ ಮಾಡಿ, ಕೆ.ಆರ್.ಐ.ಡಿ.ಎಲ್. ನಿಗಮದ ಅಧಿಕಾರಿಗಳಿರಬಹುದು ಅಥವಾ ಬಿ.ಬಿ.ಎಂ.ಪಿ. ಅಧಿಕಾರಿಗಳಿರಬಹುದು, ಯಾರೇ ಆಗಿದ್ದರು ಅವರ ಮೇಲೆ ಖಂಡಿತವಾಗಿ ಕ್ರಮ ತೆಗೆದುಕೊಳ್ಳಲಾಗುತ್ತದೆ. ಯಾವ ಸಂಸ್ಥೆಯ ಬಗ್ಗೆಯೂ ಮುಲಾಜು ನೋಡುವುದಿಲ್ಲ ಮತ್ತು ಯಾವ ವ್ಯಕ್ತಿಯ ಬಗ್ಗೆಯೂ ಮುಲಾಜು ನೋಡುವುದಿಲ್ಲ.

## ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2540
## (ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಯು.ಬಿ.ವೆಂಕಟೇಶ್:–** ಸನ್ಮಾನ್ಯ ಸಭಾಪತಿಯವರೇ, "ಬೆಂಗಳೂರು ನಗರದ ಬೊಮ್ಮನಹಳ್ಳಿ ವಲಯದಲ್ಲಿ ಭೂ ಪರಿವರ್ತನೆಗೊಂಡ ಏಕ ನಿವೇಶನಕ್ಕೆ (ಸಂ.ನಂ.39 ಪುಟ್ಟೇನಹಳ್ಳಿ ಗ್ರಾಮ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ) ಖಾತಾ ಸಂಖ್ಯೆ:1392/39 ನಿಯಮಬಾಹಿರವಾಗಿ ವಿಭಜನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?" ಎನ್ನುವ ನನ್ನ ಮೊದಲನೆಯ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳು, "ನಿಯಮ ಬಾಹಿರವಾಗಿ ಖಾತೆ ವಿಭಜನೆ ಮಾಡಿರುವುದಕ್ಕೆ ಕಾರಣರಾದ ಸಂಬಂಧಪಟ್ಟ ಅಧಿಕಾರಿಗಳು/ನೌಕರರುಗಳ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗುವುದು" ಎನ್ನುವ ಉತ್ತರವನ್ನು ನೀಡಿದ್ದಾರೆ. ನನ್ನ ಎರಡನೆಯ ಪ್ರಶ್ನೆಗೆ, "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಬಿ.ಬಿ.ಎಂ.ಪಿ) ವ್ಯಾಪ್ತಿಯ ಎಲ್ಲ ವಲಯಗಳಲ್ಲಿ ಭೂಪರಿವರ್ತನೆಗೊಂಡ ಏಕ ನಿವೇಶನಕ್ಕೆ ಖಾತಾ ವಿಭಜನೆ ಮಾಡಲು ಅವಕಾಶವಿರುವುದಿಲ್ಲ" ಎನ್ನುವ ಉತ್ತರವನ್ನು ನೀಡಿದ್ದಾರೆ. ಬಿ.ಬಿ.ಎಂ.ಪಿ.ಯಲ್ಲಿ ಒಂದು ಬಾರಿ ಭೂ ಪರಿವರ್ತನೆಯಾಗಿರುವ ಏಕ ನಿವೇಶನಕ್ಕೆ ಖಾತಾ ವಿಭಜನೆ ಮಾಡುವುದಕ್ಕೆ ಅವಕಾಶ ಇರುವುದಿಲ್ಲ. ಆದರೂ ಪದೇಪದೇ ಅಧಿಕಾರಿಗಳು ಈ ಕೆಲಸ ಮಾಡುತ್ತಿದ್ದಾರೆ. 2016ನೇ ಇಸವಿಯಲ್ಲಿ ಈ ರೀತಿ ಸುಮಾರು 517 ಖಾತಾಗಳು ಕ್ಲೋಸ್ ಆಗಿವೆ. ಅದೇ ಅಧಿಕಾರಿಗಳು ಈಗಲೂ ಇದ್ದಾರೆ, ಅವರ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ? ಈಗ ನಾನು ಕೇಳಿರುವ ಪ್ರಶ್ನೆಯಲ್ಲಿ ಒಂದು ಉದಾಹರಣೆಯನ್ನು ಕೊಟ್ಟು ಪ್ರಶ್ನೆ ಕೇಳಿದ್ದೇನೆ. ಈ ರೀತಿಯ ಸಾವಿರಾರು ಉದಾಹರಣೆಗಳು ಇವೆ. ಈ ರೀತಿ ಮಾಡುವುದರಿಂದ ಬಿ.ಬಿ.ಎಂ.ಪಿ.ಗೆ ಬರುಬೇಕಾದ ಶೇಕಡಾ 2ರಷ್ಟು ಶುಲ್ಕ ಕಡಿಮೆಯಾಗುತ್ತದೆ. ಇದರಿಂದಾಗಿ 8–10 ವರ್ಷಗಳ ಕಂದಾಯ ಕೈ ತಪ್ಪಿ ಹೋಗುತ್ತದೆ. ಇದರಿಂದ ಸಾವಿರಾರು ಕೋಟಿ ರೂಪಾಯಿಗಳು ಬಿ.ಬಿ.ಎಂ.ಪಿ.ಗೆ ನಷ್ಟವಾಗುತ್ತಿದೆ. ಸರ್ಕಾರಕ್ಕೆ ಈ ರೀತಿ ನಷ್ಟವುಂಟು ಮಾಡಿ ನಂತರ "ಬಿ.ಬಿ.ಎಂ.ಪಿ.ಯಲ್ಲಿ ದುಡ್ಡಿಲ್ಲ, ಅನುದಾನ ಹೆಚ್ಚು ಕೊಡಿ" ಎಂದು ಕೇಳುತ್ತಾರೆ. ಅಲ್ಲಿರುವಂತಹ

ಅಧಿಕಾರಿಗಳು ಈ ರೀತಿ ಹಣವನ್ನು ಗುಳ್ಳುಂ ಮಾಡಿದರೆ ಹೇಗೆ? ಮಾನ್ಯ ಮುಖ್ಯಮಂತ್ರಿಗಳ ಅಧಿಕಾರ ವ್ಯಾಪ್ತಿಗೆ ಬಿ.ಬಿ.ಎಂ.ಪಿ., ಮತ್ತು ಬಿ.ಡಿ.ಎ. ಬರುವುದರಿಂದ, ಮಾನ್ಯ ಮುಖ್ಯಮಂತ್ರಿಗಳಿಗೆ ಬೇರೆ ಕೆಲಸದ ಒತ್ತಡ ಇರುತ್ತದೆಂದು ಅವರ ಮನಸ್ಸಿಗೆ ಬಂದ ರೀತಿಯಲ್ಲಿ ವರ್ತಿಸುತ್ತಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ನಮ್ಮ ನೆರೆಯ ರಾಜ್ಯವಾಗಿರುವ ಮಹಾರಾಷ್ಟ್ರದಲ್ಲಿ ಇಂತಿಂಥ ವಲಯಗಳಿಗೆ ಇಂತಹವರನ್ನು ಹಾಕಬೇಕೆಂದು ಒಂದು ಕೇಡರ್ ಮಾಡಿಕೊಂಡಿದ್ದಾರೆ. ನನ್ನ ವಿನಂತಿ ಏನೆಂದರೆ, ಬಹಳಷ್ಟು ಅಧಿಕಾರಿ/ನೌಕರರು ಬೇರೆ ಇಲಾಖೆಗಳಿಂದ ಇಲ್ಲಿಗೆ ಎರವಲು ಸೇವೆಯ ಮೇಲೆ ಬಂದಿದ್ದಾರೆ. ಅವರಿಗೆ ಬಿ.ಬಿ.ಎಂ.ಪಿ.ಯ ಕಾರ್ಯವೈಖರಿಯೇ ಗೊತ್ತಿರುವುದಿಲ್ಲ. ಮಾನ್ಯ ಕಾನೂನು ಸಚಿವರು ಈ ಸದನದಲ್ಲಿ ಉಪಸ್ಥಿತರಿದ್ದಾರೆ. ನಾನು ತಪ್ಪು ಮಾತನಾಡಿದ್ದರೆ ಅದನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಒಬ್ಬ ಬಿ.ಬಿ.ಎಂ.ಪಿ. ಆಯುಕ್ತರು 198 ಝೋನ್ ನೋಡಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಈಗ ಬಿ.ಬಿ.ಎಂ.ಪಿ.ಯನ್ನು 8 ವಲಯಗಳನ್ನಾಗಿ ವಿಂಗಡಣೆ ಮಾಡಲಾಗಿದೆ. ಈ ವಲಯಗಳಿಗೆ ಸೀನಿಯರ್ ಕೆ.ಎ.ಎಸ್. ಅಧಿಕಾರಿಗಳನ್ನು ಅಥವಾ ತಾಂತ್ರಿಕವಾಗಿ ಅನುಭವವುಳ್ಳವರನ್ನು ನೇಮಕ ಮಾಡಬೇಕೆನ್ನುವುದು ನನ್ನ ಒತ್ತಾಯವಾಗಿದೆ. ಅಲ್ಲಿರುವಂತಹ ಜೆ.ಸಿ.ಗಳು ಬರೀ ದುಡ್ಡು ತೆಗೆದುಕೊಂಡು ಮಾಡಬಾರದು ಕೆಲಸ ಮಾಡಿ ಹೋಗುತ್ತಿದ್ದಾರೆ. ಯಾರು ದುಡ್ಡು ಕೊಡುವುದಿಲ್ಲ ಅವರ ಮೇಲೆ ಬೇಡದೇ ಇರುವಂತಹ ಕಂಪ್ಲೇಟ್ ಮಾಡುತ್ತಾರೆ. ಮಹಾರಾಷ್ಟ್ರದಲ್ಲಿ ಅವರದೇ ಒಂದು ಕೇಡರ್ ಇದೆ. ಅವರದೇ ಒಂದು ಸರ್ವಿಸ್ ರೆಕ್ರ್ಯೂಟ್‌ಮೆಂಟ್ ಇದೆ. ಎಲ್ಲ ವಲಯಗಳಲ್ಲಿಯೂ ಈ ರೀತಿ ಖಾತಾ ವರ್ಗಾವಣೆ ಮಾಡುತ್ತಿದ್ದಾರೆ. ಈ ಅಧಿಕಾರಿಗಳ ಮೇಲೆ ಯಾವ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎನ್ನುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ತಿಳಿಸಬೇಕಾಗಿದೆ. ಕೆಲಸಕ್ಕೆ ಬಾರದವರ ಮೇಲೆ ಕ್ರಮ ತೆಗೆದುಕೊಂಡರೆ ಆಗುವುದಿಲ್ಲ. ಯಾರು ಇದಕ್ಕೆ ಜವಾಬ್ದಾರಿಯುತ ಅಧಿಕಾರಿಗಳೆಂದು ಗುರುತಿಸಲಾಗುತ್ತದೆ ಅವರಿಗೆ ಒಮ್ಮೆ ಬಿಸಿ ಮುಟ್ಟಿಸಿದರೆ. ಬೇರೆಯವರಿಗೂ ಅದೊಂದು ಉದಾಹರಣೆಯಾಗುತ್ತದೆ. "ಹೌದು ಈ ರಾಜ್ಯದಲ್ಲಿ ಮುಖ್ಯಮಂತ್ರಿಗಳು ಇದ್ದಾರೆ" ಎನ್ನುವುದು ಗೊತ್ತಾಗುತ್ತದೆ.

ಶ್ರೀ ಬಸವರಾಜ ಬೊಮ್ಮಾಯಿ:- ಸನ್ಮಾನ್ಯ ಸಭಾಪತಿಯವರೇ, ಅವರು "ರಾಜ್ಯದಲ್ಲಿ ಮುಖ್ಯಮಂತ್ರಿಗಳು ಇದ್ದಾರೆ ಎನ್ನುವುದು ಗೊತ್ತಾಗುತ್ತದೆ" ಎಂದು ಹೇಳುವುದು ಸರಿಯಲ್ಲ. ಮುಖ್ಯಮಂತ್ರಿಗಳು ಇದ್ದಾರೆಂದು ಇದೊಂದೇ ಪ್ರಕರಣವಲ್ಲ, ಅನೇಕ ಪ್ರಕರಣಗಳಲ್ಲಿ ಸಾಬೀತುಪಡಿಸಲಾಗಿದೆ. ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಸಂಬಂಧಪಟ್ಟಂತೆ ಉಪ ಪ್ರಶ್ನೆಗಳನ್ನು ಕೇಳಿದರೆ ಖಂಡಿತವಾಗಿಯೂ ಉತ್ತರವನ್ನು ಕೊಡುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಬರುವ ಎಲ್ಲಾ ವಲಯಗಳಲ್ಲಿ ಭೂ ಪರಿವರ್ತನೆಗೊಂಡ ಏಕ ನಿವೇಶನಕ್ಕೆ ಖಾತಾ ವಿಭಜನೆ ಮಾಡಲು ಅವಕಾಶವಿರುವುದಿಲ್ಲ. ಭೂ ಪರಿವರ್ತನೆಗೊಂಡ ಮೇಲೆ ಅದು ಏಕ ನಿವೇಶನವಾಗುತ್ತದೆ. ಈ ಏಕ ನಿವೇಶನವನ್ನು ವಿಭಜನೆ ಮಾಡುವುದಕ್ಕೆ ಅವಕಾಶವಿಲ್ಲ. ಮಾನ್ಯ ಸದಸ್ಯರು ಉಲ್ಲೇಖ ಮಾಡಿರುವ ಪ್ರಕರಣದಲ್ಲಿ "ತಪ್ಪಾಗಿದೆ, ಲೋಪವಾಗಿದೆ" ಎಂದು ನಾನು ನೀಡಿರುವ ಲಿಖಿತರೂಪದ ಉತ್ತರದಲ್ಲಿ ಒಪ್ಪಿಕೊಂಡಿದ್ದೇನೆ. ಇದರಲ್ಲಿ ಮುಚ್ಚಿಡುವಂತಹ ಸಂಗತಿಗಳೇನೂ ಇಲ್ಲ. ಏಕ ನಿವೇಶನ ವಿಭಜನೆಗೆ ಅವಕಾಶವಿಲ್ಲ. ಆದರೆ, ಸಂಬಂಧಪಟ್ಟ ಅಧಿಕಾರಿಗಳು ಕಾನೂನು ಬಾಹಿರವಾಗಿ ಈ ಕೆಲಸವನ್ನು ಮಾಡಿದ್ದಾರೆ. ರಸ್ತೆ ಸಾರ್ವಜನಿಕ ಸ್ವತ್ತಾಗಿದೆ. ಈ ರಸ್ತೆಯನ್ನು ವಿಭಜನೆ ಮಾಡಿದ್ದಾರೆ. ಇದಕ್ಕೆ ಅವಕಾಶವಿಲ್ಲ. ಮಾನ್ಯ ಸದಸ್ಯರು ಉಲ್ಲೇಖ ಮಾಡಿರುವ ಪ್ರಕರಣದಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರ್ ಶ್ರೀ ನರಸಿಂಹಮೂರ್ತಿ, ಅಸಿಸ್ಟೆಂಟ್ ರೆವಿನ್ಯೂ ಆಫೀಸರ್ ಶ್ರೀ ಎಸ್.ವಿ.ಮಂಜುನಾಥ್; ರೆವಿನ್ಯೂ ಆಫೀಸರ್ ಶ್ರೀ ವೆಂಕಟೇಶ್; ಡೆಪ್ಯುಟಿ ಕಮೀಶನರ್, ಬೊಮ್ಮನಹಳ್ಳಿ, ಶ್ರೀಮತಿ ಶಶಿಕಲ ಮತ್ತು ಜಾಯಿಂಟ್ ಕಮೀಶನರ್, ಬೊಮ್ಮನಹಳ್ಳಿ, ಶ್ರೀ ರಾಮಕೃಷ್ಣರವರ ಮೇಲೆ ಕ್ರಮವನ್ನು ಜರುಗಿಸಲಾಗಿದೆ.

ಶ್ರೀ ಯು.ಬಿ.ವೆಂಕಟೇಶ್:- ಸನ್ಮಾನ್ಯ ಸಭಾಪತಿಯವರೇ, ನಮ್ಮ ನೆರೆಯ ರಾಜ್ಯವಾಗಿರುವ ಮಹಾರಾಷ್ಟ್ರದಲ್ಲಿ ಇಂತಿಂಥ ವಲಯಗಳಿಗೆ, ಇಂತಹವರನ್ನು ನೇಮಕ ಮಾಡಬೇಕೆಂದು ಒಂದು ಕೇಡರ್ ಮಾಡಿಕೊಂಡಿದ್ದಾರೆ. ಇಲ್ಲಿ ಬಿ.ಬಿ.ಎಂ.ಪಿ.ಯಲ್ಲಿ ಕೆಲಸ ಮಾಡುವವರು ಎರವಲು ಸೇವೆಯ ಮೇರೆಗೆ ಬೇರೆಬೇರೆ ಇಲಾಖೆಗಳಿಂದ ಬಂದಿದ್ದಾರೆ. ಅವರಿಗೆ ಬಿ.ಬಿ.ಎಂ.ಪಿ.ಯ ಕಾರ್ಯವೈಖರಿ ಗೊತ್ತಾಗುವುದಿಲ್ಲ.

ಅವರ ಬದಲಿಗೆ ತಾಂತ್ರಿಕವಾಗಿ ಅನುಭವವುಳ್ಳವರನ್ನು ಅಥವಾ ಸೀನಿಯರ್ ಕೆ.ಎ.ಎಸ್ ಅವರನ್ನೋ ಅಲ್ಲಿಗೆ ನೇಮಕ ಮಾಡಬೇಕೆನ್ನುವುದು ನನ್ನ ಒತ್ತಾಯವಾಗಿದೆ.

ಶ್ರೀ ಬಸವರಾಜ ಬೊಮ್ಮಾಯಿ:- ಸನ್ಮಾನ್ಯ ಸಭಾಪತಿಯವರೇ, ಈಗಾಗಲೇ ಸೀನಿಯರ್ ಕೆ.ಎ.ಎಸ್.ಗಳನ್ನು ಅಲ್ಲಿಗೆ ನೇಮಕ ಮಾಡಬೇಕೆನ್ನುವ ತೀರ್ಮಾನ ಮಾಡಲಾಗಿದೆ.

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2611**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಆಯನೂರು ಮಂಜುನಾಥ್:-** ಸನ್ಮಾನ್ಯ ಸಭಾಪತಿಯವರೇ, "ಪ್ರಸ್ತುತ 80 ವರ್ಷಕ್ಕೂ ವಯೋಮಿತಿ ಮೀರಿದಂತಹ ಸರ್ಕಾರಿ ನೌಕರರಿಗೆ ಶೇಕಡಾ 20 ರಿಂದ ಶೇಕಡಾ 30ರಷ್ಟು ಮೂಲ ಪಿಂಚಣಿ ಹೆಚ್ಚಿಸಿರುವಂತೆ 70-75 ವರ್ಷ ವಯೋಮಿತಿವುಳ್ಳ ಸರ್ಕಾರಿ ನಿವೃತ್ತ ನೌಕರರಿಗೂ ಮೂಲ ಪಿಂಚಣಿಯ ಶೇಕಡಾ 10 ರಿಂದ ಶೇಕಡಾ 15ರಷ್ಟು ಹೆಚ್ಚಿಸುವ ಬಗ್ಗೆ ಸರ್ಕಾರ ಯೋಜನೆಯನ್ನು ರೂಪಿಸಿದೆಯೇ" ಎನ್ನುವ ನನ್ನ ಪ್ರಶ್ನೆಗೆ ಯಾವುದು ಇಲ್ಲ ಎನ್ನುವ ಉತ್ತರವನ್ನು ನೀಡಿದ್ದಾರೆ. ನನಗೆ ತಿಳಿದ ಮಟ್ಟಿಗೆ ಆ ರೀತಿಯ ಯೋಜನೆ ಇದೆ. ಆ ರೀತಿಯ ಯೋಜನೆ ಇಲ್ಲವೆಂದರೆ, ಅದರ ಬಗ್ಗೆ ಸರ್ಕಾರವೇ ಸ್ಪಷ್ಟೀಕರಣವನ್ನು ನೀಡಬೇಕಾಗಿದೆ. ನೌಕರರು ಕೊಟ್ಟಂಥ ಮಾಹಿತಿಯ ಆಧಾರದ ಮೇಲೆ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾಗಿರುವ ಆಯನೂರು ಮಂಜುನಾಥ್‌ರವರು ಮಾನವೀಯತೆಯ ದೃಷ್ಟಿಯಿಂದ ತೆಗೆದುಕೊಳ್ಳಬಹುದಾಗಿರುವ ನಿರ್ಧಾರದ ಬಗ್ಗೆ ಪ್ರಶ್ನೆ ಕೇಳಿದ್ದಾರೆ. "ಪ್ರಸ್ತುತ 80 ವರ್ಷಕ್ಕೂ ವಯೋಮಿತಿ ಮೀರಿದಂತಹ ಸರ್ಕಾರಿ ನೌಕರರಿಗೆ ಶೇಕಡಾ 20 ರಿಂದ ಶೇಕಡಾ 30ರಷ್ಟು ಮೂಲ ಪಿಂಚಣಿ ಹೆಚ್ಚಿಸಿರುವಂತೆ 70-75 ವರ್ಷದವರಗೂ ಅನ್ವಯಿಸಬೇಕು" ಎನ್ನುವ ಬೇಡಿಕೆಯನ್ನು ಇಟ್ಟಿದ್ದಾರೆ. ಇದು national pay commission ಶಿಫಾರಸ್ಸಿನ ಮೇರೆಗೆ, ಕಳೆದ ಬಾರಿಯ ನಮ್ಮ ರಾಜ್ಯ ವೇತನ ಆಯೋಗದ ಶಿಫಾರಸ್ಸಿನ ಮೇರೆಗೆ ಇದನ್ನು ನಾವು ತೆಗೆದುಕೊಂಡಿದ್ದೆವು. ಈಗ ಹೊಸ ವೇತನ ಆಯೋಗವನ್ನು ರಚನೆ ಮಾಡುತ್ತಿರುವ ಹಿನ್ನೆಲೆಯಲ್ಲಿ ಆಯೋಗದವರ ಶಿಫಾರಸ್ಸುಗಳನ್ನು ತೆಗೆದುಕೊಂಡು ಮಾನ್ಯ ಆಯನೂರು ಮಂಜುನಾಥ್‌ರವರು ಹೇಳಿರುವ ಅಂಶಗಳನ್ನು ಸಹ ಪರಿಗಣನೆಗೆ ತೆಗೆದುಕೊಳ್ಳಲಾಗುತ್ತದೆ.

---

ಪ್ರಶ್ನೆ ಸಂಖ್ಯೆ: 2534

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಎನ್ ರವಿಕುಮಾರ್‌ರವರು ಗೈರು ಹಾಜರಾಗಿದ್ದರು)

**ಸಭಾಪತಿಯವರು:–** ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆಃ 339(2534) ಕೇಳಿರುವ ಮಾನ್ಯ ಸದಸ್ಯರಾದ ಶ್ರೀ ಎನ್ ರವಿಕುಮಾರ್‌ರವರು ಸದನದಲ್ಲಿ ಹಾಜರಿಲ್ಲ.

**ಶ್ರೀ ಎಸ್.ವ್ಹಿ.ಸಂಕನೂರ್:–** ಸನ್ಮಾನ್ಯ ಸಭಾಪತಿಯವರೇ, ಅವರ ಪರವಾಗಿ ಪ್ರಶ್ನೆ ಕೇಳಲು ನನಗೆ ಅನುಮತಿಯನ್ನು ಕೊಟ್ಟಿದ್ದಾರೆ. ತಾವು ಅವಕಾಶ ಕೊಟ್ಟರೆ, ನಾನು ಪ್ರಶ್ನೆ ಕೇಳುತ್ತೇನೆ.

**ಸಭಾಪತಿಯವರು:–** ಮಾನ್ಯ ಸಂಕನೂರ್‌ರವರೇ, ತಮಗೆ ಹೇಳಿರಬಹುದು ಆದರೆ, ನನಗೆ ಪತ್ರ ಬರೆದು ತಿಳಿಸಿಲ್ಲ ಆದ್ದರಿಂದ  ಅವರ ಪರವಾಗಿ ಪ್ರಶ್ನೆ ಕೇಳಲು ತಮಗೆ ಅವಕಾಶವನ್ನು ನೀಡಲು ಸಾಧ್ಯವಿಲ್ಲ.

---

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2616**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಬೆಂಗಳೂರು ಮೆಟ್ರೋ ರೈಲು ನಿಗಮ ದಿನಾಂಕ:03.01.2019ರಲ್ಲಿ 174 ಹುದ್ದೆಗಳ ನೇಮಕಾತಿಗೆ ಜಾಹಿರಾತು ನೀಡಿ, ದಿನಾಂಕ:26.02.2019 ಮತ್ತು 27.02.2019ರಂದು ಎರಡು ದಿನಗಳ ಕಾಲ ಪರೀಕ್ಷೆ ನಡೆಸಿ, ಸುಮಾರು 134 ಜನ ಐ.ಟಿ.ಐ ಹುದ್ದೆಗಳು, 21 ಜನ ಡಿಪ್ಲೋಮಾ ಇಂಜಿನಿಯರ್ಸ್, ಸೆಕ್ಷನ್ ಇಂಜಿನಿಯರ್ಸ್ 19 ಜನ ಮತ್ತು ಮೆಟ್ರೋ ಸ್ಟೇಷನ್‌ಗಳಗೆ ಸಂಬಂಧಪಟ್ಟಂತೆ 174 ಜನರ ಪರೀಕ್ಷೆ ನಡೆದು, ಅವರ ಮೆರಿಟ್ ಪಟ್ಟಿ ಪ್ರಕಟವಾಗಿ ನೇಮಕಾತಿ ಆದೇಶ ಕೊಡುವುದು ಬಾಕಿ ಇತ್ತು. ಆಗ ಅಧಿಸೂಚನೆಯನ್ನು ರದ್ದುಗೊಳಸಲಾಗಿದೆ. ಈ ರೀತಿ ಅಧಿಸೂಚನೆಯನ್ನು ರದ್ದುಗೊಳಸಲು ಕಾರಣವೇನು ಎನ್ನುವ ನನ್ನ ಪ್ರಶ್ನೆಗೆ ಕೋವಿಡ್-19 ವೈರಸ್‌ನಿಂದ ಉಂಟಾದ ನಷ್ಟದಿಂದಾಗಿ ಸದರಿ ಅಧಿಸೂಚನೆಯನ್ನು ರದ್ದುಗೊಳಸಲಾಗಿರುತ್ತದೆ ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಮೊನ್ನೆ ತಾನೇ ಲೋಕಸಭಾ ಆಯೋಗದಿಂದ ಕಳೆದ ಎರಡು ವರ್ಷಗಳ ಹಿಂದೆ ಆಗಿರುವಂತಹ ಹುದ್ದೆಗಳ ನೇಮಕಾತಿಗೆ ಒಂದು ವರ್ಷಗಳ ನಂತರ ಆದೇಶವನ್ನು ನೀಡಲಾಗಿದೆ. ನಮ್ಮ ಮೆಟ್ರೋದಲ್ಲಿ 1200 ಜನ ಖಾಯಂ ನೌಕರರಿದ್ದಾರೆ. ಸುಮಾರು 3000 ಜನರು ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದಾರೆ.

(ಮುಂದುವರಿದಿದೆ)

(589) 24.3.2022 11.30 ಪಿಕೆ:ಬಿಎನ್‌ಎಸ್

**ಶ್ರೀ ಕೆ.ಟಿ. ಶ್ರೀಕಂಠೇಗೌಡ(ಮುಂದು)**

ಸುಮಾರು 4 ಸಾವಿರದಿಂದ 5 ಸಾವಿರದ ವರೆಗೆ ಹೊರ ಗುತ್ತಿಗೆ ನೌಕರರಿದ್ದಾರೆ. ಈ 174 ಹುದ್ದೆಗಳಗೆ ಸಂಬಂಧಪಟ್ಟಂತೆ ಕರ್ನಾಟಕದ ಜನರಿಗೆ ಅವಕಾಶ ಸಿಗುತ್ತಿದೆ. ಒಂದು ವರ್ಷ

ತಡವಾದರೂ ಸರಿ, ಎಲ್ಲಾ ಪ್ರಕ್ರಿಯೆ ಮುಗಿದ ಮೇಲೆ ಕೈಬಿಡಬಾರದು. "ನಮ್ಮ ಮೆಟ್ರೋ" 50:50 ಭಾಗದ ಯೋಜನೆಯಾಗಿದ್ದು ಕೇಂದ್ರ ಸರ್ಕಾರ ಸುಮಾರು ರೂ. 14500 ಕೋಟಿ ಕೊಟ್ಟಿದ್ದೆ. ಮೆಟ್ರೋ ವಿಸ್ತರಣೆ ಕೂಡ ಆಗುತ್ತಿದೆ. ನೀವು ಕಾಲ್ ಮಾಡಿದಾಗ 40 ಮೆಟ್ರೋ ಸ್ಟೇಷನ್‌ಗಳಿತ್ತು; ಈಗ 50 ಸ್ಟೇಷನ್‌ಗಳಾಗಿವೆ. 15-20 ಕಿ.ಮೀ. ವಿಸ್ತರಣೆಯಾಗಿದೆ; ಸಿಬ್ಬಂದಿ ಅವಶ್ಯಕತೆ ಇದೆ. ಅರ್ಜಿ ಹಾಕಿದ್ದ ಬಹಳ ಜನರಿಗೆ ವಯೋಮೀತಿ ಕೂಡ ಮೀರುತ್ತಿದೆ. ಅವರಲ್ಲಿ ಟೆಕ್ನಿಕಲ್ ಹ್ಯಾಂಡ್ಸ್ ಕೂಡ ಇದೆ. ಈ ರಾಜ್ಯದ ಜನರಿಗೆ ಕೆಲಸ ಸಿಗುತ್ತಿದೆ. ಆದ್ದರಿಂದ ತಾವು revert ಮಾಡಿ, 174 ಜನರಿಗೂ ಮೆರಿಟ್ ಪಟ್ಟಿ ಅನೌನ್ಸ್ ಮಾಡಿ ಆದೇಶ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಒಂದೂವರೆ ವರ್ಷವಾದರೂ ಪರವಾಗಿಲ್ಲ ನಾವು ಕಾಯುತ್ತೇವೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಗಳೆ, 2019ರಲ್ಲಿ ನೇಮಕಾತಿಗೆ ನೋಟಿಫಿಕೇಷನ್ ಆಗಿತ್ತು. 134 ಜನ maintainers, 21 Junior Engineers ಮತ್ತು 19 ಜನ section engineers. ಸುಮಾರು 38 ಸಾವಿರ ಅರ್ಜಿಗಳು ಬಂದಿತ್ತು. ಟೆಸ್ಟ್ ಕೂಡ ಆಯಿತು. ಅಷ್ಟರಲ್ಲಿ ಕೋವಿಡ್-19 ಬಂದಿದ್ದರಿಂದ ಎಲ್ಲಾ ಕಡೆ ಕೆಲವು economic measures ಅನ್ನು ಮಾಡಬೇಕಾಯಿತು. ಅಲ್ಲದೇ ಮೆಟ್ರೋ ನಿಂತೇ ಹೋಯಿತು. ಹೀಗಾಗಿ O & M (operations and maintenance) ಗೆ ನಾವು permanent employees ನ್ನು ತೆಗೆದುಕೊಳ್ಳುತ್ತೇವಾದ್ದರಿಂದ ಅದಕ್ಕೆ ನೋಟಿಫಿಕೇಷನ್ ಮಾಡಿರುತ್ತೇವೆ. O & M ಗೆ ಯಾವಾಗ ಅವಶ್ಯಕತೆ ಇರುತ್ತದೆಯೋ ಆಗ ನೇಮಕಾತಿ ಮಾಡಲಾಗುತ್ತದೆ. ಈಗ ಆ ನೋಟಿಫಿಕೇಷನ್ ಹಿಂತೆಗೆದುಕೊಂಡಿದ್ದೇವೆ. ಏಕೆಂದರೆ 2 ವರ್ಷ ಮೆಟ್ರೋ ಸರಿಯಾಗಿ ಓಡಲಿಲ್ಲ ಮತ್ತು ಅಷ್ಟು ಜನರ ಅವಶ್ಯಕತೆಯೂ ಇರಲಿಲ್ಲ; ಅಷ್ಟು ಪ್ರಯಾಣಿಕರೂ ಸಹ ಇರಲಿಲ್ಲ. ಈಗ ಮೆಟ್ರೋ ವಿಸ್ತರಣೆ ಆಗುತ್ತಿದೆ. ಈ ನೋಟಿಫಿಕೇಷನ್ ಕ್ಯಾನ್ಸಲ್ ಮಾಡಿದ್ದರಿಂದ ಅವರನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಹೊಸ ನೋಟಿಫಿಕೇಷನ್ ಮಾಡಿ, ಯಾವಾಗ O & M ಗೆ ಅವಶ್ಯಕತೆ ಇದೆಯೋ ಆಗ ನೇಮಕಾತಿ ಮಾಡಿಕೊಳ್ಳುತ್ತೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಗಳೆ, ನನ್ನ ಪ್ರಶ್ನೆ ಇಷ್ಟೆ. ಬಹಳ ಜನ ಇದರಲ್ಲಿ ವಯೋಮಿತಿ ಮೀರುವವರಿದ್ದಾರೆ. 8-9 ಸಾವಿರ ನೌಕರರ ಪೈಕಿ 1200 ಜನ ಖಾಯಂ ನೌಕರರು

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

---

ಇದ್ದಾರೆ. ತಾವು ಇಚ್ಛಾಶಕ್ತಿ ಪ್ರದರ್ಶಿಸಿ 174 ಜನಕ್ಕೆ ಜೀವನ ಕಲ್ಪಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

---

**ಪ್ರಶ್ನೆ ಸಂಖ್ಯೆ: 2560**

**(ಉತ್ತರ ಪ್ರತಿ ಲಗತ್ತಿಸಲಾಗಿದೆ)**

**ಶೀ ಅಡಗೂರು ಹೆಚ್.ವಿಶ್ವನಾಥ್:-** ಮಾನ್ಯ ಸಭಾಪತಿಗಳೆ, ನನಗಿರುವ ಸಣ್ಣ ಆಡಳತದ ಅನುಭವದಲ್ಲಿ, a cabinet minister is the Government. ಸರ್ಕಾರದ ಕೈಯಲ್ಲಿ ನಮ್ಮ ಅಧಿಕಾರಿಗಳು ಸುಳ್ಳು ಹೇಳಸುತ್ತಾರೆ. ಪೊಲೀಸ್ ಅಧಿಕಾರಿಗಳೇ ಮಂತ್ರಿಗಳ ಕೈಯಲ್ಲಿ ಸುಳ್ಳು ಹೇಳಸುತ್ತಾರೆ. ಸದನ ಸಾರ್ವಭೌಮವಾಗಿರುತ್ತದೆ. ಕಮಾಂಡೆಂಟ್ 1ನೇ ಪಡೆ, ಕೆ.ಎಸ್.ಆರ್.ಪಿ., ಬೆಂಗಳೂರು ಘಟಕದಲ್ಲಿ ಪೊಲೀಸ್ ಕಾನ್ಸ್‌ಟೇಬಲ್ ದೇಹದಾರ್ಢ್ಯ ಪರೀಕ್ಷೆಗೆ ಹೋದವನೇ ಒಬ್ಬ; ಮೌಖಿಕ ಪರೀಕ್ಷೆಗೆ ಹೋದವನೇ ಬೇರೊಬ್ಬ. ಆದರೂ ಆರ್ಡರ್ ಪಡೆದುಕೊಂಡು ಕೆಲಸದಲ್ಲಿದ್ದಾನೆ. ನಿಮ್ಮ ಅಧಿಕಾರಿಗಳು ಇದು ನಡೆದಿಲ್ಲ ಎಂದು ಹೇಳುತ್ತಿದ್ದಾರೆ. ಆತ ಬಂದಿದ್ದಕ್ಕೆ ಅಟೆಂಡೆನ್ಸ್ ರಿಜಿಸ್ಟರ್ ಕಾಪಿ ಇದೆ, ಫೋಟೋ ಇದೆ. ಯಾರು ಫ್ರಾಡ್ ಮಾಡಿದ್ದಾರೆ, ಬಂದವನು ಯಾರು; ಹೋದವನು ಯಾರು ಎನ್ನುವುದಕ್ಕೆಲ್ಲಾ ದಾಖಲೆ ಇದೆ. ಇಷ್ಟೆಲ್ಲ ಇದ್ದು ಸದನದಲ್ಲಿ ಸುಳ್ಳು ಹೇಳುವಂತಹ ಕೆಲಸ ಮಾಡಿಸುತ್ತಿದ್ದಾರೆ. ಮಾನ್ಯ ಗೃಹ ಸಚಿವರು, ADGP, Chairman of this Committee ಯಾರಿದ್ದಾರೋ ಮತ್ತು ಯಾರು 3 ಜನ ಸ್ಕ್ರೂಟಿನಿ ಮಾಡಿದ್ದಾರೋ ಇವೆಲ್ಲವನ್ನು ತಾವು ತರಿಸಿಕೊಳ್ಳಿ. ಸಂದರ್ಶನ ಆಗಿರುವಂಥದ್ದು; ದೇಹದಾರ್ಢ್ಯ ಪರೀಕ್ಷೆಯಾಗಿರುವಂಥದ್ದು ಈ ಎಲ್ಲದರ ವಿಡಿಯೋ ಕ್ಲಿಪ್ಪಿಂಗ್ಸ್, ದಾಖಲೆಗಳು ಇವೆ. ಇವೆಲ್ಲವನ್ನೂ ತರಿಸಿಕೊಂಡು, ಮೇಲಗಡೆಯಿಂದ ಹಿಡಿದು ಕೆಳಗಿರುವ 3 ಜನ ಅಧಿಕಾರಿಗಳ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಈ ನಿಟ್ಟಿನಲ್ಲಿ ನೀವು ಸದನಕ್ಕೆ ಆಶ್ವಾಸನೆ ಕೊಡಬೇಕು.

**ಶ್ರೀ ಅರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಗಳೆ, ದೈಹಿಕ ಪರೀಕ್ಷೆಗೆ ಹಾಜರಾಗಿರುವಂತಹ ಪಟ್ಟಿಯಲ್ಲಿರುವ 21 ನೇ ಅಭ್ಯರ್ಥಿಯ ಬಗ್ಗೆ ತಾವು ಕೇಳಿದ್ದೀರಿ. ತಾವು ಹೇಳದಂತೆ ದಿನಾಂಕ 2.6.2021ರಂದು ಮೌಖಿಕ ಪರೀಕ್ಷೆ ಆಗಿರಲಿಲ್ಲ. ಮಾರ್ಚ್ 23ನೇ ದಿನಾಂಕದಂದು ಮೌಖಿಕ ಪರೀಕ್ಷೆ ಆಗಿದೆ; ಅಂದರೆ ದಾಖಲಾತಿ ಪರಿಶೀಲನೆ ಆಗಿದೆ. ನಮ್ಮ ಹತ್ತಿರ ಇರುವ ಮಾಹಿತಿ ಪ್ರಕಾರ, ಈ ಸಂದರ್ಭದಲ್ಲಿ ಕ್ರಮ ಸಂಖ್ಯೆ 21ರ ಅಭ್ಯರ್ಥಿ ಹಾಜರು ಆಗಲಿಲ್ಲ. ತಾವು ತಮ್ಮ ಹತ್ತಿರ ವಿಡಿಯೋ

ಕ್ಲಿಪ್ಪಿಂಗ್ಸ್ ಇದೆ ಎಂದು ಹೇಳಿದ್ದೀರಿ. ನಾನೂ ಕೂಡ ಇವತ್ತು ಡಿ.ಜಿ. ಮತ್ತು ಐ.ಜಿ.ಪಿ.ಯವರಿಗೆ, ಮಾನ್ಯ ವಿಶ್ವನಾಥ್‌ರವರು ಏನು ಸಂಶಯ ವ್ಯಕ್ತಪಡಿಸಿದ್ದಾರೋ ಅದರ ಬಗ್ಗೆ ಕೂಲಂಕಷವಾಗಿ ತನಿಖೆ ಮಾಡಬೇಕು ಎಂದು ಹೇಳಿದ್ದೇನೆ. ಅರ್ಜಿ ಹಾಕಿದವನೇ ಒಬ್ಬ, ದೇಹದಾರ್ಢ್ಯ ಪರೀಕ್ಷೆ ಹಾಜರಾಗಿರುವವನೇ ಒಬ್ಬ ಮತ್ತು ಮೌಖಿಕ ಪರೀಕ್ಷೆಗೆ ಹಾಜರಾಗಿರುವವನೇ ಒಬ್ಬ ಎನ್ನುವುದಾದರೆ, ಖಂಡಿತವಾಗಿ ಕ್ರಮ ಕೈಗೊಳ್ಳುತ್ತೇವೆ. ಸುಮಾರು 37 ಜನ ಈ ರೀತಿ ಪರೀಕ್ಷೆಗೆ ಹಾಜರಾದವರ ಪಟ್ಟಿ ಇದ್ದು, ಈಗಾಗಲೇ ಇವರ ವಿರುದ್ಧ ಕ್ರಮ ವಹಿಸಿದ್ದೇವೆ. ಅವರನ್ನು ಡಿಬಾರ್ ಮಾಡಿರುವುದಲ್ಲದೇ, ಅವರಿಗೆ ಲಿಖಿತ ಪರೀಕ್ಷೆಗೆ ಸಂಬಂಧಪಟ್ಟಂತೆ ಹೊರಗಡೆಯಿಂದ ಯಾರು ಸಹಾಯ ಮಾಡಿದ್ದರೋ ಅವರೆಲ್ಲರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಮಾನ್ಯ ಸದಸ್ಯರು ಹೇಳುತ್ತಿರುವುದರ ಬಗ್ಗೆ ದಾಖಲಾತಿ ಕೊಟ್ಟರೆ, ಯಾವುದೇ ಮುಲಾಜು ಇಲ್ಲದೇ ಕ್ರಮ ಕೈಗೊಳ್ಳುತ್ತೇವೆ; ಆತ ಏನಾದರೂ ಕೆಲಸದಲ್ಲಿದ್ದರೆ ಆತನನ್ನು ತೆಗೆದು ಹಾಕುತ್ತೇವೆ; ಆತನನ್ನು ಮುಂದುವರೆಸುವ ಪ್ರಶ್ನೆಯೇ ಬರುವುದಿಲ್ಲ. ಕ್ರಮ ಸಂಖ್ಯೆ 21ನೇ ಅಭ್ಯರ್ಥಿ ಸೇರಿದಂತೆ ಬಹಳ ಜನ ಅಭ್ಯರ್ಥಿಗಳು ಹಾಜರಾಗದೇ ಇದ್ದುದರಿಂದ ಅವರನ್ನು ಪಟ್ಟಿಯಿಂದ ತೆಗೆದು ಹಾಕಿ, ಅದೇ ಕ್ಯಾಟಗರಿಯ ಇನ್ನೊಂದು ಮೆರಿಟ್‌ನವರನ್ನು ಆಯ್ಕೆ ಮಾಡಿ ಪಟ್ಟಿ ಸಿದ್ಧಪಡಿಸಿದ್ದೇವೆ. ಇದು ನನಗೆ ಸಿಕ್ಕ ಮಾಹಿತಿಯಾಗಿದೆ. ಮಾನ್ಯ ಸದಸ್ಯರು ಏನಾದರೂ ದಾಖಲಾತಿ ಕೊಟ್ಟರೆ ಖಂಡಿತವಾಗಿ ಪರಿಶೀಲನೆ ಮಾಡಿ ಉಗ್ರವಾದ ಕಾನೂನು ಕ್ರಮ ಕೈಗೊಳ್ಳುತ್ತೇವೆ.

**ಶ್ರೀ ಅಡಗೂರು ಹೆಚ್.ವಿಶ್ವನಾಥ್:-** ಮಾನ್ಯ ಸಭಾಪತಿಗಳೆ, ನಾನು ಸಂಶಯ ವ್ಯಕ್ತಪಡಿಸುತ್ತಿಲ್ಲ; on records ಸತ್ಯವನ್ನು ಹೇಳುತ್ತಿದ್ದೇನೆ. ನಿಮ್ಮ ಅಧಿಕಾರಿಗಳು ಸುಳ್ಳನ್ನು ಹೇಳಿ ನಿಮ್ಮನ್ನು ನಂಬಿಸಿರಬಹುದು. ಆದರೆ, ನನ್ನನ್ನು ನಂಬಿಸುವುದಕ್ಕೆ ಆಗುವುದಿಲ್ಲ; ಏಕೆಂದರೆ ನನ್ನ ಹತ್ತಿರ ದಾಖಲೆಗಳಿವೆ. ಆ ದಾಖಲೆಗಳನ್ನು ನಿಮಗೆ ಕಳುಹಿಸಿ ಕೊಡುತ್ತೇನೆ. ಸೆಲೆಕ್ಟ್ ಆದವನನ್ನು ತೆಗೆದು ಇನ್ನೊಬ್ಬನ್ನನ್ನು ಹಾಕುವ ಪ್ರಶ್ನೆಯಲ್ಲ. ಇದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆಯೂ ಕ್ರಮ ಕೈಗೊಳ್ಳಬೇಕು. ADGP, the chairman of the selection committee ಮತ್ತು ಅವರ ಕೆಳಗೆ ವೆರಿಫಿಕೇಷನ್ ಮಾಡುವ 3 ಜನರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಆಶ್ವಾಸನೆಯನ್ನು

ಮಾನ್ಯ ಸಚಿವರು ಕೊಡಬೇಕು. ಮಾನ್ಯ ಸಭಾಪತಿಗಳೆ, ನನ್ನ ಹತ್ತಿರ ಇರುವ ದಾಖಲೆಗಳನ್ನು ಮಾನ್ಯ ಸಚಿವರಿಗೆ ಕಳುಹಿಸಿ ಕೊಡುತ್ತೇನೆ.

**ಶ್ರೀ ಅರಗ ಜ್ಞಾನೇಂದ್ರ:–** ಆಯಿತು, ಆ ದಾಖಲೆಗಳನ್ನು ನನಗೆ ಕಳುಹಿಸಿ ಕೊಡಿ. ನಾನು ಅವರ ಮೇಲೆ ಕ್ರಮ ತೆಗೆದುಕೊಂಡು ತಮಗೆ ಮಾಹಿತಿಯನ್ನು ಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

---

**ಪ್ರಶ್ನೆ ಸಂಖ್ಯೆ: 2634**

**(ಉತ್ತರ ಪ್ರತಿ ಲಗತ್ತಿಸಲಾಗಿದೆ)**

**ಶ್ರೀ ಅ.ದೇವೇಗೌಡ:-** ಮಾನ್ಯ ಸಭಾಪತಿಗಳೆ, ಮೊದಲು ಬೆಂಗಳೂರು ನಗರಕ್ಕೆ ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಕುಡಿಯುವ ನೀರು ಸಿಗುತ್ತಿತ್ತು. ನಮ್ಮ ತಾಲ್ಲೂಕಿನ ಎಲ್ಲಾ ಕೊಳವೆ ಬಾವಿಗಳಲ್ಲಿ ನೀರು ಸಿಗುತ್ತಿತ್ತು. ರೂ. 20 ಕೋಟಿ ಖರ್ಚು ಮಾಡಿ ಎತ್ತಿನಹೊಳೆಯಿಂದ ನೀರು ಕೊಡುತ್ತೇವೆ ಮತ್ತು ಜಲಾಶಯದಲ್ಲಿರುವ ಹೂಳು ತೆಗೆಯುತ್ತೇವೆ ಎಂದು ಹೇಳಿದ್ದಾರೆ. ಆದರೆ, ಈ ಕೆಲಸಗಳು ಯಾವುದೂ ಆಗುತ್ತಿರುವ ಹಾಗೆ ಕಾಣುತ್ತಿಲ್ಲ. ಹೂಳು ಎತ್ತುವ ಕೆಲಸವೂ ಆಗಿರುವ ಹಾಗೆ ಕಾಣಿಸುತ್ತಿಲ್ಲ. ದಯವಿಟ್ಟು ಮಳೆನೀರು ಶೇಖರಣೆ ಆಗುವ ಹಾಗೆ ವ್ಯವಸ್ಥೆ ಮಾಡಬೇಕು. ಈಗ ಕೊಳವೆ ಬಾವಿಗಳಿಂದ ನೀರು ಬರುತ್ತಿಲ್ಲವಾದ್ದರಿಂದ ತುಂಬಾ ತೊಂದರೆಯಾಗಿದೆ. 2018 ರಿಂದ ಈ ಕೆಲಸ ಸ್ಥಗಿತವಾಗಿದೆ. ನೀರನ್ನು ಶೇಖರಣೆ ಮಾಡುವ ಹಾಗೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಗಳೆ, ತಿಪ್ಪಗೊಂಡನಹಳ್ಳಿ ಜಲಾಶಯ ಬೆಂಗಳೂರು ನಗರದ ಬಹಳ ಪ್ರಮುಖವಾಗಿರುವಂತಹ ದೊಡ್ಡ ಜಲಾಶಯ. ಕಾವೇರಿ ನೀರು ಬರುವುದಕ್ಕೆ ಮುಂಚೆಯಿಂದ, 2012ರವರೆಗೂ ಬೆಂಗಳೂರಿಗೆ, ವಿಶೇಷವಾಗಿ ಬೆಂಗಳೂರಿನ ಉತ್ತರ ಭಾಗಕ್ಕೆ ಕುಡಿಯುವ ನೀರಿನ ಮೂಲವಾಗಿತ್ತು. ಅದನ್ನು ಉಳಿಸಿಕೊಂಡು ಹೋಗುವಂಥದ್ದು ಬಹಳ ಮುಖ್ಯ. ಕಾವೇರಿ ನೀರನ್ನು ಬೆಂಗಳೂರಿನ ಪೂರ್ವ, ಪಶ್ಚಿಮ ಮತ್ತು ದಕ್ಷಿಣ ಭಾಗಗಳಿಗೆ ಕೊಡುವ ಕೆಲಸ ಆಗಿದೆ. ಉತ್ತರ ಭಾಗಕ್ಕೆ ಕೊಡುವ ಕೆಲಸ ಆಗಬೇಕಿದೆ. 5ನೇ ಫೇಸ್ ಮುಗಿದ ಮೇಲೂ ಕೂಡ almost 33% of the city is still dependent on T.G. Halli and borewell water. ನಾನು ನೀರಾವರಿ ಸಚಿವನಾಗಿದ್ದಾಗ ಎತ್ತಿನಹೊಳೆಯಿಂದ 1.7 ಟಿಎಂಸಿ ನೀರನ್ನು ತಿಪ್ಪಗೊಂಡನ ಹಳ್ಳಿ ಜಲಾಶಯಕ್ಕೆ ತಂದು, ಬೆಂಗಳೂರಿನ ಉತ್ತರ ಭಾಗಕ್ಕೂ ಕೂಡ ಕುಡಿಯುವ ನೀರಿನ ವ್ಯವಸ್ಥೆ ಆಗಬೇಕೆಂದು ಅಲೋಕೇಷನ್ ಮಾಡಿ, ಮಂಜೂರಾತಿ ಮಾಡಿ, DPR

ಮಾಡಿ, ಈಗ ಪೈಪ್‌ಲೈನ್‌ನ ಕೆಲಸ ಕೂಡ ಆಗುತ್ತಿದೆ. (ಮುಂದು . . .)

(590) 24/03/2022 / 11:40/ ಎಸ್‌ಪಿಆರ್/ಬಿಎನ್‌ಎಸ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಸವರಾಜ ಬೊಮ್ಮಾಯಿ(ಮುಂದು):-**

ಇಂತಹ ಸಂದರ್ಭದಲ್ಲಿ ಅದರ ಹೂಳು ಸಹ ಜಾಸ್ತಿಯಾಗಿದೆ. ಹೀಗಾಗಿ ಅದರ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವೂ ಸಹ ಕಡಿಮೆಯಾಗಿದೆ. ಆದ್ದರಿಂದ ಅಲ್ಲಿನ ಹೂಳನ್ನು ಸಂಪೂರ್ಣವಾಗಿ ತೆಗೆದು, ಅದರ ಸಾಮರ್ಥ್ಯವನ್ನು ಹೆಚ್ಚಿಸಬೇಕು. ವಾಸ್ತವವಾಗಿ ಅಲ್ಲಿ ಸುಮಾರು 2 ಟಿ.ಎಂ.ಸಿ. ಪ್ರಮಾಣದಷ್ಟು ನೀರು ಹಿಡಿಯುವ ಸಾಮರ್ಥ್ಯವುಳ್ಳದ್ದಾಗಿದೆ. ಆದರೆ ಅದು ಬಹಳ ಕಡಿಮೆಯಾಗಿದೆ. ಹೀಗಾಗಿ dredging ಕೆಲಸವನ್ನು ನಾವು ಮಾಡಿದ್ದು, ಪ್ರಸ್ತುತ ಅದು ಮುಗಿಯುವ ಹಂತದಲ್ಲಿದೆ. ಆದರೆ ನೀರನ್ನು ಸಂಪೂರ್ಣವಾಗಿ ಹೊರಗಡೆ ತೆಗೆಯಲಾಗಿದೆ; ಹೀಗಾಗಿ ಅಲ್ಲಿ underground water ಚಾರ್ಜ್ ಆಗುತ್ತಿಲ್ಲವೆಂದು ಇಲ್ಲಿ ಹೇಳಿದ್ದಾರೆ. ಆದರೆ ಈ ರೀತಿಯ ಪರಿಸ್ಥಿತಿಯು ಅಲ್ಲಿ ಇಲ್ಲ. 30 ಅಡಿಗಳಷ್ಟು ನೀರು ಇನ್ನೂ ಸಹ ಅದರಲ್ಲಿಯೇ ಇದೆ. ಇತ್ತೀಚೆಗೆ ಮಳೆಯಿಂದಾಗಿ ಸಂಗ್ರಹಗೊಂಡ ನೀರೂ ಸಹ ಅಲ್ಲಿಯೇ ಇದೆ. ಕೇವಲ 10 ಅಡಿಗಳವರೆಗೆ ಮಾತ್ರವೇ ನೀರನ್ನು ತೆಗೆದು ಅಲ್ಲಿ dredging ನ್ನು ಮಾಡಲಾಗಿದೆ. ಪ್ರಸ್ತುತ dredging ಕೆಲಸವು ಮುಕ್ತಾಯದ ಹಂತದಲ್ಲಿದೆ. ಪೂರ್ಣ ಪ್ರಮಾಣದಲ್ಲಿ ನಾವು ಅಲ್ಲಿಯ ನೀರನ್ನು ತೆಗೆದಿಲ್ಲವೆಂದು ಪುನಃ ಹೇಳುವುದಕ್ಕೆ ಬಯಸುತ್ತೇನೆ. ಆ ಪ್ರದೇಶದ ಸುತ್ತಮುತ್ತಲಿನ ಅಂತರ್ಜಲ ಪ್ರಮಾಣವೂ ಸಹ ಕಡಿಮೆಯಾಗಿಲ್ಲ. ಆದಷ್ಟು ಶೀಘ್ರದಲ್ಲಿ dredging ಕೆಲಸವನ್ನು ಪೂರ್ಣಗೊಳಿಸಿ, ನೀರಿನ ಸಂಗ್ರಹಣಾ ಸಾಮರ್ಥ್ಯವನ್ನು ಹೆಚ್ಚಿಸಲಾಗುವುದು. ಮುಂಬರುವ ದಿನಗಳಲ್ಲಿ ಜಾರಿಗೊಳಿಸಲಾಗುವ ಎತ್ತಿನ ಹೊಳೆ ನೀರಾವರಿ ಯೋಜನೆಯಿಂದ ಅಲ್ಲಿಗೆ ನೀರನ್ನು ಒದಗಿಸಿ, ಇಡೀ ಬೆಂಗಳೂರು ನಗರ ಪ್ರದೇಶದ ಉತ್ತರ ಭಾಗಕ್ಕೆ ನೀರನ್ನು ಒದಗಿಸುವ ಯೋಜನೆಯನ್ನು ಮಾಡಿದ್ದೇವೆ. ಈ ಕೆಲಸವನ್ನು ಆದಷ್ಟು ಬೇಗನೇ ಪೂರ್ಣಗೊಳಿಸಲಾಗುವುದು.

**ಪ್ರಶ್ನೆ ಸಂಖ್ಯೆ: 2625**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಯು.ಬಿ.ವೆಂಕಟೇಶ್(ಶ್ರೀ ಅಲ್ಲಂ ವೀರಭದ್ರಪ್ಪರವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಸದಸ್ಯರು ಕೇಳಿರುವ ಪ್ರಶ್ನೆಗೆ ಸರ್ಕಾರವು ಉತ್ತರಿಸಿದೆ. ಆದರೆ ಯೋಜನೆಗಳಿಗೆ ಮೀಸಲಿಟ್ಟ ಅನುದಾನವು ಖರ್ಚಾಗಿಲ್ಲ. ಭದ್ರಾ ಮೇಲ್ದಂಡೆ ಯೋಜನೆಗೆ 2,623 ಕೋಟಿ ರೂಪಾಯಿಗಳನ್ನು ಮೀಸಲಿರಿಸಲಾಗಿದೆ. ಆದರೆ, ಇಲ್ಲಿ ಕೇವಲ 632 ಕೋಟಿ ರೂಪಾಯಿಗಳು ಮಾತ್ರವೇ ಖರ್ಚಾಗಿದೆ. ಪ್ರಸಕ್ತ ಸಾಲಿನ ವರ್ಷಾಂತ್ಯಕ್ಕೆ ಇನ್ನೂ ಕೇವಲ 5-6 ದಿನಗಳು ಮಾತ್ರವೇ ಉಳಿದಿದ್ದು, ಇಷ್ಟು ಕಡಿಮೆ ಅವಧಿಯಲ್ಲಿ ಎಷ್ಟು ಹಣ ಖರ್ಚು ಮಾಡುವುದಕ್ಕಾಗುತ್ತದೆ ಎಂದು ನಾನು ಪ್ರಶ್ನಿಸಬಯಸುತ್ತೇನೆ. ಮುಂದುವರೆದು, ಸಣ್ಣ ಸಣ್ಣ ನಾಲೆಗಳ ಯೋಜನೆಗಾಗಿ 100 – 140 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದಾರೆ. ಆದರೆ ಈ ಪೈಕಿ ಕೇವಲ ಒಂದು ರೂಪಾಯಿಯೂ ಸಹ ಖರ್ಚಾಗಿಲ್ಲ ಹಾಗೂ ಕೇವಲ ಹತ್ತು ಕೆಲಸಗಳೂ ಸಹ ಆಗಿಲ್ಲ. ಉದಾಹರಣೆಗೆ ಹೇಳುವುದಾರೆ, ಯಾವುದೋ ಯೋಜನೆಗೆ 300 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದು, ಆ ಪೈಕಿ ಕೇವಲ 19 ಲಕ್ಷಗಳು ಮಾತ್ರವೇ ಖರ್ಚಾಗಿದೆ. ಈ ರೀತಿ ಏಕೆ ಎನ್ನುವ ಪ್ರಶ್ನೆಯನ್ನು ನಾನು ಸಚಿವರಿಗೆ ಕೇಳಬಯಸುತ್ತೇನೆ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಹಣ ಖರ್ಚಾಗುವುದು ಎಂದರೆ, ಅಲ್ಲಿನ ಭೌತಿಕ ಪ್ರಗತಿಗಳನ್ನು ನೋಡಿಕೊಂಡು ನಾವು ಹಣ ಖರ್ಚು ಮಾಡಬೇಕಾಗುತ್ತದೆ. ಕಾಮಗಾರಿಗಳನ್ನು ಪೂರ್ಣಗೊಳಿಸಿದ ನಂತರ ಬಿಲ್ಲುಗಳನ್ನು ಸಲ್ಲಿಸಿದಾಗ ಮಾತ್ರವೇ ಹಣ ಪಾವತಿಸಬೇಕಾಗುತ್ತದೆ. ಈ ವಿಚಾರದ ಬಗ್ಗೆ ನಾನು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆಯನ್ನು

ನೀಡುತ್ತೇನೆ. ಹಣ ಪಾವತಿಸಲು ಬಾಕಿ ಇರುವ ಯಾವುದಾದರೂ ಬಿಲ್ಲುಗಳಿದ್ದರೆ, ಅವುಗಳನ್ನು ಕಳುಹಿಸಿಕೊಟ್ಟಲ್ಲಿ ಪಾವತಿ ಮಾಡಲಾಗುವುದು.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಯಾವುದೇ ಯೋಜನೆಗೆ 2,600 ಕೋಟಿ ರೂಪಾಯಿಗಳಷ್ಟು ಅನುದಾನವನ್ನು ಮೀಸಲಿಟ್ಟಿದ್ದರೆ, ಆ ಪೈಕಿ ಕೇವಲ ಶೇಕಡಾ 25 ರಷ್ಟು ಮಾತ್ರವೇ ಕಾಮಗಾರಿಗಳಾಗಿ, 600 ಕೋಟಿ ರೂಪಾಯಿಗಳಷ್ಟು ಪಾವತಿಯಾಗಿರುತ್ತದೆ. ಇದನ್ನು ನೋಡಿದರೆ, ಯೋಜನೆಯ ಕಾಮಗಾರಿಯ ಪ್ರಗತಿಯನ್ನು ಅಧಿಕಾರಿಗಳು ಏಕೆ ಮಾಡುತ್ತಿಲ್ಲವೆಂದು ನಾನು ಈ ಸಂದರ್ಭದಲ್ಲಿ ಕೇಳಲಿಚ್ಛಿಸುತ್ತೇನೆ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಯೋಜನೆಯ ಕಾಮಗಾರಿಯ ಪ್ರಗತಿಯನ್ನು ಮಾಡದೇ ಇರುವುದಕ್ಕೆ ಹಲವಾರು ಕಾರಣಗಳಿರುತ್ತವೆ. ಅಲ್ಲಿ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಸಮಸ್ಯೆಗಳಿವೆ. ಕೆಲವರು ನ್ಯಾಯಾಲಯಕ್ಕೆ ದಾವೆಗಳನ್ನು ಸಲ್ಲಿಸಿರುತ್ತಾರೆ. ಹೀಗಾಗಿ ಯೋಜನೆಗಳ ಕಾಮಗಾರಿಗಳ ಪ್ರಗತಿಯಲ್ಲಿ ವಿಳಂಬವಾಗುತ್ತಿರುತ್ತದೆ. ಈ ಸಂದರ್ಭದಲ್ಲಿ ನಾನು ಉದಾಹರಣೆಯೊಂದನ್ನು ನೀಡಲಿಚ್ಛಿಸುತ್ತೇನೆ. ಯಾವುದೋ ಊರಿನಲ್ಲಿ ಕೇವಲ 10 ಗುಂಟೆ ಜಮೀನಿಗಾಗಿ ಕೆಲವು ಭೂ ಮಾಲೀಕರು ರಾಜ್ಯದ ಉಚ್ಛ ನ್ಯಾಯಾಲಯಕ್ಕೆ ದಾವೆಯನ್ನು ಸಲ್ಲಿಸಿದ್ದಾರೆ.

**ಸಭಾಪತಿಯವರು:-** ಶ್ರೀ ಅರುಣ ಶಹಾಪೂರ ರವರೇ ನೀವು ಕೇಳಿರುವ ತಡೆಹಿಡಿಯಲಾಗಿರುವ ಪ್ರಶ್ನೆಗೆ ಉತ್ತರಿಸಲು ಮಾನ್ಯ ಮುಖ್ಯಮಂತ್ರಿಗಳು ಕಾಲಾವಕಾಶವನ್ನು ಕೋರಿದ್ದಾರೆ. ಮುಂದಿನದ್ದು ಶ್ರೀ ಸಿ.ಎಂ.ಇಬ್ರಾಹಿಂ ರವರದ್ದು. ಅದಕ್ಕೂ ಮುಂಚೆ ಶ್ರೀ ಆರ್.ಬಿ.ತಿಮ್ಮಾಪೂರ ರವರು ತಮ್ಮ ಚುಕ್ಕೆ ಗುರ್ತಿನ ಪ್ರಶ್ನೆಯನ್ನು ಕೇಳಲಿ.

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

---

**ಪ್ರಶ್ನೆ ಸಂಖ್ಯೆ: 2608**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಆರ್.ಬಿ.ತಿಮ್ಮಾಪೂರ:-** ಮಾನ್ಯ ಸಭಾಪತಿಯವರೇ, ಸರ್ಕಾರದಿಂದ ಭದ್ರತೆ ವ್ಯವಸ್ಥೆಯನ್ನು ನೀಡಲಾಗುತ್ತಿದೆ. ಅದರಂತೆ ರಾಜ್ಯದಲ್ಲಿ ಎಷ್ಟು ವಿ.ವಿ.ಐ.ಪಿ. ಮತ್ತು ವಿ.ಐ.ಪಿ. ಗಳಿಗೆ ಭದ್ರತೆಯನ್ನು ನೀಡಲಾಗಿದೆ ಮತ್ತು ಎಷ್ಟು ವರ್ಷಗಳಿಂದ ನೀಡಲಾಗುತ್ತಿದೆ; ಹಾಲಿ ಭದ್ರತೆಯನ್ನು ಪಡೆಯುವವರು ಎಷ್ಟು, ಮಾಜಿ ಇರುವವರಿಗೆ ಎಷ್ಟು ವರ್ಷಗಳವರೆಗೆ ಭದ್ರತೆಯನ್ನು ನೀಡಲಾಗುತ್ತಿದೆ; ಹಾಲಿ ಎಷ್ಟು ಜನ ಮುಖ್ಯಮಂತ್ರಿಗಳಿಗೆ ಭದ್ರತೆಯನ್ನು ಒದಗಿಸಲಾಗುತ್ತಿದೆ, ರಾಜ್ಯದಲ್ಲಿ ಎಷ್ಟು ಜನಕ್ಕೆ Z+ ಮತ್ತು Y ಭದ್ರತೆಯನ್ನು ನೀಡಲಾಗುತ್ತಿದೆ, ಭದ್ರೆತೆಗಾಗಿ ಎಷ್ಟು ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ ಎಂಬಿತ್ಯಾದಿಯಾದ ಪ್ರಶ್ನೆಗಳನ್ನು ಸಚಿವರಿಗೆ ಕೇಳಬಯಸುತ್ತೇನೆ. ಮುಂದುವರೆದು, ಭದ್ರತೆಗೆ ನಿಯೋಜಿಸಿದ ಅಧಿಕಾರಿಗಳು ಇರುವುದೇ ಇಲ್ಲ; ಭದ್ರತೆಗೆ ನಿಯೋಜಿಸಿದ ಸಿಬ್ಬಂದಿಗಳ ವಾಹನ ಮತ್ತು ಊಟದ ವ್ಯವಸ್ಥೆಗಳೇನು ಎಂದು ಕೇಳಬಯಸುತ್ತೇನೆ.

ಗಣ್ಯ ವ್ಯಕ್ತಿಗಳಲ್ಲದ ಮತ್ತು ಜನ ಪ್ರತಿನಿಧಿಗಳಲ್ಲದ ಕೆಲವರು ತಮಗೆ ಜೀವ ಬೆದರಿಕೆ ಇದೆ, ಹೀಗಾಗಿ ನಮಗೆ ಭದ್ರತೆ ನೀಡಿ ಎಂದು ಕೇಳುತ್ತಾರೆ. ಇಂತಹ ಎಷ್ಟು ಜನರಿಗೆ ಮತ್ತು ಯಾರಿಗೆ ಭದ್ರತೆಯನ್ನು ಸರ್ಕಾರವು ನೀಡುತ್ತದೆ ಎಂದು ನಾನು ಪ್ರಶ್ನಿಸಬಯಸುತ್ತೇನೆ. ಸಾಮಾನ್ಯ ಜನರಿಗೂ ಹಾಗೂ ಅಪರಾಧಿಕ ಹಿನ್ನೆಲೆಯುಳ್ಳವರಿಗೂ ಸಹ ಜೀವ ಬೆದರಿಕೆ ಇರುತ್ತದೆ. ಒಂದು ವೇಳೆ ಅಪರಾಧಿಕ ಹಿನ್ನೆಲೆಯುಳ್ಳವರಿಗೆ ಭದ್ರತೆಯನ್ನು ಒದಗಿಸಬೇಕಾದರೆ, ಅವರ ವಿರುದ್ಧ ಎಷ್ಟು ಪ್ರಕರಣಗಳು ದಾಖಲಾಗಿವೆ ಎಂಬ ಅಂಶವನ್ನು ಸರ್ಕಾರವು ಗಮನಿಸುತ್ತದೆಯೇ ಅಥವಾ ಅವನಿಗೆ ಜೀವ ಬೆದರಿಕೆ ಇದೆ ಎನ್ನುವ ಕಾರಣಕ್ಕಾಗಿ ಭದ್ರತೆಯನ್ನು ಒದಗಿಸುತ್ತದೆಯೇ ಎಂದು ನಾನು ಪ್ರಶ್ನಿಸುತ್ತೇನೆ. ಜನಪ್ರತಿನಿಧಿಗಳಲ್ಲದವರಿಗೂ ಸಹ ಸರ್ಕಾರವು ಭದ್ರತೆಯನ್ನು ನೀಡುತ್ತದೆ. ಇದಕ್ಕಾಗಿ ಎಷ್ಟು ಹಣ ವಸೂಲಿ ಮಾಡಲಾಗುತ್ತದೆ? ಈ ರೀತಿಯಾಗಿ ಎಷ್ಟು ಜನರಿಗೆ ಭದ್ರತೆಯನ್ನು ಒದಗಿಸಲಾಗಿದೆ ಹಾಗೂ ಅವರಿಂದ ಎಷ್ಟು ಹಣವನ್ನು ವಸೂಲಿ ಮಾಡಲಾಗಿದೆ ಎಂದು ನಾನು ಕೇಳುತ್ತೇನೆ. ಇದರ ಜೊತೆಗೆ

ಅವರ ಹೊಣೆಗಾರಿಕೆ ಏನು ಎಂದು ನಾನು ಕೇಳಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳ ಗೃಹ ಕಛೇರಿಯಲ್ಲಿನ ಭದ್ರತಾ ಸಿಬ್ಬಂದಿಯು ಗಾಂಜಾವನ್ನು ಮಾರಾಟ ಮಾಡುತ್ತಾನೆ. ಜನಪ್ರತಿನಿಧಿಗಳಲ್ಲದವರಿಗೆ ಹಾಗೂ ಅಪರಾಧಿಕ ಹಿನ್ನೆಲೆಯುಳ್ಳವರಿಗೆ ಸರ್ಕಾರವು ಭದ್ರತೆಯನ್ನು ನೀಡಿ, ಸಿಬ್ಬಂದಿಗಳನ್ನು ನಿಯೋಜಿಸಲಾಗುತ್ತದೆ. ಹೀಗೆ ನಿಯೋಜಿಸಲ್ಪಟ್ಟ ಸಿಬ್ಬಂದಿಗಳು ಯಾವ ರೀತಿಯ ಕೆಲಸವನ್ನು ನಿರ್ವಹಣೆ ಮಾಡುತ್ತಾರೆ ಹಾಗೂ ಅವರ ಹೊಣೆಗಾರಿಕೆಯನ್ನು ತೆಗೆದುಕೊಳ್ಳಲಾಗುತ್ತದೆಯೆ ಎಂಬಿತ್ಯಾದಿಯಾದ ಪ್ರಶ್ನೆಗಳನ್ನು ನಾನು ಗೃಹ ಸಚಿವರಲ್ಲಿ ಕೇಳಬಯಸುತ್ತೇನೆ.

**ಶ್ರೀ ಆರಗ ಜ್ಞಾನೇಂದ್ರ:–** ಮಾನ್ಯ ಸಭಾಪತಿಯವರೇ, ಸದಸ್ಯರು ಕೇಳಿರುವ ಪ್ರಶ್ನೆಗೆ ಸ್ವಲ್ಪ ಮಟ್ಟಿಗೆ ಉಚಿತವಾಗಿ ಉತ್ತರಿಸಲಾಗಿದೆ. ಗೌಪ್ಯತೆಯ ದೃಷ್ಟಿಯಿಂದ ಗೃಹ ಇಲಾಖೆಯ ವತಿಯಿಂದ ಬಹಳಷ್ಟು ವಿವರಗಳನ್ನು ನೀಡುವುದಕ್ಕಾಗುವುದಿಲ್ಲ. ನಮ್ಮ ದೇಶದ ರಾಷ್ಟ್ರಪತಿ, ಉಪರಾಷ್ಟ್ರಪತಿ, ಪ್ರಧಾನಮಂತ್ರಿ, ರಾಜ್ಯದ ರಾಜ್ಯಪಾಲರು, ಮುಖ್ಯಮಂತ್ರಿಗಳು, ಕೇಂದ್ರದ ಮತ್ತು ರಾಜ್ಯದ ಸಚಿವರುಗಳು, ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಮತ್ತು ನ್ಯಾಯಾಧೀಶರುಗಳು, ರಾಜ್ಯದ ಮುಖ್ಯ ನ್ಯಾಯಾಧೀಶರು, ಉಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳು ಹಾಗೂ ಇತರೆ ಅತೀ ಗಣ್ಯವ್ಯಕ್ತಿಗಳು ಹಾಗೂ ಗಣ್ಯ ವ್ಯಕ್ತಿಗಳಿಗೆ ಭದ್ರತೆಯನ್ನು ಒದಗಿಸಲಾಗುತ್ತದೆ.

ಅತೀ ಗಣ್ಯ ವ್ಯಕ್ತಿಗಳಿಗೆ ವಿಶೇಷ ಭದ್ರತಾ ಕೈಪಿಡಿ ಮಾರ್ಗಸೂಚಿಗಳನ್ನು ಕೇಂದ್ರ ಗೃಹ ಮಂತ್ರಾಲಯದಿಂದ ಹೊರಡಿಸಲಾಗಿದೆ. ಗಣ್ಯ ವ್ಯಕ್ತಿಗಳಿಗೆ ಸ್ಥಾನ ಆಧಾರಿತ ಮತ್ತು ಬೆದರಿಕೆಯ ಗ್ರಹಿಕೆಯ ಆಧಾರದ ಮೇರೆಗೆ ಭದ್ರತಾ ಶ್ರೇಣಿಯನ್ನು ನಿರ್ಣಯಿಸಲಾಗುತ್ತದೆ. ಸದಸ್ಯರು ಅನೇಕ ಸಂಶಯಗಳನ್ನು ವ್ಯಕ್ತಪಡಿಸಿದ್ದಾರೆ. ಭದ್ರತಾ ಪಡೆಯಲ್ಲಿರುವ ಕೆಲವರೇ ಅಪರಾಧಿಕ ಕೃತ್ಯಗಳನ್ನು ಎಸಗಿದರೆ ಏನು ಆಗುತ್ತದೆ ಎಂದೂ ಸಹ ಸದಸ್ಯರು ತಮ್ಮ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಈ ರೀತಿಯಾಗಿ ಕೆಲವರು ಮಾಡಿದ್ದಾರೆ. ಈ ಹಿಂದೆ ದೇಶದ ಪ್ರಧಾನ ಮಂತ್ರಿಗಳಾದ ದಿವಂಗತ ಇಂದಿರಾಗಾಂಧಿಯವರ ಬೆಂಗಾವಲು ಭದ್ರತಾ ಪಡೆಯವರೇ ದುಷ್ಕೃತ್ಯಗಳನ್ನು ಎಸಗಿದ್ದಾರೆ. ಅದೇ

ರೀತಿಯಾಗಿ ಮಾಜಿ ಪ್ರಧಾನಿ ದಿವಂಗತ ರಾಜೀವ್ ಗಾಂಧಿ ರವರ ಭದ್ರತಾ ಪಡೆಯವರ ದುಷ್ಕೃತ್ಯದಿಂದಾಗಿ ಅವರನ್ನು ಬದುಕಿಸಿಕೊಳ್ಳಲಾಗಲಿಲ್ಲ. ಮುಂದುವರೆದು, ಸದಸ್ಯರು ಇತ್ತೀಚಿನ ಸಣ್ಣ ಉದಾಹರಣೆಯನ್ನು ಪ್ರಸ್ತಾಪಿಸಿದರು. ಮಾನ್ಯ ಮುಖ್ಯಮಂತ್ರಿಗಳ ಮನೆಯ ಸ್ವಲ್ಪ ದೂರದಲ್ಲಿಯೇ ಕಾವಲುಗಾಗಿ ನಿಯೋಜಿಸಿದ್ದ ಸಿಬ್ಬಂದಿಯೇ ಗಾಂಜಾ ವ್ಯಾಪಾರ ಮಾಡಲು ಪ್ರಯತ್ನಿಸಿದ್ದನು. ಭದ್ರತಾ ಸಿಬ್ಬಂದಿಗಳ ನಡವಳಿಕೆಯಲ್ಲಿ ಸಂಶಯ ಕಂಡು ಬಂದ ತಕ್ಷಣವೇ, ಅವರ ವಿರುದ್ಧ ಕಾನೂನು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಈ ವಿಚಾರದಲ್ಲಿ ಯಾವುದೇ ರಾಜಿ ಇಲ್ಲ. ಇಂತಹ ಸಿಬ್ಬಂದಿಗಳನ್ನು ಬೇರೆ ಕಡೆಗೆ ಸ್ಥಳ ನಿಯುಕ್ತಿಗೊಳಿಸಲಾಗುವುದು. ಇಂತಹವರನ್ನು ಪುನಃ ಅದೇ ಜಾಗಕ್ಕೆ ಮರು ನೇಮಕ ಮಾಡುವ ಪ್ರಮೇಯವೇ ಉದ್ಭವಿಸುವುದಿಲ್ಲ. ಇಂತಹವರನ್ನು ಬಂಧಿಸಿ, ಅವರ ವಿರುದ್ಧ ಶೀಘ್ರವಾಗಿ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ಇವರನ್ನು ಬಿಡುವ ಪ್ರಶ್ನೆಯೇ ಇಲ್ಲ.

ಖಾಸಗಿ ವ್ಯಕ್ತಿಗಳಿಗೆ ಭದ್ರತೆ ಒದಗಿಸುವ ವಿಚಾರದಲ್ಲಿ ಗುಪ್ತಚರ ಇಲಾಖೆಯಿಂದ ಮಾಹಿತಿ ಪಡೆದುಕೊಂಡು ಅವರ ಜೀವಕ್ಕೆ ಅಭದ್ರತೆ ಇದೆ ಎಂದು ಕಂಡುಬಂದಲ್ಲಿ ಮಾತ್ರವೇ, ಅವರಿಗೆ ಭದ್ರತೆಯನ್ನು ಒದಗಿಸಲಾಗುವುದು. ಯಾವುದೇ ಒಬ್ಬ ವ್ಯಕ್ತಿಯ ಜೀವವನ್ನು ಕಾಪಾಡುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಹೀಗಾಗಿ ಅವರಿಗೆ ಭದ್ರತೆಯನ್ನು ಒದಗಿಸಲಾಗುವುದು. ಕೇವಲ ಅಲಂಕಾರಕ್ಕಾಗಿ ಮಾತ್ರವೇ ಯಾರಾದರೂ ಭದ್ರತೆಯನ್ನು ಕೇಳಿದರೆ, ಇತ್ತೀಚಿನ ದಿನಗಳಲ್ಲಿ ಇದನ್ನು ನಿರಾಕರಿಸಿದ್ದೇವೆ. ಈಗಾಗಲೇ ಈ ರೀತಿಯ ಭದ್ರತೆಯನ್ನು ನೀಡಿರುವುದನ್ನು ಹಿಂಪಡೆಯಲಾಗಿದೆ. ನಿನ್ನೆಯ ದಿನ ಇದೇ ವಿಚಾರವಾಗಿ ಇಲ್ಲಿ ಚರ್ಚೆಗಳಾಗಿವೆ. ಪೊಲೀಸ್ ಭದ್ರತೆಯನ್ನು ಪಡೆದುಕೊಂಡು ಹೋಗುವುದು ಒಂದು ರೀತಿಯ ಪ್ರತಿಷ್ಠೆ ಎಂದು ಕೆಲವರು ಭಾವಿಸಿರುತ್ತಾರೆ. ಅಂತಹ ವ್ಯಕ್ತಿಗಳಿಗೆ ಸರ್ಕಾರದಿಂದ ಭದ್ರತೆಯನ್ನು ನೀಡುವುದಕ್ಕಾಗುವುದಿಲ್ಲ. ಏಕೆಂದರೆ, ಭದ್ರತೆ ನೀಡುವುದರಿಂದ ಸರ್ಕಾರಕ್ಕೆ ಬಹಳ ದೊಡ್ಡ ವೆಚ್ಚವಾಗುತ್ತದೆ. ಪ್ರತಿ ತಿಂಗಳು ಒಂದು ಭದ್ರತಾ ಸಿಬ್ಬಂದಿಗೆ 50-60 ಸಾವಿರ ರೂಪಾಯಿಗಳಷ್ಟು ಖರ್ಚು ಆಗುತ್ತದೆ. ಇಷ್ಟು ಮೊತ್ತವನ್ನು ವ್ಯಯಿಸಿ, ಸರ್ಕಾರದ ವತಿಯಿಂದ ಭದ್ರತೆಯನ್ನು ನೀಡುವುದಕ್ಕಾಗುವುದಿಲ್ಲ.

**ಶ್ರೀ ಆರ್.ಬಿ.ತಿಮ್ಮಾಪೂರ:-** ಮಾನ್ಯ ಸಭಾಪತಿಯವರೇ, ಖಾಸಗಿ ವ್ಯಕ್ತಿಗಳಿಗೆ ಸರ್ಕಾರದ ವತಿಯಿಂದ ಭದ್ರತೆಯನ್ನು ಒದಗಿಸಿದರೆ, ಎಷ್ಟು ಹಣ ವಸೂಲಿ ಮಾಡಲಾಗುತ್ತದೆ ಎಂದು ನಾನು ಕೇಳಬಯಸುತ್ತೇನೆ. ಈ ರೀತಿಯ ಭದ್ರತೆಯನ್ನು ಒದಗಿಸಿದವರಿಂದ ಇಲ್ಲಿಯವರೆಗೆ ಎಷ್ಟು ಹಣ ವಸೂಲಿ ಮಾಡಲಾಗಿದೆ ಎನ್ನುವುದನ್ನು ಸಚಿವರು ತಿಳಿಸಬೇಕು. ಗಣ್ಯ ವ್ಯಕ್ತಿಗಳಿಗೆ ಸರ್ಕಾರವು ಭದ್ರತೆಯನ್ನು ನೀಡುತ್ತದೆ. ಕನಿಷ್ಠ ಪಕ್ಷ ಇಂತಹ ವ್ಯಕ್ತಿಗಳ ಹಿನ್ನೆಲೆ ಏನು ಇದೆ ಎನ್ನುವುದನ್ನು ಪೊಲೀಸ್ ಇಲಾಖೆಗೆ ತಿಳಿದಿಲ್ಲವೆಂದಾದರೆ, ಕಷ್ಟವಾಗುತ್ತದೆ. ಮಾಜಿ ಪ್ರಧಾನ ಮಂತ್ರಿಗಳಾದ ದಿವಂಗತ ಇಂದಿರಾಗಾಂಧಿ ಮತ್ತು ರಾಜೀವ್ ಗಾಂಧೀರವರುಗಳ ಹತ್ಯೆ ಹೇಗೆ ಆಯಿತು ಎನ್ನುವುದನ್ನು ನೋಡಿದಾಗ, ಅವರ ಬಗ್ಗೆ ಹಲವಾರು ಇಶ್ಯೂಗಳು ಇದ್ದವು. ನಾನು ಆಗಲೇ ಉದಾಹರಿಸಿದಂತೆ, ಭದ್ರತಾ ಸಿಬ್ಬಂದಿಗೆ ಗಾಂಜಾ ಮಾರಾಟ ಮಾಡಲು ಯಾವ ಕಾರಣವಿತ್ತು? It is not good. ಯಾರಿಗಾದರೂ ಭದ್ರತೆಯನ್ನು ಒದಗಿಸುವ ಮುನ್ನ ಆ ಸಿಬ್ಬಂದಿಗಳ ಹಿನ್ನೆಲೆಯನ್ನು ಇಲಾಖೆಯು ಪರಿಶೀಲಿಸಬೇಕು. ಒಂದು ವೇಳೆ, ಪೂರ್ವ ಪರಿಶೀಲನೆ ಇಲ್ಲದೇ, ಸಿಬ್ಬಂದಿಗಳನ್ನು ಭದ್ರತೆಗೆ ನಿಯೋಜಿಸಿದರೆ, ತೊಂದರೆಯಾಗುತ್ತದೆ. ಕೆಲವೊಮ್ಮೆ ಖಾಸಗಿ ವ್ಯಕ್ತಿಗಳಿಗೆ, ಗಣ್ಯ ವ್ಯಕ್ತಿಗಳಿಗೆ ಹಾಗೂ ಕೆಲವೊಮ್ಮೆ ಅಪರಾಧಿಕ ಚಟುವಟಿಕೆಯ ಹಿನ್ನೆಲೆಯುಳ್ಳವರಿಗೆ ಸರ್ಕಾರದ ವತಿಯಿಂದ ಭದ್ರತೆಯನ್ನು ಒದಗಿಸಲಾಗುತ್ತದೆ. ಈ ರೀತಿಯಾಗಿ ಭದ್ರತೆಯನ್ನು ಪಡೆದುಕೊಂಡವರು ಯಾವ ದಂಧೆಯನ್ನು ಮಾಡಬಹುದು ಎನ್ನುವುದನ್ನು ಸರ್ಕಾರವು ಯೋಚಿಸಬೇಕು.

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಸದಸ್ಯರು ಕೇಳುತ್ತಿರುವ ಅಂಶಗಳು ಸರಿ ಇವೆ. ಸದಸ್ಯರು ಕೇಳಿರುವ ಪ್ರಶ್ನೆಯಲ್ಲಿ ಈ ಮೇಲ್ಕಂಡ ಅಂಶಗಳು ಇರಲಿಲ್ಲ. ಮುಂದುವರೆದು, ಖಾಸಗಿ ವ್ಯಕ್ತಿಗಳಿಗೆ ನೀಡಿರುವ ಭದ್ರತೆಯ ಕುರಿತಾದ ಪ್ರಶ್ನೆಯನ್ನು ಕೇಳಿಲ್ಲ. ಹೀಗಾಗಿ ಈ ಮಾಹಿತಿಗಳನ್ನು ತರಿಸಿ ಒದಗಿಸಲಾಗುವುದು.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ರಾಷ್ಟ್ರಪತಿಗಳು, ಪ್ರಧಾನ ಮಂತ್ರಿಗಳು, ಮುಖ್ಯ ಮಂತ್ರಿಗಳು ಹಾಗೂ ನ್ಯಾಯಾಧೀಶರುಗಳಿಗೆ ಸರ್ಕಾರದ ವತಿಯಿಂದ

ಭದ್ರತೆಯನ್ನು ಕೊಡುವುದರ ಬಗ್ಗೆ ಒಪ್ಪಿಗೆ ಇದೆ. ಅದೇ ರೀತಿಯಾಗಿ ಶಾಸಕರುಗಳಿಗೂ ಸಹ ಭದ್ರತೆಯನ್ನು ನೀಡಲಾಗುತ್ತದೆ. ಆದರೆ ಇದು ಯಾವ category ಗೆ ಬರುತ್ತದೆ ಎಂದು ನಾನು ಕೇಳಬಯಸುತ್ತೇನೆ. ಸಾರ್ವತ್ರಿಕವಾಗಿ ಶಾಸಕರಿಗೆ ಭಯ ಇದೆ ಅಥವಾ ರಾಜಕೀಯ ಶೋಭೆಯ ಕಾರಣಕ್ಕಾಗಿ ನಮಗೆ ಭದ್ರತೆಯನ್ನು ಕೊಡಲಾಗುತ್ತಿದೆಯೊ ಎನ್ನುವುದನ್ನು ಸಚಿವರು ತಿಳಿಸಬೇಕು. ಮುಂದುವರೆದು ಯಾವ category ಯಲ್ಲಿ ನಮಗೆ ಭದ್ರತೆಯನ್ನು ಒದಗಿಸಲಾಗುತ್ತಿದೆ? ಸರ್ಕಾರವು ಈ ಅಂಶವನ್ನು ಪುನರ್ ಪರಿಶೀಲಿಸುತ್ತದೆಯೇ?

**ಸಭಾಪತಿಯವರು:-** ಶಾಸಕರಿಗೆ ನೀಡುವ ಭದ್ರತೆಯನ್ನು ನೀವು ಬೇಡವೆಂದು ಹೇಳುತ್ತೀರೋ?

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಶಾಸಕರುಗಳಿಗೆ ಜೀವ ಭಯದಿಂದ ತಾವು ಮಾಡುವ ಕೆಲಸಗಳಿಗೆ ಅಡ್ಡಿಯಾಗುತ್ತದೆ ಎನ್ನುವ ವಿಚಾರದ ಬಗ್ಗೆ ಲಿಖಿತವಾಗಿ ತಿಳಿಸಿದ್ದಲ್ಲಿ, ಅಂತಹವರಿಗೆ ಭದ್ರತೆಯನ್ನು ಒದಗಿಸಲಾಗುತ್ತದೆ. ಅನವಶ್ಯಕವಾಗಿ ಯಾರಿಗೂ ಸಹ ಭದ್ರತೆಯನ್ನು ನೀಡುವುದಿಲ್ಲ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಅತಿ ಹೆಚ್ಚು ಶಾಸಕರುಗಳು ಜೀವ ಭಯದಿಂದ ನಡಗುತ್ತಿದ್ದಾರೆಯೇ ಎಂದು ನಾನು ಕೇಳಬಯಸುತ್ತೇನೆ. ಸಹಜವಾಗಿಯೇ ಸುಮಾರು 200 ಕ್ಕಿಂತ ಹೆಚ್ಚು ಜನ ಗನ್‌ಮ್ಯಾನ್‌ಗಳನ್ನು ಇಟ್ಟುಕೊಂಡಿದ್ದಾರೆ. ಇಷ್ಟೂ ಶಾಸಕರಿಗೆ ಜೀವ ಭಯವಿದೆಯೇ? ಒಂದು ವೇಳೆ ಅವರುಳಿಗೆ ಜೀವ ಭಯವಿದ್ದರೆ, ಅಂತಹ ಯಾವ ಪ್ರಕರಣಗಳಲ್ಲಿ ಅವರು ಪಾಲುದಾರರಾಗಿದ್ದಾರೆ. ಯಾವ category ಯ ಭದ್ರತೆಯನ್ನು ಅವರಿಗೆ ನೀಡಲಾಗುತ್ತಿದೆ ಎಂಬ ಅಂಶಗಳ ಬಗ್ಗೆ ದಯಮಾಡಿ ಸಚಿವರು ತಿಳಿಸಬೇಕು.

(ಮುಂದು)

**“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು**

---

591/24-3-2022/ 11-50/bkp-ks

**(ಸಭಾಪತಿಯವರು ಪೀಠದಲ್ಲಿದ್ದರು)**

**ಶ್ರೀ ಆಯನೂರು ಮಂಜುನಾಥ್(ಮುಂದು)**

ಅಂತಹ ಯಾವ ಪ್ರಕರಣಗಳಲ್ಲಿ ಅವರುಗಳು ಪಾಲುದಾರರಾಗಿದ್ದಾರೆ? ಯಾವ ಒಂದು ಕ್ಯಾಟಗರಿ ಮೇಲೆ ಅವರುಗಳಿಗೆ ಭದ್ರತೆಯನ್ನು ಕೊಡಲಾಗುತ್ತಿದೆ? ದಯಮಾಡಿ, ಈ ವಿಚಾರವಾಗಿ ಸದನಕ್ಕೆ ಮಾಹಿತಿಯನ್ನು ಸಚಿವರು ನೀಡಬೇಕು.

**ಶ್ರೀ ಅರಗ ಜ್ಞಾನೇಂದ್ರ( ಗೃಹ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಗೌರವಾನ್ವಿತ ಸದಸ್ಯರು, ಜನ ಪ್ರತಿನಿಧಿಗಳು ಇವರುಗಳು ಸಾರ್ವಜನಿಕ ಕೆಲಸ ಮಾಡುತ್ತಿರುತ್ತಾರೆ. ಮತ್ತೆ, ಯಾವಾಗಲೂ ಜನರ ನಡುವೆ ಇರುವಂತಹವರು. ಯಾವ ಸಂದರ್ಭದಲ್ಲಿ ಏನಾಗುತ್ತದೆ ಎನ್ನುವುದು ನನಗೆ ಗೊತ್ತಿಲ್ಲ. ಈಗ ಎಲ್ಲೋ ಒಂದು ಕಡೆ ನನ್ನ ಮನಸ್ಸಿನಲ್ಲಿ ಅನಿಸುತ್ತಿದೆ. ಭದ್ರತೆಯನ್ನು ಕೊಡುತ್ತೇನೆ.

**ಸಭಾಪತಿಯವರು:-** ಮುನ್ನೆಚ್ಚರಿಕೆ ಕ್ರಮವಾಗಿ ಕೊಡುತ್ತಿದ್ದೀರಿ.

**ಶ್ರೀ ಆಯನೂರು ಮಂಜುನಾಥ್:-** ಜನರಿಂದ ಗೆದ್ದು ಬಂದವರಿಗೆ ಜನರಿಂದಲೇ ಭಯ ಇದೆಯೇ?

**ಶ್ರೀ ಅರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೆ, ಎಲ್ಲಾ ಜನರಿಂದ ಭಯ ಇಲ್ಲದೇ ಇರಬಹುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

---

**ತಡೆ ಹಿಡಿಯಲಾದ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1441**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಸಿ.ಎಂ. ಇಬ್ರಾಹಿಂ:–** ಮಾನ್ಯ ಸಭಾಪತಿಯವರೆ, ಬಸವಣ್ಣನವರು ಏನು ಹೇಳುತ್ತಾರೆಂದರೆ

**ಅರಸು ಮುನಿದಡೆ,**
**ನಾಡೊಳಗಿರಬಾರದಯ್ಯ**
**ಗಂಡ ಮುನಿದಡೆ**
**ಹೆಂಡತಿ ಮನೆಯೊಳಗೆ ಇರಬಾರದಯ್ಯ ಕೂಡಲಸಂಗಮದೇವ,**
**ಜಂಗಮ ಮುನಿದಡೆ,**
**ನಾನಂತು ಬದುಕುವೆ.**

ಇದು ಬಸವಣ್ಣನವರ ವಚನ. ಹೀಗಾಗಿ ತಾವು ಸಿಟ್ಟಾಗಬೇಡಿ. ಉತ್ತರವನ್ನು ಇಲ್ಲಿ ಅಧಿಕಾರಿಗಳು ಕೊಟ್ಟಿದ್ದಾರೆ. ಆದರೆ, ಕೆಲವೊಂದು ಯೋಜನೆಗಳನ್ನು ನಿಲ್ಲಿಸಿಯೇ ಬಿಟ್ಟಿದ್ದಾರೆ. ಸಾಚಾರ್ ಕಮಿಟಿ ಪ್ರಕಾರ 77 ಯೋಜನೆಗಳಿತ್ತು. ಆದರೆ, ಈಗ ಕೇವಲ 29 ಯೋಜನೆಗಳನ್ನು ಮಾತ್ರ ಇಟ್ಟುಕೊಂಡಿದ್ದಾರೆ. ಮತ್ತೆ, ಗಂಗಾ ಕಲ್ಯಾಣ ಯೋಜನೆ ಇದೆ ಎಂದು ಹೇಳುತ್ತಿದ್ದೀರಿ. ಆದರೆ, ಇತ್ತೀಚೆಗೆ ನಾನು ಈ ವಿಚಾರವಾಗಿ ಪೋನ್ ಮಾಡಿ ಕೇಳಿದಾಗ "ಇಲ್ಲಾ ಸರ್, ಈ ಯೋಜನೆಯನ್ನು ನಿಲ್ಲಿಸಿದ್ದೇವೆಂದು ಹೇಳುತ್ತಿದ್ದಾರೆ. ಏಕೆಂದರೆ, ಈ ಸಮುದಾಯಕ್ಕೆ ಸೇರಿದ ನಿಮ್ಮವರೇ ಒಬ್ಬರು ಎಂ.ಪಿ.ಯವರು ಏನು ಹೇಳಿದರು ಎಂದರೆ, ಪ್ಯಾಚ್ ಹಾಕಿಕೊಂಡು ಬದುಕುತ್ತಿದ್ದಾರೆಂದು ಹೇಳಿದರು. ಅದು ನಿಜ. ಬಡ ಸಮುದಾಯದವರಾದ ನಮ್ಮ ಸಮುದಾಯದವರು ಪ್ಯಾಚ್ ಹಾಕಿಕೊಂಡು ಬದುಕುತ್ತಿದ್ದಾರೆ. ಬಾರಿ ಬಡತನದಲ್ಲಿದ್ದೇವೆ, ವಿದ್ಯಾಬ್ಯಾಸದಲ್ಲಿ ಬಡತನ ಇದೆ,

ಹೀಗಾಗಿ, ನಾನು ತಮಗೆ ಕೈಮುಗಿದು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ತಾವು ಬಸವಾದಿ ಶರಣರ ಪರಂಪರೆಯಿಂದ ಬಂದಂತಹವರಾಗಿದ್ದೀರಿ. ಈ ಯೋಜನೆಗಳು ಏನಿವೆ, ಇವುಗಳನ್ನು ನಿಲ್ಲಿಸಬೇಡಿ. ನೀವು ಪಕ್ಷಪಾತ ಮಾಡಬೇಡಿ. ದೇವರು ಇದ್ದಾನೆ, ನೋಡಿ. ದಯವೇ ಧರ್ಮದ ಮೂಲವಯ್ಯ. ದಯವಿಟ್ಟು, ನಮ್ಮ ಸಮಾಜದ ಮೇಲೆ ದಯೆ ತೋರಿ. ಇವತ್ತು ಏನು ಈ ಯೋಜನೆಗಳನ್ನು ಅಂದರೆ ಪಿ.ಹೆಚ್.ಡಿ. ವ್ಯಾಸಂಗ ಮಾಡತಕ್ಕವರಿಗೆ 25 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ. ನಾನು ಮೊನ್ನೆ ಧಾರವಾಡಕ್ಕೆ ಹೋದಾಗ ಪಿ.ಹೆಚ್.ಡಿ. ಮಾಡತಕ್ಕಂತಹ ಹುಡುಗರು ನನ್ನ ಹತ್ತಿರ ಬಂದು ತಿನ್ನಲಿಕ್ಕೆ ಅನ್ನವಿಲ್ಲದಂತಾಗಿದೆ. ನಮಗೆ ಮೊದಲು ಕೊಡುತ್ತಿದ್ದನ್ನು ಸಹ ನಿಲ್ಲಿಸಿದ್ದಾರೆ ಎಂದು ಹೇಳಿದರು. ಹಿಂದೆ ಏನಾಗಿದೆ, ಮುಂದೆ ಏನಾಗಿದೆ ಎಂಬ ಬಗ್ಗೆ ನಾನು ಚರ್ಚೆ ಮಾಡಲಿಕ್ಕೆ ಹೋಗುವುದಿಲ್ಲ. ತಾವು ಒಳ್ಳೆಯ ತಂದೆಯ ಮಗ ಇದ್ದೀರಿ. ಮತ್ತೆ ಪ್ರಧಾನ ಮಂತ್ರಿಗಳಾದಂತಹ ಸನ್ಮಾನ್ಯ ನರೇಂದ್ರ ಮೋದಿಯವರು ಸಹ ಸಬ್ ಕಾ ಸಾಥ್ –ಸಬ್ ಕಾ ವಿಕಾಸ್" ಎಂದು ಹೇಳಿದ್ದಾರೆ. ನನಗೆ ಅದರ ಮೇಲೆ ವಿಶ್ವಾಸ ಇದೆ. ದಯವಿಟ್ಟು ನಾನು ತಮ್ಮಲ್ಲಿ ಕೈಮುಗಿದು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ನೀವು ಒಂದು ಆಶ್ವಾಸನೆಯನ್ನು ಕೊಡಬೇಕು. ಉರ್ದು ಅಕಾಡಮಿ, ಮತ್ತೊಂದು ಅಕಾಡಮಿ ಬಗ್ಗೆ ನಾನು ಚಿಂತೆ ಮಾಡಲಿಕ್ಕೆ ಹೋಗುವುದಿಲ್ಲ. ಏಕೆಂದರೆ, "ಹೊಟ್ಟೆಗೆ ಇಟ್ಟಿಲ್ಲ, ಜುಟ್ಟಿಗೆ ಮಲ್ಲಿಗೆ ಹೂ" ತೆಗೆದುಕೊಂಡು ಏನು ಮಾಡುವುದಕ್ಕಾಗುತ್ತದೆ.? ತಳ್ಳುವ ಗಾಡಿಯ ಮೇಲೆ ಪಪ್ಪಾಯಿ ಹಣ್ಣು, ಕಲ್ಲಂಗಡಿ ಹಣ್ಣು, ಎಳೆನೀರು ಮಾರಾಟ ಮಾಡುವಂತಹವರಿಗೆ ಕಡಿಮೆ ಬಡ್ಡಿದರದಲ್ಲಿ ಸಾಲಸೌಲಭ್ಯ ಮಾಡಿಕೊಟ್ಟು ಎರಡು ಹೊತ್ತು ಊಟ ಮಾಡುವುದಕ್ಕಾದರೂ ಸರ್ಕಾರ ಅವಕಾಶ ಮಾಡಿಕೊಡಬೇಕು. ಎರಡನೆಯದಾಗಿ, ಈಗಾಗಲೇ ನಾನು ನಿಯಮ 330ರಲ್ಲಿ ಪ್ರಶ್ನೆಯನ್ನು ಹಾಕಿದ್ದೇನೆ. ಈ ವಿಷಯವಾಗಿ ಅಸೆಂಬ್ಲಿಯಲ್ಲಿ ಚರ್ಚೆಯಾಗಿದೆ. ದೇವಸ್ಥಾನದ ಹೊರಗಡೆ ಕಡಲೆಕಾಯಿಯನ್ನು ಹಾಕಿಕೊಂಡು, ಅದನ್ನು ಮಾರಾಟ ಮಾಡಿಕೊಂಡು ಜೀವನ ಮಾಡುತ್ತಿರುತ್ತಾರೆ. ಆದ್ದರಿಂದ, ಮಾನ್ಯ ಮುಖ್ಯಮಂತ್ರಿಗಳು ಒಂದು ಉದಾರ ಮನಸ್ಸನ್ನು

ತೋರುವುದರ ಮೂಲಕ ಅಂತಹ ಬೀದಿ ಬದಿ ವ್ಯಾಪರಿಗಳಿಗೆ ಸಹಾಯ ಮಾಡಬೇಕೆಂದು ತಮ್ಮನ್ನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೆ, ಉತ್ತರವನ್ನು ಒದಗಿಸಿದ್ದೇನೆ. ಮಾನ್ಯ ಸದಸ್ಯರಾದ ಮಾನ್ಯ ಸಿ.ಎಂ. ಇಬ್ರಾಹಿಂ ಸಾಹೇಬರು ಯಾವುದೇ ಯೋಜನೆಗಳನ್ನು ನಿಲ್ಲಿಸಬಾರದು ಎಂದು ಹೇಳಿ ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಮತ್ತೆ ಕೆಲವು ಯೋಜನೆಗಳಿಗೆ ಹೆಚ್ಚಿನ ಅನುದಾನವನ್ನು ಕೊಡಬೇಕೆಂದು ಹೇಳಿದ್ದಾರೆ.

ಮಾನ್ಯ ಸಭಾಪತಿಯವರೆ, ಖಂಡಿತವಾಗಿಯೂ ಶಾದಿ ಮಹಲ್ ಎನ್ನುವುದನ್ನು ಕಳೆದ ವರ್ಷ ನಿಲ್ಲಿಸಿದ್ದಾರೆ, ಅದು ಒಂದನ್ನು ಬಿಟ್ಟರೆ, ಯಾವುದೇ ಯೋಜನೆಯನ್ನು ನಾವು ನಿಲ್ಲಿಸುವುದಿಲ್ಲವೆಂದು ಬಹಳ ಸ್ಪಷ್ಟವಾಗಿ ಹೇಳಲಿಕ್ಕೆ ಬಯಸುತ್ತೇನೆ. ಗಂಗಾ ಕಲ್ಯಾಣ ಯೋಜನೆಯನ್ನು ನಿಲ್ಲಿಸಿಲ್ಲ. ನಾವು ಜನವರಿ ತಿಂಗಳಿನಲ್ಲಿ ಗಂಗ ಕಲ್ಯಾಣ ಯೋಜನೆಯನ್ನು ಅಲ್ಪಸಂಖ್ಯಾತರ ಇಲಾಖೆಯಿಂದ ಬೋರ್‌ವೆಲ್ ಕೊರೆಯುವುದಕ್ಕೆ ನಾವು ಈಗಾಗಲೇ ಅನುಮತಿಯನ್ನು ಕೊಟ್ಟಿದ್ದೇವೆ. ಅವರು ಪಟ್ಟಿಯನ್ನು ಕೊಟ್ಟ ತಕ್ಷಣ ಗಂಗಾ ಕಲ್ಯಾಣ ಯೋಜನೆಯನ್ನು ಮುಂದುವರಿಸುತ್ತೇವೆ. Ph.D. scheme ಏನಿತ್ತು ಅದು ನಿಂತಿತ್ತು, ನಾನು ಬಂದ ಮೇಲೆ ಮತ್ತೆ ಪ್ರಾರಂಭ ಮಾಡಿದ್ದೇವೆ. ಅದನ್ನು renew ಮಾಡುತ್ತೇವೆ.

ಮಾನ್ಯ ಸಭಾಪತಿಯವರೆ, ಇಷ್ಟೇ ಅಲ್ಲದೆ,, ವಿದ್ಯಾರ್ಥಿಗಳಿಗೆ ಸಹಾಯ ಮಾಡುವಲ್ಲಿ “ ಅರಿವು” ಎನ್ನುವ ಯೋಜನೆ ಇದ್ದು, ಅದಕ್ಕೆ ಕಳೆದ ಬಾರಿಗಿಂತ ಈ ವರ್ಷ ಹೆಚ್ಚು ಅನುದಾನವನ್ನು ಕೊಟ್ಟಿದ್ದೇವೆ. ಈ. ಪಿ.ಜಿ. ಮತ್ತು ವೃತ್ತಿಪರ ಕೋರ್ಸ್‌ಗೆ ಹೆಚ್ಚಿನ ಒತ್ತು ಕೊಟ್ಟಿದ್ದೇವೆ. ಕಲಾ ಹಾಗೂ ವಾಣಿಜ್ಯ ಕೋರ್ಸ್ ಮೊದಲು ಇದ್ದುದ್ದನ್ನು ನಿಲ್ಲಿಸಿದ್ದರು. ಅದನ್ನೂ ಕೂಡ reconsider ಮಾಡುತ್ತಿದ್ದೇವೆ. ಅಲ್ಲಿ ಕೇವಲ ಎಂ.ಬಿ.ಎ. ಎಂ.ಎಸ್ಸಿ, ಇಂಜಿನೀಯರಿಂಗ್ ಮೆಡಿಕಲ್ ಇಂತಹ ಕೋರ್ಸ್‌ಗಳಿಗೆಲ್ಲಾ ಈಗಲೂ ಆದ್ಯತೆ ಇದೆ.

ಮುಂಚೆ ಡಿಗ್ರಿ ಲೆವೆಲ್‌ನಲ್ಲಿ ಕೊಡುತ್ತಿದ್ದರು. ನಾನು ಈಗಾಗಲೇ ಈ ವಿಚಾರವಾಗಿ ಆ ಮನೆಯಲ್ಲಿ ಆಶ್ವಾಸನೆಯನ್ನು ಕೊಟ್ಟಿದ್ದೇನೆ. ಅದನ್ನೂ ಕೂಡ reconsider ಮಾಡುತ್ತಿದ್ದೇನೆ. ಬಿ.ಎ. ಮತ್ತು ಬಿ.ಕಾಂ. ಕೋರ್ಸ್‌ಗಳಿಗೂ ಸಹ reconsider ಮಾಡುತ್ತಿದ್ದೇನೆ.

ಈ ಮೊದಲು ಗಂಗಾ ಕಲ್ಯಾಣ ಯೋಜನೆಗೆ ಒಂದೂವರೆ ಲಕ್ಷ ರೂಪಾಯಿಗಳನ್ನು ನೀಡಲಾಗುತ್ತಿತ್ತು. ಆದರೆ, ಈಗ ಎರಡು ಲಕ್ಷ ರೂಪಾಯಿಗಳಿಗೆ ಹೆಚ್ಚಿಸಲಾಗಿದೆ. ಜೊತೆಗೆ ಹೊಸ ಯೋಜನೆಯನ್ನು ತರುತ್ತಿದ್ದೇವೆ. ಗಂಗಾ ಕಲ್ಯಾಣದ ಕೆಲಸಗಳು ಬಹಳ ವಿಳಂಬವಾಗುತ್ತಿವೆ. ನಾವು ಕೆಲಸವನ್ನು ಕೊಟ್ಟ ಮೇಲೆಯೂ ಕೂಡ ಫಲಾನುಭವಿಗಳ ಆಯ್ಕೆಯಲ್ಲಿ ವಿಳಂಬ, ಟೆಂಡರ್ ಆಗುವುದರಲ್ಲಿ ವಿಳಂಬ ಬೋರ್‌ವೆಲ್ ಕೊರೆಯುವುದರಲ್ಲಿ ವಿಳಂಬ, ಮತ್ತು ಅದಕ್ಕೆ ವಿದ್ಯುತ್ ಸಂಪರ್ಕ ಕಲ್ಪಸುವುದರಲ್ಲಿ ವಿಳಂಬ, ಈ ಕಾರಣಕ್ಕೋಸ್ಕರ ನೇರವಾಗಿ ಈಗ ಫಲಾನುಭವಿಗಳ ಅಕೌಂಟ್‌ಗೆ DBT (Direct Benefit Transfer) ಮಾಡಿ, ಹಣವನ್ನು ಕೊಡುತ್ತಿದ್ದೇವೆ. ಎರಡು ಅಥವಾ ಮೂರು ಕಂತಿನಲ್ಲಿ ಬೋರ್‌ವೆಲ್ ತೆಗೆಸುವ ಮುಂಚೆ ಒಂದು ಕಂತು, ಬೋರ್ ತೆಗೆಸಿ ರಿಪೋರ್ಟ್ ಬಂದ ತಕ್ಷಣ ವಿದ್ಯುತ್ ಸಂಪರ್ಕಕ್ಕೆ ಒಂದು ಕಂತು ಕೊಡುತ್ತೇವೆ. ಈ ರೀತಿಯಲ್ಲಿ ಅವನೇ ಈ ಒಂದು ಕೆಲಸವನ್ನು ಮಾಡಿಸಿಕೊಳ್ಳುತ್ತಾನೆ. ಟೆಂಡರ್ ಮಾಡುವ ವ್ಯವಸ್ಥೆಯನ್ನು ಬಿಟ್ಟು ನೇರವಾಗಿ ಆ ಫಲಾನುಭವಿಯನ್ನು ಮುಟ್ಟುವ ರೀತಿಯಲ್ಲಿ ಈ ಒಂದು ವ್ಯವಸ್ಥೆಯನ್ನು ನಾವು ಮಾಡುತ್ತಿದ್ದೇವೆ.

ಮಾನ್ಯ ಸಭಾಪತಿಯವರೆ, ಜಿಲ್ಲೆಗೊಂದು "ಎ.ಪಿ.ಜೆ. ಅಬ್ದುಲ್ ಕಲಾಂ ಸ್ಕೂಲ್" ಅನ್ನು ಅಪ್‌ಗ್ರೇಡ್ ಮಾಡುತ್ತೇವೆ. ಅಂದರೆ ಅದನ್ನು CBSE syllabus ಗೆ ಅಪ್‌ಗ್ರೇಡ್ ಮಾಡುತ್ತೇವೆ. ಅಲ್ಪ ಸಂಖ್ಯಾತರ ಮಕ್ಕಳೂ ಕೂಡ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವ ನಿಟ್ಟಿನಲ್ಲಿ CBSE syllabus ಮಾಡುವುದರಿಂದ ಅನುಕೂಲವಾಗುತ್ತದೆ CBSE syllabus ಗೆ ಅಪ್‌ಗ್ರೇಡ್ ಮಾಡಲು 25 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ. 50 ಸಾವಿರ ಅಲ್ಪಸಂಖ್ಯಾತರ ಮಕ್ಕಳಿಗೆ ವಿಶೇಷವಾಗಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವಲ್ಲಿ

ಕೋಚಿಂಗ್ ನಡೆಸುತ್ತಿದ್ದೇವೆ. ಅದಕ್ಕೆ 110 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ. ಮತ್ತೆ ಹಾಸ್ಟೆಲ್‌ಗಳಲ್ಲಿ food charges ಕೂಡ ಹೆಚ್ಚು ಮಾಡಿದ್ದೇವೆ. ಮೊದಲು ಹೆಚ್ಚಿನ ಮಟ್ಟದಲ್ಲಿ ವಿದ್ಯಾರ್ಥಿಗಳು ಹಾಸ್ಟೆಲ್‌ಗಳಿಗೆ ಬರುತ್ತಿರಲಿಲ್ಲ. ಈಗ ಬೇಡಿಕೆ ಜಾಸ್ತಿಯಾಗಿದೆ. ಪ್ರತಿಯೊಂದು ಮೈನಾರಿಟಿಯಲ್ಲಿಯೂ 25 ವಿದ್ಯಾರ್ಥಿಗಳನ್ನು ಹೆಚ್ಚಿಗೆ ತೆಗೆದುಕೊಳ್ಳಲಿಕ್ಕೆ ಪ್ರಾವಿಜನ್ ಮಾಡಿ, ಅದಕ್ಕೆ ಹಣವನ್ನೂ ಕೂಡ ಒದಗಿಸಲಾಗಿದೆ. 25 ಮಕ್ಕಳಿಗೆ ಜಾಗ ಎಷ್ಟು ಬೇಕು, ಆಹಾರ ಎಷ್ಟು ಬೇಕು ಎಂದು ಹೇಳಿ, ಅದಕ್ಕೆಲ್ಲಾ ಹಣವನ್ನು ಒದಗಿಸಲಾಗಿದೆ. So that more minority students can utilize the hostel facilities and pursue education. ಅದಕ್ಕೆ 33 ಕೋಟಿ ರೂಪಾಯಿಗಳು ಇದ್ದುದನ್ನು 53 ಕೋಟಿ ರೂಪಾಯಿಗಳಿಗೆ ಹೆಚ್ಚಿಗೆ ಮಾಡಿದ್ದೇನೆ. ಇನ್ನು ಈ ಬೀದಿ ಬದಿ ವ್ಯಾಪಾರ ಮಾಡುವವರಿಗೆ, street vendors ಗೆ ಅಲ್ಪಸಂಖ್ಯಾತರಿಗೆ NULM (National Urban Livelihoods Mission) ಯೋಜನೆಯಲ್ಲಿ ವಿಶೇಷವಾದಂದತಹ ಲೋನ್ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ.

ಮಾನ್ಯ ಸಭಾಪತಿಯವರೆ, ಮತ್ತೆ ಅತಿ ಹೆಚ್ಚು ಮೈನಾರಿಟಿ ಇರುವ ಕಾಲೋನಿಗಳಲ್ಲಿ ಮೊದಲು ಏನಾಗಿತ್ತು ಎಂದರೆ, ಅಲ್ಲಿಗೆ ಬಂದಂತಹ ಎಲ್ಲಾ ದುಡ್ಡು ಮಹಾನಗರ ಪಾಲಿಕೆಗಳಲ್ಲಿ ಅಂದರೆ, ಬೆಂಗಳೂರು, ಮೈಸೂರು,ಹುಬ್ಬಳ್ಳಿ, ಧಾರವಾಡಗಳಲ್ಲಿ ಮಾತ್ರ ಇತ್ತು. ಪುರಸಭೆ ಮತ್ತು ನಗರಸಭೆಗಳಲ್ಲಿ ಇರಲಿಲ್ಲ. ಬಹಳಷ್ಟು ಜನ ಶಾಸಕರುಗಳು ಪುರಸಭೆ ಮತ್ತು ನಗರಸಭೆಗಳಲ್ಲಿ ಬೇಕೆಂದು ಬೇಡಿಕೆಯನ್ನಿಟ್ಟರು. ತಾಲ್ಲೂಕು ಮಟ್ಟದಲ್ಲಿಯೂ ಕೂಡ ಮೈನಾರಿಟಿಯಲ್ಲಿ ಜನಸಂಖ್ಯೆ ಜಾಸ್ತಿ ಇರುತ್ತದೆ. ಅದಕ್ಕೆ ಅಲ್ಲಿನ ಪ್ರಗತಿಯೂ ಕೂಡ ಸರಿಯಾಗಿರಲಿಲ್ಲ. ಆದ್ದರಿಂದ, colony ಗಳನ್ನು ಅಭಿವೃದ್ಧಿ ಮಾಡಲಿಕ್ಕೆ ಹೇಗಿದ್ದರೂ ನಮ್ಮಲ್ಲಿ Karnataka Slum Development Board ಇದೆ. ಮತ್ತೆ, ಎಲ್ಲಿ ಮೈನಾರಿಟಿ ಜನಸಂಖ್ಯೆ ಜಾಸ್ತಿ ಇದೆ ಅವುಗಳನ್ನು ವಿಶೇಷವಾಗಿ ತೆಗೆದುಕೊಂಡು, ಅದಕ್ಕೆ ನಾವು ಅಧಿಕ ಹಣವನ್ನು ಹಣಕಾಸು ಇಲಾಖೆಯಿಂದ ಕೊಡುತ್ತೇವೆ. ಮತ್ತೆ, ಆ ವಿಭಾಗವನ್ನು ಸ್ಲಮ್ ಎಂದು ಡಿಕ್ಲೇರ್ ಮಾಡಿ, ಕೂಡಲೇ ಅದನ್ನು ಅಭಿವೃದ್ಧಿ

“ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡುವಂತಹ ಒಂದು ಹೊಸ ಯೋಜನೆಯನ್ನು ಕೂಡ ರೂಪಿಸಿದ್ದೇವೆ. ಈ ರೀತಿಯಲ್ಲಿ ಎಲ್ಲಾ ಹಂತದಲ್ಲಿ ಏನೇನು ಮಾಡಲಿಕ್ಕೆ ಸಾಧ್ಯವಿದೆಯೋ ಆ ರೀತಿಯಲ್ಲಿ ಖಂಡಿತವಾಗಿಯೂ ಮಾಡುತ್ತೇನೆ. ಈಗಾಗಲೇ 600 ಕ್ಕಿಂತ ಹೆಚ್ಚು ಶಾದಿ ಮಹಲ್‌ಗಳನ್ನು ಕಟ್ಟಿದ್ದೇವೆ. ಹೀಗಾಗಿ, ಅದೇ ದುಡ್ಡನ್ನು ಬೇರೆ ಯೋಜನೆಯಲ್ಲಿ ಬಳಕೆ ಮಾಡುತ್ತೇವೆ.

**ಶ್ರೀ ಸಿ.ಎಂ. ಇಬ್ರಾಹಿಂ:-** ಮಾನ್ಯ ಸಭಾಪತಿಯವರೆ, ಮಾನ್ಯ ಬಸವರಾಜ ಬೊಮ್ಮಾಯಿಯವರು, ಬೊಮ್ಮಾಯಿಯವರ ಮಗ ಆಗಿದ್ದಕ್ಕೆ ಸಾರ್ಥಕವಾಯಿತು. ತಮ್ಮ ತಂದೆಯವರ ಆತ್ಮಕ್ಕೆ ಶಾಂತಿ ಸಿಗಲೆಂದು ಭಗವಂತನಲ್ಲಿ ಪ್ರಾರ್ಥನೆ ಮಾಡುತ್ತೇನೆ. ತಾವು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದೀರಿ, ಮಾಡಿಕೊಂಡು ಹೋಗಿ, ದೇವರು ಒಳ್ಳೆಯದನ್ನು ಮಾಡುತ್ತಾನೆ. ನಾವೆಲ್ಲರೂ ಬೆಳೆಯಲಿಕ್ಕೆ ನಿಮ್ಮ ಅಪ್ಪನವರೂ ಸಹ ಕಾರಣರು. "ಯದ್ಭಾವಂ ತದ್ಭವತಿ" ಭಾವನೆ ಇದ್ದ ಹಾಗೆ, ದೇವರು ನಿಮಗೆ ಫಲವನ್ನು ಕೊಡುತ್ತಾನೆ.

**ಮುಂದು.**

**(592) 24.03.2022 12.00 ಎಸ್‌ವಿ-ಕೆಎಸ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ನಸೀರ್ ಅಹಮದ್:-** ಮಾನ್ಯ ಮುಖ್ಯಮಂತ್ರಿಯವರೇ, ಒಂದೇ ಒಂದು ಮನವಿ. SCP(Special Component Plan)/TSP (Tribal Sub-plan) ಯಲ್ಲಿ ಕೊಳಗೇರಿಗಳಲ್ಲಿ ಒಂದು ಕಡೆ ಹರಿಜನರು ವಾಸವಿರುತ್ತಾರೆ. ಮತ್ತೊಂದು ಕಡೆ ಅಲ್ಪಸಂಖ್ಯಾತರು ವಾಸವಿರುತ್ತಾರೆ. SCP/TSP ನಲ್ಲಿ ಹೆಚ್ಚಿನ ಹಣಕಾಸು ವ್ಯವಸ್ಥೆಯಾಗಿರುವುದರಿಂದ ಅಲ್ಲಿ ರಸ್ತೆಗಳು, ಒಳಚರಂಡಿ, ನೀರು, ಬೀದಿದೀಪ ಎಲ್ಲವೂ ಆಗುತ್ತದೆ. ಅಲ್ಲಿಯೇ ವಾಸ ಮಾಡುವಂತಹ ಜನರಿಗೆ ಅವಕಾಶವಾಗುವುದಿಲ್ಲ. ಅದಕ್ಕಾಗಿ ಮುಖ್ಯಮಂತ್ರಿಗಳ ಒಂದು ಫಂಡ್ ಇದ್ದು, ಅದರಲ್ಲಿ ಕಳೆದ ಬಾರಿ ರೂ.800 ಕೋಟಿ ಇತ್ತು. ದಯವಿಟ್ಟು ಅದನ್ನು ಮಾಡಿಕೊಟ್ಟರೆ ತಾರತಮ್ಯ ನಿಲ್ಲಿಸಲಿಕ್ಕೆ ಅವಕಾಶವಾಗುತ್ತದೆ.

ಪಿ.ಹೆಚ್.ಡಿ.ಯ ಬಗ್ಗೆ ತಾವು ಹೇಳಿದಿರಿ. ಆದರೆ ಅದರ ನೋಟಿಫಿಕೇಷನ್ ಆಗಿರುವುದಿಲ್ಲ. ಕಳೆದ ಎರಡು ವರ್ಷಗಳಿಂದಲೂ ನೋಟಿಫಿಕೇಷನ್ ಆಗಿರುವುದಿಲ್ಲ.

**ಶ್ರೀ ಸಲೀಂ ಅಹಮದ್:-** ಮಾನ್ಯ ಮುಖ್ಯಮಂತ್ರಿಯವರೇ, ತಾವು ಎಲ್ಲವನ್ನೂ ಹೇಳಿದ್ದೀರಿ. ಅದಕ್ಕಾಗಿ ತಮಗೆ ಧನ್ಯವಾದಗಳು. ವಿದೇಶ ವ್ಯಾಸಂಗ ಮಾಡುವ ಮಕ್ಕಳಿಗೆ ಬಹುಶಃ ಎಲ್ಲಿಯೋ ಒಂದು ಕಡೆ ಸಮಸ್ಯೆ ಆಗಿದೆ. ಏಕೆಂದರೆ ಅದನ್ನು ನಿಲ್ಲಿಸಲಾಗಿದ್ದು, ದಯಮಾಡಿ ಸಹಾಯ ಮಾಡಬೇಕು. ಮತ್ತೊಂದು ವಿಷಯವೆಂದರೆ, ನಮ್ಮ ಸರ್ಕಾರವಿದ್ದಾಗ ಅಲ್ಪಸಂಖ್ಯಾತರಿಗೆ ರೂ.3000 ಕೋಟಿ ಅನುದಾನವನ್ನು ಕೊಟ್ಟಿತ್ತು. ಈಗ ಅದನ್ನು ರೂ.1400 ಕೋಟಿಗೆ ಇಳಿಸಲಾಗಿದೆ. ದಯವಿಟ್ಟು ಅದನ್ನು ಹೆಚ್ಚು ಮಾಡಬೇಕೆಂದು ಕೋರುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಮಾನ್ಯ ನಸೀರ್ ಅಹಮದ್ ಅವರು ಹೇಳಿದಂತೆ ಅಲ್ಪಸಂಖ್ಯಾತರು ಇರುವ ಕಾಲೋನಿಗಳಿಗೆ ವಿಶೇಷವಾದ ಕಾರ್ಯಕ್ರಮಗಳನ್ನು ರೂಪಿಸಿ, ಅದನ್ನು Karnataka Slum Development Board ಮುಖಾಂತರ ಮಾಡಿಸಲಾಗುತ್ತದೆ. ಅಲ್ಪಸಂಖ್ಯಾತರು ಹೆಚ್ಚು ಇರುವ ನಗರ ಸಭೆ ಮತ್ತು ಪುರಸಭೆಗಳಲ್ಲಿ ಖಂಡಿತವಾಗಿ ಕಾಲೋನಿಗಳ ಅಭಿವೃದ್ಧಿಯನ್ನು ಮಾಡುತ್ತೇವೆ. ಅದರಲ್ಲಿ ಏನೂ ಸಂಶಯ ಬೇಡ. ಎಲ್ಲಾ ಇಲಾಖೆಗಳದ್ದೂ ಹಣವು ಕಡಿಮೆಯಾಗಿತ್ತು. ಈಗ ಅದನ್ನು ಪುನಃ ಹೆಚ್ಚಿಗೆ ಮಾಡುತ್ತಾ ಬರುತ್ತಿದ್ದೇವೆ. ಬರುವಂತಹ ದಿನಗಳಲ್ಲಿ ಖಂಡಿತವಾಗಿ population and need based ಆಧಾರದ ಮೇಲೆ ಏನಿದೆಯೋ ಅದನ್ನು ಖಂಡಿತವಾಗಿಯೂ ನಾವು ಮಾಡುತ್ತೇವೆ.

ವಿದೇಶ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಕುರಿತಾದ ವಿವರಗಳು ನನ್ನ ಬಳಿ ಇಲ್ಲ. ಅದನ್ನು ತೆಗೆದುಕೊಂಡು consider ಮಾಡುತ್ತೇನೆ.

**ಪ್ರಶ್ನೆ ಸಂಖ್ಯೆ 2014**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಒದಗಿಸಿದ್ದಾರೆ. ಬಹುಶಃ ಇದು ಅಪೂರ್ಣವಾದ ಉತ್ತರ. ಏಕೆಂದರೆ ಮೂಲತಃ ಗ್ರಾಹಕರ ಕಲ್ಯಾಣ ನಿಧಿಯನ್ನು ಆರ್ಥಿಕ ಇಲಾಖೆಯಲ್ಲಿ ಸ್ಥಾಪನೆ ಮಾಡಲಾಗುತ್ತದೆ. ಆರ್ಥಿಕ ಇಲಾಖೆಯಲ್ಲಿ ರೂಲ್ 92ರ ಅಡಿಯಲ್ಲಿ ಇದು ರಚನೆಯಾಗಬೇಕಿತ್ತು. ಆದರೆ ಇದುವರೆವಿಗೆ ರಚನೆಯಾಗಿಲ್ಲ. ರೂ.28,44,382 ಗಳು ಸಂಗ್ರಹವಾಗಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಈ ನಿಧಿಯನ್ನು ಬಹುತೇಕವಾಗಿ ಆಹಾರ ಸುರಕ್ಷತೆ ಮತ್ತು ಗ್ರಾಹಕರ ಸುರಕ್ಷತೆಗೆ ಸಂಬಂಧಿಸಿದಂತೆ ಅಧ್ಯಯನ ಮಾಡುತ್ತಾರೆಯೋ ಅವರಿಗೆ ಕೊಡಬೇಕಾಗಿದೆ. ಈ ಹಣ ಹಾಗೆಯೇ ಉಳಿದಿದೆ. ಒಂದು ಬಾರಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಗೆ ಹೋಗಿ ಅಲ್ಲಿಂದ ವಾಪಸ್ ಬಂದಿತ್ತು. ಆದ್ದರಿಂದ ಅವರಿಬ್ಬರೂ ಸೇರಿ ಉತ್ತರವನ್ನು ಕೊಡಬೇಕಾಗಿತ್ತು. ನಿಧಿ ಸ್ಥಾಪನೆ ಮಾಡುವಂತಹದ್ದು Finance Department ಮಾಡುತ್ತದೆ. ಹಣವನ್ನು ಕೂಡ Finance Department ಯಾವುದು non-refundable ಇದೆಯೋ ಅದನ್ನು Consumer Welfare Fund ಗೆ ಹಾಕುತ್ತಾರೆ. ಅದನ್ನು ತೀರ್ಮಾನ ಮಾಡುವುದಕ್ಕೆ ಒಂದು ಸಮಿತಿ ರಚನೆಯಾಗಿರುವುದಿಲ್ಲ. ಸಮಿತಿಯನ್ನು ಯಾವಾಗ ಮಾಡಲಾಗುತ್ತದೆ ಮತ್ತು ಇದರಲ್ಲಿ ಕಾರ್ಯಕ್ರಮಗಳನ್ನು ಯಾವ ರೀತಿಯಲ್ಲಿ ರೂಪಿಸಲಾಗಿದೆ ಎಂದು ಸದನಕ್ಕೆ ವಿವರಿಸಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೋರುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಕಾಯ್ದೆ, 2017ರ ಪ್ರಕರಣ 57ರಲ್ಲಿ ಪ್ರಸ್ತಾಪಿಸಿರುವಂತೆ ಗ್ರಾಹಕರ ಕಲ್ಯಾಣ ನಿಧಿಯನ್ನು ಸ್ಥಾಪನೆ ಮಾಡಲಾಗಿದೆ. ಇದಕ್ಕೆ ಯಾವ ರೀತಿ ಹಣ ಬರುತ್ತದೆಯೆಂದರೆ ಯಾರಾದರೂ ವ್ಯಾಪಾರಸ್ಥರು ಅವಶ್ಯಕತೆಗಿಂತ ಹೆಚ್ಚಿನ ಹಣವನ್ನು ಒಮ್ಮೊಮ್ಮೆ ಪಡೆದುಕೊಂಡಿದ್ದರೆ ಅದನ್ನು consumer ಗೆ ಕೊಡಲು ಅದಕ್ಕೆ ಒಂದು ಕಲ್ಯಾಣ ನಿಧಿಯನ್ನು ಸ್ಥಾಪನೆ ಮಾಡಿ ಸರ್ಕಾರದಲ್ಲಿ

ಗ್ರಾಹಕರ ಹಿತರಕ್ಷಣೆಯನ್ನು ಮಾಡಬೇಕು ಎನ್ನುವುದು ಇದರ ಉದ್ದೇಶವಾಗಿದೆ. ಇದರ ಬಗ್ಗೆ ಪ್ರಚಾರ ಮಾಡಿ consumer rights ಬಗ್ಗೆ ಜನರಲ್ಲಿ ಅರಿವು ಮೂಡಿಸುವುದಕ್ಕೆ ಈಗಾಗಲೇ ಸಮಿತಿಯು ರಚನೆಯಾಗಿದೆ. ವಿಶೇಷವಾಗಿ ಗ್ರಾಹಕರಿಗೆ ಅರಿವು ಮೂಡುವುದು ಬಹಳ ಮುಖ್ಯವಾಗಿದೆ. ಹಲವಾರು ಕಾನೂನುಗಳನ್ನು ಮಾಡಿ ಎಷ್ಟೆಲ್ಲಾ ಪ್ರಯತ್ನಗಳನ್ನು ನಾವು ಮಾಡಿದರೂ ಕೂಡ ವಸ್ತುಗಳು pre-packed ಇರಬೇಕು, ದರ ಮತ್ತು ತೂಕ ಸರಿಯಾಗಿ ನಮೂದಾಗಿರಬೇಕು ಈ ಎಲ್ಲಾ conditions ಗಳಿದ್ದರೂ ಕೂಡ ಗ್ರಾಹಕರ ಅರಿವಿಗೆ ಬರುವುದಿಲ್ಲ. ಇನ್ನೂ without packaging open ಆಗಿ ಮಾರಾಟ ಮಾಡುವುದು ಈ ಎಲ್ಲಾ violation ಗಳನ್ನು ನಾವು ನೋಡುತ್ತಿದ್ದೇವೆ. ಈ ಎಲ್ಲದರ ಬಗ್ಗೆ ಅರಿವು ಮೂಡಿಸಬೇಕು. ಏಕೆಂದರೆ Consumer ತನ್ನ rights ಅನ್ನು ಕೇಳಿದಾಗ ಮಾತ್ರ ಸರಿಯಾದ ರೀತಿಯಲ್ಲಿ ವ್ಯವಸ್ಥೆಯಾಗುತ್ತದೆ. ಇದನ್ನು ಖಂಡಿತವಾಗಿ ನಾವು ಮಾಡುತ್ತೇವೆ. ಸಮಿತಿ ಈಗಾಗಲೇ ರಚನೆಯಾಗಿದೆ, ಜಾರಿಯಲ್ಲಿಯೂ ಇದೆ. ಅದರ ಮೂಲಕ ಎಲ್ಲಾ ಕಾರ್ಯಕ್ರಮಗಳನ್ನೂ ನಾವು ಮಾಡುತ್ತೇವೆ.

## ಪ್ರಶ್ನೆ ಸಂಖ್ಯೆ 2049

## (ಉತ್ತರವನ್ನು ಲಗತ್ತಿಸಲಾಗಿದೆ)

**ಡಾ: ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಸುದೀರ್ಘವಾದ ಉತ್ತರವನ್ನು ಕೊಟ್ಟಿದ್ದಾರೆ. ನಾನು ಕೇಳಿರುವ ಪ್ರಶ್ನೆಯ ಉತ್ತರದಲ್ಲಿ ಮಾಡಿರುವ ಕಾಮಗಾರಿಗೆ ಆಗಿರುವ ಹಣದ ಖರ್ಚನ್ನೇ ತೋರಿಸುತ್ತಿದ್ದಾರೆ. ಇಲ್ಲಿ ನಾನು ಗಮನಿಸಿದಂತೆ ಒಂದೇ ಕಂಪನಿಯವರು ಒಂದೇ ವ್ಯಕ್ತಿ ಹೀಗೆ ಅವರಿಗೆ ರೂ.100 ಲಕ್ಷ, ರೂ. 200 ಲಕ್ಷ ಕೊಟ್ಟಿರುತ್ತಾರೆ. ಈಗಾಗಲೇ ತಾವು KRIDL (Karnataka Rural Infrastructure Development Limited) ವಿಷಯದಲ್ಲಿ ತನಿಖೆ ಮಾಡಿಸುವುದಾಗಿ ಹೇಳಿರುವುದರಿಂದ ನಾನು ಜಾಸ್ತಿ ಹೇಳಲು ಹೋಗುವುದಿಲ್ಲ. ಖಂಡಿತವಾಗಿಯೂ ತಾವು ಈ ವಿಷಯದಲ್ಲಿ ತನಿಖೆಯನ್ನು ಮಾಡಿಸಬೇಕು.

ಮೂರನೆಯ ಪ್ರಶ್ನೆಯಲ್ಲಿ ನಾನು ಕೇಳಿರುವಂತೆ ಸಾವಿರಾರು ಕೋಟಿ ರೂಪಾಯಿಗಳ ಅನುದಾನವು ವೆಚ್ಚವಾಗಿದ್ದರೂ ಸಹ ಬೆಂಗಳೂರು ನಗರದ ರಸ್ತೆಗಳು ಹದಗೆಟ್ಟಿರುವ ವಿಷಯವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ ಎನ್ನುವುದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ 110 ಹಳ್ಳಿಗಳ ಪ್ರದೇಶಗಳಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ಕೊಳವೆ ಅಳವಡಿಸುವ ಯೋಜನೆಯನ್ನು ಕೈಗೊಂಡು ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಉತ್ತರಿಸಿದ್ದಾರೆ. ಹಾಗಾದರೆ ರೂ.5,500 ಕೋಟಿ JICA (Japan International Cooperation Agency) ನೆರವುನಲ್ಲಿ ಕೊಟ್ಟಿರುವ ಹಣ ಎಲ್ಲಿಗೆ ಹೋಗುತ್ತದೆ? ಈ ವಿಷಯ ತಮ್ಮ ಗಮನಕ್ಕಾಗಿ. ಉತ್ತರದ ಐದನೆಯ ಪುಟದಲ್ಲಿ 110 ಹಳ್ಳಿಗಳ ಪ್ರದೇಶಗಳಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ಕೊಳವೆಗಳನ್ನು ಅಳವಡಿಸುವ ಮಹತ್ವದ ಮತ್ತು ಪ್ರಮುಖ ಯೋಜನೆಯನ್ನು ಕೈಗೊಂಡು ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಹೇಳಿದ್ದಾರೆ. ನಾನು ರಸ್ತೆಗಳ ಬಗ್ಗೆ ಕೇಳಿದರೆ, ಒಳಚರಂಡಿಯ ಬಗ್ಗೆ ಕೊಟ್ಟಿದ್ದಾರೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಯವರಿಂದ ನನಗೆ ಸ್ಪಷ್ಟನೆ ಬೇಕು.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಎಲ್ಲಾ ಅಂಕಿ ಅಂಶಗಳನ್ನು ಕೊಡಲಾಗಿದೆ. ಸುಮಾರು 7,011 ಕಿ.ಮೀ. ರಸ್ತೆಗಳಲ್ಲಿ ರೂ.6,767 ಕೋಟಿಗಳ ವೆಚ್ಚದಲ್ಲಿ 4,761 works ಮಾಡಿದ್ದೇವೆ. 4695 ಕಿ.ಮೀ. ಆಗಿದೆ. ಎಲ್ಲಾ ವಿವರಗಳನ್ನು ಕೊಟ್ಟಿದ್ದೇನೆ. ಪುನಃ ನಾನು ಅದನ್ನು ಹೇಳಲಿಕ್ಕೆ ಹೋಗುವುದಿಲ್ಲ. 2007ರಲ್ಲಿ 110 ಹಳ್ಳಿಗಳು ಬೆಂಗಳೂರಿಗೆ ಸೇರ್ಪಡೆಯಾಯಿತು. ಅಲ್ಲಿಗೆ ಕಾವೇರಿ ನೀರು ಕೊಡಲಿಕ್ಕೆ ಆಗಿರಲಿಲ್ಲ. ಕಾವೇರಿ 5ನೇ ಹಂತದಲ್ಲಿ ಅಲ್ಲಿಗೆ ನೀರು ಕೊಡಲು ತೀರ್ಮಾನ ಮಾಡಿ ರೂ.5500 ಕೋಟಿಗಳ ಯೋಜನೆಯನ್ನು ಮಂಜೂರಾತಿ ಮಾಡಿ ಕೊಟ್ಟಿದ್ದೇವೆ. ಅಲ್ಲಿ ಪೈಪ್‌ಲೈನ್ ಹಾಕಿದ ಮೇಲೆ ಪುನಃ ರಸ್ತೆಗಳನ್ನು ಮಾಡಬೇಕಾಗುತ್ತದೆ. UGD (underground drainage) line ಮೇಲೆ ಬಂದಿರುವ ರಸ್ತೆಗಳ ರಿಪೇರಿಗೆ ಅನುದಾನವನ್ನು ಒದಗಿಸಲಾಗಿದೆ. ಇದರಲ್ಲಿ ಬೇರೇನೂ ಗೊಂದಲವಿಲ್ಲ.

**ಡಾ:ಕೆ.ಗೋವಿಂದರಾಜ್:-** ಮಾನ್ಯ ಮುಖ್ಯಮಂತ್ರಿಯವರೇ, ರಸ್ತೆಗಳನ್ನು ಮಾಡುವುದಕ್ಕೆ ಮೊದಲೇ ಮೂರೂ agency ಗಳನ್ನು coordinate ಮಾಡಿ ರಸ್ತೆಗಳನ್ನು ಮಾಡಿದ್ದರೆ ಸರಿಯಾಗಿರುತ್ತಿತ್ತು.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಗೋವಿಂದರಾಜ್ ಅವರೇ, ಬೃಹತ್ ಬೆಂಗಳೂರಿನಲ್ಲಿ ಕಾವೇರಿ ಲೈನ್ ಹೋದರೆ ಎಷ್ಟು ದೊಡ್ಡದಾಗಿ ಹೋಗುತ್ತದೆ, ರಸ್ತೆ ಮಧ್ಯದಲ್ಲಿ ಎಷ್ಟು ಆಳ ತೆಗೆಯಲಾಗುತ್ತದೆ ಎಂದು ತಮಗೂ ಗೊತ್ತಿದೆ. ಕಾವೇರಿ ಲೈನ್ ಬಂದರೆ ಇಡೀ ರಸ್ತೆಯನ್ನೇ ವ್ಯಾಪಿಸಿ ಕೊಳ್ಳುತ್ತದೆ. ಹೀಗಾಗಿ ಕಾವೇರಿ ಲೈನ್ ಹಾಕಿದ ಮೇಲೆ ಮತ್ತೆ ರಸ್ತೆಯನ್ನು ಮಾಡುವುದು ಅತ್ಯಂತ ಅವಶ್ಯಕ. ಅದೇ ಜನರ ಒತ್ತಾಯವೂ ಆಗಿದೆ. ನೀವು ಲೈನ್ ಹಾಕಿ ಬಿಡುತ್ತಿದ್ದೀರಿ, ಅದು ಕುಸಿಯುತ್ತಿದೆ, ವಾಹನ ಚಾಲಕರಿಗೆ ತೊಂದರೆಯಾಗಿದೆ, ಬೇಗ ರಸ್ತೆಯನ್ನು ಮಾಡಿ ಎಂದು ಕೇಳುತ್ತಾರೆ. ಅದಕ್ಕಾಗಿ ವಿಶೇಷ ಅನುದಾನವನ್ನು ಕೊಟ್ಟು ಎಲ್ಲೆಲ್ಲಿ ಕಾವೇರಿ ಲೈನ್ ಹಾಗೂ UGD line ಹಾಕಲಾಗಿದೆಯೋ ಅಲ್ಲಿ ರಸ್ತೆಗಳ ಕಾಮಗಾರಿಯನ್ನು ನಾವು ಮಾಡುತ್ತೇವೆ.

## ಪ್ರಶ್ನೆ ಸಂಖ್ಯೆ 2034

**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ರಾಜ್ಯದ ವಿವಿಧ ಇಲಾಖೆಗಳಗೆ ಮಂಜೂರಾಗಿರುವ ಒಟ್ಟು ಹುದ್ದೆಗಳು ಎಷ್ಟು? ಭರ್ತಿಯಾಗಿರುವುದು ಎಷ್ಟು? ಖಾಲಿಯಾಗಿರುವುದು ಎಷ್ಟು ಎಂದು ಕೇಳಿದ್ದೇನೆ. ಕೆ.ಪಿ.ಎಸ್.ಸಿ.ಯಲ್ಲಿ ಐದು ವರ್ಷದಿಂದ ಎಷ್ಟು ನೋಟಿಫಿಕೇಷನ್ ಮಾಡಲಾಗಿದೆ? ಎಷ್ಟು ನೇಮಕಾತಿಗಳಗೆ ಆದೇಶ ಕೊಡಲಾಗಿದೆ? ವಿಳಂಬಕ್ಕೆ ಕಾರಣಗಳೇನು? ಕೆ.ಪಿ.ಎಸ್.ಸಿ. ಎದುರಿಸುತ್ತಿರುವ ಸಮಸ್ಯೆಗಳೇನು ಎಂದು ಕೇಳಿದ್ದೇನೆ. 15 ದಿನಗಳ ಸಮಯ ತೆಗೆದುಕೊಂಡು ನನ್ನ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಒಟ್ಟು 39 ಇಲಾಖೆಯದ್ದು ಕೊಟ್ಟಿದ್ದಾರೆ. ನನಗೆ ಸಮಯವಿದ್ದರೆ ನಾನು ಒಟ್ಟು ಎಷ್ಟು ಎಂದು ಲೆಕ್ಕ ಮಾಡುತ್ತಿದ್ದೆನು. ರಾಜ್ಯದಲ್ಲಿ ಎರಡು ಲಕ್ಷಕ್ಕೂ ಅಧಿಕ ಹುದ್ದೆಗಳು ಖಾಲಿ ಇವೆ. ಅದರಲ್ಲಿ ಪ್ರಮುಖವಾಗಿ ಕಂದಾಯ ಇಲಾಖೆಯಲ್ಲಿ 32,220 ಹುದ್ದೆಗಳು ಮಂಜೂರಾಗಿದ್ದರೆ 22,183 ಹುದ್ದೆಗಳು ಖಾಲಿಯಿವೆ.

**(...ಮುಂದು)**

**(593) 24-03-2022 (12.10) ಕೆಜಿ-ಜಿಆರ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ರವಿ (ಮುಂದು):-**

ಅದೇರೀತಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ 5,520 ಹುದ್ದೆಗಳ ಪೈಕಿ 4,072 ಹುದ್ದೆಗಳು ಖಾಲಿ ಇವೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ 74,219 ಹುದ್ದೆಗಳ ಪೈಕಿ 34,187 ಹುದ್ದೆಗಳು ಖಾಲಿ ಇವೆ.

**ಸಭಾಪತಿಯವರು:-** ಮಾನ್ಯ ರವಿಯವರೇ, ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಟ್ಟಿರುವುದನ್ನೇ, ನೀವು ಮತ್ತೆ ರಿಪೀಟ್ ಮಾಡುತ್ತಿದ್ದೀರಿ. ಏನು ಮಾಡಬೇಕೆಂದು ಪ್ರಶ್ನೆಯನ್ನು ಮಾತ್ರ ಕೇಳಿ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಸುಮಾರು 2.50 ಲಕ್ಷ ಹುದ್ದೆಗಳು ಖಾಲಿ ಇವೆ. ಈ ಹುದ್ದೆಗಳನ್ನು ಭರ್ತಿ ಮಾಡಲು ಯಾವ ಪ್ರಕ್ರಿಯೆಗಳನ್ನು ಮಾಡಲಾಗುತ್ತಿದೆ, ಕರ್ನಾಟಕ ಲೋಕ ಸೇವಾ ಆಯೋಗದ ಮಾಹಿತಿ ಅನ್ವಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ ಭರ್ತಿ ಮಾಡುವ ಸಂಬಂಧ ಕಳೆದ ಐದು ವರ್ಷಗಳಲ್ಲಿ 517 ಕ್ರಮಬದ್ಧವಾದ ಪ್ರಸ್ತಾವನೆಗಳನ್ನು ಆಯೋಗವು ಸ್ವೀಕರಿಸಿದ್ದು, ಈ ಸಂಬಂಧ 25,297 ಹುದ್ದೆಗಳಿಗೆ ಒಟ್ಟು 49 ಅಧಿಸೂಚನೆಗಳನ್ನು ಹೊರಡಿಸಲಾಗಿರುತ್ತದೆ. ಈ ನೇಮಕಾತಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಒಟ್ಟು 17,727 ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನು ಸಂಬಂಧಿಸಿದ ಇಲಾಖೆಗಳಿಗೆ ಕಳುಹಿಸಲಾಗಿದೆ ಎಂದು ತಿಳಿಸಿದ್ದಾರೆ. ಆದರೆ, ಅದರಲ್ಲಿ ಇನ್ನು 7,570 ಹುದ್ದೆಗಳು ಕಳೆದ ಐದು ವರ್ಷಗಳಿಂದ ನೆನೆಗುದಿಗೆ ಬಿದ್ದಿವೆ. P.C.Hota ರವರ ವರದಿಯ ಪ್ರಕಾರ, ಕರ್ನಾಟಕ ಲೋಕಸೇವಾ ಆಯೋಗದಲ್ಲಿ Controller of Examinations ರವರನ್ನು ಮೂರು ವರ್ಷಗಳ ಕಾಲ ವರ್ಗಾವಣೆ ಮಾಡುವಂತಿಲ್ಲವೆಂದು ಹೇಳಿದೆ. ಆದರೆ, ಇಲ್ಲಿ ಕಳೆದ ಮೂರು ವರ್ಷಗಳಲ್ಲಿ ನಾಲ್ಕು ಜನ ಪರೀಕ್ಷಾ ನಿಯಂತ್ರಕರನ್ನು ವರ್ಗಾವಣೆ ಮಾಡಲಾಗಿದೆ. ಈಗ ಇರುವಂತಹ ಶ್ರೀಮತಿ ಎಂ.ಕನಗವಲ್ಲಿ ಎಂಬುವರು ರೇಷ್ಮೆ ಇಲಾಖೆಯಲ್ಲಿ ವ್ಯವಸ್ಥಾಪಕ ನಿರ್ದೇಶಕರಾಗಿ ಪ್ರಭಾರದಲ್ಲಿ ಇದ್ದಾರೆ. P.C.Hota ರವರ ವರದಿಯ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಾರೆ ಎನ್ನುವುದನ್ನು ತಿಳಿಸಬೇಕು. ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಆಗುತ್ತಿರುವಂತಹ ವಿಳಂಬ ನೀತಿಗೆ ಕರ್ನಾಟಕ ಲೋಕಸೇವಾ ಆಯೋಗವನ್ನು ರದ್ದು ಪಡಿಸಿ, ಇದಕ್ಕೆ ಬೇರೆ ಪರೀಕ್ಷಾ ಪದ್ಧತಿಗಳನ್ನು ನಮ್ಮ ರಾಜ್ಯದಲ್ಲಿ ತರಲಾಗುತ್ತದೆಯೇ; ಹಾಗೆಯೇ, ಖಾಲಿ ಇರುವಂತಹ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಯಾವ ಕ್ರಮವನ್ನು ಅನುಸರಿಸಲಾಗುತ್ತದೆ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಯವರು ತಿಳಿಸಬೇಕು.

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಎರಡು ಪ್ರಮುಖವಾದಂತಹ ಪ್ರಶ್ನೆಗಳನ್ನು ಕೇಳಿದ್ದಾರೆ. ಮೊದಲನೆಯದಾಗಿ, ಖಾಲಿ ಇರುವಂತಹ 2.50 ಲಕ್ಷ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುತ್ತದೆಂಬ ಪ್ರಶ್ನೆಯನ್ನು ಕೇಳಿದ್ದಾರೆ. ಕಳೆದ ಹಲವಾರು ವರ್ಷಗಳಿಂದ ಆರ್ಥಿಕ ನಿರ್ಬಂಧವನ್ನು ವಿಧಿಸಲಾಗಿದೆ. ಈ ಹಿಂದಿನ ಸರ್ಕಾರಗಳು ಕಳೆದ ಸುಮಾರು 10-12 ವರ್ಷಗಳಿಂದ ಆರ್ಥಿಕ ನಿರ್ಬಂಧವನ್ನು ವಿಧಿಸುತ್ತಾ ಬಂದಿವೆ. ಎಲ್ಲಿ ಅವಶ್ಯಕತೆ ಇದೆಯೋ, ಅಷ್ಟನ್ನು ಮಾತ್ರ relaxation ಮಾಡಿ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ. ಈಗ ಉದಾಹರಣೆಗೆ, ನಾನು ಗೃಹ ಮಂತ್ರಿಯಾಗಿದ್ದ ಸಂದರ್ಭದಲ್ಲಿ ಪೋಲಿಸ್ ಇಲಾಖೆಗೆ ಸುಮಾರು 16 ಸಾವಿರ ಹುದ್ದೆಗಳಿಗೆ ಅನುಮತಿಯನ್ನು ಪಡೆದುಕೊಂಡಿದ್ದೆ. ಅದರ ನೇಮಕಾತಿ ಪ್ರಕ್ರಿಯೆ ನಡೆಯುತ್ತಿದ್ದು, ಅದು ಈಗ 3ನೇ ಹಂತದಲ್ಲಿದೆ. ಇದು ಇನ್ನೊಂದು ವರ್ಷದಲ್ಲಿ ಪೂರ್ಣಗೊಳ್ಳುತ್ತದೆ. ಅದೇರೀತಿ ನಾನು ಮುಖ್ಯಮಂತ್ರಿಯಾದ ಮೇಲೆ ಸುಮಾರು 15 ಸಾವಿರ ಶಿಕ್ಷಕರನ್ನು ಭರ್ತಿಮಾಡುವುದಕ್ಕೆ ಅನುಮತಿಯನ್ನು ಕೊಟ್ಟಿದ್ದೇನೆ. ಅದು ಸಹ ನಡೆಯುತ್ತಿದೆ. ಕಲ್ಯಾಣ ಕರ್ನಾಟಕದಲ್ಲಿ ಸುಮಾರು 14 ಸಾವಿರ ಹುದ್ದೆಗಳು ಖಾಲಿ ಇದ್ದವು. ಅದಕ್ಕೆ ಬೇಡಿಕೆ ಇದ್ದರೂ ಸಹ, ಆ ಹುದ್ದೆಗಳನ್ನು ಭರ್ತಿ ಮಾಡಿರಲಿಲ್ಲ. ಈಗ ಆ 14 ಸಾವಿರ ಹುದ್ದೆಗಳನ್ನು ಸಹ ಕ್ಲಿಯರ್ ಮಾಡಿದ್ದೇನೆ. ಈಗ ಹಂತ ಹಂತವಾಗಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ನಡೆಯುತ್ತಿದೆ. ಅಲ್ಲದೇ, ನಾವು ಆರ್ಥಿಕ ಪರಿಸ್ಥಿತಿಯ ಅನುಗುಣವಾಗಿ ಈ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಬಜೆಟ್‌ನ್ನು ಮಂಡಿಸುವಂತಹ ಸಂದರ್ಭದಲ್ಲಿ ಸುಮಾರು 2.50 ಲಕ್ಷ ಹುದ್ದೆಗಳು ಖಾಲಿ ಇವೆ ಎಂದು ಸರ್ಕಾರವೆ ಹೇಳಿದೆ. ಈಗ ಖಾಲಿ ಇರುವಂತಹ ಹುದ್ದೆಗಳು ಕೇವಲ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಖಾಲಿ ಇರುವಂತಹದ್ದು ಅಲ್ಲ. ಹಲವಾರು ವರ್ಷಗಳಿಂದ ಆ ಹುದ್ದೆಗಳು ಖಾಲಿ ಇವೆ. ಈ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಇನ್ನೂ ಹಲವು ವರ್ಷಗಳು ಬೇಕಾಗುತ್ತದೆ. ಈ ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡುವಂತಹ ಕೆಲಸವನ್ನು ನಾವು ಮಾಡುತ್ತೇವೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕರ್ನಾಟಕ ಲೋಕ ಸೇವಾ ಆಯೋಗದ ಬಗ್ಗೆ ಹೇಳಿದ್ದಾರೆ. ಇದರಲ್ಲಿ 2-3 ಸಮಸ್ಯೆಗಳು ಇವೆ. ಮೊದಲನೆಯದಾಗಿ, ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಇನ್ನಷ್ಟು ಸಿಬ್ಬಂದಿಗಳ ಅವಶ್ಯಕತೆ ಇದೆ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಈ ಕೆಲಸವನ್ನು ಕೊಡಲೇ ಮಾಡುತ್ತೇವೆ. ಅಲ್ಲಿ Controller of Examinations ರವರು full time ಕೆಲಸ ಮಾಡುವಂತಹ ಅವಶ್ಯಕತೆ ಇದೆ. ಅದರ ಬಗ್ಗೆ ಈಗಾಗಲೇ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಅದನ್ನು ಕೆಲವೇ ದಿವಸಗಳಲ್ಲಿ ಮಾಡುತ್ತೇವೆ. ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಕಳೆದ ಐದು ವರ್ಷಗಳಲ್ಲಿ 517 ಕ್ರಮಬದ್ಧವಾದ ಪ್ರಸ್ತಾವನೆಗಳನ್ನು ಆಯೋಗವು ಸ್ವೀಕರಿಸಿದ್ದು, ಈ ಸಂಬಂಧ 25,297 ಹುದ್ದೆಗಳಿಗೆ ಒಟ್ಟು 49 ಅಧಿಸೂಚನೆಗಳನ್ನು ಹೊರಡಿಸಲಾಗಿರುತ್ತದೆ. ಈ ನೇಮಕಾತಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಒಟ್ಟು 17,727 ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನು ಸಂಬಂಧಿಸಿದ ಇಲಾಖೆಗಳಿಗೆ ಕಳುಹಿಸಲಾಗಿದೆ. ಬಾಕಿ ಇರುವಂತಹ ಹುದ್ದೆಗಳನ್ನು ಭರ್ತಿ ಮಾಡಲು ಪ್ರಕ್ರಿಯೆ ನಡೆಯುತ್ತಿದೆ. ಬಹುಶಃ ಇನ್ನು 6 ತಿಂಗಳಲ್ಲಿ ಈ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ. ಆದರೆ, ಕರ್ನಾಟಕ ಲೋಕಸೇವಾ ಆಯೋಗಕ್ಕೆ ಕಾಯಕಲ್ಪ ಮಾಡುವಂತಹ ಅವಶ್ಯಕತೆ ಇದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅಲ್ಲಿ ಪರೀಕ್ಷೆಯ ಫಲಿತಾಂಶ ಬಂದ ಮೇಲೆ ಹಲವಾರು ತಕರಾರುಗಳು ಬರುತ್ತವೆ. ಅಂತಿಮ ಪಟ್ಟಿಯನ್ನು ಪ್ರಕಟಿಸಿದ ಮೇಲೆಯೂ ಸಹ, ತಕರಾರುಗಳು ಬರುತ್ತವೆ. ಸಂದರ್ಶನ ನಡೆಯುವಂತಹ ಸಂದರ್ಭದಲ್ಲಿಯೂ ಸಾಕಷ್ಟು allegations ಬರುತ್ತವೆ. ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿ ಸಂದರ್ಶನದ ಅಂಕಗಳನ್ನು ಸಹ ಕಡಿಮೆ ಮಾಡಿದ್ದೇವೆ. ಆ ರೀತಿ ಕಡಿಮೆ ಮಾಡಿದ ಮೇಲೆ ಕೆಲವರು ಕಡಿಮೆ ಮಾಡಬಾರದೆಂದು reactions ಮಾಡಿದರು. U.P.S.C., model ಮೇಲೆ ಕೆ.ಪಿ.ಎಸ್.ಸಿ., ಅನ್ನು ಸ್ಥಾಪನೆ ಮಾಡಲಾಗಿದೆ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಕೆ.ಪಿ.ಎಸ್.ಸಿ., ಯನ್ನು U.P.S.C., level ಗೆ ತರಬೇಕು.

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಯಗಳು)** ಮಾನ್ಯ ಸಭಾಪತಿಯವರೇ, ಈಗ ಕಾಲಕಾಲಕ್ಕೆ ಕೆಲವು ಬದಲಾವಣೆಗಳನ್ನು ಮಾಡಿದ್ದರಿಂದ ಅದು ಶಿಥಿಲಗೊಂಡಿದೆ. ಅಲ್ಲದೇ, ಕೆಲವಾರು ವರ್ಷಗಳಿಂದ ಪೂರ್ಣ ಪ್ರಮಾಣದಲ್ಲಿ ಕೆಲಸ ಮಾಡುತ್ತಿಲ್ಲ. ನಿಗದಿತ ಸಮಯದೊಳಗೆ ಪರೀಕ್ಷೆಗಳ ಫಲಿತಾಂಶ ಸಹ ಬರುತ್ತಿಲ್ಲ. ಅಭ್ಯರ್ಥಿಗಳು ಆಯ್ಕೆ ಆಗುತ್ತಿಲ್ಲ. ಹಾಗಾಗಿ, ಇದಕ್ಕೆ ಕಾಯಕಲ್ಪವನ್ನು ಕೊಡುವುದಕ್ಕೆ ಸಂಪೂರ್ಣವಾಗಿ ಕೆಲಸವನ್ನು ಮಾಡುತ್ತೇವೆ. ಈಗಾಗಲೇ ಕೆ.ಪಿ.ಎಸ್.ಸಿ., ಯ ಅಧ್ಯಕ್ಷರ ಹಾಗೂ ಸದಸ್ಯರ ಜೊತೆಗೆ 2-3 ಸಭೆಗಳನ್ನು ಮಾಡಿದ್ದೇನೆ. ಅವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಅಲ್ಲದೇ, ಇದರ ಬಗ್ಗೆ ಡಿ.ಪಿ.ಎ.ಆರ್.,ನವರ ಜೊತೆಗೆ ಮಾತನಾಡಿದ್ದೇನೆ. ಇದನ್ನು within a short time ನಲ್ಲಿ ಸರಿಪಡಿಸುತ್ತೇವೆ,

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಲೋಕೋಪಯೋಗಿ ಇಲಾಖೆಯಲ್ಲಿ ಕಿರಿಯ ಹಾಗೂ ಸಹಾಯಕ ಇಂಜಿನಿಯರ್ ಹುದ್ದೆಗಳಿಗೆ 18 ತಿಂಗಳ ಹಿಂದೆ ಆಗಿದ್ದ Notification ಅನ್ನು ಬಿಟ್ಟರೆ, ಕೆಪಿಎಸ್‌ಸಿಯಲ್ಲಿ ಬೇರೆ ಯಾವುದೇ Notification ಆಗಿಲ್ಲ. ನಮ್ಮ ರಾಜ್ಯ ಸರ್ಕಾರಿ ನೌಕರರಿಗೂ ಸಹ ಕೇಂದ್ರ ಸರ್ಕಾರದ ಸರಿಸಮಾನವಾದ pay scale ಅನ್ನು ಕೊಡುತ್ತೇವೆಂದು ಹೇಳಿದ್ದೀರಿ. ಅದರ ಬಗ್ಗೆ ಘೋಷಣೆಯನ್ನು ಮಾಡಿದ್ದೀರಿ. ಇದು ಬಹಳ ಒಳ್ಳೆಯದು.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, Pay Commission ಅನ್ನು ನೇಮಿಸುತ್ತೇವೆಂದು ಹೇಳಿದ್ದೆನೆ.

(**ಗೊಂದಲ**)

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಮಾಡುತ್ತೇವೆಂದು ಹೇಳಿದ್ದಾರೆ. ಆದರೆ, ಖಾಲಿ ಹುದ್ದೆಗಳ ನೇಮಕಾತಿಯನ್ನು ಮಾಡದೆ, ಉಳಿದ ಹಣದಲ್ಲಿ ಅವರಿಗೆ pay scale ಕೊಡುವುದು ಎಷ್ಟು ಸರಿ?

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ರವಿಯವರು ಯಾವಾಗಲು advanced. ನಾವು Pay Commission ಅನ್ನು ನೇಮಿಸಿ ಕೊಡುತ್ತೇವೆಂದು ಹೇಳಿದ್ದೇವೆ.

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

## ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು:-** ಮಾನ್ಯ ಸಭಾಪತಿಯವರೇ, ದಿನಾಂಕ 24 ಮಾರ್ಚ್, 2022, ಸಮೂಹ-4ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 86 ಪ್ರಶ್ನೆಗಳ ಪೈಕಿ 15 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರ ಪ್ರತಿಗಳನ್ನು ಲಗತ್ತಿಸಲಾಗಿದೆ)**

**ಸಭಾಪತಿಯವರು:-** ಮಂಡಿಸಲಾಯಿತು.

೦2. **ವಿತ್ತೀಯ ಕಾರ್ಯಕಲಾಪಗಳು**

**2021-22ನೇ ಸಾಲಿನ ಪೂರಕ ಅಂದಾಜುಗಳ (ಮೂರನೇ ಹಾಗೂ ಅಂತಿಮ ಕಂತು)**

**ಮಂಡನೆ**

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, 2021-22ನೇ ಸಾಲಿನ ಪೂರಕ ಅಂದಾಜುಗಳನ್ನು (ಮೂರನೇ ಹಾಗೂ ಅಂತಿಮ ಕಂತು) ಸದನದ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

---

**೦3. ಪ್ರಕಟಣೆ**

**ಸದನದಲ್ಲಿ ಕಡ್ಡಾಯವಾಗಿ ಉಪಸ್ಥಿತರಿರಬೇಕಾದ ಸಚಿವರುಗಳ ಹಾಗೂ ಇಲಾಖಾಧಿಕಾರಿಗಳ ಕುರಿತು**

**ಸಭಾಪತಿಯವರು:-** ಸದನದಲ್ಲಿ ಕಡ್ಡಾಯವಾಗಿ ಉಪಸ್ಥಿತರಿದ್ದು, ಪ್ರಶ್ನೆಗಳಿಗೆ ಉತ್ತರಿಸಬೇಕಾದ ಮಾನ್ಯ ಸಚಿವರುಗಳ ಪಟ್ಟಿ ಈ ರೀತಿ ಇದೆ.

1) ಶ್ರೀ ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿಗಳು
2) ಶ್ರೀ ಗೋವಿಂದ ಎಂ.ಕಾರಜೋಳ, ಜಲಸಂಪನ್ಮೂಲ ಸಚಿವರು
3) ಶ್ರೀ ಜೆ.ಸಿ.ಮಾಧುಸ್ವಾಮಿ, ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗು ಸಣ್ಣ ನೀರಾವರಿ ಸಚಿವರು
4) ಶ್ರೀ ಅರಗ ಜ್ಞಾನೇಂದ್ರ, ಗೃಹ ಸಚಿವರು
5) ಶ್ರೀ ಅರಬೈಲು ಹೆಬ್ಬಾರ ಶಿವರಾಮ್, ಕಾರ್ಮಿಕ ಸಚಿವರು
6) ಶ್ರೀ ಕೆ.ಗೋಪಾಲಯ್ಯ, ಅಬಕಾರಿ ಸಚಿವರು

**ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಮಾನ್ಯ ಸಚಿವರುಗಳ ಪಟ್ಟಿ ಈ ರೀತಿ ಇದೆ.**

1) ಶ್ರೀ ಮುರುಗೇಶ ಆರ್.ನಿರಾಣಿ, ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು
2) ಶ್ರೀ ಎಸ್.ಟಿ.ಸೋಮಶೇಖರ್, ಸಹಕಾರ ಸಚಿವರು.
3) ಶ್ರೀ ಬಿ.ಎ.ಬಸವರಾಜ (ಭೈರತಿ) ನಗರಾಭಿವೃದ್ಧಿ ಸಚಿವರು
4) ಶ್ರೀ ಎನ್.ನಾಗರಾಜು (ಎಂಟಿಬಿ), ಪೌರಾಡಳಿತ, ಸಣ್ಣ ಕೈಗಾರಿಕೆ, ಸಾರ್ವಜನಿಕ ಉದ್ದಿಮೆಗಳ ಸಚಿವರು
5) ಶ್ರೀ ಆಚಾರ್ ಹಾಲಪ್ಪ ಬಸಪ್ಪ, ಗಣಿ ಮತ್ತು ಭೂವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರ ಸಚಿವರು

6) ಶ್ರೀ ಶಂಕರ್ ಬಿ.ಪಾಟೀಲ್ ಮುನೇನಕೊಪ್ಪ, ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ, ಸಕ್ಕರೆ ಸಚಿವರು

**ವಿಧಾನ ಪರಿಷತ್ತಿನ ಸದನದಲ್ಲಿ ಕಡ್ಡಾಯವಾಗಿ ಉಪಸ್ಥಿತರಿರಬೇಕಾದ ಇಲಾಖಾಧಿಕಾರಿಗಳ ಪಟ್ಟಿ ಈ ರೀತಿ ಇದೆ.**

1) ಶ್ರೀಮತಿ ಎಂ.ಕನಗವಲ್ಲಿ, ಭಾ.ಆ.ಸೇ., ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ, ವಸಂತನಗರ, ಬೆಂಗಳೂರು
2) ಶ್ರೀಮತಿ ಸುಷಮಾಗೋಡಬೋಲೆ ಭಾ.ಆ.ಸೇ., ನಿರ್ದೇಶಕರು, ಲೋಕ ಶಿಕ್ಷಣ ನಿರ್ದೇಶನಾಲಯ, ಮಲ್ಲೇಶ್ವರಂ, ಬೆಂಗಳೂರು
3) ಸರ್ಕಾರದ ಉಪ ಕಾರ್ಯದರ್ಶಿ, ಹೈದ್ರಾಬಾದ್ ಕರ್ನಾಟಕ ವಿಶೇಷ ಕೋಶ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
4) ಸರ್ಕಾರದ ಉಪ ಕಾರ್ಯದರ್ಶಿ, ಅಬಕಾರಿ ಇಲಾಖೆ

**ಮಧ್ಯಾಹ್ನದಿಂದ ಸಂಜೆ 6.00 ಗಂಟೆಯವರೆಗೆ ಕಡ್ಡಾಯವಾಗಿ ಉಪಸ್ಥಿತರಿರಬೇಕಾದ ಇಲಾಖಾಧಿಕಾರಿಗಳ ಪಟ್ಟಿ ಈ ರೀತಿ ಇದೆ.**

1) ಅಶ್ವಿನ್ ಡಿ.ಗೌಡ, ಐಆರ್‌ಎಸ್., ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ, ಕೌಶಲ್ಯ ಭವನ, ಬನ್ನೇರುಘಟ್ಟ, ಬೆಂಗಳೂರು
2) ಶ್ರೀ ಮುನೀಶ್ ಮೌದ್ಗಲ್, ಭಾ.ಅ.ಸೇ., ಸರ್ಕಾರದ ಕಾರ್ಯದರ್ಶಿ, ಸಿ.ಆ.ಸು.ಇ.(ಆರ್ಥಿಕ ಸುಧಾರಣೆ)
3) ಸರ್ಕಾರದ ವಿಶೇಷ ಕಾರ್ಯದರ್ಶಿ, ಕಾರ್ಮಿಕ ಇಲಾಖೆ
4) ಸರ್ಕಾರದ ಉಪ ಕಾರ್ಯದರ್ಶಿ-2, ನಗರಾಭಿವೃದ್ಧಿ ಇಲಾಖೆ

**ಸದನ ಸಾಯಂಕಾಲ 06.00 ಗಂಟೆಯ ನಂತರ ಮುಂದುವರೆದಲ್ಲಿ ಉಪಸ್ಥಿತರಿರಬೇಕಾದ ಇಲಾಖಾಧಿಕಾರಿಗಳ ಪಟ್ಟಿ ಈ ರೀತಿ ಇದೆ.**

1) ಶ್ರೀ ಜೀಯಾ ಉಲ್ಲಾ ಎಸ್. ಭಾ.ಆ.ಸೇ., ಸಹಕಾರ ಸಂಘಗಳ ನಿಬಂಧಕರು, ಅಲಿಆಸ್ಕರ್ ರಸ್ತೆ, ವಸಂತ ನಗರ, ಬೆಂಗಳೂರು .

**೦4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ವಿಷಯ:-** ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕಿನ ದೇವರಾಯನ ಸಮುದ್ರ ಗ್ರಾಮದಲ್ಲಿನ ವೃಷಬಾದ್ರಿ ಬೆಟ್ಟದ ಬಳಿ ಗಣಿಗಾರಿಕೆ ನಡೆಸುತ್ತಿರುವ ಬಗ್ಗೆ.

- - -

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳು. ಅದು ರಾಮಾಯಣ ಮಹಾಭಾರತದ ಐತಿಹ್ಯ ಹೊಂದಿರುವಂತಹ ಪುರಾತನ ಬೆಟ್ಟ. ಈ ಬೆಟ್ಟವನ್ನು ನಂಬಿ ಈಗಲೂ ಹತ್ತಾರು ಗ್ರಾಮಗಳ ಜನ ತಮ್ಮ ಜಾನುವಾರುಗಳೊಂದಿಗೆ ಬದುಕು ಕಟ್ಟಿಕೊಂಡಿದ್ದಾರೆ. ಹೀಗಿರುವಾಗ, ರಾಜ್ಯ ಸರ್ಕಾರದ ದುಡುಕು ನಿರ್ಧಾರದಿಂದ, ಈಗ ಹತ್ತಾರು ಗ್ರಾಮಗಳ ಜನರನ್ನು ಆತಂಕಕ್ಕೀಡು ಮಾಡಿದೆ. ಗ್ರಾಮಕ್ಕೆ ಹೊಂದಿಕೊಂಡಂತಿರುವ ಸುಂದರವಾದ ಬೃಹತ್ ಬೆಟ್ಟ, ಬೆಟ್ಟದ ತಪ್ಪಲಿನಲ್ಲಿರುವ ಗ್ರಾಮಗಳು, ಸುತ್ತಲೂ ಸುಂದರವಾದ ವಾತಾವರಣ, ತುಂಬಿ ಹರಿಯುತ್ತಿರುವ ಕೆರೆ ಕಲ್ಯಾಣಿಗಳು ಇದೆಲ್ಲಾ ಕಂಡುಬರುವುದು ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕಿನ ದೇವರಾಯನಸಮುದ್ರ ಗ್ರಾಮದಲ್ಲಿ.

ಇಲ್ಲಿ ಕಾಣುವ ಏಕಶಿಲಾ ಬೆಟ್ಟ "ಜಿಲ್ಲೆಯ ಬೃಹತ್ ಹಾಗೂ ಐತಿಹಾಸಿಕ ಹಿನ್ನೆಲೆ ಹೊಂದಿರುವ ಬೆಟ್ಟ ಎಂಬ ಖ್ಯಾತಿ ಹೊಂದಿದ್ದು, ಇದನ್ನು ವೃಷಬಾದ್ರಿ ಬೆಟ್ಟ" ಎಂದು ಕರೆಯಲಾಗುತ್ತದೆ. ಸೀತಾಮಾತೆ ವನವಾಸಕ್ಕೆ ಬಂದಿದ್ದಾಗ ಇಲ್ಲಿ ವಾಸವಿದ್ದಳು ಎಂಬ ಐತಿಹ್ಯವಿದ್ದು ರಾಮಾಯಣ ಮತ್ತು ಮಹಾಭಾರತದ ಕುರುಹಗಳು ಸಹ ಇವೆ ಹಾಗೂ ಪ್ರಸಿದ್ಧ ದೇವಾಲಯಗಳು ಈ ಬೆಟ್ಟದ ತಪ್ಪಲಿನಲ್ಲಿವೆ. ಜೊತೆಗೆ ಬೆಟ್ಟದ ಸುತ್ತಲೂ ೩೦ ಗ್ರಾಮಗಳು ಹಾಗೂ ಸಾವಿರಾರು ಸಂಖ್ಯೆಯ ಪ್ರಾಣಿ ಪಕ್ಷಿಗಳು ಬೆಟ್ಟವನ್ನೇ ನಂಬಿ ತಮ್ಮದೇ ಆದ ಸುಂದರ ಬದುಕು ಕಟ್ಟಿಕೊಂಡಿವೆ. ಈ ಬೆಟ್ಟದ ಮೇಲೆ ಬೀಳುವ ಮಳೆ ನೀರು ಬೆಟ್ಟದ ಸುತ್ತಮುತ್ತಲಿನ ಕೆರೆ ಕುಂಟೆಗಳಲ್ಲಿ ನಿಲ್ಲುತ್ತದೆ.

ಹೀಗಾಗಿ, ಸಾವಿರಾರು ಸಂಖ್ಯೆಯ ಪ್ರಾಣಿ ಪಕ್ಷಿಗಳಿಗೆ ಹಾಗೂ ಜನರಿಗೆ ಪರೋಕ್ಷವಾಗಿ ಈ ಬೆಟ್ಟ ಆಸರೆಯಾಗಿದೆ. ಇಂತಹ ಬೆಟ್ಟದಲ್ಲಿ ರಾಜ್ಯ ಸರ್ಕಾರ ಕೃತಕ ಮರಳು ಉತ್ಪಾದನಾ ಘಟಕ ಸೇರಿದಂತೆ, ಕ್ರಷರ್‌ಗಳಿಗೆ ಹಾಗೂ ಗಣಿಗಾರಿಕೆಗೆ ಅವಕಾಶ ನೀಡಿದೆ. ಸರ್ಕಾರ ಟೆಂಡರ್ ಮೂಲಕ ದೇವರಾಯನಸಮುದ್ರದ ಸರ್ವೆ ನಂ.199 ರಲ್ಲಿ 200 ಎಕರೆಗಳಿಗೂ ಹೆಚ್ಚು ಪ್ರದೇಶವನ್ನು ವಿವಿಧ ಕಂಪನಿಗಳಿಗೆ ಗುತ್ತಿಗೆ ನೀಡಿದೆ. ಆದರೆ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಕಂದಾಯ ಇಲಾಖೆ, ಅರಣ್ಯ ಇಲಾಖೆ ಸೇರಿ ಎಂಟು ಇಲಾಖೆಗಳು ಇಲ್ಲಿ ಗಣಿಗಾರಿಕೆ ಮಾಡಬಹುದು ಎಂದು ಅನುಮತಿ ನೀಡಿದೆ. ಕೋಲಾರ ಜಿಲ್ಲೆಯಲ್ಲಿ ಈಗಾಗಲೇ ಮರಳು ಹಾಗೂ ಕಲ್ಲು ಗಣಿಗಾರಿಕೆಯಿಂದ ಅಪಾರ ಪ್ರಮಾಣದ ಪ್ರಕೃತಿ ಸಂಪತ್ತು ಅವನತಿ ಹಾದಿ ತಲುಪಿದೆ. ಇಂತಹ ಪರಿಸ್ಥಿತಿಗಳಲ್ಲಿ ಜೆಲ್ಲಿ ಹುಂಡಿ ಅಥವಾ ಎಂ.ಸ್ಯಾಂಡ್ ಘಟಕ ಸ್ಥಾಪನೆಗೆ ಅನುಮತಿ ನೀಡುವ ಮೂಲಕ ಈ ಗ್ರಾಮಗಳ ಪಾಲಿಗೆ ಮರಣ ಶಾಸನ ಬರೆಯಲು ಮುಂದಾಗಿದೆ. ಈ ಬೆಟ್ಟದಲ್ಲಿ 9 ಎಂ.ಸ್ಯಾಂಡ್ ಘಟಕಗಳ ಸ್ಥಾಪನೆಗೆ ಸರ್ಕಾರವೇ ರಾಜ್ಯ ಮಟ್ಟದಲ್ಲಿ ಟೆಂಡರ್ ಮೂಲಕ ಅನುಮತಿ ನೀಡಿದೆ. ಇದು ಸುತ್ತಮುತ್ತಲಿನ ಹತ್ತಾರು ಗ್ರಾಮಸ್ಥರ ಆತಂತಕಕ್ಕೆ ಕಾರಣವಾಗಿದೆ. ಇಲ್ಲಿ ಎಂ.ಸ್ಯಾಂಡ್ ಘಟಕ ನಿರ್ಮಾಣವಾಗಿದ್ದೇ ಆದಲ್ಲಿ, ಅಲ್ಲಿನ ಸ್ಫೋಟಕದಿಂದ ಏಳುವ ಧೋಳನಿಂದ ಇಡೀ ಪ್ರದೇಶ ಹಾಳಾಗಿ ಸುಮಾರು 30 ಗ್ರಾಮಗಳನ್ನೇ ಸ್ಥಳಾಂತರ ಮಾಡುವ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎನ್ನುವುದು ಗ್ರಾಮಸ್ಥರ ಆತಂಕ. ಸರ್ಕಾರ ನಿಯಮಗಳ ಅಡಿಯಲ್ಲಿ ಗಣಿಗಾರಿಕೆ ಮಾಡಿದರೆ ಗ್ರಾಮಗಳಿಗೆ ಯಾವುದೇ ತೊಂದರೆ ಆಗುವುದಿಲ್ಲ ಎನ್ನುವುದು ಅಧಿಕಾರಿಗಳ ಮಾತಾಗಿದೆ. ಇದೇ ತಿಂಗಳ ಅಂತ್ಯದಲ್ಲಿ ಹಸಿರು ಪೀಠದಿಂದ ತೀರ್ಪು ಹೊರಬೀಳಲಿದೆ. ಒಟ್ಟಿನಲ್ಲಿ ಹಸಿರು ಪೀಠದ ತೀರ್ಪು ಯಾರ ಪರವಾಗಿ ಬರುತ್ತದೋ ಗೊತ್ತಿಲ್ಲ. ಆದರೆ, ನಮ್ಮೂರಿನ ಪ್ರಕೃತಿ ಸಂಪತ್ತನ್ನು ಉಳಿಸಿಕೊಡಿ ಎನ್ನುವುದು ಗ್ರಾಮಸ್ಥರ ಅಳಲು. ನಮಗೆ ಅಭಿವೃದ್ಧಿ ಹೆಸರಿನಲ್ಲಿ ನಡೆಯುವ ಪ್ರಕೃತಿ ನಾಶಕ್ಕಿಂತ ನೆಮ್ಮದಿಯಾಗಿ ಪ್ರಕೃತಿಯ ಜೊತೆಗೆ ಬದಕಲು ಬಿಡಿ ಎನ್ನುವುದು ಗ್ರಾಮಸ್ಥರ ಆಗ್ರಹವಾಗಿದೆ. ಆದಕಾರಣ, ಇಲ್ಲಿ ಗಣಿಗಾರಿಕೆಗೆ ನೀಡಿರುವ ಅನುಮತಿಯನ್ನು ಹಿಂಪಡೆಯಬೇಕೆಂದು ಶೂನ್ಯ ವೇಳೆಯಲ್ಲಿ ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರಿಗೆ ಒತ್ತಾಯಿಸುತ್ತೇನೆ.

**(ಮುಂದು)**

**(594) 24-03-2022 (12.20) ಎಂವಿ-ಜಿಆರ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು):-** ಮಾನ್ಯ ಸಭಾಪತಿಯವರೇ, ಕೋಲಾರ ಜಿಲ್ಲೆ, ಮುಳಬಾಗಿಲು ತಾಲ್ಲೂಕು, ದೇವರಾಯಸಮುದ್ರ ಗ್ರಾಮದ ಸರ್ವೇ ನಂ.199ರ ಪ್ರದೇಶವು, ಗೋಮಾಳ ಪ್ರದೇಶವಾಗಿದೆ. ಆ ಗೋಮಾಳ ಪ್ರದೇಶದಲ್ಲಿ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮ 1994ರ ಪ್ರಕಾರ ಅಲ್ಲಿ ಸಂಬಂಧಪಟ್ಟಂತಹ ಕಂದಾಯ, ಅರಣ್ಯಾ ಮತ್ತು ಪರಿಸರ ವಿಮೋಚನಾ ಪತ್ರ, ತಾಂತ್ರಿಕ ವರದಿ, ಇವುಗಳೆಲ್ಲವನ್ನು ಪಡೆದು, ಸುಮಾರು 46 ಎಕರೆ ಪ್ರದೇಶದಲ್ಲಿ ಏಳು ಕಲ್ಲುಗಣಿಗಳನ್ನು ಗುತ್ತಿಗೆ ನೀಡಲಾಗಿದೆ. ಮಾನ್ಯ ಸದಸ್ಯರಿಗೆ ತಿಳಿದಿರುವಂತೆ ಅಲ್ಲಿಗೆ ಎರಡು ಕ್ರಷರ್‌ಗಳನ್ನು ಸಹ ನೀಡಲಾಗಿದೆ. "ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮ 2011 ಮತ್ತು ನಿಯಮ 2012ರ" ಪ್ರಕಾರ ಎರಡು stone crusher ಗಳಿಗೂ ಕೂಡ ಅನುಮತಿ ನೀಡಲಾಗಿದೆ. ಮಾನ್ಯ ಸದಸ್ಯರು ಮತ್ತೊಂದು ವಿಷಯವನ್ನು ತಿಳಿಸಿದ್ದು, ಅಂದರೆ ರಾಮಾಯಣದ ಇತಿಹಾಸದಲ್ಲಿ ಸೀತಾಮಾತೆ ಅಲ್ಲಿಗೆ ಬಂದಿದ್ದರು ಎಂದು. ಬಹುಶಃ ಈ ಪ್ರದೇಶ ಆ ಭಾಗದಿಂದ ಹತ್ತು ಕಿಲೋಮೀಟರ್ ಅಂತರದಲ್ಲಿದೆ. ಇವತ್ತು ಪ್ರಾಚ್ಯವಸ್ತು ಮತ್ತು ಸಂಶೋಧನಾ ಇಲಾಖೆಯವರು, ಅದನ್ನು ಸಂರಕ್ಷಣಾ ಸ್ಥಳವೆಂದು ತಿಳಿಸಿದ್ದು. ನಾವು ಸರ್ವೇ ನಂ.199ರಲ್ಲಿ ಅನುಮತಿಯನ್ನು ನೀಡಿಲ್ಲ. ಅದು ಬೇರೆ ಸರ್ವೇ ನಂಬರ್‌ನಲ್ಲಿ ಇದೆ. ಅದನ್ನೂ ಸಹ ನೀಡಿದ್ದಾರೆ. ಮಾನ್ಯ ಸದಸ್ಯರಿಗೆ ತಿಳಿದಿರುವಂತೆ ದೇವರಾಯಸಮುದ್ರದ ಗ್ರಾಮಸ್ಥರು "ಪರಿಸರ ಹಿತರಕ್ಷಣಾ ಸಮಿತಿ"ಯ ಹೆಸರಿನಲ್ಲಿ ಈಗಾಗಲೇ ಹೈ ಕೋರ್ಟ್ ಮೆಟ್ಟಿಲನ್ನು ಹತ್ತಿದ್ದಾರೆ. ಅವರು ಉಚ್ಛ ನ್ಯಾಯಾಲಯಕ್ಕೆ ಹೋದಂತಹ ಸಂದರ್ಭದಲ್ಲಿ, ಅವರ ರಿಟ್ ಅರ್ಜಿ ಕೂಡ ವಜಾವಾಗಿದೆ. ಆದುದರಿಂದ ಮಾನ್ಯ ಸದಸ್ಯರು ಹೇಳಿದ ಹಾಗೆ ಅವರು ಪುನಃ "ರಾಷ್ಟ್ರೀಯ ಹಸಿರು ಪೀಠ" ಕ್ಕೆ

ಹೋಗಿದ್ದಾರೆ. ಈಗ ಇಲ್ಲಿ ಮಾನ್ಯ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಒಂದು ಸಮಿತಿ ರಚನೆ ಮಾಡಿದ್ದಾರೆ. ಆ ಸಮಿತಿಯು ಈಗಾಗಲೇ ದಿನಾಂಕ 25.06.2021 ಮತ್ತು 15.12.2021ರಂದು ಭೇಟಿ ನೀಡಿ, ಅಲ್ಲಿ ಏನೇನು ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಬೇಕು ಅದನ್ನು ತೆಗೆದುಕೊಂಡಿದ್ದಾರೆ. ಈಗಿನ ನಿಯಮಾನುಸಾರ ಅಲ್ಲಿ ಏನೇನು ಮಾಡುವುದಕ್ಕೆ ಅಗುವುದಿಲ್ಲ.

**ಆ) ವಿಷಯ:** ಸಿ.ಟಿ.ಇ. ಮತ್ತು ಡಯಟ್‌ಗಳಲ್ಲಿನ ಇ.ಎಲ್.ಟಿ.ಸಿ. ಬೋಧಕ ಹುದ್ದೆಗಳನ್ನು ರದ್ದುಪಡಿಸಿ ಬೇರೆಡೆಗೆ ಸ್ಥಳಾಂತರಿಸುವ ಬಗ್ಗೆ.

---

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಿ.ಟಿ.ಇ. ಮತ್ತು ಡಯಟ್‌ಗಳಲ್ಲಿನ ಇ.ಎಲ್.ಟಿ.ಸಿ. (ಇಂಗ್ಲಿಷ್ ಲಾಂಗ್ವೇಜ್ ಟ್ರೈನಿಂಗ್ ಸೆಂಟರ್) ವಿಭಾಗದ ಬೋಧಕರ ಹುದ್ದೆಗಳನ್ನು ರದ್ದುಪಡಿಸಿ, ಬೇರೆಡೆಗೆ ಸ್ಥಳಾಂತರಿಸುವ ಕುರಿತು ಸರ್ಕಾರದ ಹಂತದಲ್ಲಿ ಪ್ರಕ್ರಿಯೆಯನ್ನು ಪ್ರಾರಂಭಿಸಿರುವುದು ಅವೈಜ್ಞಾನಿಕ ಕ್ರಮವಾಗಿದೆ. ಇವು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯಲ್ಲಿ (ಡಿ.ಎಸ್.ಇ.ಆರ್.ಟಿ.) ಸೃಜಿಸಲಾದ ಹುದ್ದೆಗಳಾಗಿರುತ್ತದೆ. ಈ ಹಿಂದೆ ಸದರಿ ಬೋಧಕರು ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಆಂಗ್ಲಭಾಷಾ ಕೋರ್ಸ್ ನಡೆಯುತ್ತಿದ್ದು, ಈ ಸ್ಕೀಮ್ ರದ್ದಾದ ನಂತರ ಪ್ರಸ್ತುತ ಪ್ರಾಥಮಿಕ/ಪ್ರೌಢಶಾಲಾ ಶಿಕ್ಷಕರಿಗೆ ಅಗಿಂದ್ದಾಗ್ಗೆ ಎಂಜಾಯಿಂಗ್ ಇಂಗ್ಲಿಷ್, ಬ್ರಿಟಿಷ್ ಕೌನ್ಸಿಲ್, ಇ.ಎಂ.ಟಿ.ಐ.ಪಿ. ಇಂಗ್ಲಿಷ್ ನಲಿಕಲಿ ಮುಂತಾದ ಹಲವು ತರಬೇತಿಗಳನ್ನು ನೀಡುತ್ತಿದ್ದಾರೆ. ಸಿ.ಟಿ.ಇ. ಮತ್ತು ಡಯಟ್‌ಗಳ ಸಂಸ್ಥೆಗಳಿಗೆ ಬರುವ ಶಿಕ್ಷಕರಿಗೆ ಕಾಲಕಾಲಕ್ಕೆ ನಿರಂತರವಾಗಿ ವಿವಿಧ ಕಾರ್ಯಾಗಾರ/ತರಬೇತಿಗಳನ್ನು ನಡೆಸುತ್ತಿದ್ದು, ಬಿ.ಇಡಿ., ವಿದ್ಯಾರ್ಥಿಗಳಿಗೂ ತರಬೇತಿಗಳನ್ನು ನೀಡುತ್ತಾ ಬಂದಿರುತ್ತಾರೆ. ಸದರಿಯವರನ್ನು ಸಂಪನ್ಮೂಲ ವ್ಯಕ್ತಿಗಳಾಗಿಯೂ ಬಳಕೆ ಮಾಡಿಕೊಳ್ಳಬಹುದಾಗಿದೆ. ಪ್ರಸ್ತುತ ಎನ್.ಇ.ಪಿ-2020ರ ಅಡಿಯಲ್ಲಿ ಹಲವು ತರಬೇತಿಗಳನ್ನು ಆಯೋಜಿಸುವ ಸಲುವಾಗಿ ಸದರಿ ಬೋಧಕ ಹುದ್ದೆಗಳು ಅತ್ಯಾವಶ್ಯಕವಾಗಿದೆ. ಇದರಿಂದಾಗಿ ಈ ಹುದ್ದೆಗಳಿಗೆ ವರ್ಷವಿಡೀ ಸಾಕಷ್ಟು ಕಾರ್ಯಾಭಾರ ಇರುತ್ತದೆ. ಈ ರೀತಿಯ ಹುದ್ದೆಗಳನ್ನು ಶಿಕ್ಷಣ ಇಲಾಖೆಯಲ್ಲಿ ಎಂದೂ ರದ್ದುಪಡಿಸಬಾರದು. ಆದಕಾರಣ, ಸದರಿ ಹುದ್ದೆಗಳನ್ನು ಯಾವುದೇ ಕಾರಣಕ್ಕೂ

ರದ್ದುಪಡಿಸದೆ, ಯಥಾಸ್ಥಿತಿ ಮುಂದುವರೆಸುವಂತೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರನ್ನು ಕೋರುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು ಕೇಳಿದ ಶೂನ್ಯವೇಳೆ ಪ್ರಶ್ನೆಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಕಡೆಯಿಂದ ಉತ್ತರ ಮಂಡಿಸಲಾಗುವುದು.

---

**ಇ) ವಿಷಯ:** 2018-19ನೇ ಮತ್ತು 2019-20ನೇ ಸಾಲಿನಲ್ಲಿ ಮಂಡ್ಯ ಜಿಲ್ಲೆಯಲ್ಲಿ ಪ್ರಾಯೋಜಿತ ಕಾರ್ಯಕ್ರಮಗಳ ಕಲಾವಿದರಿಗೆ ಗೌರವ ಸಂಭಾವನೆ ಪಾವತಿಸದೇ ಬಾಕಿ ಇರುವ ಬಗ್ಗೆ.

---

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಗ ಸಂಬಂಧಿಸಿದಂತೆ 2018-19 ಮತ್ತು 2019-20ನೇ ಸಾಲಿನಲ್ಲಿ ಮಂಡ್ಯ ಜಿಲ್ಲೆಯ ವಿಶೇಷ ಘಟಕ ಯೋಜನೆಯಡಿ ಪ್ರಾಯೋಜಿತ ಕಾರ್ಯಕ್ರಮಗಳ ಬಾಕಿ ಅನುದಾನ ಬಿಡುಗಡೆಯಾಗಿರುವುದಿಲ್ಲ. ಈ ಸಾಲುಗಳಲ್ಲಿ ಪ್ರಾಯೋಜಿತ ಕಾರ್ಯಕ್ರಮಗಳನ್ನು ಏರ್ಪಡಿಸಿ, ಕಲಾವಿದರಿಗೆ ಗೌರವ ಸಂಭಾವನೆ ಪಾವತಿಸದೆ ಬಾಕಿ ಇದ್ದು, 2018-19ನೇ ವಿಶೇಷ ಘಟಕ ಯೋಜನೆಯಡಿ ಪ್ರಾಯೋಗಿಕ ಕಾರ್ಯಕ್ರಮಗಳಿಗೆ 35 ಕಲಾ ತಂಡಗಳು ಪ್ರಾಯೋಜಿಸಿದ್ದು, ಈ ಕಲಾ ತಂಡಗಳಿಗೆ 7,90,000/-ರೂಪಾಯಿಗಳನ್ನು ಮತ್ತು 2019-20ನೇ ಸಾಲಿನಲ್ಲಿ ಪ್ರಾಯೋಜಿತ ಕಾರ್ಯಕ್ರಮಗಳಿಗೆ 31 ಕಲಾ ತಂಡಗಳು ಪ್ರಾಯೋಜಿಸಿದ್ದು, ಇದರ ಪೈಕಿ 5,75,000/- ರೂಪಾಯಿಗಳನ್ನು ಕಲಾ ತಂಡಗಳ ಕಲಾವಿದರಿಗೆ ಗೌರವ ಸಂಭಾವನೆಯನ್ನು ಪಾವತಿಸಲು ಬಾಕಿ ಇರುತ್ತದೆ. ಒಟ್ಟು 13,65,000/- ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ಜಿಲ್ಲೆಯ ಮಾನ್ಯ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಂಡ್ಯರವರು ನಿರ್ದೇಶಕರಿಗೆ ಪತ್ರ ಬರೆದು ಸುಮಾರು ಆರು ತಿಂಗಳು ಕಳೆದಿದ್ದರೂ ಈ ಬಗ್ಗೆ ಅನುದಾನ ಬಿಡುಗಡೆಯಾಗಿರುವುದಿಲ್ಲ.

ದಯಮಾಡಿ ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಬಗ್ಗೆ ಗಮನ ಹರಿಸಿ ಕಲಾವಿದರಿಗೆ ಬರಬೇಕಾಗಿರುವ ಬಾಕಿ ಸಂಭಾವನೆಯ ಅನುದಾನವನ್ನು ಈ ಕೂಡಲೇ ಬಿಡುಗಡೆ ಮಾಡಿಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಕೇಳಿದ ಶೂನ್ಯವೇಳೆ ಪ್ರಶ್ನೆಗೆ ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರ ಕಡೆಯಿಂದ ಉತ್ತರ ಮಂಡಿಸಲಾಗುವುದು.

**ಈ) ವಿಷಯ:** ದಕ್ಷಿಣ ಕನ್ನಡ ಜಿಲ್ಲೆ ದೇವಸ್ಥಾನಗಳ ಜಾತ್ರೋತ್ಸವದಲ್ಲಿ ಹಿಂದುಗಳೇತರರಿಗೆ ಜಾತ್ರಾ ವ್ಯಾಪಾರಕ್ಕೆ ಅವಕಾಶ ಇಲ್ಲದಿರುವ ಬಗ್ಗೆ.

---

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳು. ಇತ್ತೀಚೆಗೆ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳಾದೇವಿ ದೇವಸ್ಥಾನ, ಬೊಪ್ಪನಾಡು ದುರ್ಗಾಪರಮೇಶ್ವರಿ ದೇವಸ್ಥಾನ, ಪುತ್ತೂರು ಮಹಾಲಿಂಗೇಶ್ವರ ದೇವಸ್ಥಾನ. ಕಾಟಿಪಾಳ್ಯ ಗಣೇಶಪುರ ಮಹಾಗಣಪತಿ ದೇವಸ್ಥಾನಗಳ ಜಾತ್ರೋತ್ಸದಲ್ಲಿ ಹಿಂದುಯೇತರ ವ್ಯಾಪಾರಿಗಳಿಗೆ ಅವಕಾಶ ನೀಡದಿರಲು ಸರ್ಕಾರ ನಿರ್ಧಾರ ಕೈಗೊಳ್ಳಲಾಗಿದ್ದು, ಈ ಸಂಬಂಧ ದೇವಸ್ಥಾನದ ಮುಂಭಾಗದಲ್ಲಿ ಬ್ಯಾನರ್ ಅಳವಡಿಸಿರುವುದು ಕಂಡು ಬಂದಿರುತ್ತದೆ. ಆದರೆ, ಸುಮಾರು ೮೦೦ ವರ್ಷಗಳ ಇತಹಾಸ ಇರುವ ಬೊಪ್ಪನಾಡು ದುರ್ಗಾಪರಮೇಶ್ವರಿ ದೇವಸ್ಥಾನವನ್ನು ಮುಸ್ಲಿಂ ವ್ಯಾಪಾರಿ, ಬೊಪ್ಪುಬ್ಯಾರಿ ನಿರ್ಮಿಸಿದ್ದಾರೆ ಎಂಬುದು ಪ್ರತೀತಿ. ಮುಸ್ಲಿಂರು ಮೊದಲು ಪ್ರಸಾದವನ್ನು ಸ್ವೀಕರಿಸುವ ಅವಕಾಶ ನೀಡುವ ಅಪರೂಪದ ಸಂಪ್ರದಾಯಕ್ಕೂ ಇದು ಹೆಸರುವಾಸಿಯಾಗಿದೆ. ದೇವಸ್ಥಾನ ನಿರ್ಮಿಸಿದ ವ್ಯಕ್ತಿಯ ಗೌರವಾರ್ಥವಾಗಿ ದೇವಾಲಯದ ರಥೋತ್ಸವ ಪ್ರತಿವರ್ಷ ಇಲ್ಲಿಂದ ಪ್ರಾರಂಭವಾಗುತ್ತದೆ. ವಾರ್ಷಿಕ ಉತ್ಸವದ ಮೊದಲು, ಪ್ರಸಾದವನ್ನು ಬೊಪ್ಪುಬ್ಯಾರಿ ವಂಶಸ್ಥರಿಗೆ ನೀಡಲಾಗುತ್ತಿದೆ. ಅದಕ್ಕೆ ಪ್ರತಿಯಾಗಿ ಕುಟುಂಬದವರು ಹಣ್ಣು ಮತ್ತು ಹೂವುಗಳನ್ನು ದೇವಿಗೆ ಅರ್ಪಿಸುತ್ತಾರೆ. ಹಾಗಿದ್ದರೂ ಸಹ ಇಲ್ಲಿ ಮುಸ್ಲಿಂ ವ್ಯಾಪಾರಿಗಳಿಗೆ ನಿರ್ಬಂಧ ಹೇರಿರುವುದು ಖಂಡನೀಯ. ಅದೇ ರೀತಿ ಉಡುಪಿ ಜಿಲ್ಲೆಯ ಕಾಪುವಿನ ಮಾರಿಗುಡಿ ಜಾತ್ರೆಯಲ್ಲಿ ಮುಸ್ಲಿಂ ವ್ಯಾಪಾರಿಗಳಿಗೆ ಅನುಮತಿ ನೀಡಲಾಗಿಲ್ಲ.

**(ಈ ಹಂತದಲ್ಲಿ ವೈಸ್ ಛೇರ್ಮನ್‌ರವರಾದ ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಸಭಾಪತಿ ಪೀಠವನ್ನು ಅಲಂಕರಿಸಿದರು)**

ಪಡುಬಿದ್ರಿ ಮಹಾಲಿಂಗೇಶ್ವರದ ರಥೋತ್ಸೋವದಲ್ಲೂ ಸಹ ಮುಸ್ಲಿಂ ವ್ಯಾಪಾರಿಗಳಿಗೆ ನಿರ್ಬಂಧ ಹೇರಲಾಗಿದೆ. ಮಾರಿಗುಡಿ ಜಾತ್ರೆಯಲ್ಲಿ ಪ್ರತಿವರ್ಷ ನೂರಾರು ಮುಸ್ಲಿಂ ವ್ಯಾಪಾರಿಗಳು ಕೋಳಿ, ಐಸ್ ಕ್ರೀಂ, ಮತ್ತು ಹೂವು ಮಾರಾಟ ಮಳಿಗೆಗಳನ್ನು ಹಾಕಿಕೊಂಡು ವ್ಯಾಪಾರ ಮಾಡುತ್ತಿದ್ದರು. ಈ ವರ್ಷ ಮುಸ್ಲಿಂರ ಬದಲಾಗಿ ಹಿಂದುಗಳು ವ್ಯಾಪಾರಿ ಮಳಿಗೆಗಳನ್ನು ಹಾಕಿದ್ದಾರೆ. ದಶಕಗಳಿಂದ ಜಾತ್ರೆ, ಉತ್ಸವ ಸೇರಿದಂತೆ ಹಿಂದು ಧಾರ್ಮಿಕ ಕಾರ್ಯಕ್ರಮಗಳಲ್ಲಿ ವ್ಯಾಪಾರ ಮಾಡಿಕೊಂಡು ಬರುತ್ತಿದ್ದ, ಮುಸ್ಲಿಂ ವ್ಯಾಪಾರಿಗಳಿಗೆ ಮೊದಲ ಬಾರಿಗೆ ನಿರ್ಬಂಧ ಹೇರಲಾಗಿದೆ. ವ್ಯಾಪಾರಕ್ಕೆ ಅವಕಾಶ ನೀಡುವಂತೆ, ಬೀದಿಬದಿ ವ್ಯಾಪಾರಿಗಳು ಹಾಗೂ ಜಾತ್ರೆ ವ್ಯಾಪಾರಿಗಳ ಒಕ್ಕೂಟದ ಕಾರ್ಯದರ್ಶಿ ಕಾಪು ಮಾರಿಗುಡಿ ದೇವಸ್ಥಾನದ ಆಡಳಿತ ಮಂಡಳಿಗೆ ಮನವಿ ಮಾಡಿದ್ದರೂ ಸಹ ಪ್ರಯೋಜವಾಗಿರುವುದಿಲ್ಲ. ಒಕ್ಕೂಟದಲ್ಲಿ ಎಲ್ಲಾ ಜಾತಿ ಧರ್ಮಗಳಿಗೆ ಸೇರಿದ ಸಾವಿರಕ್ಕೂ ಹೆಚ್ಚು ವ್ಯಾಪಾರಿಗಳಿದ್ದು, ಅದರಲ್ಲಿ ಆರುನೂರಕ್ಕೂ ಹೆಚ್ಚು ಮುಸ್ಲಿಂರಿದ್ದಾರೆ. ಕೋಮು ಸಂಘರ್ಷದಿಂದ ಮುಸ್ಲಿಂ ವ್ಯಾಪಾರಿಗಳ ಜೀವನ ಬೀದಿ ಬದಿಗೆ ಬರಲಿದೆ. ಕೊಲ್ಲೂರಿನ ಮೂಕಾಂಬಿಕಾ ದೇವಸ್ಥಾನದ ಜಾತ್ರೆ ಮಹೋತ್ಸವದಲ್ಲಿ ಅನ್ಯ ಮತೀಯರಿಗೆ ವ್ಯಾಪಾರ ನಡೆಸಲು ಅವಕಾಶ ನೀಡಬಾರದು ಎಂಬ ವಿಶ್ವಹಿಂದು ಪರಿಷತ್ ಮತ್ತು ಬಜರಂಗದಳದ ವತಿಯಿಂದ ಮನವಿ ನೀಡಿರುವ ಬಗ್ಗೆ ಪತ್ರಿಕೆಯಲ್ಲಿ ವರದಿಯಾಗಿದೆ. ಸಮಾಜದಲ್ಲಿ ಈ ರೀತಿಯ ಕೋಮುಸಂಘರ್ಷದ ವಾತಾವರಣ ನಿರ್ಮಾಣವಾಗುತ್ತಿದ್ದರೂ ಸಹ ಸರ್ಕಾರವು ಏನು ಕ್ರಮವಹಿಸಿದೆ ಎಂದು ತಿಳಿದಿಲ್ಲ. ಆದುದರಿಂದ ಈ ವಾತಾವರಣಕ್ಕೆ ಅವಕಾಶ ನೀಡದೆ, ಸಮಾಜದಲ್ಲಿ ಶಾಂತಿ ಕಾಪಾಡುವಂತೆ, ಜಾತ್ರೆಯಲ್ಲಿ ಮುಸ್ಲಿಂ ವ್ಯಾಪಾರಿಗಳಿಗೆ ಯಾವುದೇ ರೀತಿಯ ನಿರ್ಬಂಧ ಹೇರಬಾರದು ಎಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಇದು ಜಗಜ್ಯೋತಿ ಬಸವಣ್ಣನವರ ಮತ್ತು, ರಾಷ್ಟ್ರಕವಿ ಕುವೆಂಪುರವರ ನಾಡು. ದಯವಿಟ್ಟು ಅವರು ವಿಧಾನಸಭೆಯಲ್ಲಿ ನೀಡಿರುವ ಉತ್ತರವನ್ನು ನೋಡಿದ್ದೇನೆ.

**(ಮುಂದು)**

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(595) 24.03.2022 12.30 LL-MD (GR)

**(ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಸಿ.ಎಂ. ಇಬ್ರಾಹಿಂ(ಮುಂದು):-**

ನಮ್ಮ ನಾಡು ಶ್ರೀ ಬಸವಣ್ಣನವರ ಹಾಗೂ ಕುವೆಂಪುರವರ ನಾಡು. ನಿನ್ನೆಯ ದಿವಸ ಮಾನ್ಯ ಸಚಿವರು ಕೆಳಮನೆಯಲ್ಲಿ, "ಈ ಹಿಂದೆ ಮಾಡಿದಂತಹ ಕಾನೂನು" ಎಂದು ನೀಡಿದ ಉತ್ತರವನ್ನು ನೋಡಿರುತ್ತೇನೆ.

**ವೈಸ್ ಛೇರ್ಮನ್:-** ಮಾನ್ಯ ಇಬ್ರಾಹಿಂರವರೇ, ಶೂನ್ಯವೇಳೆಯಲ್ಲಿ ಚರ್ಚೆ ಮಾಡುವಂತಿಲ್ಲ.

**ಶ್ರೀ ಸಿ.ಎಂ. ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಅನ್ಯರ ಡೊಂಕನ್ನು ನೀವೇಕೇ ತಿದ್ದುವಿರಿ, ನಿಮ್ಮ ನಿಮ್ಮ ತನುವ ಸಂತೈಯಿಸಿಕೊಳ್ಳಿ, ನಿಮ್ಮ ನಿಮ್ಮ ಮನವ ಸಂತೈಯಿಸಿಕೊಳ್ಳಿ. ಈ ಹಿಂದೆ ಆಗಿರುವಂತಹ ಕಾನೂನನ್ನು ಕೈಬಿಡಬೇಕು. ಈಗ ಹೊಸ ಪರಂಪರೆಯನ್ನು ಹಾಕಿ, ನಮಗೂ ಕೂಡ ಹಣ್ಣು ವ್ಯಾಪಾರ ಮಾಡುವುದಕ್ಕೆ ಹಾಗೂ ಅದರಿಂದ ಎರಡು ಹೊತ್ತು ಊಟ ಮಾಡುವುದಕ್ಕೆ ಅವಕಾಶ ನೀಡಬೇಕೆಂದು ಕೋರುತ್ತೇನೆ.

**ಶ್ರೀ ಜೆ.ಸಿ. ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ಸರ್ಕಾರ 'ರೂಲ್ ಆಫ್ ಲಾ ಮೇಲೆ' ನಡೆಯುತ್ತದೆ. 2002ನೇ ಇಸವಿಯಲ್ಲಿ the Karnataka Hindu Religious Institutions and Charitable Endowments Act ಮೇಲೆ ರೂಲ್ಸ್ ಮಾಡಿದಾಗ, ರೂಲ್ಸ್‌ನಲ್ಲಿ ಬಹಳ ಸ್ಪಷ್ಟವಾಗಿ, "ಸಂಸ್ಥೆಯ ಸಮೀಪದ ಜಮೀನು, ಕಟ್ಟಡ ಅಥವಾ ನಿವೇಶನಗಳು ಸೇರಿದಂತೆ ಯಾವುದೇ ಸ್ವತ್ತನ್ನು ಹಿಂದೂಗಳಲ್ಲದೇ ಇರುವವರಿಗೆ ಗುತ್ತಿಗೆ ನೀಡತಕ್ಕದ್ದಲ್ಲ" ಎಂದು ಕಾನೂನು ಮಾಡಲಾಗಿರುತ್ತದೆ. ಈಗ ದೇವಸ್ಥಾನದ ಆಡಳಿತ ಮಂಡಳಿಯವರು ಈ ಕಾನೂನನ್ನು ಹಿಡಿದುಕೊಂಡು ಎಂಡೋಮೆಂಟ್ಸ್ ರೂಲ್‌ನಲ್ಲಿದೆ, how can we give opportunity ಎಂದು ತಡೆಹಿಡಿದಿರುತ್ತಾರೆ. ಈ ಕಾನೂನನ್ನು ನಾವು ತರುವುದಕ್ಕೆ ಹೋಗಿರುವುದಿಲ್ಲ. All Endowment

Religious Institutions ಅವರು ಇವೊತ್ತಿನ ದಿವಸ ಈ ಕಾಯಿದೆ ಮತ್ತು ನಿಯಮಗಳ ಪುಸ್ತಕ ಇಟ್ಟುಕೊಂಡು, "ನೀವೇ ಮಾಡಿರುವ ಕಾಯಿದೆ ಮತ್ತು ನೀವೇ ಮಾಡಿರುವ ನಿಯಮಗಳ ಕೆಳಗೆ ನಾವು ತಡೆಯುತ್ತಿದ್ದರೆ, ತಾವು ಹೇಗೆ ಅಡ್ಡಿ ಮಾಡುತ್ತೀರೆಂದು, ಕಾನೂನು ಮತ್ತು ಸುವ್ಯವಸ್ಥೆ ಎಂದು ಏನು ಕರೆಯುತ್ತೀರೆಂದು" ಎಂದು ಹೇಳುತ್ತಾರೆ. This is not against the law nor rules. ಆದರೂ ಕೂಡ ನಾನು ನಿನ್ನೆಯ ದಿವಸ ಕೆಳಮನೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ನಾನು ಉತ್ತರ ನೀಡುವಾಗ ಹೇಳಿರುತ್ತೇವೆ. ಅಕಸ್ಮಾತ್ ಆ ದೇವಸ್ಥಾನದ ಆವರಣದಲ್ಲಿ ಅಲ್ಲದೇ ಏನಾದರೂ ಬೇರೆ ಜಾಗಗಳಲ್ಲಿ ತಡೆ ಮಾಡುತ್ತಿದ್ದರೆ ನಾವು ಅಂತಹವರ ವಿರುದ್ಧ ಕ್ರಮ ಜರುಗಿಸುತ್ತೇವೆ. ಆದರೆ, ಇದರಲ್ಲಿ ನಾವು ಯಾರು ಇರುವುದಿಲ್ಲ. ಆದರೆ, 2002ರಲ್ಲಿ ಈ ಬಗ್ಗೆ ಕಾನೂನು ಆಗಿರುತ್ತದೆ.

**ಶ್ರೀ ಪ್ರಕಾಶ್ ಕೆ. ರಾಥೋಡ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಆ ಕಾನೂನನ್ನು ಬದಲಾವಣೆ ಮಾಡಲಿ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ,

**ವೈಸ್ ಛೇರ್ಮನ್:-** ಶೂನ್ಯ ವೇಳೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿರುವುದಿಲ್ಲ.

**ಶ್ರೀ ಸಲೀಂ ಅಹಮದ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದು ಕೇವಲ ದೇವಸ್ಥಾನದಲ್ಲಿ ಮಾತ್ರವಲ್ಲದೇ, ಬೇರೆ ಬೇರೆ ಜಿಲ್ಲೆಗಳಗೆ ಹರಡುತ್ತಿದೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಹೌದು. ನಾನು ಸಹ ಅದನ್ನೇ ಹೇಳುತ್ತಿದ್ದೇನೆ. ಏನೋ ಒಂದು ಒಳ್ಳೆಯ ಕೆಲಸ ಮಾಡುವುದಕ್ಕೆ ಹೋದಾಗ, ಅದಕ್ಕೆ ವಿರುದ್ಧವಾದ ಕೆಲಸಗಳು ಆಗುವುದು ಜಾಸ್ತಿಯಾಗುತ್ತಿವೆ. ಈ ಬಗ್ಗೆ ನಾವು ಚರ್ಚೆ ಮಾಡುತ್ತೇವೆ.

**ವೈಸ್ ಛೇರ್ಮನ್:-** ಮಾನ್ಯ ಸಲೀಂ ಅಹಮದ್‌ರವರೇ, ಶೂನ್ಯ ವೇಳೆಯಲ್ಲಿ ಚರ್ಚೆಗೆ ಅವಕಾಶವಿರುವುದಿಲ್ಲ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ಇದು ಬಹಳ ಪ್ರಮುಖವಾದ ವಿಚಾರವಾಗಿದೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಇವೊತ್ತಿನ ನಿಯಮದ ಪ್ರಕಾರ ಸರ್ಕಾರ ಆ ಸಂಸ್ಥೆಗಳ ವಿರುದ್ಧ ಕ್ರಮ ತೆಗೆದುಕೊಳ್ಳುವಂತಹ ಸ್ಥಿತಿಯಲ್ಲಿ ಇರುವುದಿಲ್ಲ. ಆದರೆ, ದೇವಸ್ಥಾನದ ಆವರಣ ಹೊರತುಪಡಿಸಿ ಬೇರೆ ಕಡೆ ತಡೆಯುತ್ತಿದ್ದರೆ ಅಂತಹ ಸಂಸ್ಥೆಯ ವಿರುದ್ಧ ಖಂಡಿತವಾಗಿಯೂ ಸಹ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಸಿ.ಎಂ. ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಅಷ್ಟು ಮಾಡಿದರೆ ನಮಗೆ ಬಹಳ ಉಪಯೋಗವಾಗುತ್ತದೆ. ಅದೇ ರೀತಿ ಮಾನ್ಯ ಸಭಾನಾಯಕರು ಈ ವಿಚಾರದಲ್ಲಿ ಸ್ವಲ್ಪ ಮುತುವರ್ಜಿ ವಹಿಸಿ, ಇದರಲ್ಲಿ ಮಧ್ಯಪ್ರವೇಶ ಮಾಡಿದರೆ ಕೇವಲ 1 ಗಂಟೆಯಲ್ಲಿ ಈ ಸಮಸ್ಯೆ ಪರಿಹಾರವಾಗುತ್ತದೆ. ಅವರ ಮಾತನ್ನು ಎಲ್ಲರೂ ಕೇಳುತ್ತಾರೆ. ಯಾರು ಕೇಳುವುದಿಲ್ಲವೆಂದು ಹೇಳುವುದಿಲ್ಲ.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಭಾನಾಯಕರು ದೇವರ ಮಂತ್ರಿಯಾಗಿದ್ದಾರೆ. ಹಾಗಾಗಿ, ದೇವಸ್ಥಾನ ಹಾಗೂ ಇತರೆ ವಿಷಯಗಳನ್ನು ರಕ್ಷಣೆ ಮಾಡುವಂತಹ ಕೆಲಸ ಮಾಡಬೇಕು.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ಯಾರು ಈ ರೀತಿಯ ಬ್ಯಾನರ್ ಹಾಕುತ್ತಾರೆ, ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು. ಕೋಮು-ಸಾಮರಸ್ಯ ಕಾಪಾಡುವಂತಹ ಕೆಲಸ ಸರ್ಕಾರದ್ದಾಗಿರುತ್ತದೆ.

**ಶ್ರೀ ನಸೀರ್ ಅಹ್ಮದ್(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನಾನು ವಿಶೇಷವಾಗಿ ಮಾನ್ಯ ಕಾನೂನು ಮಂತ್ರಿಯವರಲ್ಲಿ ಮನವಿ ಮಾಡುವುದೇನೆಂದರೆ, ಈ ರೀತಿಯ ಘಟನೆ ನಿನ್ನೆಯ ದಿವಸ ಚಿಕ್ಕಪೇಟೆಯಲ್ಲಿಯೂ ಸಹ ನಡೆದಿರುತ್ತದೆ. ಆ ಘಟನೆ ಸರ್ಕಾರದ ಗಮನಕ್ಕೆ ಬಂದಿದೆಯೋ ಅಥವಾ ಇಲ್ಲವೋ ಅದು ನನಗೆ ಗೊತ್ತಿರುವುದಿಲ್ಲ. ಹಾಗಾಗಿ, ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಸರ್ಕಾರದಿಂದ ಒಂದು ಆದೇಶವನ್ನು ಕೊಡಬೇಕೆಂದು ಮನವಿ ಮಾಡುತ್ತಿದ್ದೇನೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, as it is there in the existing rule, ನಾವು ದೇವಸ್ಥಾನದ ಆವರಣದಲ್ಲಿ ತಡೆ ಮಾಡುತ್ತಿರುವವರ ವಿರುದ್ಧ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶ ಇರುವುದಿಲ್ಲ. ಆ ವಿಷಯದಲ್ಲಿ ನಾನು ಸ್ಪಷ್ಟವಾಗಿರುತ್ತೇನೆ. ಆದರೆ, ದೇವಸ್ಥಾನದ ಆವರಣದ ಹೊರಗಡೆ ಏನಾದರೂ ಈ ಕಾನೂನನ್ನು ಉಪಯೋಗ ಮಾಡಿ, ದುರುಪಯೋಗಪಡಿಸಿದ್ದರೆ ನಾವು ಅಂತಹವರ ವಿರುದ್ದ ಖಂಡಿತವಾಗಿಯೂ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಸಿ.ಎಂ. ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಈ ಬಗ್ಗೆ ಪೊಲೀಸ್‌ರವರಿಗೆ ಒಂದು ಆದೇಶ ಕೊಡಲಿ.

**ಉ) ವಿಷಯ:-** ಬೀದರ್ ಜಿಲ್ಲೆಯಲ್ಲಿರುವ ಪಾಪಾನಾಶ ಲಿಂಗೇಶ್ವರ ದೇವಸ್ಥಾನ ಕಟ್ಟಡ ಶಿಥಿಲಾವಸ್ಥೆಯಲ್ಲಿರುವ ಬಗ್ಗೆ

- - -

**ಶ್ರೀ ಅರವಿಂದ ಕುಮಾರ್ ಅರಳಿ(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. ಇತಿಹಾಸ ಪ್ರಸಿದ್ಧವಾಗಿರುವ ಮತ್ತು ಪೌರಾಣಿಕ ಕ್ಷೇತ್ರಗಳಾಗಿರುವ ಬೀದರ್ ಜಿಲ್ಲೆಯ ಹೆಮ್ಮೆಯ ದೇವಸ್ಥಾನಗಳಾಗಿರುವ ಶ್ರೀ ಪಾಪನಾಶಲಿಂಗ ದೇವಸ್ಥಾನ ಮತ್ತು ನರಸಿಂಹ ಝುರಣಿ ದೇವಸ್ಥಾನಗಳು ಇಂದು ಶಿಥಿಲ ಸ್ಥಿತಿಯಲ್ಲಿ ಬಂದು ನಿಂತಿದೆ. ಇತಿಹಾಸ ಕೆದಕಿ ನೋಡಿದರೆ ಈ ಎರಡು ದೇವಸ್ಥಾನಗಳಲ್ಲಿ ಭವ್ಯವಾದ ಇತಿಹಾಸ ಇದೆ. ಆದರೆ, ಇಂದು ಈ ದೇವಸ್ಥಾನಗಳು ಜೀರ್ಣೋದ್ಧಾರಕ್ಕಾಗಿ ಕೈ ಮಾಡಿ ಕರೆಯುತ್ತಿವೆ.

ಶ್ರೀ ಪಾಪನಾಶಲಿಂಗ ದೇವಸ್ಥಾನದಲ್ಲಿ ವರ್ಷವಾರು 365 ದಿನಗಳಲ್ಲಿ ಹರಿವ ನೀರು ಕುಂಡದಲ್ಲಿ ಶೇಖರಣೆಯಾಗುತ್ತಿತ್ತು. ಆ ನೀರಿನಲ್ಲಿ ಮುಳಗಿದರೆ ಪಾಪ ಪರಿಹಾರವಾಗುತ್ತದೆ ಎಂಬ ಭಾವನೆ ಭಕ್ತಾದಿಗಳಲ್ಲಿದೆ. ಈಗ ಇಲ್ಲಿ ನೀರೇ ಬರುತ್ತಿಲ್ಲ. ಕಾರಣ ಹರಿದು ಬರುವ ನೀರಿನ ಸುರಂಗ ಮಾರ್ಗವನ್ನು ಸಾರ್ವಜನಿಕರು ಅಡಚಣೆ ಮಾಡಿ ಕಚ್ಚಾವಸ್ತುಗಳು, ಹಾಳಾದ ಸಾಮಗ್ರಿಗಳನ್ನು ಎಸೆದು ಹರಿಯುವ ನೀರನ್ನು ಬಂದ್ ಮಾಡಿರುತ್ತಾರೆ.

ಅದೇ ರೀತಿಯಾಗಿ, ಶ್ರೀ ನರಸಿಂಹ ದೇವಸ್ಥಾನದಲ್ಲಿ ಒಂದು ಫರ್ಲಾಂಗ್ ವರೆಗೆ ಎದೆಯ ಮಟ್ಟದ ನೀರಲ್ಲಿ ಹೋಗಿ ದೇವರ ದರ್ಶನ ಪಡೆಯುತ್ತಿದ್ದರು. ಆದರೆ, ಈಗ ಇಲ್ಲಿ ಕೆಲವೇ ದಿನಗಳವರೆಗೆ ನೀರು ಬರುತ್ತಿದ್ದು, ಬೇರೆ ದಿನಗಳಲ್ಲಿ ನೀರೇ ಬರುವುದಿಲ್ಲ. ಸುರಂಗ ಮಾರ್ಗದ ಬಫರ್ ಝೋನ್‌ನಲ್ಲಿ ಖಾಸಗಿಯವರು ಬೋರ್‌ವೆಲ್ ಹಾಕಿ ಮನೆಕಟ್ಟಿಕೊಂಡು ನೀರು ಬರುವುದನ್ನು ತಡೆ ಒಡ್ಡಿದ್ದಾರೆ.

ಈ ಎರಡು ಪುಣ್ಯ ಕ್ಷೇತ್ರಗಳಿಗೆ ನೆರೆಯ ರಾಜ್ಯಗಳಾದ ತೆಲಂಗಾಣ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರಗಳಿಂದ ಸಾವಿರಾರು ಭಕ್ತಾದಿಗಳು ಭೇಟಿ ನೀಡುತ್ತಾರೆ. ಆದ್ದರಿಂದ, ಈ ಎರಡೂ ಕ್ಷೇತ್ರಗಳ

ಜೀರ್ಣೋದ್ಧಾರಕ್ಕಾಗಿ ಸರ್ಕಾರ ಕ್ರಮ ಕೈಗೊಂಡು ಭಕ್ತಾದಿಗಳ ಸಹಾಯಕ್ಕೆ ಬರಬೇಕೆಂದು ಶೂನ್ಯ ವೇಳೆಯಲ್ಲಿ ಸರ್ಕಾರಕ್ಕೆ ತಮ್ಮ ಮೂಲಕ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಅರವಿಂದ ಕುಮಾರ್ ಅರಳಿಯವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವರಿಂದ ನಂತರ ಉತ್ತರ ಒದಗಿಸಲಾಗುವುದು.

**ಊ) ವಿಷಯ:- ಬೆಂಗಳೂರು ನಗರದ ಕಂಬಿಪುರ ಗ್ರಾಮದಲ್ಲಿ ಹರಿಯುತ್ತಿರುವ ವೃಷಭಾವತಿ ನದಿಗೆ ಖಾಸಗಿ ಕಟ್ಟಡ ಮಾಲೀಕರು ಅವಶೇಷಗಳನ್ನು ಸುರಿದು ಕೃಷಿ ಜಮೀನುಗಳಿಗೆ ಕೊಳವೆ ನೀರು ಹೋಗಿರುವ ಬಗ್ಗೆ**

– – –

**ಶ್ರೀ ಹೆಚ್.ಎಸ್. ಗೋಪಿನಾಥ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ವೃಷಭಾವತಿ ತ್ಯಾಜ್ಯ ಘಟಕದಿಂದ ರೈತರ ಜಮೀನಿಗೆ ಹರಿಯುತ್ತಿರುವ ತ್ಯಾಜ್ಯ ಕೊಳಚೆ ನೀರಿನಿಂದ ಬೆಳೆಹಾಳು ಬಗ್ಗೆ ಬೆಂಗಳೂರು ನಗರದ ಮಧ್ಯಭಾಗದಲ್ಲಿ ಹರಿಯುತ್ತಿರುವ ವೃಷಭಾವತಿ ನದಿಯ ಬೆಂಗಳೂರು ಖಾಸಗಿ ಲೇಔಟ್ ಮಾಲೀಕರು ಕಟ್ಟಡ ನಿರ್ಮಾಣ ಅವಶೇಷಗಳನ್ನು ರಾತ್ರೋರಾತ್ರಿ ಸುರಿಯುತ್ತಿರುವುದರಿಂದ, ನದಿಯಿಂದ ಸುತ್ತಮುತ್ತಲಿನ ಕೃಷಿ ಜಮೀನುಗಳಿಗೆ ಕೊಳಚೆ ನೀರು ನುಗ್ಗಿ ರೈತರು ತೀವ್ರ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಕಂಬಿಪುರ ಗ್ರಾಮದ ಸರ್ವೆ ನಂಬರ್: 170ರಲ್ಲಿ ಅಕ್ರಮವಾಗಿ ಕಟ್ಟಡ ತ್ಯಾಜ್ಯ ಸುರಿಯಲಾಗಿದೆ.

ಆ ಕಟ್ಟಡದ ಅವಶೇಷಗಳು ಸುಮಾರು 20 ಅಡಿ ಎತ್ತರ ಮತ್ತು ಸುಮಾರು 700 ಅಡಿ ಅಗಲವಿರುತ್ತದೆ. ರೈತರ ಜಮೀನುಗಳಿಗೆ ತ್ಯಾಜ್ಯ ನೀರು ಸೇರಿರುವುದರಿಂದ ಸುಮಾರು 1 ಎಕರೆ ಹಾಳಾಗಿ 30 ರಿಂದ 40 ಮರಗಳು ಕೊಚ್ಚಿ ಹೋಗಿರುತ್ತವೆ ಎಂದು ನದಿಯ ಪಕ್ಕದ ಜಮೀನನ್ನು ಹೊಂದಿರುವ ಸಣ್ಣ ರೈತರು ತಮ್ಮ ಅಳಲು ತೋಡಿಕೊಂಡಿರುತ್ತಾರೆ. ಈ ಸಮಸ್ಯೆಯ ಕುರಿತು

ಜಿಲ್ಲಾಧಿಕಾರಿಗಳ ಸಹಿತ, ಸ್ಥಳೀಯ ಅಧಿಕಾರಿಗಳ ಗಮನಕ್ಕೆ ತಂದರೂ ಸಹ ಯಾರು ಸಹ ಕ್ರಮ ಕೈಗೊಂಡಿರುವುದಿಲ್ಲ ಎಂದು ನಾಗರಿಕರು ದೂರಿರುತ್ತಾರೆ. ಅಧಿಕಾರಿಗಳು ಮೂಕಪ್ರೇಕ್ಷಕರಂತೆ ಕುಳಿತಿರುವ ಕಾರಣ ಅಕ್ರಮ ಕಟ್ಟಡ ತ್ಯಾಜ್ಯ ಸುರಿಯುವ ಲೇಔಟ್ ಮಾಲೀಕರು ಅದನ್ನು ಮುಂದುವರೆಸಿದ್ದಾರೆ. ಇತ್ತೀಚೆಗೆ ವೈದ್ಯಕೀಯ ತ್ಯಾಜ್ಯವನ್ನು ಸಹ ನದಿಗೆ ಸುರಿಯಲಾಗಿದೆ ಎಂದು ನಾಗರಿಕರು ದೂರಿರುತ್ತಾರೆ. ಲೇಔಟ್ ಮಾಲೀಕರು ಎಲ್ಲಾ ರೀತಿಯ ತ್ಯಾಜ್ಯ ನದಿಗೆ ಸುರಿಯುತ್ತಿರುವುದರಿಂದ ಕೊಳಚೆ ನೀರು ಜಮೀನಿಗೆ ಸೇರಿ 20 ತೆಂಗಿನ ಮರಗಳು ಹಾಗೂ ಒಂದು ಎಕರೆ ಜಮೀನನ್ನು ಕಳೆದುಕೊಂಡಿದ್ದೇನೆಂದು ರೈತ ದೂರಿದ್ದಾನೆ. "ಮಳೆಗಾಲದಲ್ಲಿ ಜಮೀನು ಸಂಪೂರ್ಣವಾಗಿ ತ್ಯಾಜ್ಯದಿಂದ ತುಂಬಿರುತ್ತದೆ. ಆದುದರಿಂದ, ನಾವು ಆ ಜಮೀನಿನಲ್ಲಿ ಏನನ್ನು ಬೆಳೆಯುವುದಕ್ಕೆ ಸಾಧ್ಯವಿಲ್ಲ, ನಮ್ಮ ಕುಟುಂಬಕ್ಕೆ ಕೃಷಿಯೇ ಮೂಲ ಆದಾಯ" ಎಂದು ರೈತರು ತಿಳಿಸಿರುತ್ತಾರೆ.

ಲೇಔಟ್ ಮಾಲೀಕರು ರಾಜಕಾರಣಿಗಳ ಹೆಸರು ಹೇಳಿಕೊಂಡು ನಮಗೆ ಬೆದರಿಕೆ ಹಾಕುತ್ತಿದ್ದಾರೆಂದು ರೈತರು ಆರೋಪಿಸಿದ್ದಾರೆ. ಕಂಬಿಪುರ ಗ್ರಾಮದ ಸರ್ವೆ ನಂಬರ್: 171ರಲ್ಲಿ ಅಕ್ರಮವಾಗಿ ಕಟ್ಟಡ ತ್ಯಾಜ್ಯ ಸುರಿಯಲಾಗಿದೆ. ಈ ಅವಶೇಷಗಳು ಸುಮಾರು 20 ಅಡಿ ಎತ್ತರ ಮತ್ತು ಸುಮಾರು 700 ಅಡಿ ಅಗಲವಿರುತ್ತದೆ. ಸರ್ವೆ ನಂಬರ್:6 ರಲ್ಲಿ ಜಮೀನು ಸಂಪೂರ್ಣವಾಗಿ ಕೊಳಚೆ ನೀರಿನಿಂದ ಆವೃತವಾಗಿರುತ್ತದೆ. ಇಲ್ಲಿಗೆ 15 ತೆಂಗಿನ ಮರಗಳು ಮತ್ತು ಅಡಕೆ ಮರಗಳನ್ನು ಕಳೆದುಕೊಂಡಿರುತ್ತಾರೆ. ಈ ಭಾಗದ ಸುಮಾರು 10 ಜನ ರೈತರು ಈ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ರೈತರ ದೂರುಗಳಿಗೆ ಯಾವ ಒಬ್ಬ ಅಧಿಕಾರಿಯು ಸ್ಪಂದಿಸುತ್ತಿಲ್ಲ. ಹಾಗಾಗಿ, ತಪ್ಪಿತಸ್ಥರ ವಿರುದ್ಧ ಕಟ್ಟುನಿಟ್ಟಿನ ಅಗತ್ಯ ಕ್ರಮ ಕೈಗೊಳ್ಳಬೇಕಾಗಿ ಸರ್ಕಾರವನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಹೆಚ್.ಎಸ್. ಗೋಪಿನಾಥ್‌ರವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಮುಖ್ಯಮಂತ್ರಿಯವರಿಂದ ನಂತರ ಉತ್ತರ ಒದಗಿಸಲಾಗುವುದು.

**ಖ) ವಿಷಯ:-** ಪಾವಗಡದ ಅಪಘಾತದ ಹಿನ್ನೆಲೆಯಲ್ಲಿ ಬೆಳಗ್ಗೆ ಮತ್ತು ಪೀಕ್ ಅವರ್‌ನಲ್ಲಿ ಸರ್ಕಾರಿ ಬಸ್‌ಗಳ ಟ್ರಿಪ್ ಹೆಚ್ಚು ಮಾಡುವ ಬಗ್ಗೆ

- - -

**ಶ್ರೀ ಕೆ. ಹರೀಶ್ ಕುಮಾರ್(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ದಿನಾಂಕ:19.03.2022ರಂದು ಪಾವಗಡದಲ್ಲಿ ಸಂಭವಿಸಿದ ರಸ್ತೆ ಅಪಘಾತದ ನಂತರ ವಿಜಯ ಕರ್ನಾಟಕ ಪತ್ರಿಕೆಯವರು ರಾಜ್ಯದ ಹಲವು ಭಾಗಗಳಲ್ಲಿ ರಿಯಾಲಿಟಿ ಚೆಕ್ ನಡೆಸಿದ್ದು, ಅದರ ಸಂಪೂರ್ಣ ವರದಿ ದಿನಾಂಕ:22.03.2022ರ ಪತ್ರಿಕೆಯಲ್ಲಿ ಪ್ರಕಟಗೊಂಡಿರುತ್ತದೆ.

ಎಲ್ಲರಿಗೂ ತಿಳಿದಂತೆ, ಸಕಾಲದಲ್ಲಿ ಬೇಕಾದಷ್ಟು ಬಸ್‌ಗಳು ಇಲ್ಲದೇ ಇರುವುದರಿಂದ ಅದರಲ್ಲಿಯೂ ಪೀಕ್ ಅವರ್‌ನಲ್ಲಿ ಅಂದರೆ, ಕಛೇರಿ ಆರಂಭ ಮತ್ತು ಮುಕ್ತಾಯದ ಸಮಯ, ಶಾಲಾ ಆರಂಭ ಮತ್ತು ಮುಕ್ತಾಯದ ಸಮಯಗಳಲ್ಲಿ ಅಧಿಕ ಒತ್ತಡ ಉಂಟಾಗಿ ಪ್ರಯಾಣಿಕರು ಅನಿವಾರ್ಯವಾಗಿ ಸಿಕ್ಕ ಸಿಕ್ಕ ವಾಹನಗಳ ಟಾಪ್‌ನಲ್ಲಿ ಕುಳಿತು, ವಾಹನ ಹಿಂಭಾಗ ನೇತಾಡಿಕೊಂಡು ಪ್ರಯಾಣಿಸಬೇಕಾದ ಸ್ಥಿತಿ ರಾಜ್ಯದ ಹಲವೆಡೆ ಇದೆ. ಸಣ್ಣ ಪುಟ್ಟ ಮಕ್ಕಳು ಬಸ್‌ಗಳ ಫುಟ್‌ಬೋರ್ಡ್‌ಗಳಲ್ಲಿ ಅಪಾಯಕಾರಿಯಾಗಿ ನೇತಾಡಿಕೊಂಡು ಸಾಗುವ ಚಿತ್ರಗಳು ಭಯ ಹುಟ್ಟಿಸುತ್ತಿವೆ. ಇದಕ್ಕೆಲ್ಲಾ ಕಾರಣ ರಾಜ್ಯ ರಸ್ತೆ ಸಾರಿಗೆ ನಿಗಮದವರು ಜನರ ಅಗತ್ಯಕ್ಕೆ ತಕ್ಕಂತೆ ಬಸ್‌ಗಳನ್ನು ಓಡಿಸದೇ ಇರುವುದು ಸಮಸ್ಯೆ ಮೂಲವಾಗಿದೆ. ವಯಸ್ಕ ಹೆಣ್ಣುಮಕ್ಕಳ ಪಾಡಂತೂ ಹೇಳತೀರದು. ಜೀವ ಮತ್ತು ದೌರ್ಜನ್ಯ ಎರಡನ್ನೂ ರಕ್ಷಿಸಿಕೊಂಡು ಪ್ರಯಾಣ ಮಾಡಬೇಕಾಗಿದೆ.

ಪಾವಗಡದಂತಹ ಪ್ರಕರಣ ನಿನ್ನೆ ಮೊನ್ನೆಯದಲ್ಲ. ಇದೇ ರೀತಿಯ ಹತ್ತಾರು ಪ್ರಕರಣಗಳು ಈ ರಾಜ್ಯದಲ್ಲಿ ಸಂಭವಿಸಿವೆ. ಪ್ರಕರಣ ಘಟಿಸಿದಾಗಲಷ್ಟೇ ಕ್ರಮ ಕೈಗೊಳ್ಳುವ ಸರ್ಕಾರ ತದನಂತರದಲ್ಲಿ ಯಥಾಸ್ಥಿತಿಗೆ ಅಂದರೆ, ಖಾಸಗಿ ಬಸ್‌ಗಳ ಸಂಚಾರಕ್ಕೆ ಅನುವು ಮಾಡಿಕೊಡುತ್ತಲೇ ಬಂದಿದೆ.

ವಿಜಯಕರ್ನಾಟಕ ಪತ್ರಿಕೆಯ ರಿಯಾಲಿಟಿ ಚೆಕ್‌ನಲ್ಲಿ ಮಾನ್ಯ ಸಾರಿಗೆ ಸಚಿವರ ಕ್ಷೇತ್ರದಲ್ಲೇ ಖಾಸಗಿ ಬಸ್‌ಗಳು ನಿಯಮ ಮೀರಿ ಸಂಚರಿಸುವುದು, ಮಿತಿ ಮೀರಿದ ಪ್ರಯಾಣಿಕರನ್ನು ಕರೆದೊಯ್ಯುವುದು ನಿರಂತರವಾಗಿದೆ. ಗ್ರಾಮೀಣ ಭಾಗವಾದ ಮೊಳಕಾಲ್ಮೂರು ತಾಲ್ಲೂಕಿನ ರೊಪ್ಪ, ಮಾಚೇನಹಳ್ಳಿ, ಎಸ್. ಹನುಮಾಪುರ ಇಂತಹ ಕಡೆಗಳಲ್ಲಿ ಬಸ್ ಸೌಕರ್ಯ ಇಲ್ಲದಿರುವುದು ವರದಿಯಾಗಿದ್ದು, ಇಲ್ಲಿ ಬೆರಳಣಿಕೆಯಷ್ಟೇ ಕೆ.ಎಸ್.ಆರ್.ಟಿ.ಸಿ. ಬಸ್‌ಗಳು ಸಂಚರಿಸುತ್ತಿದ್ದು, ಜನ ಆಟೋರಿಕ್ಷಾ, ಕ್ರೂಸರ್, ಲಗೇಜ್ ಆಟೋಗಳನ್ನು ಆಶ್ರಯಿಸಿದ್ದಾರೆ. ಇಂತಹ ಪರಿಸ್ಥಿತಿ ರಾಮನಗರ, ತುಮಕೂರು, ಕೊಡಗು, ಬೆಳಗಾವಿ, ಚಿತ್ರದುರ್ಗ, ಚಿಕ್ಕಬಳ್ಳಾಪುರ, ವಿಜಯಪುರ, ಕೊಪ್ಪಳ ಹೀಗೆ ರಾಜ್ಯದ ಎಲ್ಲಾ ಕಡೆಗಳಲ್ಲೂ ಇದೆ.

ಆದಕಾರಣ, ಸರ್ಕಾರ ಹೆಚ್ಚು ಹೆಚ್ಚು ಬಸ್‌ಗಳನ್ನು ಬೆಳಗ್ಗೆ ಮತ್ತು ಸಂಜೆ ಪೀಕ್ ಅವರ್‌ನಲ್ಲಿ ವ್ಯವಸ್ಥೆ ಮಾಡಬೇಕು. ಸರಕಾರಿ ಬಸ್‌ಗಳ ಟ್ರಿಪ್ ಸಂಖ್ಯೆಗಳನ್ನು ಹೆಚ್ಚು ಮಾಡಬೇಕು. ಗ್ರಾಮೀಣ ಭಾಗಗಳಲ್ಲಿ ಬಸ್‌ಗಳ ಸಂಚಾರ ಕೊರತೆಯನ್ನು ತಗ್ಗಿಸುವ ಸಲುವಾಗಿ ಅಧ್ಯಯನ ಕೈಗೊಂಡು ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಮಾನ್ಯ ಕೆ. ಹರೀಶ್ ಕುಮಾರ್‌ರವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರಿಂದ ನಂತರ ಉತ್ತರ ಒದಗಿಸಲಾಗುವುದು.

(ಮುಂದು)

---

(596) 24.03.2022 12.40 ವೈಎಲ್-ಎಂಡಿ (ಜಿಆರ್)

(ವೈಸ್‌ಛೇರ್ಮನ್‌ರವರ ಉಪಸ್ಥಿತಿ)

**ಎ) ವಿಷಯ:- ವಿಜಯಪುರ, ಬಾಗಲಕೋಟೆ, ಗದಗ, ಕಲಬುರಗಿ, ಯಾದಗಿರಿ ಜಿಲ್ಲೆಗಳಲ್ಲಿ ಹಿಮೋಫಿಲಿಯಾ ರೋಗಕ್ಕೆ ಸಾರ್ವಜನಿಕರಿಗೆ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಿಸುವ ಬಗ್ಗೆ.**

*****

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಕರ್ನಾಟಕದ ವಿಜಯಪುರ, ಬಾಗಲಕೋಟೆ, ಗದಗ, ಕಲಬುರಗಿ, ಯಾದಗಿರಿ ಜಿಲ್ಲೆಗಳಲ್ಲಿ ಮಕ್ಕಳಲ್ಲಿ ಕೆಂಪು ರಕ್ತಕಣಗಳನ್ನು ಗೊತ್ತಿಲ್ಲದಂತೆ ಮಾಯವಾಗಿಸುವ "ಥಲಸೀಮಿಯಾ" ಹಾಗೂ ಅಧಿಕ ರಕ್ತಸ್ರಾವ ಉಂಟು ಮಾಡುವ "ಹಿಮೋಫಿಲಿಯಾ" ರೋಗಗಳು ಗೊತ್ತಿಲ್ಲದಂತೆ ಈ ಭಾಗದ ನೂರಾರು ಕುಟುಂಬಗಳನ್ನು ಹಣ್ಣಾಗಿಸುತ್ತಿರುವ ದುರಂತದ ಬಗ್ಗೆ ದಿನಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ.

ಈ ಎರಡೂ ರೋಗಗಳು ಮೇಲ್ಕಂಡ ಜಿಲ್ಲೆಗಳಲ್ಲಿ ಮಿತಿ ಮೀರಿದ್ದು, ರೋಗಪೀಡಿತರ ಬಗ್ಗೆ ದತ್ತಾಂಶ ಸಂಗ್ರಹಿಸಿ ಸಮಗ್ರ ಅಧ್ಯಯನ ಮತ್ತು ಸಮೀಕ್ಷೆಗಳನ್ನು ನಡೆಸಿ ನೋಡಲ್ ಕೇಂದ್ರಗಳನ್ನು ತೆರೆಯುವುದರ ಮೂಲಕ ಅಗತ್ಯವಿರುವ ತಂತ್ರಜ್ಞಾನವನ್ನು ಅಳವಡಿಸುವಲ್ಲಿ ಸರ್ಕಾರ ವಿಫಲವಾಗಿರುತ್ತದೆ. ಸರ್ಕಾರದ ಯೋಜನೆಗಳು ಕೇವಲ ಸರ್ಕಾರಿ ಆಸ್ಪತ್ರೆಗಳಿಗಷ್ಟೇ ಸೀಮಿತವಾಗಿದ್ದು, ಕೆಲವು ನಿರ್ದಿಷ್ಟ ಯೋಜನೆಗಳನ್ನು ಖಾಸಗಿ ಆಸ್ಪತ್ರೆ, ಮೆಡಿಕಲ್ ಕಾಲೇಜುಗಳಿಗೂ ವಿಸ್ತರಿಸುವ ಮೂಲಕ ರೋಗಪೀಡಿತ ಮಕ್ಕಳ ನೆರವಿಗೆ ಸರ್ಕಾರ ಧಾವಿಸಬೇಕಾಗಿದೆ.

ಈ ರೋಗಗಳು ಲಂಬಾಣಿ, ಮರಾಠ, ಸಿಂಧಿ, ವಿಶ್ವಕರ್ಮ ಸೇರಿ ಹಲವು ಸಮುದಾಯಗಳಲ್ಲಿನ ಕೆಲ ಕುಟುಂಬಗಳಲ್ಲಿ ಕಾಣಿಸಿಕೊಳ್ಳುವ ಜೀನ್ಸ್‌ನಲ್ಲಿನ ದೋಷದಿಂದಾಗಿ ಕಂಡುಬಂದಿರುವುದು ತಿಳಿದುಬಂದಿರುತ್ತದೆ. ರಕ್ತ ಸಂಬಂಧದಲ್ಲಿ ಮದುವೆಯಾದರೆ ಅಂಥವರ ಮಕ್ಕಳಲ್ಲಿ ಥಲಸೀಮಿಯಾ

ಕಂಡುಬರುತ್ತದೆ. ಹಿಮೋಫಿಲಿಯಾ ಎಂಬುದು ಕೇವಲ ಗಂಡು ಮಕ್ಕಳಲ್ಲಷ್ಟೇ ಕಂಡುಬರುವ ರೋಗವಾಗಿದೆ. ಈ ರೋಗಗಳು ಕಾಣಿಸಿಕೊಂಡವರಲ್ಲಿ ರಕ್ತಕಣಗಳ ಕೊರತೆ ಉಂಟಾಗಲಿದ್ದು, ಕಿಡ್ನಿ, ಹೃದಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಇದರಿಂದ ಜೀವಿತಾವಧಿ ಪ್ರಮಾಣ ಸಹ ಕಡಿಮೆಯಾಗಲಿದೆ. ಮಾನವೀಯ ಕಳಕಳಿಯಿಂದ ಹಲವು ಸರ್ಕಾರೇತರ ಸಂಘ-ಸಂಸ್ಥೆಗಳು ಈ ರೋಗ ಪೀಡಿತ ಮಕ್ಕಳಿಗೆ ಉಚಿತ ಸೇವೆಯನ್ನು ಒದಗಿಸುತ್ತಾ ಬಂದಿರುವುದು ಶ್ಲಾಘನೀಯ ಸಂಗತಿಯಾಗಿದೆ.

ಉತ್ತರ ಕರ್ನಾಟಕ ಭಾಗದಲ್ಲಿ ಈ ರೋಗಗಳು ಹೆಚ್ಚು ಕಾಣಿಸಿಕೊಳ್ಳುವುದರಿಂದ ಚಿಕಿತ್ಸೆಗಾಗಿ ರಾಜಧಾನಿ ಬೆಂಗಳೂರನ್ನೆ ಅವರು ಆಶ್ರಯಿಸುವ ಬದಲು ಪ್ರತ್ಯೇಕ ನೋಡಲ್ ಕೇಂದ್ರಗಳನ್ನು ಆ ಭಾಗದಲ್ಲಿ ಸ್ಥಾಪಿಸುವ ಬಗ್ಗೆ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಡಾ॥ ಕೆ.ಸುಧಾಕರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ ಹಾಗೆ ವಿಜಯಪುರ, ಬಾಗಲಕೋಟೆ, ಗದಗ, ಕಲಬುರಗಿ, ಯಾದಗಿರಿ ಜಿಲ್ಲೆಗಳಲ್ಲಿ ಮಕ್ಕಳಲ್ಲಿ ಕಂಡು ಬರುವ "ಥಲಸೀಮಿಯಾ" ಎನ್ನುವಂಥ ಸೋಂಕಿನಿಂದ ಕೆಂಪು ರಕ್ತಕಣಗಳು ಬಹಳ ಕಡಿಮೆಯಾಗುತ್ತದೆ. ಅದೇ ರೀತಿ "ಹಿಮೋಫಿಲಿಯಾ" ಕೂಡಾ ಅಧಿಕ ರಕ್ತಸ್ರಾವ ಉಂಟು ಮಾಡುವ ಖಾಯಿಲೆಯಾಗಿದೆ. ಇದು ವಿಶೇಷವಾಗಿ ಉತ್ತರ ಕರ್ನಾಟಕದ ನಾಲ್ಕೈದು ಜಿಲ್ಲೆಗಳಲ್ಲಿ ಕಂಡುಬಂದಿದೆ. ಈ ರೋಗಗಳಿಗೆ ಬೆಂಗಳೂರಿನಲ್ಲಿರುವ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಸಂಪೂರ್ಣವಾಗಿ ಮತ್ತು ಸಮಗ್ರವಾಗಿ ಉಚಿತ ಚಿಕಿತ್ಸೆ ನೀಡಲಾಗುತ್ತಿದೆ. ಆದರೆ, ಆ ಜಿಲ್ಲೆಗಳಲ್ಲಿ ವಿಶೇಷವಾಗಿರುವಂಥ ಕಾಳಜಿಯನ್ನು ವಹಿಸಬೇಕಾಗಿದೆ ಮತ್ತು ಆ ಜಿಲ್ಲೆಯಲ್ಲಿಯೇ ಪರ್ಯಾಯ ವ್ಯವಸ್ಥೆಯನ್ನು ಮಾಡಬೇಕೆಂದು ಮಾನ್ಯ ಸದಸ್ಯರು ಸಲಹೆಯನ್ನು ನೀಡಿದ್ದು, ಅವರ ಸಲಹೆಯನ್ನು ಸ್ವಾಗತ ಮಾಡುತ್ತೇನೆ. ಆ ಜಿಲ್ಲೆಯಲ್ಲಿ ನಮ್ಮ ಯಾವ ವೈದ್ಯಕೀಯ ಕಾಲೇಜುಗಳಿವೆ, ಅಲ್ಲಿ ಸದ್ಯಕ್ಕೆ Day Care Center ಮಾಡುತ್ತಿದ್ದೇವೆ. ಆದರೆ,

ಇದಕ್ಕೆ ಉತ್ಕೃಷ್ಟವಾಗಿ, ಸಮಗ್ರವಾಗಿ ಚಿಕಿತ್ಸೆ ನೀಡಲು ಅಲ್ಲಿನ ಆಸ್ಪತ್ರೆಗಳಲ್ಲಿ ವ್ಯವಸ್ಥೆ ಮಾಡುವುದು ಮತ್ತು ವಿಶೇಷ ಸೆಂಟರ್‌ಗಳನ್ನು ಮಾಡುವಂಥದು ನಮ್ಮ ವೈದ್ಯಕೀಯ ಕಾಲೇಜುಗಳಲ್ಲಿ ಮಾಡುವಂಥದಾಗಿದ್ದು, ನಮ್ಮ ಹಿರಿಯ ಅಧಿಕಾರಿಗಳನ್ನು ಕರೆಸಿಕೊಂಡು ಸಭೆ ನಡೆಸಿ ಇದರ ಬಗ್ಗೆ ಕ್ರಮಕೈಗೊಳ್ಳುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ,

**ಸಭಾಪತಿಯವರು:-** ಮಾನ್ಯ ಸದಸ್ಯರೆ ಶೂನ್ಯ ವೇಳೆಯ ಪ್ರಸ್ತಾವಗಳ ಬಗ್ಗೆ ಚರ್ಚೆಗೆ ಅವಕಾಶ ಇರುವುದಿಲ್ಲ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಬಡವರಿಗೆ ಚಿಕಿತ್ಸೆಗೆ ಭರಿಸಲು ಹಣ ಇರುವುದಿಲ್ಲ. ಹಾಗಿರುವಾಗ ಅವರು ಬೆಂಗಳೂರಿನವರೆಗೂ ಹೇಗೆ ಬರಬೇಕು? ಹಾಗಾಗಿ ಆ ಜಿಲ್ಲೆಗಳಲ್ಲಿಯೇ ವ್ಯವಸ್ಥೆ ಮಾಡಿಕೊಡಬೇಕೆಂದು ಮನವಿ ಮಾಡುತ್ತೇನೆ.

**ಡಾ॥ ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಆಗಲಿ ವ್ಯವಸ್ಥೆ ಮಾಡಿಸಿಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

---

**ಏ) ವಿಷಯ:- ಬೆಂಗಳೂರು ನಗರದ ಮಂಗನಹಳ್ಳಿಯ ಸೇತುವೆ ಬಳಿ ಇರುವ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಸ್ಫೋಟಗೊಂಡು ಶಿವರಾಜ್ ಮತ್ತು ಚೈತನ್ಯ ಇವರುಗಳಿಗೆ ಬೆಂಕಿ ತಗುಲಿ ಮೃತರಾಗಿರುವ ಬಗ್ಗೆ.**

*********

**ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬೆಂಗಳೂರಿನಲ್ಲಿ ಮಗಳ ಮದುವೆಗೆ ಛತ್ರ ಬುಕ್ ಮಾಡಲು ಪುತ್ರಿ ಜೊತೆ ದ್ವಿಚಕ್ರ ವಾಹನದಲ್ಲಿ ಹೋಗುವಾಗ ಟ್ರಾನ್ಸ್‌ಫಾರ್ಮರ್ ಸ್ಫೋಟಗೊಂಡು ಬೆಂಕಿ ತಗುಲಿದ ಪರಿಣಾಮ ಮಂಗನಹಳ್ಳಿ ಶಿವರಾಜ್ (55) ಮೃತಪಟ್ಟಿದ್ದು, ಪುತ್ರಿ ಚೈತನ್ಯ (19) ಗಂಭೀರವಾಗಿ ಗಾಯಗೊಂಡಿರುವ ಬಗ್ಗೆ ಇಂದಿನ ಉದಯವಾಣಿ ಪತ್ರಿಕೆಯಲ್ಲಿ ಪ್ರಕಟವಾಗಿರುತ್ತದೆ.

ಮಂಗನಹಳ್ಳಿಯಲ್ಲಿ ವಾಸವಾಗಿದ್ದ ಶಿವರಾಜ್ ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದು, ಮಗಳು ಚೈತನ್ಯಳ ಮದುವೆಗೆ ಸಿದ್ಧತೆ ಮಾಡಿಕೊಂಡಿದ್ದರು. ಇತ್ತೀಚೆಗೆ ಎಂಗೇಜ್‌ಮೆಂಟ್ ಕೂಡ ಮುಗಿದಿತ್ತು. ಈ ಹಿನ್ನೆಲೆಯಲ್ಲಿ ಬುಧವಾರ, ದಿನಾಂಕ: 23.03.2022 ರಂದು ಮಧ್ಯಾಹ್ನ ತಂದೆ ಮತ್ತು ಮಗಳು ದ್ವಿಚಕ್ರ ವಾಹನದಲ್ಲಿ ಕಲ್ಯಾಣ ಮಂಟಪ ಬುಕ್ ಮಾಡಲು ಹೋಗಿ ಮರಳಿ ಬರುವಾಗ ಮಂಗನಹಳ್ಳಿಯ ಸೇತುವೆ ಬಳಿ ಟ್ರಾನ್ಸ್‌ಫಾರ್ಮರ್ ಸ್ಫೋಟಗೊಂಡ ಪರಿಣಾಮ ಟ್ರಾನ್ಸ್‌ಫಾರ್ಮರ್‌ನ ಕೆಲ ತುಂಡುಗಳು ಸಿಡಿದು ತಂದೆ ಮತ್ತು ಮಗಳು ಇಬ್ಬರ ಮುಖ, ಎದೆ ಹಾಗೂ ದೇಹದ ಇತರೆ ಭಾಗಗಳಿಗೆ ಗಂಭೀರವಾಗಿ ಪೆಟ್ಟು ಬಿದ್ದಿದ್ದು ಅಲ್ಲದೇ, ಇಬ್ಬರಿಗೂ ಬೆಂಕಿ ಕೂಡ ಹೊತ್ತಿಕೊಂಡಿದೆ.

ಶೇಕಡ ೯೦ ರಷ್ಟು ಸುಟ್ಟ ಗಾಯಗಳಿಂದ ನಡು ರಸ್ತೆಯಲ್ಲಿ ನರಳುತ್ತಿದ್ದ ತಂದೆ ಮತ್ತು ಮಗಳನ್ನು ಸ್ಥಳೀಯರು ಕೂಡಲೇ ಆಂಬುಲೆನ್ಸ್ ಮೂಲಕ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಿದ್ದಾರೆ. ದ್ವಿಚಕ್ರ ವಾಹನವು ಸಂಪೂರ್ಣ ಸುಟ್ಟು ಹೋಗಿದೆ.

ರಾತ್ರಿ ಹೊತ್ತಿಗೆ ಚಿಕಿತ್ಸೆ ಫಲಕಾರಿಯಾಗದೆ ಶಿವರಾಜ್ ಮೃತಪಟ್ಟಿದ್ದಾರೆ. ಪುತ್ರಿ ಚೈತನ್ಯ ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ಅವರ ಸ್ಥಿತಿ ಗಂಭೀರವಾಗಿದೆ ಎಂದು ವೈದ್ಯರು ಮಾಹಿತಿ ನೀಡಿರುವ ಬಗ್ಗೆ ಪೊಲೀಸ್ ಮೂಲಗಳು ತಿಳಿಸಿವೆ.

ಘಟನೆಗೂ ಮೊದಲು ಮಧ್ಯಾಹ್ನ 12.30ರ ಸುಮಾರಿಗೆ ಟ್ರಾನ್ಸ್‌ಫಾರ್ಮರ್‌ನಲ್ಲಿ ದಟ್ಟವಾದ ಹೊಗೆ ಕಾಣಿಸಿಕೊಂಡಿದನ್ನು ಗಮನಿಸಿದ ದರ್ಶನ್ ಮತ್ತು ಜಯರಾಮ್ ಎಂಬುವವರು ಬೆಸ್ಕಾಂ ಸಹಾಯವಾಣಿಗೆ ದೂರು ನೀಡಿದ್ದರೂ ಸಹ ಸುಮಾರು ಒಂದೂವರೆ ಗಂಟೆಯಾದರೂ ಯಾರು ಸ್ಥಳಕ್ಕೆ ಬಂದಿಲ್ಲ. ಅದೇ ವೇಳೆ ಈ ದುರ್ಘಟನೆ ನಡೆದಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಸಂಜೆ 5 ಗಂಟೆ ಸುಮಾರಿಗೆ ಬೆಸ್ಕಾಂ ಸಹಾಯವಾಣಿಯಿಂದ ಕರೆ ಮಾಡಿದ ಸಿಬ್ಬಂದಿ, ಟ್ರಾನ್ಸ್‌ಫಾರ್ಮರ್ ಸರಿಯಾಗಿದೆಯೇ? ಎಂದು ದೂರುದಾರರಿಗೆ ಪ್ರಶ್ನಿಸಿದ್ದಾರೆ. ಅಷ್ಟರಲ್ಲಿ ಈ ದುರ್ಘಟನೆ ಕಂಡ ದೂರುದಾರರು ಸಹಾಯವಾಣಿ ಸಿಬ್ಬಂದಿಗೆ ಜೀವ ಹೋದ ಮೇಲೆ ಬಂದು ಏನು ಮಾಡುತ್ತೀರಿ? ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ. ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕೆ ಬಂದು ಬೆಂಕಿ ನಂದಿಸಿದ್ದಾರೆ.

ಘಟನೆ ನಡೆಯುವ ಮೊದಲೇ ದೂರು ನೀಡಿದ್ದರೂ ಸಹ ನಿರ್ಲಕ್ಷ್ಯ ತೋರಿರುವುದು ಸ್ಪಷ್ಟವಾಗಿ ಕಾಣುತ್ತದೆ. ಆದ್ದರಿಂದ ಈ ಘಟನೆಗೆ ನೇರ ಹೊಣೆಯಾಗಿರುವ ಬೆಸ್ಕಾಂ ಅಧಿಕಾರಿಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ.

**ಶ್ರೀ ಎಲ್.ಸುನೀಲ್ ಕುಮಾರ್ (ಇಂಧನ, ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೇ, ಬೆಂಗಳೂರಿನ ಮಂಗನಹಳ್ಳಿಯಲ್ಲಿ ನಿನ್ನೆ ದಿವಸ ಮಧ್ಯಾಹ್ನ ನಡೆದ ಘಟನೆ ಅತ್ಯಂತ ವಿಷಾದನೀಯವಾದುದಾಗಿದೆ. ಆ ರೀತಿ ಆಗಬಾರದಿತ್ತು ಎನ್ನುವುದು ನಮ್ಮೆಲ್ಲರ ಅಭಿಪ್ರಾಯವಾಗಿದೆ. "ಪವಿತ್ರ" ಎಂಬ ಶಾಲೆಯ ಬಳಿ ಇರುವ 250 ಕೆ.ವಿ.ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್ ನಿನ್ನೆ ದಿವಸ ಸ್ಫೋಟಗೊಂಡು, ತಂದೆ ಮತ್ತು ಮಗಳು ಮೃತರಾಗಿದ್ದಾರೆ. ತಂದೆ ಮಧ್ಯಾಹ್ನದೊಳಗೆ ಮೃತರಾದರೆ, ಮಗಳು ಮಧ್ಯ ರಾತ್ರಿಯಲ್ಲಿ ಸುಟ್ಟಗಾಯಗಳಿಂದ ಮೃತರಾಗಿದ್ದಾರೆ ಎಂದು ವರದಿ ಬಂದಿದೆ. 250

ಕೆ.ವಿ., radiator ನಲ್ಲಿರುವ ಲೀಡ್ ವೈಯರ್ ಸುಟ್ಟು ಆಯಿಲ್ ಲೀಕ್ ಆಗಿ, ನಂತರ ಇಡೀ ಟ್ರಾನ್ಸ್‌ಫಾರ್ಮರ್ ಬ್ಲಾಸ್ಟ್ ಆಗಿರುವುದು ನಮ್ಮ ಕಣ್ಣಿಗೆ ಕಂಡುಬಂದಿದೆ. ಸುಮಾರು 12 ಗಂಟೆ 50 ನಿಮಿಷಕ್ಕೆ ಸಾರ್ವನಿಕರು 1912 ಗೆ ಕರೆ ಮಾಡಿ, "ಟ್ರಾನ್ಸ್‌ಫಾರ್ಮರ್‌ನಲ್ಲಿ ಹೊಗೆ ಬರುತ್ತಿದೆ, ತಕ್ಷಣ ಕ್ರಮ ಕೈಗೊಳ್ಳಬೇಕೆಂದು" ದೂರನ್ನು ನೀಡಿದ್ದಾರೆ. 1912 ಗೆ ದೂರು ಬಂದ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಕಾಲ್ ಸೆಂಟರ್‌ನಿಂದ ಮಾಹಿತಿ ಹೋಗಿದೆ. ಆದರೆ, ತಕ್ಷಣವೇ ನಮ್ಮ ಅಧಿಕಾರಿಗಳು ಕ್ರಮಕೈಗೊಂಡಿದ್ದರೆ, ಆ ರೀತಿ ಆಗುತ್ತಿರಲಿಲ್ಲ ಎನ್ನುವಂಥ ಅಭಿಪ್ರಾಯ ಸಹ ಇದೆ.

ನಮ್ಮ ಇಲಾಖೆಯಲ್ಲಿ ಈ ರೀತಿ ಅವಘಡ ಸಂಭವಿಸಿದರೆ 5.00 ಲಕ್ಷ ರೂಪಾಯಿ ಪರಿಹಾರ ನೀಡುವಂಥ ಯೋಜನೆ ಇದೆ. 03 ಗಂಟೆ 10 ನಿಮಿಷಕ್ಕೆ ಆ ಟ್ರಾನ್ಸ್‌ಫಾರ್ಮರ್ ಬ್ಲಾಸ್ಟ್ ಆಗಿದ್ದು, ವಿಪರೀತ ಗಾಯ ಅವರಿಬ್ಬರ ಮೇಲೆ ಆಗಿ ಮೃತಪಟ್ಟಿರುವುದರಿಂದ ನಮ್ಮ ಇಲಾಖೆ ಅನುಕಂಪವನ್ನು ತೋರಿಸಿ 10 ಲಕ್ಷ ರೂಪಾಯಿ ಪರಿಹಾರ ಘೋಷಣೆ ಮಾಡುತ್ತಿದ್ದೇವೆ. ಇದೊಂದು ವಿಶೇಷವಾದ ಪ್ರಕರಣವೆಂದು ತೀರ್ಮಾನ ಕೈಗೊಂಡಿದ್ದೇವೆ. ಅದೇ ಕ್ಷೇತ್ರದವರಾದ ಮಾನ್ಯ ಎಸ್.ಟಿ.ಸೋಮಶೇಖರ್‌ರವರು ನಿನ್ನೆ ರಾತ್ರಿ ಕರೆ ಮಾಡಿ, ಈ ರೀತಿ ಘಟನೆ ಸಂಭವಿಸಿದ್ದು, ಏನಾದರೂ ಪರಿಹಾರ ನೀಡಬೇಕೆಂದು ಒತ್ತಾಯ ಮಾಡಿದರು. ಈ ಸಂಬಂಧ ನಾನು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ್ ಬೊಮ್ಮಾಯಿಯವರೊಂದಿಗೂ ಚರ್ಚೆ ಮಾಡಿ, ಅವರಿಬ್ಬರಿಗೂ ತಲಾ ರೂ.5 ಲಕ್ಷದಂತೆ 10 ಲಕ್ಷ ರೂಪಾಯಿ ಘೋಷಣೆ ಮಾಡುತ್ತಿದ್ದೇವೆ. ಇಂತಹ ಘಟನೆ ಆಗಬಾರದಾಗಿತ್ತು. ಎಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವಂತೆ ಇಲಾಖಾಧಿಕಾರಿಗಳಿಗೆ ಪದೇ ಪದೇ ಹೇಳುತ್ತಲೇ ಇರುತ್ತೇವೆ. ಆದರೆ, ಅಲ್ಲೊಂದು, ಇಲ್ಲೊಂದು ಈ ರೀತಿಯ ಘಟನೆ ನಡೆಯುತ್ತಿದೆ. ಈಗಾಗಲೇ ತುರ್ತಾಗಿ ಸಭೆ ನಡೆಸಿ, ಬೆಂಗಳೂರಿನಲ್ಲಿ ಈ ರೀತಿಯಾಗಿ ಅಪಾಯದಲ್ಲಿರುವ ಟಿ.ಸಿ.,ಗಳ ಬಗ್ಗೆ ಆಡಿಟ್ ಮಾಡಬೇಕೆಂದು ಆದೇಶ ನೀಡಿದ್ದೇನೆ. ಇನ್ನು ಮುಂದೆ ಆ ರೀತಿ ಘಟನೆಗಳು ಸಂಭವಿಸದಂತೆ ಎಲ್ಲೆಲ್ಲಿ ಎಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತದೆಯೋ, ಅಲ್ಲಿ ಆ ರೀತಿಯ ಕ್ರಮಗಳನ್ನು ಕೈಗೊಳ್ಳುತ್ತೇವೆ. ಬೆಂಗಳೂರಿನ ಪಾದಚಾರಿ ಮಾರ್ಗಗಳಲ್ಲಿ 15 ವರ್ಷಗಳಿಗಿಂತ ಮೇಲ್ಪಟ್ಟ ಅವಧಿಯಲ್ಲಿ ಟಿ.ಸಿ. ಗಳು ಅಳವಡಿಸಿರುವ ಬಗ್ಗೆ ಕ್ರಮವಹಿಸಬೇಕು ಮತ್ತು ಅಪಾಯದಲ್ಲಿರುವ

ಟಿ.ಸಿ., ಗಳ ಬಗ್ಗೆ ಆಡಿಟ್ ಮಾಡಬೇಕು ಎಂದು ತಿಳಿಸಿದ್ದೇನೆ. ಆ ಆಡಿಟ್ ವರದಿ ಬಂದ ತಕ್ಷಣವೇ ಅದಕ್ಕೆ ಅವಶ್ಯಕವಿರುವ ಸೂಕ್ತ ಕ್ರಮವನ್ನು ಕೈಗೊಳ್ಳಬೇಕೆಂದು ಸೂಚನೆ ನೀಡಲಾಗಿದೆ. ಆ ವರದಿ ಬಂದ ನಂತರ ಅವೆಲ್ಲವನ್ನೂ ಸರಿಪಡಿಸುತ್ತೇವೆ. ಹಾಗೆಯೇ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಸದಸ್ಯರು ಹೇಳಿದ್ದು, ಅದಕ್ಕೆ ಸಂಬಂಧಿಸಿದಂತೆ ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಮಾತನಾಡಿ, ತಕ್ಷಣ ಕ್ರಮ ಕೈಗೊಳ್ಳುತ್ತೇನೆ.

**ಐ) ವಿಷಯ:- ರಾಷ್ಟ್ರೀಯ ಆರೋಗ್ಯ ಅಭಿಯಾನದಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿರುವ 676 ಆಯುಷ್ ವೈದ್ಯರಿಗೆ ಕನಿಷ್ಟ ವೇತನ ನಿಗದಿ ಮಾಡದಿರುವ ಬಗ್ಗೆ.**

*****

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ);-** ಮಾನ್ಯ ಸಭಾಪತಿಯವರೇ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರಾಷ್ಟ್ರೀಯ ಆರೋಗ್ಯ ಅಭಿಯಾನದ (ಎನ್.ಎಚ್.ಎಮ್) ಅಡಿಯಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ರಾಜ್ಯದ 676 ಆಯುಷ್ ವೈದ್ಯರಿಗೆ ಕನಿಷ್ಟ ವೇತನವೂ ಸಿಗದೆ ಸಂಕಷ್ಟದಲ್ಲಿ ಜೀವನ ನಡೆಸುವ ಪರಿಸ್ಥಿತಿ ಎದುರಾಗಿದೆ.

ಸಮುದಾಯ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿ ಎನ್.ಎಚ್.ಎಮ್., ಅಡಿಯಲ್ಲಿ 16 ವರ್ಷಕ್ಕೂ ಹೆಚ್ಚು ಕಾಲದಿಂದ ಸೇವೆ ಸಲ್ಲಿಸುತ್ತಿರುವ ಆಯುಷ್ ವೈದ್ಯರಿಗೆ ಕನಿಷ್ಟ ವೇತನ ನೀಡದೆ ಸೇವೆ ಪಡೆಯಲಾಗುತ್ತಿದೆ. ಆರೋಗ್ಯ ಇಲಾಖೆಯಲ್ಲಿ ಗುತ್ತಿಗೆ ಆಧಾರದಲ್ಲಿ ನೇಮಕಗೊಂಡಿರುವ ಅಲೋಪಥಿ (ಎಂ.ಬಿ.ಬಿ.ಎಸ್.,) ವೈದ್ಯರಿಗೆ ತಿಂಗಳಿಗೆ ರೂ.45000 ವೇತನ ಜೊತೆಗೆ ಸರ್ಕಾರದ ಎಲ್ಲಾ ಸೇವಾ ಸೌಲಭ್ಯ ನೀಡಲಾಗುತ್ತಿದೆ. ಆದರೆ ಆಯುಷ್ ಇಲಾಖೆ ಅಡಿ ಸೇವೆ ಸಲ್ಲಿಸುತ್ತಿರುವ ಗುತ್ತಿಗೆ ವೈದ್ಯರಿಗೆ ಮಾಸಿಕ ರೂ.20,790 ರಿಂದ ರೂ.32,887 ವೇತನ ಮಾತ್ರ ನೀಡಲಾಗುತ್ತಿದೆ. ಆದರೆ, ಕನಿಷ್ಟ ವೇತನ ಕಾಯ್ದೆ ಪ್ರಕಾರ ಆಯುಷ್ ವೈದ್ಯರಿಗೆ ರೂ.40,000 ಮಾಸಿಕ ವೇತನ ನೀಡಬೇಕಾಗಿದೆ. ಈ ಹಿನ್ನಲೆಯಲ್ಲಿ ಗುತ್ತಿಗೆ ವೈದ್ಯರ ತಾರತಮ್ಯ ನಿವಾರಿಸಲು ರೂ.45,000 ಗಳ ಕನಿಷ್ಟ ವೇತನ ನೀಡುವಂತೆ ದಿನಾಂಕ:

05.08.2021 ರಂದು ಕೇಂದ್ರದ ಎನ್.ಎಚ್.ಎಮ್., ನಿರ್ದೇಶಕಿ ಡಾ: ಆರುಂಧತಿ ಚಂದ್ರಶೇಖರ್ ಇವರು ಪತ್ರ ಬರೆದಿದ್ದರೂ ಇಲ್ಲಿಯವರೆಗೆ ವೇತನ ಹೆಚ್ಚಳವಾಗಿರುವುದಿಲ್ಲ.

ಆದ್ದರಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು ಕೇಂದ್ರದ ಮೇಲೆ ಒತ್ತಡ ತಂದು ಆಯುಷ್ ವೈದ್ಯರಿಗೆ ಆಗಿರುವ ವೇತನ ತಾರತಮ್ಯವನ್ನು ಸರಿಪಡಿಸಲು ಸೂಕ್ತ ಕ್ರಮ ಜರುಗಿಸಬೇಕೆಂದು ತಮ್ಮ ಮೂಲಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರಿಗೆ ಒತ್ತಾಯಿಸುತ್ತೇನೆ.

(ಮುಂದು)

(597) 24.03.2022/12.50/ಎಸ್‌ಕೆ- ಎಕೆ

**(ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಡಾ. ಕೆ. ಸುಧಾಕರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ವೈದ್ಯಕೀಯ ಶಿಕ್ಷಣ ಸಚಿವರು):-**

ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವ ಹಾಗೇ, ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಗುತ್ತಿಗೆ ಆಧಾರದ ಮೇಲೆ ವೈದ್ಯರನ್ನು ಮತ್ತು ಆರೋಗ್ಯ ಸಿಬ್ಬಂದಿಯವರನ್ನು ತೆಗೆದುಕೊಳ್ಳುತ್ತೇವೆ. ಗುತ್ತಿಗೆ ಆಗುವಂತಹ ಸಂದರ್ಭದಲ್ಲಿ, ಅವರು ಅದರ ಒಪ್ಪಿಗೆ ಪಡೆದುಕೊಂಡೇ ಮಾಡಿಕೊಂಡಿರುತ್ತಾರೆ. ಅದು stipulated time ಗೆ ಮಾತ್ರ. It is not a permanent post. ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಕೇಂದ್ರ ಸರ್ಕಾರ ತೆಗೆದುಕೊಂಡಿರುತ್ತದೆ. ಅದು ಅಲ್ಲಿಯವರೆಗೂ ಕಾರ್ಯಕ್ರಮ ಇರುತ್ತದೆ. ಆ ಕಾರ್ಯಕ್ರಮವಾದ ಮೇಲೆ, ನಾವು ಅದನ್ನು ಮುಂದುವರೆಸುವುದಕ್ಕೆ ಆಗುವುದಿಲ್ಲ. ಅದಕ್ಕೋಸ್ಕರವೇ ಗುತ್ತಿಗೆಗೆ ಕೊಡುವಂತಹದ್ದು. ಇವತ್ತು ಸುಮಾರು 676 ಜನ ಆಯುಷ್ ವೈದ್ಯರಿದ್ದಾರೆಂದು ಹೇಳಿದ್ದಾರೆ. ಸುಮಾರು 676 ಜನ ಆಯುಷ್ ವೈದ್ಯರೆಲ್ಲರೂ ಕೂಡ ಒಂದು ಸಂಘ ಮಾಡಿ, ಮೊನ್ನೆ ತಾನೇ ಹಿರಿಯ ಸದಸ್ಯರಾಗಿರುವಂತಹ ಮಾನ್ಯ

ಆಯನೂರು ಮಂಜುನಾಥ್‌ರವರು ಅವರ ಜೊತೆಯಲ್ಲಿ ಕೂಡ ಎಲ್ಲಾ ಪ್ರತಿನಿಧಿಗಳು ಕೂಡ ಬಂದಿದ್ದರು. ಅದರ ಬಗ್ಗೆ ನಾವು ಚರ್ಚೆ ಮಾಡಿ, ಈಗಾಗಲೇ ಸಮಾಲೋಚನೆ ಮಾಡಿದ್ದೇವೆ. ಅವರ ಒಂದು ಯಾವ ರೀತಿ grievance ಇದೆ ಎನ್ನುವುದನ್ನು ನಾವು address ಮಾಡಬೇಕು ಎನ್ನುವುದರ ಬಗ್ಗೆ ಚರ್ಚೆ ಕೂಡ ಮಾಡಿದ್ದೇವೆ. ಇದರ ಜೊತೆಗೆ ಶ್ರೀನಿವಾಸಾಚಾರಿಯ ವರದಿ ಏನಿದೆ ಅದನ್ನು ಕೂಡ ನಾವು ಅಧ್ಯಯನ ಮಾಡುತ್ತಿದ್ದೇವೆ. ನಾವು ಆರ್ಥಿಕ ಇಲಾಖೆಯವರ ಜೊತೆಗೆ ಚರ್ಚೆ ಮಾಡಿ, ಇದನ್ನು ಬಗೆಹರಿಸಿಕೊಂಡು, ಇದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಮೊನ್ನೆ ಸಭೆಯಲ್ಲಿ ಇದರ ಬಗ್ಗೆ ಚರ್ಚೆ ಮಾಡಿದ್ದೇವೆ.

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ):–** ಕನಿಷ್ಠ ವೇತನದ ಬಗ್ಗೆ ಹೇಳಿ.

**ಡಾ. ಕೆ. ಸುಧಾಕರ್:–** ಮಾನ್ಯ ಸದಸ್ಯರೇ, ಅದರ ಬಗ್ಗೆ ಹೇಳುತ್ತಿದ್ದೇನೆ. ಗುತ್ತಿಗೆ ಆಧಾರದಲ್ಲಿ ಕನಿಷ್ಠ ವೇತನ ಅಂತಾ ಬರುವುದಿಲ್ಲ. ಅದಕ್ಕೋಸ್ಕರವಾಗಿ ಮೊನ್ನೆ ತಾನೇ ಆರ್ಥಿಕ ಇಲಾಖೆಯವರ ಜೊತೆ ಸಭೆ ಮಾಡಿ, ಚರ್ಚೆ ಮಾಡಿದ್ದೇವೆ.  ಇದನ್ನು ಯಾವ ರೀತಿ ಸ್ಪಷ್ಟವಾಗಿ ಬಗೆಹರಿಸಬಹುದು ಎಂಬುದರ ಬಗ್ಗೆ ಸದ್ಯದಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ.

(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)

**ಒ) ವಿಷಯ:– ಕೇಂದ್ರ ಸರ್ಕಾರದ ಕಛೇರಿಗಳಲ್ಲಿನ ಹುದ್ದೆಗಳಿಗೆ**

**ಕನ್ನಡಿಗರಿಗೆ ಆದ್ಯತೆ ನೀಡುವ ಬಗ್ಗೆ.**

*******

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಎಸ್.ಎಸ್.ಎಲ್.ಸಿ. ವಿದ್ಯಾರ್ಹತೆಯ 7600 ಕ್ಕಿಂತಲೂ ಅಧಿಕ ಮಲ್ಟಿ ಟಾಸ್ಕಿಂಗ್ ಸ್ಟಾಫ್ (ಎಮ್.ಟಿ.ಎಸ್.)  ಹುದ್ದೆಗಳು ಹಾಗೂ ಹವಾಲ್ದಾರ್ ಶ್ರೇಣಿಯ 3603 ಸೇರಿ ಒಟ್ಟು 11 ಸಾವಿರಕ್ಕೂ ಹೆಚ್ಚು ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗುತ್ತಿದೆ. ಹಿಂದಿ ಅಥವಾ ಇಂಗ್ಲೀಷ್‌ನಲ್ಲಿ ಮಾತ್ರ ಪರೀಕ್ಷೆ

ಬರೆಯಲು ಕೇಂದ್ರದ ಸಿಬ್ಬಂದಿ ಆಯ್ಕೆ ಆಯೋಗವು ಮುಂದಾಗಿರುತ್ತಾರೆ. ಈ ಅಧಿಸೂಚನೆ ಅನ್ವಯ ಕನ್ನಡಿಗರಿಗೆ ಮತ್ತು ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ಉದ್ಯೋಗದಿಂದ ವಂಚಿತರಾಗುವ ಅಪಾಯದಲ್ಲಿದ್ದಾರೆ. ಈ ಪರೀಕ್ಷೆಯು 100 ಅಂಕಕ್ಕೆ ಇದ್ದು, ೯೦ ನಿಮಿಷದಲ್ಲಿ ಉತ್ತರಿಸಬೇಕಾಗಿರುತ್ತದೆ.

ಈ ಹುದ್ದೆಗಳು ರಾಜ್ಯದಲ್ಲಿರುವ ಕೇಂದ್ರ ಸರ್ಕಾರದ ಕಛೇರಿಗಳಂದ ಹುದ್ದೆಗಳಗೆ ಈ ನೇಮಕಾತಿ ನಡೆಯುತ್ತದೆ. ಈ ಹುದ್ದೆಗಳಗೆ ಹೊರ ರಾಜ್ಯದವರೂ ಸಹ ಕರ್ನಾಟಕ ರಾಜ್ಯಕ್ಕೆ ಮೊದಲ ಆದ್ಯತೆ ನೀಡಿ ಅರ್ಜಿ ಸಲ್ಲಿಸಬಹುದಾಗಿದೆ ಹಾಗೂ ಪರೀಕ್ಷೆಯು ಕನ್ನಡದಲ್ಲಿ ಇರದ ಕಾರಣ ಅರ್ಜಿ ಸಲ್ಲಿಸುವ ಕನ್ನಡಿಗರ ಸಂಖ್ಯೆ ಕಡಿಮೆಯಾಗಿರುತ್ತದೆ. ಹಾಗಾಗಿ, ಈ ಹುದ್ದೆಗಳಗೆ ಹೊರ ರಾಜ್ಯದವರು ಸುಲಭವಾಗಿ ಕೆಲಸಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಮುಂದುವರೆದು, ಈ ಹಿಂದೆ ರಾಜ್ಯ ಕಾರ್ಮಿಕ ವಿಮಾ ನಿಗಮ (ಎಮ್.ಟಿ.ಎಸ್.) ಹುದ್ದೆಗಳ ನೇಮಕಾತಿ ಪರೀಕ್ಷೆಗಳನ್ನು ಹಿಂದಿ ಹಾಗೂ ಇಂಗ್ಲೀಷ್ ಭಾಷೆಯಲ್ಲಿ ನಡೆಸಲು ಅಧಿಸೂಚನೆ ಹೊರಡಿಸಿತ್ತು. ಆಗ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳೂ ಹಾಗೂ ಕೇಂದ್ರದ ಮಾನ್ಯ ಮುಖ್ಯಮಂತ್ರಿಗಳೂ ಸೇರಿ ನ್ಯಾಯ ಒದಗಿಸುವಲ್ಲಿ ಒತ್ತಾಯಿಸಿದ ನಂತರ ಜನವರಿ 11 ರಂದು ಇ.ಎಸ್.ಐ.ಸಿ.ಗೆ ತಿದ್ದುಪಡಿ ಅಧಿಸೂಚನೆ ಹೊರಡಿಸಿ ಕನ್ನಡದಲ್ಲಿಯೂ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಿಕೊಡಲಾಗಿತ್ತು. ಅದರಂತೆಯೇ, ಈ ಅಧಿಸೂಚನೆಯೂ ಸಹ ತಿದ್ದುಪಡಿ ಮಾಡಿ ಕನ್ನಡಿಗರಿಗೆ ಕನ್ನಡದಲ್ಲಿಯೂ ಸಹ ಪರೀಕ್ಷೆ ಬರೆಯಲು ಅನುಕೂಲ ಮಾಡಿಕೊಡಬೇಕಾಗಿ ಸರ್ಕಾರವನ್ನು ಈ ಮೂಲಕ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಒದಗಿಸಲಾಗುವುದು.

**ಓ) ವಿಷಯ:– ರಾಜ್ಯ ಸರ್ಕಾರದ ಉಗ್ರಾಣ ನಿಗಮಕ್ಕೆ ರೈತ ಕಣಜ ಯೋಜನೆ ಪೂರ್ಣಗೊಳ್ಳದೇ ಇರುವ ಬಗ್ಗೆ.**

*******

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನವನ್ನು ಹೊಂದಿದವರು):–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ರಾಜ್ಯ ಸರ್ಕಾರ ಉಗ್ರಾಣ ನಿಗಮವನ್ನು ಸುಮಾರು 862 ಕೋಟಿಗಳಷ್ಟು ವೆಚ್ಚದಲ್ಲಿ ಪ್ರಾರಂಭಿಸಿದೆ. ಉಗ್ರಾಣಗಳಿಗೆ ಸಂಬಂಧಿಸಿದಂತೆ ಉಗ್ರಾಣಗಳ ನಿರ್ಮಾಣ, ದುರಸ್ತಿ, ಆಧುನೀಕರಣ ಮತ್ತು ಸ್ವಾವಲಂಬನೆ ಹೀಗೆ ಹಲವಾರು ರೀತಿಯ ಕಾಮಗಾರಿಗಳ ಅನುಷ್ಠಾನಕ್ಕೆ ಸರ್ಕಾರ ಘೋಷಿಸಿದ "ರೈತ ಕಣಜ" ಎಂಬ ಯೋಜನೆಗಳು ಪೂರ್ಣಗೊಳ್ಳದೇ ಗ್ರಹ ಹಿಡಿದಂತಾಗಿದೆ. ಅಲ್ಲದೇ, ತಾಲ್ಲೂಕು ಮತ್ತು ಹೋಬಳಿ ವ್ಯಾಪ್ತಿಯಲ್ಲಿ ನಿಸ್ತೇಜಗೊಂಡಿರುವ ಉಗ್ರಾಣಗಳು ಬಳಕೆಯಾಗದೇ ದುಸ್ಥಿತಿ ತಲುಪುತ್ತಿವೆ. ರೈತರ ಸಹಭಾಗಿತ್ವವೂ ಇಲ್ಲದೇ, ನಬಾರ್ಡ್‌ನಿಂದ ಪಡೆದ ಸಾಲಕ್ಕೆ ಪ್ರತಿ ಮೂರು ತಿಂಗಳಿಗೊಮ್ಮೆ ಸುಮಾರು 30 ಕೋಟಿ ರೂಪಾಯಿಗಳ ಬಡ್ಡಿ ಪಾವತಿಸುತ್ತಿರುವ "ರಾಜ್ಯ ಉಗ್ರಾಣ ನಿಗಮ"ವು ನಷ್ಟದ ಕೂಪದಿಂದ ಹೊರ ಬರಲೂ ಆಗುತ್ತಿಲ್ಲ ಮತ್ತು ಉಗ್ರಾಣಗಳಿಂದ ಬರುವ ಲಾಭವನ್ನು ಬಡ್ಡಿ ಪಾವತಿಗೆ ಬಳಸಿಕೊಳ್ಳುತ್ತಿರುವುದರಿಂದ, ಉಗ್ರಾಣಗಳು ನಾನಾ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿಕೊಂಡು, ಉಗ್ರಾಣಗಳ ಸಬಲೀಕರಣ ಎಂಬುವುದು ತ್ರಿಶಂಕು ಸ್ಥಿತಿಗೆ ಬಂದು ತಲುಪಿದೆ. ಆದರಂತೆ ಕೇಂದ್ರ "ಕೃಷಿ ವಿಕಾಸ್" ಯೋಜನೆಯಡಿ 160 ಹೊಸ ಉಗ್ರಾಣಗಳ ನಿರ್ಮಾಣ ಮತ್ತು ಮೊದಲಿನ 89 ಉಗ್ರಾಣಗಳ ದುರಸ್ತಿಗೆ ಆಂಧ್ರ ಮೂಲದ ಗುತ್ತಿಗೆದಾರರಿಗೆ 2016 ರಲ್ಲಿ ಗುತ್ತಿಗೆ ನೀಡಲಾಗಿತ್ತು. ಇವರ ಬಡ್ಡಿ ಸಮೇತ ಅಸಲನ್ನು 5 ಕಂತುಗಳಲ್ಲಿ ಮರುಪಾವತಿಸುವ ಒಪ್ಪಂದದಡಿ ನಬಾರ್ಡ್ ಮೂಲಕ 862 ಕೋಟಿಗಳ ಸಾಲ ಪಡೆದು ಗುತ್ತಿಗೆ ನೀಡಲಾಗಿತ್ತು. ಅದರಲ್ಲಿ, ಈವರೆಗೆ 612 ಕೋಟಿ ರೂಪಾಯಿಗಳು ಖರ್ಚಾದರೂ ಶೇಕಡಾ 50 ರಷ್ಟು ಕಾಮಗಾರಿ ಪೂರ್ಣಗೊಂಡಿಲ್ಲ

ಮತ್ತು ಈ ಕಾಮಗಾರಿಯನ್ನು ಪೂರ್ಣ ಮಾಡಲು ಗುತ್ತಿಗೆ ಮೊತ್ತ ಸಾಲುತ್ತಿಲ್ಲವೆಂದು ಗುತ್ತಿಗೆದಾರ 2019 ರಲ್ಲಿ ನ್ಯಾಯಾಲಯದ ಮೆಟ್ಟಿಲೇರಿದ್ದಾರೆ.

ಈ ಎಲ್ಲಾ ಕಾರಣಗಳಿಂದ, ರೈತರ ಆದಾಯ ದ್ವಿಗುಣಗೊಳಿಸಿ, ಅವರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡಲು ರೂಪಿಸಿರುವ ಸರ್ಕಾರದ ಯೋಜನೆಗಳು ಅನುಷ್ಠಾನಗೊಳ್ಳದೇ, ಸಮಸ್ಯೆಯ ಸುಳಿಯಲ್ಲಿ ಸಿಲುಕಿಕೊಂಡು ರೈತರ ಅಭಿವೃದ್ಧಿಗೆ ಮಾರಕವಾಗಿವೆ. ಆದ್ದರಿಂದ, ಇಂತಹ ರೈತ ಪರ ಮಹತ್ವದ ಯೋಜನೆಯನ್ನು ಯಶ್ವಸಿಗೊಳಿಸುವಂತೆ ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಅರಣ್ಯ, ಆಹಾರ, ಪಡಿತರ ವಿತರಣೆ, ಗ್ರಾಹಕ ವ್ಯವಹಾರ ಸಚಿವರಿಂದ ಉತ್ತರ ಒದಗಿಸಲಾಗುವುದು.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ಇದು Co-operation ಮತ್ತು Agricultural Marketing ಗೆ ಸಂಬಂಧಪಟ್ಟ ಸಚಿವರಿಗೆ ಬರುತ್ತದೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಇದು ಯಾವ ಸಚಿವರಿಗೆ ಸಂಬಂದಪಡುತ್ತದೆಯೋ, ಅವರಿಂದ ಉತ್ತರ ಕೊಡಿಸುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಇದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಗೆ ಬರುವುದಿಲ್ಲವೇ?

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಇದು ಯಾವ ಸಚಿವರಿಗೆ ಸಂಬಂಧಪಡುತ್ತದೆಯೋ, ಅವರಿಂದ ಉತ್ತರವನ್ನು ಕೊಡಿಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಇದಕ್ಕೆ ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**೦೫.ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾಗಿದ್ದ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು**

ಅ) ವಿಷಯ:- ದೇಶದ ವಿವಿಧ ವಿಶ್ವವಿದ್ಯಾಲಯಗಳು ನಕಲಿ ಅಂಕಪಟ್ಟಿ ಹಾಗೂ ಪ್ರಮಾಣಪತ್ರಗಳನ್ನು ತಯಾರಿಸಿ ಮಾರಾಟ ಮಾಡುತ್ತಿರುವ ಬಗ್ಗೆ.

------

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಉನ್ನತ ಶಿಕ್ಷಣ, ಐಟಿ & ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಸಲೀಂ ಅಹಮದ್‌ರವರು ದಿನಾಂಕ ೦೯.೦೩.೨೦೨೨ ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

ಆ) ವಿಷಯ:- ರಾಜ್ಯದ ಸರ್ಕಾರಿ ಹಾಗೂ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿನ ಬೋಧಕರಿಗೆ ವೇತನ ಬಿಡುಗಡೆ ಕುರಿತು.

------

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಉನ್ನತ ಶಿಕ್ಷಣ, ಐಟಿ & ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರವರು ದಿನಾಂಕ 22.03.2022 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

ಇ) **ವಿಷಯ:- ಚಿತ್ರದುರ್ಗ ಜಿಲ್ಲೆಯ ಶಿರಾ ನಗರ ಪ್ರಾಚೀನ ಕಸ್ತೂರಿ ರಂಗಪ್ಪ ನಾಯಕ ಕೋಟೆ ರಕ್ಷಣೆಯ ಬಗ್ಗೆ.**

------

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಪ್ರವಾಸೋದ್ಯಮ ಹಾಗೂ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರ ಪರವಾಗಿ):--** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಚಿದಾನಂದ ಎಂ. ಗೌಡರವರು ದಿನಾಂಕ 22.03.2022 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

**ಈ) ವಿಷಯ:- ಬಸವ ಜಯಂತಿಯನ್ನು ಬಸವನ ಬಾಗೇವಾಡಿಯಲ್ಲಿ ವಿಜೃಂಭಣೆಯಿಂದ ಆಚರಿಸುವ ಬಗ್ಗೆ.**

------

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ):--** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಪ್ರಕಾಶ್ ಕೆ. ರಾಥೋಡ್‌ರವರು ದಿನಾಂಕ 23.03.2022 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

**ಉ) ವಿಷಯ:- ಅರಣ್ಯ ಇಲಾಖೆಯ ವಲಯ ಅರಣ್ಯಾಧಿಕಾರಿ ಹುದ್ದೆಯ ನೇರ ನೇಮಕಾತಿಯಲ್ಲಿ ಮೀಸಲಾತಿಯನ್ನು ಕಡಿತಗೊಳಿಸಿರುವ ಬಗ್ಗೆ.**

------

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಅರಣ್ಯ ಹಾಗೂ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರ ಪರವಾಗಿ):--** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಶಾಂತರಾಮ್ ಬುಡ್ನ ಸಿದ್ದಿರವರು ದಿನಾಂಕ 23.03.2022 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

---

**ಊ) ವಿಷಯ:- ಕಲ್ಲಿದ್ದಲು ಕೊರತೆಯಿಂದ ವಿದ್ಯುತ್ ಉತ್ಪಾದನೆ ಸ್ಥಗಿತಗೊಳಸಲಾಗಿರುವ ಬಗ್ಗೆ.**

------

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ):--** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕೆ. ಹರೀಶ್ ಕುಮಾರ್‌ರವರು ದಿನಾಂಕ 23.03.2022 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

**ಸಭಾಪತಿಯವರು:-** ಈಗ ಅರ್ಧಗಂಟೆ ಕಾಲಾವಧಿ ಚರ್ಚೆಗೆ ತೆಗೆದುಕೊಳ್ಳೋಣ. ಈಗ ಮಾನ್ಯ ಕೆ. ಹರೀಶ್ ಕುಮಾರ್‌ರವರು.

**ಶ್ರೀ ಹೆಚ್. ಎಂ. ರಮೇಶ್ ಗೌಡ:-** ಮಾನ್ಯ ಸಭಾಪತಿಯವರೇ, ಮೊನ್ನೆ ತಾನೇ ನಾನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದ ಸೂಚನೆಗೆ ಉತ್ತರನೇ ಬಂದಿಲ್ಲ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಮಾನ್ಯ ಹೆಚ್. ಎಂ. ರಮೇಶ್‌ಗೌಡರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದ ಸೂಚನೆಗೆ ಉತ್ತರ ಕೊಡಿಸಿ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಕಡ್ಡಾಯವಾಗಿ ಇರಬೇಕಾದಂತಹ ಮಂತ್ರಿಗಳ ಪಟ್ಟಿಯನ್ನು ತಾವು ಓದಿದಿರಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಈಗ ಅರ್ಧಗಂಟೆ ಕಾಲಾವಧಿ ಚರ್ಚೆಗೆ...

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:-** ಒಂದು ನಿಮಿಷ. ಸದನದಲ್ಲಿ ಕಡ್ಡಾಯವಾಗಿ ಇರಬೇಕಾದ ಮಾನ್ಯ ಸಚಿವರುಗಳಾದ ಶ್ರೀ ಮುರುಗೇಶ ಆರ್. ನಿರಾಣಿ, ಶ್ರೀ ಎಸ್.ಟಿ. ಸೋಮಶೇಖರ್

**ಡಾ. ವೈ. ಎ. ನಾರಾಯಣಸ್ವಾಮಿ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಶ್ರೀ ಎಸ್.ಟಿ. ಸೋಮಶೇಖರ್ ಇಲ್ಲ.

**ಸಭಾಪತಿಯವರು:-**ಅವರು ನಮ್ಮನ್ನು ಕೇಳಿಕೊಂಡಿದ್ದಾರೆ.

**೦೬.ಪ್ರಕಟಣೆ**

**ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಮಾನ್ಯ ಸಚಿವರುಗಳ ಕುರಿತು**

1) ಶ್ರೀ ಬಿ.ಎ. ಬಸವರಾಜ (ಭೈರತಿ), (ನಗರಾಭಿವೃದ್ಧಿ (ಕೆ.ಯು.ಐ.ಡಿ.ಎಫ್.ಸಿ ಮತ್ತು ಕೆ.ಯು.ಡಬ್ಲ್ಯೂ.ಎಸ್.ಎಸ್.ಬಿ)

2) ಶ್ರೀ ಎನ್. ನಾಗರಾಜು (ಎಂ.ಟಿ.ಬಿ.), (ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ)

3) ಶ್ರೀ ಆಚಾರ್ ಹಾಲಪ್ಪ ಬಸಪ್ಪ, (ಗಣಿ ಮತ್ತು ಭೂವಿಜ್ಞಾನ ಹಾಗೂ ಮಹಿಳಾ, ಮಕ್ಕಳ ಕಲ್ಯಾಣ ಮತ್ತು ಹಿರಿಯ ನಾಗರೀಕರ ಸಬಲೀಕರಣ)

4) ಶ್ರೀ ಶಂಕರ್ ಬಿ. ಪಾಟೀಲ್ ಮುನನೇಕೊಪ್ಪ, (ಜವಳಿ ಮತ್ತು ಸಕ್ಕರೆ)

**ಶ್ರೀ ಕೆ. ಹರೀಶ್ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ದಿನಾಂಕ 07.03.2022ರ ನನ್ನ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1176 ನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಪರಿವರ್ತನೆ ಮಾಡಿ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿರುವುದರಿಂದ ನಾನು ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಶಿಕ್ಷಣ ವಲಯ ಇವತ್ತು ಆದ್ಯತಾ ವಲಯ. ಇಲ್ಲಿ ಸಚಿವರು ಇಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಒಂದು ನಿಮಿಷ. ನಾವು ಮೊದಲೇ ಅಜೆಂಡಾವನ್ನು ಕಳುಹಿಸಿರುತ್ತೇವೆ. ಮಾನ್ಯ ಸಭಾನಾಯಕರೇ, ಮಾನ್ಯ ಸಚಿವರು ಸದನಕ್ಕೆ ಹಾಜರಿಲ್ಲವೆಂದರೆ, ನಾವು ಏನು ಮಾಡಬೇಕೆಂಬುದು ಹೇಳಿ. ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ತೆಗೆದುಕೊಳ್ಳಿ ಎಂದು ಮಾನ್ಯ ಸದಸ್ಯರುಗಳು ಒತ್ತಾಯ ಮಾಡುತ್ತಾರೆ. ಮಾನ್ಯ ಸಚಿವರು ಸದನದಲ್ಲಿ ಹಾಜರಿಲ್ಲವೆಂದರೆ, ಏನು ಮಾಡಬೇಕು ಹೇಳಿ. ಇದನ್ನು ಮುಂದೆ ತೆಗೆದುಕೊಳ್ಳೋಣವೇ?

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾನಾಯಕರೇ, .. .

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಒಂದು ನಿಮಿಷ. ಸರ್ಕಾರವಿದೆ ಯಾರು ಉತ್ತರ ಕೊಡುತ್ತಾರೆ ಕೊಡಲಿ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾನಾಯಕರೇ, ದಯವಿಟ್ಟು, ಇದು burning issue ಇದೆ. ಹಾಗಾಗಿ ಈ ವಿಚಾರದಲ್ಲಿ ಮಾನ್ಯ ಸಚಿವರೇ ಬಂದು ಉತ್ತರ ಕೊಡಬೇಕಾಗುತ್ತದೆ. ಇದರ ಬಗ್ಗೆ ಹಲವಾರು ಬಾರಿ ಸಭೆ ನಡೆದರೂ ಕೂಡ ಸರಿಯಾದ ರೀತಿ ಫಲಪ್ರದ ಕಂಡುಕೊಳ್ಳುವುದಕ್ಕೆ ಆಗಿಲ್ಲ. ಈ ವಿಷಯ ಮಾನ್ಯ ಸಭಾಪತಿಯವರಿಗೂ ಗೊತ್ತಿದೆ. ಮಾನ್ಯ ಸಚಿವರು ಸದನದಲ್ಲಿ ಹಾಜರಿಲ್ಲವೆಂದರೆ, ನಾವು ಹೇಗೆ ಉತ್ತರವನ್ನು ಪಡೆದುಕೊಳ್ಳುವುದು? ಈ ವಿಷಯ ಗಂಭೀರವಾದಂತಹ ವಿಷಯವಾಗಿದೆ.

**ಸಭಾಪತಿಯವರು:–** ಆಯಿತು. ಪ್ರಾರಂಭ ಮಾಡೋಣ. ಮಾನ್ಯ ಸಭಾನಾಯಕರೇ, ಸ್ವಲ್ಪ ಹೊತ್ತು ಕಾಯೋಣವೇ? ಮಾನ್ಯ ಸಚಿವರನ್ನು ಸದನಕ್ಕೆ ಕರೆಸುತ್ತೀರಾ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಆಯಿತು, ಮಾನ್ಯ ಸಚಿವರನ್ನು ಸದನಕ್ಕೆ ಕರೆಸೋಣ.

**ಸಭಾಪತಿಯವರು:–** ಹಾಗಾದರೆ, ಇದನ್ನು ಮುಂದೆ ತೆಗೆದುಕೊಳ್ಳುತ್ತೇನೆ. ಮಾನ್ಯ ಸದಸ್ಯರೇ, ಕುಳಿತುಕೊಳ್ಳಿ. ಮಾನ್ಯ ಗೋವಿಂದ ರಾಜುರವರೇ, ತಾವು ಕೇಳಿ.

(ಮುಂದು)

**(598) 24-03-2022 1.00 ಟಿಸಿಹೆಚ್-ಎಕೆ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಗೋವಿಂದರಾಜು:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೂ ಕೂಡ ಮಾನ್ಯ ಸಚಿವರು ಸದನದಲ್ಲಿ ಉಪಸ್ಥಿತರಿಲ್ಲ.

**ಸಭಾಪತಿಯವರು:–** ಮಾನ್ಯ ಗೋವಿಂದರಾಜುರವರೇ ತಾವು ಮಾತನಾಡಿ.

---

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಗೋವಿಂದರಾಜು ರವರು ಆ ವಿಷಯದ ಬಗ್ಗೆ ಮಾತನಾಡಲಿ. ನಾನು ಸಚಿವರಿಂದ ಉತ್ತರ ಕೊಡಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಗೋವಿಂದರಾಜುರವರೇ, ನಾನು ನಿಮ್ಮ ಹೆಸರನ್ನು ಕರೆದಿದ್ದೇನೆ, ತಾವು ಮಾತನಾಡಿ.

**ಶ್ರೀ ಗೋವಿಂದರಾಜು:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇಲ್ಲವೆಂದು wait ಮಾಡುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಗೋವಿಂದರಾಜುರವರು ಅರ್ಧ ಗಂಟೆ ಕಾಲದಲ್ಲಿ ಪ್ರಸ್ತಾಪಿಸುವಂಥ ವಿಚಾರವನ್ನು ಪ್ರಾರಂಭ ಮಾಡಲಿ. ನಾನು ಸಚಿವರಿಂದ ಉತ್ತರ ಕೊಡಿಸುತ್ತೇನೆ. ಅವರು ಉತ್ತರ ಕೊಟ್ಟ ನಂತರ ಮತ್ತೆ ಮಾನ್ಯ ಸದಸ್ಯರು ಉಪ ಪ್ರಶ್ನೆ ಕೇಳಲಿ.

ಸಭಾಪತಿಯವರು:– ಮಾನ್ಯ ಗೋವಿಂದರಾಜುರವರೇ, ಒಂದೆರಡು ನಿಮಿಷ ಮಾತನಾಡುತ್ತಾರೆ.

**ಶ್ರೀ ಗೋವಿಂದರಾಜು:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಾನು ವಿಷಯ ಪ್ರಾರಂಭ ಮಾಡುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಗೋವಿಂದರಾಜುರವರೇ, ತಾವು ಎಲ್ಲಾ confuse ಮಾಡಿಕೊಳ್ಳುತ್ತೀರಿ.

**ಶ್ರೀ ಗೋವಿಂದರಾಜು:–** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರು ಸದನದಲ್ಲಿ ಉಪಸ್ಥಿತರಿಲ್ಲ ಅದಕ್ಕೆ ನಾನು. . .

**ಸಭಾಪತಿಯವರು:-** ಮಾನ್ಯ ಗೋವಿಂದರಾಜುರವರೇ, ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಗೋವಿಂದರಾಜುರವರು ಅರ್ಧಗಂಟೆ ಕಾಲ ಚರ್ಚೆಯಲ್ಲಿ ಎಲ್ಲಾ ಪ್ರಶ್ನೆ ಮತ್ತು ಮಾಹಿತಿಯನ್ನು ಹೇಳಲಿ. ನಾನು ಸಂಬಂಧಪಟ್ಟ ಸಚವರಿಂದ ಉತ್ತರ ಕೊಡಿಸುತ್ತೇವೆ. ಮತ್ತೆ ಏನಾದರೂ ಉಪ ಪ್ರಶ್ನೆ ಇದ್ದರೆ ಕೇಳಬಹುದು.

**೦7. ಅರ್ಧ ಗಂಟೆ ಕಾಲಾವಧಿ ಚರ್ಚೆ**

**ಅ) ಬೆಮಲ್ ಕಾರ್ಖಾನೆ ಖಾಸಗೀಕರಣ ಮಾಡುತ್ತಿರುವ ಬಗ್ಗೆ**

**ಶ್ರೀ ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, ಆಯಿತು. ನಾನು ದಿನಾಂಕ 08.03.2022 ರಂದು ಗಮನ ಸೆಳೆಯುವ ಸೂಚನೆಯಲ್ಲಿ K.G.F (Kolar Gold Fields) ನ B.E.M.L (Bharat Earth Movers Limited) ಕಾರ್ಖಾನೆಯನ್ನು ಖಾಸಗೀಕರಣಗೊಳಸುತ್ತಿರುವ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದೆ. ಆ ದಿನ ಮಾನ್ಯ ಸಚಿವರು ಕೊಟ್ಟಂಥಹ ಉತ್ತರ ನಮಗೆ ಸಮರ್ಥವಾಗಿಲ್ಲದ ಕಾರಣದಿಂದ ನಾವು ತಮ್ಮ ಬಳ ಅರ್ಧ ಗಂಟೆ ಕಾಲ ಚರ್ಚೆಗೆ ಕಾಲಾವಕಾಶ ಕೇಳಿದ್ದೆವು. ಅದರ ಮುಂದುವರೆದ ಭಾಗವಾಗಿ ಹೇಳುವುದೇನೆಂದರೆ, 1964ನೇ ಇಸವಿಯಲ್ಲಿ B.E.M.L ಕಾರ್ಖಾನೆ ಕೋಲಾರ ಜಿಲ್ಲೆಯ ಹಿಂದುಳಿದ ತಾಲ್ಲೂಕಿನ ಕೆ.ಜಿ.ಎಫ್.ನಲ್ಲಿ ಕೇವಲ ರೂ.5 ಕೋಟಿಗಳ ಬಂಡವಾಳದಲ್ಲಿ 1975 ಎಕರೆ ಪ್ರದೇಶದಲ್ಲಿ ಆಗಿನ ಮಾನ್ಯ ಸಚಿವರಾದ ಮಾನ್ಯ ಎಂ.ವಿ.ಕೃಷ್ಣಪ್ಪನವರ ಶ್ರಮದಿಂದ ಪ್ರಾರಂಭವಾಗುತ್ತದೆ. ಅಂದರೆ ಸ್ವಾತಂತ್ರ್ಯ ಬಂದು ಕೇವಲ 15 ವರ್ಷಗಳಲ್ಲೇ ಕೋಲಾರ ಹಿಂದುಳಿದ ಜಿಲ್ಲೆ ಎಂಬ ಒಂದೇ ಕಾರಣಕ್ಕಾಗಿ ಸ್ಥಾಪನೆ ಮಾಡಿದ್ದರು. ಆ ಸಂದರ್ಭದಲ್ಲಿ B.G.M.L (Bharat Gold Mines Limited) ಕಾರ್ಖಾನೆ ಕೂಡ ಅಷ್ಟುಹೊತ್ತಿಗೆ ಮುಚ್ಚುವ ಸ್ಥಿತಿಯಲ್ಲಿದ್ದರಿಂದ ಅದಕ್ಕೆ ಮುಂದಿನ ಭಾಗವಾಗಿ ಆ ಪ್ರದೇಶದಲ್ಲಿ ಈ ಒಂದು B.E.M.L ಕಾರ್ಖಾನೆಯನ್ನು ಸ್ಥಾಪನೆ ಮಾಡಿದ್ದಾರೆ. ಕೋಲಾರದಲ್ಲಿ B.G.M.L ಕಾರ್ಖಾನೆ ಸ್ಥಾಪನೆಯಾಗಿ ಆ

ಹಿಂದುಳಿದ ಭಾಗದವರಿಗೆಲ್ಲಾ ಕೆಲಸ ಸಿಕ್ಕದೆ. ಅದರಲ್ಲಿ ರಕ್ಷಣ ಇಲಾಖೆಗೆ ಸೇರಿದಂಥ ಉತ್ಪನ್ನಗಳನ್ನು ತಯಾರಿಸಲಾಗುತ್ತಿತ್ತು. ತದನಂತರ B.E.M.L ಕಾರ್ಖಾನೆಯಲ್ಲಿ ವಾಹನಗಳನ್ನು ತಯಾರು ಮಾಡಲಾಗುತ್ತಿತ್ತು. ನಮ್ಮ ಭಾರತ ದೇಶದಲ್ಲಿ ಕಲ್ಲಿದ್ದಲು ಗಣಿಗಾರಿಕೆಗೆ ಬೇಕಾದಂತಹ ಉತ್ಪನ್ನಗಳನ್ನು ಪೂರೈಸುವಂತಹ ನಿಟ್ಟಿನಲ್ಲಿ ನಿರಂತರವಾಗಿ ಆ ಕಾರ್ಖಾನೆ ಇವತ್ತಿಗೂ ಸಹ ಅಲ್ಲಿ ಯಶಸ್ವಿಯಾಗಿ ಲಾಭದಾಯಕವಾಗಿ ನಡೆಯುತ್ತಿರುವುದು ತಮಗೆಲ್ಲಾ ಗೊತ್ತಿರುವ ವಿಚಾರ. ತದನಂತರ, ಬೆಂಗಳೂರಿನಲ್ಲಿ H.A.L (Hindustan Aeronautics Limited) ಕಾರ್ಖಾನೆ ಸ್ಥಾಪನೆಯಾಯಿತು. ಆ ಹೆಚ್.ಎ.ಎಲ್., ಕಾರ್ಖಾನೆ ರಕ್ಷಣಾ ಉತ್ಪನ್ನಗಳನ್ನು ತಯಾರು ಮಾಡುವುದಕ್ಕೆ ಸಾಧ್ಯವಾಗದೇ ಇರತಕ್ಕಂಥ ಸಮಯದಲ್ಲಿ ಆ ಹೆಚ್.ಎ.ಎಲ್., ಕಾರ್ಖಾನೆಗೆ ಸೇರಿದಂತಹ ಸುಮಾರು 200 ರಿಂದ 250 ಎಕರೆ ಜಾಗವನ್ನು, ಈ ಬಿ.ಇ.ಎಂ.ಎಲ್.ನಲ್ಲಿ ಯುದ್ಧೋಪಕರಣಗಳನ್ನು ಒಂದು ಕ್ಲಿಷ್ಟಕರವಾದಂತಹ ಪ್ರದೇಶದಲ್ಲಿ ಸಾಗಿಸುವುದಕ್ಕೆ ಬೇಕಾದಂತಹ tetra vehicles, ತದನಂತರದ ದಿನಗಳಲ್ಲಿ ರೈಲ್ವೇ ಬೋಗಿಗಳನ್ನೂ ಸಹ ಅಲ್ಲಿ ಉತ್ಪಾದನೆ ಮಾಡುತ್ತಿರುವುದು ತಮಗೆಲ್ಲಾ ಗೊತ್ತಿರುವ ವಿಚಾರ. ಈಗ ಅಲ್ಲಿ ಮೆಟ್ರೋಗೆ ಬೇಕಾದಂತಹ ಬೋಗಿಗಳನ್ನು ತಯಾರಿಸುತ್ತಿದ್ದಾರೆ. ಈ ಹಿಂದೆ ಸೌತ್ ಕೊರಿಯಾದಿಂದ ಆಮದು ಮಾಡಿಕೊಂಡು ಮೆಟ್ರೋಗೆ ಬೋಗಿಗಳನ್ನು ತಂದು ಜೋಡಿಸುತ್ತಿದ್ದರು. ಆದರೆ ಈಗ ಬೆಂಗಳೂರಿನ ಬಿ.ಇ.ಎಂ.ಎಲ್.ನಿಂದಲೇ ಮೆಟ್ರೋ ಬೋಗಿಗಳನ್ನು ತಯಾರು ಮಾಡಿ, ದೆಹಲಿ ಮೆಟ್ರೋ, ರಾಜಸ್ತಾನದ ಜೈಪುರ್ ಮೆಟ್ರೋ, ಕೊಲ್ಕತ್ತಾ ಮೆಟ್ರೋಗೆ ಕೂಡ ಬೆಂಗಳೂರಿನ ಬಿ.ಇ.ಎಂ.ಎಲ್ ಕಾರ್ಖಾನೆಯಿಂದ ಬೋಗಿಗಳನ್ನು ಕೊಡುತ್ತಿದ್ದಾರೆ. ಅದಾದ ನಂತರ ನಮ್ಮ ದೇಶದಲ್ಲಿನ ರಕ್ಷಣಾ ಇಲಾಖೆಗೆ ಬೇಕಾದಂತಹ ವಾಹನಗಳನ್ನು ತಯಾರು ಮಾಡುವುದಕ್ಕೆ ಸಾಧ್ಯವಾಗದಿರುವ ಸಮಯದಲ್ಲಿ ಮೈಸೂರಿನಲ್ಲಿ ಸುಮಾರು 450 ಎಕರೆ ಪ್ರದೇಶದಲ್ಲಿ ಬಿ.ಇ.ಎಂ.ಎಲ್ ಕಾರ್ಖಾನೆಯನ್ನು ಸ್ಥಾಪನೆ ಮಾಡಿದರು. ಅಲ್ಲಿ ಸುಮಾರು 7000 ಜನ ಉದ್ಯೋಗಿಗಳು ಹಾಗೂ ಸುಮಾರು 5000 ಜನ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ಮೂರು ಕಾರ್ಖಾನೆ ಸ್ಥಾಪನೆಯಾದ ನಂತರ ಕೇರಳದ ಪಲಕಾಡ್‌ನಲ್ಲಿ 4ನೇ ಘಟಕ ಸ್ಥಾಪನೆಯಾಗಿದೆ. ಆ ಒಂದು ಕಾರ್ಖಾನೆ ಇವತ್ತಿಗೂ ಕೂಡ ಯಾವುದೇ ನಷ್ಟ ಹೊಂದದೆ ನಡೆಯುತ್ತಿದೆ. ನಂತರ ಶಿವಮೊಗ್ಗದ ತರೀಕೆರೆಯಲ್ಲೂ ಕೂಡ ಬಿ.ಇ.ಎಂ.ಎಲ್.ನ ಒಂದು ಸಣ್ಣ ಉತ್ಪಾದನಾ ಘಟಕವನ್ನು ಸ್ಥಾಪನೆ ಮಾಡಲಾಯಿತು. ಈ ನಾಲ್ಕು ಕೈಗಾರಿಕೆಗಳಿಗೆ ಬೆಂಗಳೂರಿನ

ಕೇಂದ್ರ ಭಾಗದ ಸಂಪಂಗಿರಾಮ ನಗರದಲ್ಲಿ ಅತಿ ಹೆಚ್ಚು ಬೆಲೆ ಬಾಳುವಂತಹ ಸುಮಾರು ನಾಲ್ಕು ಎಕರೆ ಪ್ರದೇಶದಲ್ಲಿ ಕಾರ್ಪೋರೇಟ್ ಕಚೇರಿ ಕೂಡ ಇದೆ. ಅದಾದ ನಂತರ ಹಲಸೂರಿನಲ್ಲೂ ಕೂಡ ಒಂದು Transit Office ನ್ನು ಸ್ಥಾಪನೆ ಮಾಡಿದ್ದಾರೆ. ಇವತ್ತಿನ ದಿವಸ ಬಿ.ಇ.ಎಂ.ಎಲ್ ಕಾರ್ಖಾನೆ ಎಲ್ಲಾ ಕಡೆಗಳಲ್ಲೂ ತನ್ನದೇ ಆದ ಸ್ವಂತ ಜಾಗದಲ್ಲಿ ನಡೆಸಿಕೊಂಡು ಹೋಗುತ್ತಿರುವುದು ತಮಗೆಲ್ಲಾ ಗೊತ್ತಿರತಕ್ಕಂಥ ವಿಚಾರ. ಇದು Ministry of Defence, ರಕ್ಷಣಾ ವಲಯಕ್ಕೆ ಸೇರಿದಂಥ ಕೈಗಾರಿಕೆಯಾಗಿರುತ್ತದೆ. 1992ನೇ ಇಸವಿಯಲ್ಲಿ ಸರ್ಕಾರ ಶೇ.25ರಷ್ಟು ಬಂಡವಾಳವನ್ನು ಈ ಕಾರ್ಖಾನೆಯಿಂದ ಹಿಂಪಡೆದು ಆ ಶೇ.25ರಷ್ಟು ಶೇರನ್ನು ಖಾಸಗಿಯವರಿಗೆ ಮಾರಾಟ ಮಾಡಿರುತ್ತದೆ. ಇವತ್ತಿನ ದಿವಸ ಮತ್ತೆ ಶೇ.26 ರಷ್ಟು ಶೇರು ಬಂಡವಾಳವನ್ನು ಖಾಸಗಿಯವರಿಗೆ ಮಾರಾಟ ಮಾಡುತ್ತಿದೆ. ಈಗಾಗಲೇ ಸರ್ಕಾರ ಅಕ್ಷರಶಃ ಒಪ್ಪಿಕೊಂಡು ಒಟ್ಟು ಸುಮಾರು 54.03 ರಷ್ಟು ಶೇರನ್ನು ಖಾಸಗಿಯವರಿಗೆ ಮಾರಾಟ ಮಾಡುವಂತಹ ಹುನ್ನಾರ ನಡೆಯುತ್ತಿದೆ. ಇವತ್ತಿನ ದಿವಸ ಆ ಬಿ.ಇ.ಎಂ.ಎಲ್ ಕಾರ್ಖಾನೆಗಳನ್ನು ಖಾಸಗಿ ಆಡಳಿತ ಮಂಡಳಿಗೆ ಕೊಡುವಂತಹ ಹುನ್ನಾರ ನಡೆಯುತ್ತಿರುವುದರಿಂದ, ಅಲ್ಲಿನ ಕಾರ್ಮಿಕರು ನಿರಂತರವಾಗಿ ಪ್ರತಿಭಟನೆಯನ್ನು ಮಾಡುತ್ತಿದ್ದಾರೆ. ಇವತ್ತಿನ ದಿವಸ ಈ ಬಿ.ಇ.ಎಂ.ಎಲ್ ಕಾರ್ಖಾನೆಗಳು ಸುಮಾರು ರೂ 5000 ಕೋಟಿಗಳಿಗೂ ಹೆಚ್ಚು ಆಸ್ತಿಯನ್ನು ಹೊಂದಿವೆ. ಇವತ್ತಿನ ದಿವಸ ಆ ಕಾರ್ಖಾನೆಗಳ ಆಸ್ತಿಗಳ ಬೆಲೆ ನಿಖರವಾಗಿ ತಿಳಿದುಬಂದಿಲ್ಲ. ಏಕೆಂದರೆ, ಬೆಂಗಳೂರಿನಲ್ಲಿ ಹೆಚ್.ಎ.ಎಲ್ ಮುಂಭಾಗದಲ್ಲೇ ಸುಮಾರು 250 ಎಕರೆ ಪ್ರದೇಶದಲ್ಲಿ ಒಂದು ಕಾರ್ಖಾನೆ ಇದೆ. ಅದೇ ರೀತಿ ಮೈಸೂರಿನಲ್ಲೂ ಕೂಡ ಸುಮಾರು 450 ಎಕರೆ ಪ್ರದೇಶದಲ್ಲಿ ಕಾರ್ಖಾನೆ ಏನಿದೆ, ಇದು ಹೆಚ್ಚಿನ ಬೆಲೆ ಬಾಳುವಂತಹ ಸ್ಥಳವಾಗಿದೆ. ಅದಕ್ಕೆ ಸರ್ಕಾರ ಸುಮಾರು ರೂ.5000 ಕೋಟಿಗಳು ಬೆಲೆ ಬಾಳಬಹುದೆಂದು ಅಂದಾಜಿಸಿದೆ. ಸ್ವಾತಂತ್ರ್ಯವಾದ ನಂತರ ನಮ್ಮ ದೇಶ ಸ್ವಾಭಿಮಾನದಿಂದ ಬದುಕಬೇಕು, ಇಲ್ಲಿನ ಜನರಿಗೆ ಎಲ್ಲರಿಗೂ ಉದ್ಯೋಗ ಕೊಡಬೇಕು, ಗ್ರಾಮೀಣ ಪ್ರದೇಶಗಳಲ್ಲಿ ಹಿಂದುಳಿದ ಪ್ರದೇಶಗಳಿಗೆ ಉದ್ಯೋಗ ಕೊಡಬೇಕು ಎನ್ನುತಕ್ಕಂಥ ಉದ್ದೇಶದಿಂದ ಭಾರತ ಸರ್ಕಾರದ ರಕ್ಷಣಾ ವಲಯಕ್ಕೆ ಸೇರಿದ ಈ ಕಾರ್ಖಾನೆಗಳನ್ನು ಸ್ಥಾಪನೆ ಮಾಡಿದ್ದರು. ಆದರೆ ಹಾಲಿ ಕೇಂದ್ರ ಸರ್ಕಾರದ ಸ್ವಾಮ್ಯದಲ್ಲಿರುವಂತಹ ಕಾರ್ಖಾನೆಗಳನ್ನು ಖಾಸಗೀಕರಣಗೊಳಿಸಿ ಅಲ್ಲಿನ ಕಾರ್ಮಿಕರಿಗೆ ಅಭದ್ರತೆಯನ್ನು ಸೃಷ್ಟಿ ಮಾಡುವಂತಹ ಕಾಲ ಬಂದಿದೆ.

ಇದು ನಿಜಕ್ಕೂ ಖಂಡನೀಯ. ಅದಕ್ಕಾಗಿ ನಾನು ಒತ್ತಾಯ ಮಾಡುವುದೇನೆಂದರೆ, ಕೋಲಾರ ಭಾಗದಲ್ಲಿ Bharat Gold Mines Limited ಇತ್ತು. ಅದು ಇಡೀ ನಮ್ಮ ಏಷ್ಯಾ ಖಂಡದಲ್ಲೇ ಅತಿ ಹೆಚ್ಚು ಆಳವಾದ ಹಾಗೂ ಬಹಳ ದೊಡ್ಡದಾದ ಬಂಗಾರದ ಗಣಿ ಇದ್ದಿದ್ದು, ತಮಗೆಲ್ಲಾ ಗೊತ್ತಿದೆ. ಈಗ ಅದು ಇತಿಹಾಸ ಆಗಿದೆ. ಇವತ್ತಿನ ದಿವಸ ಅದನ್ನು ಕೆಜಿಎಫ್, ಕೆಜಿಎಫ್ ಭಾಗ-I ಮತ್ತು ಕೆಜಿಎಫ್ ಭಾಗ-II ಸಿನಿಮಾ ಚಿತ್ರಗಳಲ್ಲಿ  ನೋಡುತ್ತಿದ್ದೇವೆ. ಈಗ ಅದು ಚಿತ್ರಗಳ ಭಾಗ ಆಗಿದೆ. ಈ ಹಿಂದೆ ಅಲ್ಲಿ ಏನು ಬಂಗಾರದ raw material ನ್ನು ಹೊರಗೆ ತೆಗೆಯುತ್ತಿದ್ದರೋ ಅಲ್ಲಿ ಇನ್ನೂ ಬಂಗಾರ ಇದೆ.  ಆದರೆ ಈಗಲೂ ಕೂಡ ಸರ್ಕಾರಗಳು ಆ ಗಣಿಯನ್ನು ಪುನರುಜ್ಜೀವನ ಮಾಡುತ್ತೇವೆಂದು ಚುನಾವಣಾ ಸಂದರ್ಭಗಳಲ್ಲಿ ಜನರಿಗೆ ತಪ್ಪು ಆಶ್ವಾಸನೆಯನ್ನು ಕೊಡುತ್ತಿದ್ದಾರೆ. ಆದರೆ ಇವತ್ತಿಗೂ ಕೂಡ ಆ B.G.M.L ಕಾರ್ಖಾನೆ ಆರಂಭವಾಗುವ ಸೂಚನೆ ಇಲ್ಲ. ಈಗ ಕೋಲಾರ ಜಿಲ್ಲೆಯಲ್ಲಿ ಬಿ.ಇ.ಎಂ.ಎಲ್ ಕಾರ್ಖಾನೆ ಮಾತ್ರ ಇದೆ. ಆ ಬಿಇಎಂಎಲ್ ಕಾರ್ಖಾನೆ ಇರುವುದರಿಂದ ಕೋಲಾರದ ವಿದ್ಯಾವಂತರಿಗೆ ಉದ್ಯೋಗಾವಕಾಶಗಳು ಸಿಗುತ್ತಿದೆ. ಕೋಲಾರದ ಕೆಜಿಎಫ್ ತಾಲ್ಲೂಕು ಬಹಳ ಹಿಂದುಳಿದಿರುವ ತಾಲ್ಲೂಕ್. ಆ ಕೆಜಿಎಫ್‌ನಲ್ಲಿ ಬಿ.ಇ.ಎಂ.ಎಲ್ ಕಾರ್ಖಾನೆ ಇರುವುದರಿಂದಲೇ ಅಲ್ಲಿ ಅಷ್ಟು ಜನಸಂಖ್ಯೆ ಇದೆ. ಏಕೆಂದರೆ ಅದು ಬಾರ್ಡರ್.  ಕೆಜಿಎಫ್‌ನ ಬಲ ಭಾಗದಲ್ಲಿ ಆಂಧ್ರಪ್ರದೇಶಕ್ಕೆ ಗಡಿ ಹೊಂದಿದೆ. ಕೆಜಿಎಫ್‌ನ ಎಡಭಾಗಕ್ಕೆ ತಮಿಳುನಾಡು ಗಡಿ ಇರುವುದರಿಂದ, ಆ ಪ್ರದೇಶ ಅಭಿವೃದ್ಧಿ ಹೊಂದಲು ಯಾವುದೇ ನೀರಾವರಿಯಂತಹ ಯೋಜನೆಗಳು ಬಂದಿಲ್ಲ. ಹಾಗಾಗಿ ಈಗಿನ ಸರ್ಕಾರ ಆ ಬಿ.ಇ.ಎಂ.ಎಲ್ ಕಾರ್ಖಾನೆಯನ್ನಾದರೂ ಉಳಿಸಿಕೊಟ್ಟರೆ, ನಮ್ಮ ಕೋಲಾರ ಭಾಗದ ಜನರಿಗೆ ಅನುಕೂಲವಾಗುತ್ತದೆ. ಬೇರೆ ಬೇರೆ ರಾಜ್ಯಗಳಲ್ಲಿ ವ್ಯವಹಾರ ನಡೆಸತಕ್ಕಂಥವರಿಗೆ ನಾವು ಕೋಲಾರದವರು ಎಂದರೆ, ನಮ್ಮನ್ನು ಯಾರೂ ಗುರುತಿಸುವುದಿಲ್ಲ. ಅಂದರೆ ಅವರು ‘ಜೋ ಸೋನಾ ಮಿಲ್‌ತಾ ಹೈ ನಾ, ಓ ಜಗಾಹ್ ಹೈನಾ’ ಎಂದು ಹೇಳುತ್ತಾರೆ.

**(ಮುಂದು)**

---

(599)24.3.2022/1.10/ಎಂ.ಎಂ-ಆರ್.ಎನ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಗೋವಿಂದರಾಜು (ಮುಂದು):-**

ಅಂದರೆ BGML (Bharath Gold Mines Limited) ಭಾರತ ದೇಶದಲ್ಲಿ ಎಲ್ಲಾ ಕಡೆ ಪ್ರತೀತಿಯ ಗುರುತು (ಲ್ಯಾಂಡ್ ಮಾರ್ಕ್) ಆಗುವ ವಿಚಾರ ಇತ್ತು. ನಂತರ ಬಿ.ಇ.ಎಂ.ಎಲ್ ಕಾರ್ಖಾನೆಯಾಗಿರುವುದರಿಂದ ಕೋಲಾರಕ್ಕೂ ಸಹ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರಿದೆ. ಏಕೆಂದರೆ ಬಿ.ಇ.ಎಂ.ಎಲ್., ನಲ್ಲಿ ತಯಾರು ಮಾಡುವ ಉತ್ಪನ್ನಗಳು 57 ರಾಷ್ಟ್ರಗಳಿಗೆ ರಫ್ತಾಗುತ್ತದೆ. ಆ ಮೂಲಕ ನಮ್ಮ ದೇಶಕ್ಕೆ ಕರೆನ್ಸಿ ರೂಪದಲ್ಲಿ ಆದಾಯ ಬರುತ್ತಿತ್ತು. ಅದಲ್ಲದೇ ಕಳೆದ ವರ್ಷ ಕೂಡ 96 ಕೋಟಿಯಷ್ಟು ಲಾಭವನ್ನು ಗಳಿಸಿದೆ. ಇಂತಹ ಸ್ಥಿತಿಯಲ್ಲಿ ಈ ಕಾರ್ಖಾನೆಯನ್ನು ಖಾಸಗೀಕರಣಗೊಳಿಸುವ ಉದ್ದೇಶವಾದರೂ ಏನು? ಏತಕ್ಕೆ ನಮ್ಮ ಸರ್ಕಾರ ಈ ರೀತಿ ಮಾಡುತ್ತದೆ? ದಯವಿಟ್ಟು ಸರ್ಕಾರ ಇದನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಅದಕ್ಕೆ ಪೂರಕವಾದ ಎಲ್ಲಾ ಮಾಹಿತಿಗಳನ್ನೂ ಬೇಕಾದರೆ ಮಾನ್ಯ ಸಚಿವರಿಗೆ ಕೊಡುತ್ತೇನೆ. ದಯವಿಟ್ಟು ಬೆಂಗಳೂರು ಬಿ.ಇ.ಎಂ.ಎಲ್., ಕಾರ್ಖಾನೆ ಆಗಿರಬಹುದು, ಮೈಸೂರಿನ ಬಿ.ಇ.ಎಂ.ಎಲ್ ಕಾರ್ಖಾನೆಯ ಜೊತೆಗೆ ಕೇರಳದ ಪಾಲಕ್ಕಾಡ್‌ನಲ್ಲಿರುವಂತಹ ಕಾರ್ಖಾನೆಯನ್ನು ಸಹ ಖಾಸಗೀಕರಣಗೊಳಿಸದೇ ಸರ್ಕಾರದ ಸಹಭಾಗಿತ್ವದಲ್ಲೇ ಉಳಿಸಿಕೊಳ್ಳಬೇಕು, ಮುಂದಿನ ದಿವಸಗಳಲ್ಲಿ ಖಾಸಗೀಕರಣಗೊಳಿಸಿದ್ದೇ ಆದಲ್ಲಿ ಅಲ್ಲಿನ ನೌಕರರ ಜೊತೆ ಕೋಲಾರ ಜಿಲ್ಲೆಯ ಎಲ್ಲಾ ಜನರೂ ಸಹ ಮುಷ್ಕರದಲ್ಲಿ ಭಾಗಿಯಾಗಿ ಅಶಾಂತಿಯ ವಾತಾವರಣ ಉಂಟಾಗುತ್ತದೆ ಎಂದು ಹೇಳುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ನಸೀರ್ ಅಹಮದ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಈಗಾಗಲೇ ಮಾನ್ಯ ಸದಸ್ಯರಾದ ಗೋವಿಂದರಾಜುರವರು ವಿಸ್ತಾರವಾಗಿ Bharath Earth Movers Limited ಖಾಸಗೀಕರಣವಾಗುತ್ತಿದೆ ಅದನ್ನು ನಿಲ್ಲಿಸಬೇಕೆಂದು ವಾದ

ಮಾಡಿದ್ದಾರೆ. ನಾನು ಸದನದ ಗಮನಕ್ಕೆ ತರುವುದೇನೆಂದರೆ, ಈ ಕಾರ್ಖಾನೆಯು ಶ್ರೀ ಎಂ.ವಿ. ಕೃಷ್ಣಪ್ಪ ಮತ್ತು ಶ್ರೀ ಕೆ.ಸಿ. ರೆಡ್ಡಿಯವರು BGML (Bharath Gold Mines Limited) ಒಂದು ಕಾಲದಲ್ಲಿ ಅಲ್ಲಿ 24,000 ಜನ ಕೆಲಸ ಮಾಡುತ್ತಿದ್ದರು. 24000 ಕುಟುಂಬಗಳು ಅಲ್ಲಿತ್ತು. ಸುಮಾರು ವರ್ಷಗಳಿಂದ ಡಿಪಾಸಿಟ್‌ಗಳಾದ ಮೇಲೆ ಇವರಿಗೆ ಬೇರೆ ಅವಕಾಶಗಳು ಸಿಗುವುದಿಲ್ಲ. ಅಲ್ಲಿನ ಕಾರ್ಮಿಕರು North Arcot ಜಿಲ್ಲೆಯಿಂದ ಬಂದಿರುತ್ತಾರೆ. ಅವರು ಬಂದು ಕರ್ನಾಟಕದಲ್ಲಿ ವಾಸ ಮಾಡಿ ಕನ್ನಡಿಗರ ಜೊತೆಗೆ ಒಳ್ಳೆಯ ಒಡನಾಟವಿದ್ದು, ಅವರು ಅಲ್ಲಿನ ಕನ್ನಡ ಶಾಲೆಯಲ್ಲಿ ಕನ್ನಡ ಓದಿದರು. ಇವರಿಗೆ ಅವಕಾಶ ಮಾಡಿಕೊಡಬೇಕೆಂದು ಕೋಲಾರಕ್ಕೆ Bharath Earth Movers Limited ಕಾರ್ಖಾನೆ ತಂದಿದ್ದರು. Bharath Earth Movers Limited ನಲ್ಲೂ ಸಹ ಒಂದು ಕಾಲದಲ್ಲಿ ಕೆ.ಜಿ.ಎಫ್‌ನಲ್ಲಿ ಸುಮಾರು 5000-6000 ಜನರು ಕೆಲಸ ಮಾಡುತ್ತಿದ್ದರು. ಅದರ ಜೊತೆಗೆ casual labourers ಎಂದು ಸುಮಾರು 1,500 ಜನ ಕೆಲಸ ಮಾಡುವುದಕ್ಕೆ ಅವಕಾಶವಿತ್ತು. ಕೆಲವು casual labourers ಇನ್ನೂ ಕೆಲಸ ಮಾಡುತ್ತಿದ್ದಾರೆ. ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ, ಖಾಸಗೀಕರಣ ಮಾಡುವುದಕ್ಕೆ ಹೊರಟಿರುವುದು ಒಂದು ಕಾಲದಲ್ಲಿ this is a listed company. ಇವತ್ತು share valuation ತೆಗೆದುಕೊಂಡರೆ ಸಾಕಷ್ಟು share valuation ಇದೆ. ಇದು listed company ಆಗಿರುವುದರಿಂದ valuation ಜಾಸ್ತಿ ಇದೆ. Defence ಗೆ equipments ಮಾಡುತ್ತಿರುವ ಜೊತೆಯಲ್ಲಿ; ಗಣಿ ಸಚಿವರಾದ ಮಾನ್ಯ ಶ್ರೀ ಹಾಲಪ್ಪ ಬಸಪ್ಪ ಆಚಾರ್ ರವರು ಸಹ ಇಲ್ಲಿದ್ದಾರೆ. Mining equipments ಅನ್ನು ಸಹ ದೊಡ್ಡ ಮಟ್ಟದಲ್ಲಿ ಉತ್ಪಾದನೆ ಮಾಡುತ್ತಿರುವ ಕಂಪನಿಯಾಗಿದೆ. ಇಂತಹ ಕಂಪನಿಗಳು ನಮ್ಮ ರಾಜ್ಯಕ್ಕೆ ಬೇಕು. ಒಂದು ಕಾಲದಲ್ಲಿ Defence orders ಕಡಿಮೆಯಾಗಿದ್ದಾಗ mining ನಡೆಯದಿದ್ದಾಗ ಸ್ವಲ್ಪ ಸಮಸ್ಯೆ ಇತ್ತು. ಈಗ ಆ ಸಮಸ್ಯೆ ಎಲ್ಲಾ ದೂರವಾಗಿದೆಯೆಂದು ಭಾವಿಸುತ್ತೇನೆ. ಏಕೆಂದರೆ Defence orders ಸಾಕಷ್ಟು ಬಂದಿದೆ. Mining equipments, ನಿರ್ದಿಷ್ಟವಾಗಿ ಹೇಳುವುದಾದರೆ ಬಿಹಾರ್ ಆಗಿರಬಹುದು, ಜಾರ್ಖಂಡ್ ಆಗಿರಬಹುದು ಅಲ್ಲೆಲ್ಲಾ Bharath Earth Movers Limited ನವರ ಸೇಲ್ಸ್ ಆಫೀಸ್ ಮತ್ತು ಸರ್ವಿಸ್ ಸೆಂಟರ್‌ಗಳನ್ನೆಲ್ಲಾ ಆ ಕಡೆ ಮಾಡಿದ್ದಾರೆ. I don't know that in what way ರಾಜ್ಯ ಸರ್ಕಾರ privatization, Government of India

undertaking ಇರುವುದರಿಂದ ಅದರಲ್ಲಿ ರಾಜ್ಯಸರ್ಕಾರದ ಹಿಡಿತ ಎಷ್ಟಿದೆ ಎಂದು I am not aware. But whatever said and done my request is government should insist that this kind of industry it has come with some intention. Bharath Earth Movers Limited ಅಲ್ಲಿ 24,000 ಜನ ಕಾರ್ಮಿಕರಿದ್ದರು. ಅದು ಕ್ಲೋಸ್ ಆಯಿತು. ಅದಕ್ಕೆ ಪೂರಕವಾಗಿ ಈ ಕಾರ್ಖಾನೆಯನ್ನು ಸ್ಥಾಪನೆ ಮಾಡಲಾಗಿದೆ. KGF city is a dying city ಆಗಿತ್ತು. ಈಗ ಬಿ.ಇ.ಎಂ.ಎಲ್ ಇರುವುದರಿಂದ ಅದು ಉಳಿದುಕೊಂಡಿದೆ. ಇದನ್ನೂ ಖಾಸಗೀಕರಣ ಮಾಡುತ್ತಾರೆ ಎಂದರೆ I thik definitely ಮಾನ್ಯ ಸಚಿವರಾದ ಮುರುಗೇಶ್ ನಿರಾಣಿಯವರು ಕೂಡ ಉದ್ಯಮಿಯಾಗಿರುವುದರಿಂದ ಅವರಿಗೆ ಗೊತ್ತು. ಇದು ಲಿಸ್ಟೆಡ್ ಕಂಪನಿಯಾಗಿರುವುದರಿಂದ valuation ತೆಗೆದು ನೋಡಬಹುದು. ಹಾಗಾಗಿ ಯಾವುದೇ ಕಾರಣಕ್ಕೂ ಇದನ್ನು ಖಾಸಗೀಕರಣ ಮಾಡುವುದಕ್ಕೆ ಬಿಡಬಾರದು ಎಂದು ಕೇಳಿಕೊಳ್ಳುತ್ತೇನೆ.

**ಶ್ರೀ ಮುರುಗೇಶ್ ಆರ್. ನಿರಾಣಿ(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರು ಇಲ್ಲಿಯವರೆಗೆ BEML ಕಾರ್ಖಾನೆ ಬಗ್ಗೆ ಚರ್ಚೆ ಮಾಡಿದ್ದನ್ನು ನಾನು ಕೇಳಿಸಿಕೊಳ್ಳಲಿಲ್ಲ. ಏಕೆಂದರೆ, ದುಬೈನಿಂದ ಒಂದು ನಿಯೋಗ ಬಂದಿತ್ತು. ನಾನು ಮಾನ್ಯ ಸದಸ್ಯರಿಗೆ ಮತ್ತು ಸಭಾಪತಿಯವರಿಗೆ ವಿನಂತಿ ಮಾಡಿ ಈ ಚರ್ಚೆಯನ್ನು ಒಂದು ಗಂಟೆ ಕಾಲ ಮುಂದೂಡುವಂತೆ ಕೇಳಿಕೊಂಡಿದ್ದೆ. ನಾನು ಅದರ ಅರಿವಿಲ್ಲದೇ ಫೈಲ್ ಅನ್ನು ಕೂಡ ಬಿಟ್ಟು ಬಂದಿದ್ದೇನೆ. ಹಾಗಾಗಿ ಜನರಲ್ ಆಗಿ ಉತ್ತರ ಹೇಳುತ್ತೇನೆ. ತಾವು ಏನುಪ್ರಶ್ನೆ ಕೇಳಿದ್ದೀರಿ ಅದು ಮನಸ್ಸಿನಲ್ಲಿದೆ. ಅದು ಆ ರೀತಿ ನಡೆಯುತ್ತಿಲ್ಲ. ಇಡೀ ದೇಶದಲ್ಲಿ ಏನು ಸರ್ಕಾರಿ ಸ್ವಾಮ್ಯದಲ್ಲಿ ಕಾರ್ಖಾನೆಗಳಿವೆ ಅದು ರಾಜ್ಯ ಸರ್ಕಾರದಲ್ಲಿರಬಹುದು, ಕೇಂದ್ರ ಸರ್ಕಾರದ ಆಡಳಿತದಲ್ಲಿರಬಹುದು ನೀತಿ ಆಯೋಗದ ಹಿನ್ನೆಲೆಯಲ್ಲಿ 2016ರಲ್ಲಿ ಆ ಕಾರ್ಖಾನೆಗಳಿಗೆ ಸಂಬಂಧಪಟ್ಟ ಪ್ರದೇಶಗಳನ್ನು ಹೊರತುಪಡಿಸಿ idle ಇರುವಂತಹ ಜಾಗವನ್ನು ಸರ್ಕಾರಿ ಸ್ವಾಮ್ಯದಲ್ಲಿ ನಡೆಯುತ್ತಿರುವ ಕಂಪನಿಗಳಿಗೆ ಕೊಟ್ಟು ರೈತರ ಭೂಮಿಯನ್ನು ಹೆಚ್ಚಾಗಿ ಉಪಯೋಗ ಮಾಡಿಕೊಳ್ಳದೇ idle ಇರುವಂತಹ ಭೂಮಿಯನ್ನು ಸದುಪಯೋಗ ಮಾಡಿಕೊಳ್ಳಬೇಕೆನ್ನುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರದಿಂದ ಎಲ್ಲಾ

ರಾಜ್ಯಗಳಿಗೂ ಒಂದು ಸುತ್ತೋಲೆಯನ್ನು ಕಳುಹಿಸಿದ್ದಾರೆ. ಆ ಹಿನ್ನೆಲೆಯಲ್ಲಿ ಬೆಮೆಲ್‌ನಲ್ಲಿ 1946 ಎಕರೆ ಭೂಮಿಯಲ್ಲಿ;

**ಶ್ರೀ ಗೋವಿಂದರಾಜು:-** ಮಾನ್ಯ ಸಚಿವರೇ, 1975 ಎಕರೆ ಭೂಮಿ ಅದು.

**ಸಭಾಪತಿಯವರು:-** ಮಾನ್ಯ ಸಚಿವರು ಉತ್ತರ ಹೇಳಲು ಬಿಡಿ.

**ಶ್ರೀ ಮುರುಗೇಶ್ ಆರ್. ನಿರಾಣಿ:-** ಸರಿ. ಅದರಲ್ಲಿ ಹೆಚ್ಚುವರಿಯಾಗಿ 900ಕ್ಕೂ ಹೆಚ್ಚು ಎಕರೆ ಭೂಮಿಯನ್ನು ಕೆ.ಐ.ಎ.ಡಿ.ಬಿ., ಗೆ ಕೊಡುವುದಕ್ಕೆ ರೆಫರ್ ಮಾಡಿದ್ದಾರೆ. ಕೆ.ಐ.ಎ.ಡಿ.ಬಿ., ಸರ್ಕಾರಿ ಸ್ವಾಮ್ಯದ ಸಂಸ್ಥೆಯಾಗಿರುವುದರಿಂದ ಈಗಾಗಲೇ ಅದು ಕಂದಾಯ ಸಚಿವರ ಬಳಿಗೆ ಬಂದಿದೆ. ಅದು ಕಂದಾಯ ಇಲಾಖೆಯಿಂದ ನಮಗೆ ಕೊಟ್ಟ ಮೇಲೆ ಕೋಲಾರ ಭಾಗದಲ್ಲಿ One District One Product ಎಂದು ಏನು ಮಾಡಿದ್ದೇವೆ, ಅಲ್ಲಿ ಸಾಕಷ್ಟು ನಿರುದ್ಯೋಗಿಗಳಿರುವುದರಿಂದ ಹಾಗೂ ಸಾಕಷ್ಟು ಭೂಮಿಯ ಬೇಡಿಕೆ ಇರುವುದರಿಂದ further ಕೈಗಾರಿಕೆಗಳನ್ನು ಬದಲಿಸುವ ಸಲುವಾಗಿ ಅವುಗಳನ್ನು ನಾವು ಸದುಪಯೋಗಪಡಿಸಿಕೊಳ್ಳುತ್ತಿದ್ದೇವೆ. ಆದರೆ existing factory ಗಳಿಗೆ ಯಾವುದೇ ತೊಂದರೆಯಾಗುವುದಿಲ್ಲ. ಅದನ್ನು ಡಿಸ್ಟರ್ಬ್ ಮಾಡುತ್ತಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. BEML ಕಂಪನಿ continue ಆಗುತ್ತದೆ. ಅಲ್ಲಿ ಕೆಲಸ ಮಾಡುವವರಿಗೂ ಯಾವುದೇ ರೀತಿಯ ತೊಂದರೆ ಇರುವುದಿಲ್ಲ. ಅದು ಇಡೀ ದೇಶದಲ್ಲಿರುವಂತಹ ಕಂಪನಿಯಾಗಿದೆ. ಅದೇ ರೀತಿ ಕೋಲಾರದಲ್ಲಿ Kolar Gold Mines ಕೆ.ಜಿ.ಎಫ್., ನಲ್ಲಿ ಅಂದಾಜು 16,000 ಎಕರೆ ಭೂಮಿ ಕೇಂದ್ರ ಸರ್ಕಾರದ ಸ್ವಾಮ್ಯದಲ್ಲಿದೆ. ಅದರಲ್ಲಿ 2500 ಎಕರೆಯಷ್ಟು ಭೂಮಿ ಒತ್ತುವರಿಯಾಗಿದೆ. ಇನ್ನು ಉಳಿದಿರುವುದು ಕಳೆದ ಬಾರಿ ನಾನು Mines & Geology Minister ಇದ್ದಾಗ ಜಿಲ್ಲಾಧಿಕಾರಿಯವರ ಜೊತೆ 2-3 ಮೀಟಿಂಗ್ ಮಾಡಿ property extract, ಖಾತಾ, ಉತಾರ ಏನೂ ಇರಲಿಲ್ಲ. ಎಲ್ಲಾ ಪ್ರಯತ್ನ ಮಾಡಿ ನಮ್ಮ ಕಡೆ ಕೆ.ಜಿ.ಎಫ್., ನಲ್ಲಿ 12,500 ಎಕರೆಯಷ್ಟು ಭೂಮಿಗೆ ಎಲ್ಲಾ details including sale deed ಸಿಕ್ಕಿದೆ. ಅದನ್ನು ಸರಿಯಾಗಿ ಮಾಡಿದ್ದೇವೆ. ಆ factory ಇವತ್ತು ಬಂದ್ ಇದೆ. ಅಲ್ಲಿ ರಾಷ್ಟ್ರೀಯ ಹೆದ್ದಾರಿ ಬರುತ್ತಿರುವುದರಿಂದ 3500 ಎಕರೆ ಅಷ್ಟು ಪ್ರದೇಶದಲ್ಲಿ ಚಿನ್ನ ಇದೆಯೋ ಇಲ್ಲವೋ ಎಂದು ಚೆಕ್ ಮಾಡುವುದಕ್ಕೆ ಅದನ್ನು ನಮಗೆ ವಾಪಸ್

ಕೊಡಬೇಕೆಂದು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದೇವೆ. ಅದು ಮೂಲತಃ ರಾಜ್ಯ ಸರ್ಕಾರದ್ದಾಗಿದ್ದು, ಆ ಕಂದಾಯ ಭೂಮಿಯನ್ನು ಕೇಂದ್ರ ಸರ್ಕಾರಕ್ಕೆ ಬಿಟ್ಟುಕೊಟ್ಟಿತ್ತು.

(ಮುಂದು)

(600) 24-03-2022 KH/RN 1-20

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಮುರುಗೇಶ್ ನಿರಾಣಿ (ಮುಂದು):-**

ಅಲ್ಲಿ ಸಾಕಷ್ಟು ಸರ್ಕಾರಿ ಭೂಮಿ ಇರುವುದರಿಂದ, ಅವರು ಇದಕ್ಕೆ ಒಂದು ಟೀಮ್ ಕಳುಹಿಸಿ, ಇಲ್ಲಿ gold available ಇದೆಯೋ, ಇಲ್ಲವೋ, ಇದು workout ಆಗುತ್ತದೆಯೋ, ಇಲ್ಲವೋ, viability ಬರುತ್ತದೆಯೋ, ಇಲ್ಲವೋ ಎನ್ನುವುದನ್ನು ಅವರು ಡಿಟೈಲ್ ಆಗಿ ಚೆಕ್ ಮಾಡಿದ ನಂತರ 3,500 ಎಕರೆಗಳಲ್ಲಿ ಯಾವುದೇ ರೀತಿಯ ಗೋಲ್ಡ್ ಇರುವುದಿಲ್ಲ. Viability ಬರುವುದಿಲ್ಲ ಎಂದು ಕರ್ನಾಟಕ ಸರ್ಕಾರಕ್ಕೆ ವಾಪಸ್ಸು ಕೊಡುತ್ತೇವೆ ಎನ್ನುವಂತಹದ್ದನ್ನು letter correspondence ಮಾಡಿದ್ದಾರೆ. ಇದಕ್ಕೆ ನಾವು ಒಪ್ಪಿಕೊಂಡ ನಂತರ ಮತ್ತೊಂದು ಪತ್ರವನ್ನು ಕಳುಹಿಸಿದ್ದೇವೆ. ನಿಖರವಾಗಿ 3,500 ಎಕರೆಗಳು ಯಾವ ಯಾವ ಸರ್ವೆ ನಂಬರ್‌ಗಳಿಗೆ ಸೇರುತ್ತದೆ ಮತ್ತು ಅದಕ್ಕೆ ಚೆಕ್ ಬಂದಿ ಯಾವ ರೀತಿ ಇರುತ್ತದೆ ಎನ್ನುವುದನ್ನು ಕಳುಹಿಸಿಕೊಡಬೇಕೆಂದು ಹೇಳಿದಾಗ, ನಾವು ಸರ್ವೇ ಮಾಡಿಸಿ ಮತ್ತೆ ಸಬ್ಮಿಟ್ ಮಾಡಿದ್ದೇವೆ. ಅಲ್ಲಿ ಎರಡನೆಯ ಬಾರಿ ಅಧಿಕಾರಿಗಳು ಸೇರಿ, ನಾವು 3,500 ಎಕರೆಗೆ ಕೊಡುವುದಿಲ್ಲ, ಸಂಪೂರ್ಣವಾಗಿ ಕೆ.ಜಿ.ಎಫ್. ಅನ್ನು ಕರ್ನಾಟಕ ಸರ್ಕಾರಕ್ಕೆ including liability ಕೊಡುತ್ತೇವೆ ಎಂದು ಹೇಳಿದರು. ಆ liability ಅನ್ನು ನೋಡಿದರೆ, asset ಕ್ಕಿಂತ liability ಜಾಸ್ತಿ ಇದೆ. ಅದನ್ನು ಮತ್ತೆ ಮೈಮೇಲೆ ತೆಗೆದುಕೊಂಡರೆ ಬೇರೆಯಾಗುತ್ತದೆ. Phase-I and Phase-II ಎರಡು ವಿಭಾಗದಲ್ಲಿ ತಾವು ಮಾಡಬೇಕು. Phase-I ನಲ್ಲಿ 3,500 ಎಕರೆಗಳನ್ನು ಕರ್ನಾಟಕ ಸರ್ಕಾರಕ್ಕೆ ಬಿಟ್ಟುಕೊಡಬೇಕು. Phase-II ದಲ್ಲಿ ಕೆ.ಜಿ.ಎಫ್. along with liability ಏನಿದೆ, ಇದಕ್ಕೆ 2-3 ಸಭೆಗಳನ್ನು ಮಾಡಬೇಕಾಗುತ್ತದೆ. ಕೇಂದ್ರ ಸಚಿವರಾದ ಮಾನ್ಯ ಪ್ರಹ್ಲಾದ ಜೋಶಿಯವರು

ನಮ್ಮವರೇ ಆಗಿರುವುದರಿಂದ, ಒಂದು ಬಾರಿ ನಮ್ಮ ಅಧಿಕಾರಿಗಳನ್ನು ಕರೆದು ಮಾತನಾಡಿದರು. ಅವರ ಹತ್ತಿರ ಕಳೆದ ವಾರ ಹೋಗಿದ್ದೆವು. ಈಗ ಏಪ್ರಿಲ್–14ನೇ ತಾರೀಖು ಬೆಂಗಳೂರಿನಲ್ಲಿ ಸಭೆಯನ್ನು ಕರೆದಿದ್ದಾರೆ. Along with their Secretaries ಎಲ್ಲಾ ಬರುತ್ತಾರೆ, ನಮ್ಮ Additional Chief Secretary, Commissioner, Chief Executive Officer ಗಳೆಲ್ಲಾ ಸೇರಿ ಚರ್ಚೆ ಮಾಡಿ, ಇದನ್ನು ಇತ್ಯರ್ಥ ಮಾಡುತ್ತಿದ್ದೇವೆ. ಅದರಲ್ಲಿ ಎರಡು ಡಿವೈಡ್ ಮಾಡಿದ ಮೇಲೆ 3,500 ಎಕರೆಗಳು ಎಂದರೆ, ಕೆ.ಜಿ.ಎಫ್.,ನಲ್ಲಿ ಒಟ್ಟಾರೆಯಾಗಿ 3500 and 3500 ಎಕರೆಗಳು ಬರುತ್ತದೆ. ಇದನ್ನು ಸಹ ಕಂದಾಯ ಇಲಾಖೆಗೆ ವಾಪಸ್ಸು ಕೊಡುತ್ತಾರೆ. ಅಲ್ಲಿ ಸುತ್ತಮುತ್ತ ಇಂಡಸ್ಟ್ರಿಗಳು ಬಂದಿರುವುದರಿಂದ, ಕೆಐಎಡಿಬಿ.ಗೆ ಒಂದು ಯೋಗ್ಯ ಬೆಲೆ ನಿಗದಿ ಮಾಡಿಕೊಡುತ್ತಾರೆ. ಕೆಐಎಡಿಬಿ.ಯಿಂದ ಅಮೌಂಟ್ ಅನ್ನು ತುಂಬುತ್ತಿದ್ದೇವೆ ಎನ್ನವುದು ಇನ್ನೊಂದು ಭಾಗ. ಇದು ಕೇವಲ ಕರ್ನಾಟಕದ Kolar Gold Mines ಅಷ್ಟೇ ಸೀಮಿತ ಅಲ್ಲ. ಆ ನೀತಿ ಆಯೋಗದ ಹಿನ್ನೆಲೆಯಲ್ಲಿ ಇಡೀ ದೇಶದಲ್ಲಿಯೇ ಹೆಚ್ಚುವರಿ ಭೂಮಿಯನ್ನು ಅವರವರ ರಾಜ್ಯಗಳಿಗೆ ಕೊಡಬೇಕೆನ್ನುವ ತೀರ್ಮಾನವನ್ನು ತೆಗೆದುಕೊಂಡಿರುವಂತಹ ಹಿನ್ನೆಲೆಯಲ್ಲಿ ಮಾಡಿದ್ದಾರೆ. ಇದೇ ರೀತಿ ಕಲುಬುರ್ಗಿಯಲ್ಲಿ Cement Corporation of India ಬಹಳ ವರ್ಷಗಳಿಂದ ಬಂದ್ ಆಗಿದೆ. ಅದರ ಬಗ್ಗೆಯೂ ಕೂಡ ವಿನಂತಿ ಮಾಡಿದ್ದೇವೆ. ದೆಹಲಿಯಲ್ಲಿ ಕಳೆದ ವಾರ Hon'ble Central Minister Sri.Piyush V Goyal ರವರನ್ನು ಭೇಟಿಯಾಗಿ ಬಂದಿದ್ದೇವೆ. ಇದನ್ನು ಸ್ಟಡಿ ಮಾಡಿ ವಾಪಸ್ಸು ಹೇಳುತ್ತೇವೆ ಎಂದು ಹೇಳಿದ್ದಾರೆ ಮತ್ತು ಶಿವಮೊಗ್ಗ Visweswaraya Steel and Iron Company ಯವರು ಸಹ ಬಹಳ ವರ್ಷಗಳ ಐಡಲ್ ಇದೆ. ಅದು ಸಹ Central Government undertaking ಆಗಿದ್ದು, ಅದನ್ನು ಸಹ ನಡೆಸುತ್ತೇವೆ ಎನ್ನುವಂತಹ ಮಾತನ್ನು ಅವರಿಗೆ ಹೇಳಿದ್ದೇವೆ. ಈ ರೀತಿ ಒಟ್ಟಾರೆ ಇರುವಾಗ ಯಾವುದೇ sick units ಇರಬಾರದು. ಅದು ರನ್ನಿಂಗ್ ಆಗುತ್ತಿರಬೇಕು. ಇದು ರನ್ನಿಂಗ್ ಆದಾಗಲೇ ನಮಗೆ ಆದಾಯ ಬರುವಂತಹದ್ದು ಆಗುತ್ತದೆ. ಜಿಎಸ್‌ಟಿ ಬರುವಂತಹದ್ದು ಮತ್ತು ಉದ್ಯೋಗ ಸಿಗುವಂತಹದ್ದು ಹಾಗೂ auxiliary units ನಡೆಯುತ್ತಿರುವಂತಹದ್ದು ಆಗುತ್ತದೆ. ಈ ಹಿನ್ನೆಲೆಯಲ್ಲಿ ಅವುಗಳನ್ನು ಸಹ ಚರ್ಚೆ ಮಾಡಿ, ಆದಷ್ಟು ಬೇಗ ಇತ್ಯರ್ಥ ಮಾಡುತ್ತಿದ್ದೇವೆ. ಬಿಇಎಂಎಲ್., ಬಗ್ಗೆ ನಾನು ಬಹಳ ಸ್ಪಷ್ಟವಾಗಿ

ಹೇಳುವಂತಹದ್ದೇನೆಂದರೆ, ಈಗ ಅಲ್ಲಿರುವಂತಹ ಕಾರ್ಮಿಕರಿಗಾಗಲಿ, ಅಲ್ಲಿ ಉದ್ಯೋಗ ನಡೆಯುವುದಕ್ಕಾಗಲಿ, ಪ್ರೊಡೆಕ್ಷನ್‌ಗಾಗಲಿ, ಯಾವುದೇ ರೀತಿಯಲ್ಲಿ ತೊಂದರೆಯಾಗುವುದಿಲ್ಲ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರೇ, ಒಂದು ನಿಮಿಷ. ತಮಗೂ ಮಾತನಾಡುವುದಕ್ಕೆ ಸಮಯ ಕೊಡುತ್ತೇನೆ.

**ಶ್ರೀ ಎಂ.ಎಲ್.ಅನಿಲ್‌ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಈಗಾಗಲೇ ಮಾನ್ಯ ಗೋವಿಂದರಾಜು ಮತ್ತು ಮಾನ್ಯ ನಸೀರ್ ಅಹ್ಮದ್‌ರವರು ಬಿಇಎಂಎಲ್., ಬಗ್ಗೆ ಬಹಳಷ್ಟು ವಿಚಾರಗಳನ್ನು ತಿಳಿಸಿಕೊಟ್ಟಿದ್ದಾರೆ.

**ಸಭಾಪತಿಯವರು:–** ಮಾನ್ಯ ಎಂ.ಎಲ್.ಅನಿಲ್‌ಕುಮಾರ್‌ರವರೇ, ಈಗ ಏನು ಮಾಡಬೇಕೆನ್ನುವ ಬಗ್ಗೆ ಪ್ರಶ್ನೆ ಕೇಳಿ.

**ಶ್ರೀ ಎಂ.ಎಲ್.ಅನಿಲ್‌ಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ನಾನು ಪ್ರಶ್ನೆ ಕೇಳುವಾಗ ಇರಲಿಲ್ಲ. ಕೆಲವು ಮಾಹಿತಿಗಳು ನನಗೆ ಗೊತ್ತಿಲ್ಲ ಎಂದು ಹೇಳಿದರು. ಹಾಗಾಗಿ ಕೆಲವು ಮಾಹಿತಿಗಳ ಬಗ್ಗೆ ಹೇಳುವುದಕ್ಕೆ ಇದು ಒಂದು ಅವಕಾಶ.

**ಶ್ರೀ ಮುರುಗೇಶ್ ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):–** ಮಾನ್ಯ ಎಂ.ಎಲ್.ಅನಿಲ್‌ಕುಮಾರ್‌ರವರೇ, ದಯವಿಟ್ಟು ಕೇಳಿ.

**ಶ್ರೀ ಎಂ.ಎಲ್.ಅನಿಲ್‌ಕುಮಾರ್:–** ಮಾನ್ಯ ಸಭಾಪತಿಯವರೇ, ಇವತ್ತು ಕೋಲಾರ ಜಿಲ್ಲೆ ಏನಾಗಿದೆ ಎಂದರೆ, ಬೆಂಗಳೂರು ನಗರಕ್ಕೆ ಬಹಳ ಹತ್ತಿರದಲ್ಲಿ ಇದೆ. ಇದಕ್ಕೆ ತಮಿಳುನಾಡು ಮತ್ತು ಆಂಧ್ರ ಪ್ರದೇಶದ ಬಾರ್ಡರ್ ಸೇರಿಕೊಂಡಿದೆ. ಇದು ಬೆಂಗಳೂರಿಗೆ ಹತ್ತಿರದಲ್ಲಿದ್ದರೂ ಕೂಡ ಕೋಲಾರ ಎಂದರೆ, ನಾವು ಮೊದಲು ಹೇಳುವಂತಹದ್ದು, ಮಾನ್ಯ ಕೆ.ಸಿ.ರೆಡ್ಡಿಯವರು ಮೊದಲನೇ ಮುಖ್ಯಮಂತ್ರಿಯಾಗಿದ್ದರು. ಇವರು ನಮ್ಮ ಜಿಲ್ಲೆಯವರು. ಮಾನ್ಯ ಎಂ.ವಿ.ಕೃಷ್ಣಪ್ಪನವರು ಕೇಂದ್ರ

ಸರ್ಕಾರದಲ್ಲಿ ಮಂತ್ರಿಯಾಗಿದ್ದರು. ಇವರೆಲ್ಲರೂ ಕೂಡ ಆಸಕ್ತಿ ತೆಗೆದುಕೊಂಡು ಹಿಂದೆ ಬಿಇಎಂಎಲ್., ಅನ್ನು ಸ್ಥಾಪನೆ ಮಾಡಿದ್ದರು ಮತ್ತು ಬಿಜಿಎಂಎಲ್., ಬ್ರಿಟೀಷರ ಆಳ್ವಿಕೆಯಲ್ಲಿತ್ತು. ಆವತ್ತಿನ ದಿವಸ ಇದರ ಬಗ್ಗೆ ಆಸಕ್ತಿ ತೆಗೆದುಕೊಂಡು ಕೇಂದ್ರ ಸರ್ಕಾರದ ಸ್ವಾಧೀನಕ್ಕೆ ತೆಗೆದುಕೊಂಡು, ಕೇಂದ್ರ ಸರ್ಕಾರದಿಂದ ಬಿಜಿಎಂಎಲ್., ನಡೆಯುತ್ತಿತ್ತು. ಈ ಎರಡು ಕೋಲಾರ ಜಿಲ್ಲೆಯ ಬಿಜಿಎಂಎಲ್., ಮತ್ತು ಬಿಇಎಂಎಲ್., ಹೆಮ್ಮೆಯ ಗುರುತುಗಳು ಎಂದು ಹೇಳುತ್ತಿದ್ದೆವು. ಆದರೆ, 2001ನೇ ಸಾಲಿನಲ್ಲಿ ಏನಾಗಿದೆಯೆಂದರೆ, ಬಿಜಿಎಂಎಲ್., ನಷ್ಟದಲ್ಲಿ ನಡೆಯುತ್ತಿದೆ ಎಂದು ಆವತ್ತಿನ ದಿವಸ ಕೇಂದ್ರ ಸರ್ಕಾರ ತೀರ್ಮಾನ ತೆಗೆದುಕೊಂಡು ಬಿಜಿಎಂಎಲ್., ಅನ್ನು ಮುಚ್ಚಿದರು. ಮಾನ್ಯ ನಸೀರ್ ಅಹ್ಮದ್‌ರವರು ಹೇಳಿದ ಹಾಗೆ ಸುಮಾರು 25 ರಿಂದ 30 ಸಾವಿರ ಜನ ಕಾರ್ಮಿಕರು ಅಲ್ಲಿ ಕೆಲಸ ಮಾಡುತ್ತಿದ್ದರು. ಅವರೆಲ್ಲರೂ ಇವತ್ತು ಕೆಲಸ ಇಲ್ಲದೇ ರಾತ್ರೋ ರಾತ್ರಿ ಬೀದಿಗೆ ಬಿದ್ದರು. ಎಲ್ಲರಿಗೂ ಗೊತ್ತಿರುವ ಹಾಗೆ ಆವತ್ತು ಬಿಜಿಎಂಎಲ್., ಮುಚ್ಚಲ್ಪಟ್ಟ ಸ್ಥಿತಿಯಲ್ಲಿದ್ದಾಗ ಒಂದು ಗ್ರಾಂ ಗೋಲ್ಡ್‌ಗೆ 300 ರಿಂದ 400 ರೂಪಾಯಿಗಳು ಇರಬಹುದೆಂದು ನನಗನಿಸುತ್ತದೆ. ಆದರೆ, ಇವತ್ತು ಒಂದು ಗ್ರಾಂ ಗೋಲ್ಡ್‌ಗೆ 4 ರಿಂದ 5 ಸಾವಿರ ರೂಪಾಯಿಗಳು ಇದೆ. ಅಲ್ಲಿ ಬಂಗಾರ ಸಿಗುವುದಿಲ್ಲ ಎಂದು ಆವತ್ತು ಬಿಜಿಎಂಎಲ್., ಅನ್ನು ಮುಚ್ಚಿರುವುದಲ್ಲ, ನಷ್ಟವಾಗುತ್ತಿದೆ ಎಂದು ಮುಚ್ಚಲಾಯಿತು. ಇವತ್ತು ಬಂಗಾರದ ಬೆಲೆ ಇಷ್ಟು ಏರಿಕೆಯಾಗಿದ್ದರೂ ಕೂಡ ಕೇಂದ್ರ ಸರ್ಕಾರದ ಮೇಲೆ 2001ನೇ ಸಾಲಿನಿಂದ ಇವತ್ತಿನವರೆಗೂ ಸತತವಾಗಿ 21 ವರ್ಷಗಳಿಂದ ಎಲ್ಲಾ ಜನಪ್ರತಿನಿಧಿಗಳು ಪಕ್ಷಾತೀತವಾಗಿ ಸಾಕಷ್ಟು ಒತ್ತಡ ತಂದರೂ ಕೂಡ ಬಿಜಿಎಂಎಲ್., ಅನ್ನು revival ಮಾಡುವುದಕ್ಕೆ ಯಾವುದೇ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಇವತ್ತು ಏನಾಗುತ್ತಿದೆ ಎಂದರೆ, ನೀತಿ ಆಯೋಗದ recommendation ಮೇಲೆ Cabinet Committee's Economic Affairs ರವರು ಬಿಜಿಎಂಎಲ್.,ನ ಷೇರುಗಳನ್ನು ಖಾಸಗಿಯವರಿಗೆ ಕೊಡುವಂತಹ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಉಪಯೋಗಕ್ಕೆ ಬಾರದ ಹೆಚ್ಚುವರಿಯಾಗಿರುವಂತಹ ಬಿಇಎಂಎಲ್.,ನ ಜಮೀನನ್ನು ಮತ್ತೆ ರಾಜ್ಯ ಸರ್ಕಾರಕ್ಕೆ ಕೊಡುತ್ತಿದ್ದಾರೆ ಎಂದು ಹೇಳಿದರು. ಇದರ ಆದೇಶ ಕೂಡ ನನ್ನ ಹತ್ತಿರ ಇದೆ. ಬೆಂಗಳೂರು ಕಾಂಪ್ಲೆಕ್ಸ್‌ನಲ್ಲಿ ಎಷ್ಟು ವಾಪಸ್ಸು ಕೊಡುತ್ತಿದ್ದಾರೆ. ಮೈಸೂರು ಕಾಂಪ್ಲೆಕ್ಸ್‌ನಲ್ಲಿ ಎಷ್ಟು ವಾಪಸ್ಸು ಕೊಡುತ್ತಿದ್ದಾರೆ. ಕೆಜಿಎಫ್. ಕಾಂಪ್ಲೆಕ್ಸ್‌ನಲ್ಲಿ ಎಷ್ಟು ವಾಪಸ್ಸು ಕೊಡುತ್ತಿದ್ದಾರೆ ಎನ್ನುವ ಬಗ್ಗೆ ಮಾಹಿತಿ ನನ್ನ

ಕಡೆ ಇದೆ. ತಾವು ಹೇಳಿದ್ದು ಸರಿ ಇದೆ. ಚಿಕ್ಕಮಂಗಳೂರಿನಲ್ಲಿ 10 ಎಕರೆ ಜಮೀನನ್ನು ವಾಪಸ್ಸು ಕೊಡುತ್ತಿದ್ದಾರೆ. ಕೆಜಿಎಫ್ ಕಾಂಪ್ಲೆಕ್ಸ್‌ನಲ್ಲಿ 973.24 ಎಕರೆ ಜಮೀನನ್ನು ವಾಪಸ್ಸು ಕೊಡುತ್ತಿದ್ದಾರೆ, ಮೈಸೂರು ಕಾಂಪ್ಲೆಕ್ಸ್‌ನಲ್ಲಿ 401.36 ಎಕರೆ ಜಮೀನನ್ನು ವಾಪಸ್ಸು ಕೊಡುತ್ತಿದ್ದಾರೆ, ಬೆಂಗಳೂರು ಕಾಂಪ್ಲೆಕ್ಸ್‌ನಲ್ಲಿ 124.435 ಎಕರೆ ಜಮೀನನ್ನು ವಾಪಸ್ಸು ಕೊಡುತ್ತಿದ್ದಾರೆ. ಅದರ ಬಗ್ಗೆ ಯಾವುದೇ ತಕರಾರು ಇಲ್ಲ. ವಾಪಸ್ಸು ತೆಗೆದುಕೊಳ್ಳುವಂತಹ ಜಮೀನಿನಲ್ಲಿ ಇಂಡಸ್ಟ್ರಿ, ಒಳ್ಳೆ ಒಳ್ಳೆಯ ಕಾರ್ಖಾನೆಗಳನ್ನು ತೆರೆಯುತ್ತೇವೆ, ಉದ್ಯೋಗವಕಾಶಗಳನ್ನು ಕೊಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಇದರ ಬಗ್ಗೆ ನಮ್ಮದೇನು ತಕರಾರು ಇಲ್ಲ. ಆದರೆ, ಶೇಕಡಾ 54.3 ರಷ್ಟು ಸರ್ಕಾರಿ ಷೇರುಗಳು ಇದೆಯೋ, ಅದರಲ್ಲಿ ಶೇಕಡಾ 26 ರಷ್ಟು ಖಾಸಗಿಯವರಿಗೆ ಕೊಟ್ಟರೆ, ಸರ್ಕಾರದ ಷೇರು ಶೇಕಡಾ 28 ರಷ್ಟು ಆಗುತ್ತದೆ. ಆಗ ಸರ್ಕಾರದ ಹಿಡಿತ ಹೋಗುತ್ತದೆ. Major shares ಅನ್ನು ಖಾಸಗಿಯವರಿಗೆ ಕೊಟ್ಟ ಮೇಲೆ ಸರ್ಕಾರದ ಹಿಡಿತ ಇರುವುದಿಲ್ಲ. ಶೇಕಡಾ 50 ಕ್ಕಿಂತ ಹೆಚ್ಚು ಖಾಸಗಿಯವರಿಗೆ ಹೋದ ಮೇಲೆ ತನ್ನಂತಾನೇ ಖಾಸಗಿ ಆಗೇ ಆಗುತ್ತದೆ. ಇದು ಖಾಸಗಿಯವರ ಕಂಟ್ರೋಲ್‌ಗೆ ಹೋಗುತ್ತದೆ. ಖಾಸಗಿಯವರ ಕಂಟ್ರೋಲ್‌ಗೆ ಹೋದ ಮೇಲೆ ಸರ್ಕಾರದ ಹಿಡಿತ ತಪ್ಪುವುದರಿಂದ ಬಹಳಷ್ಟು ತೊಂದರೆಗಳು ಆಗುತ್ತದೆ. ಖಾಸಗಿಯವರು ಬಂಡವಾಳ ಹಾಕಿದ ಮೇಲೆ ಅವರ ಅನುಕೂಲಕ್ಕೆ ತಕ್ಕ ಹಾಗೆ ಒಂದು ಸಿಸ್ಟಂ ಮಾಡಿಕೊಂಡಿರುತ್ತಾರೆ. ಅದರ ಮೇಲೆ ಅವರು ಕಾರ್ಖಾನೆ ನಡೆಸುತ್ತಿರುತ್ತಾರೆ. ಸಾಕಷ್ಟು ಉದ್ಯೋಗ ಕೊಡುವಂತಹ ಸಂದರ್ಭದಲ್ಲಿ ಮೀಸಲಾತಿಯನ್ನು ಅನುಸರಿಸುವುದಿಲ್ಲ. ಇದರಿಂದ ಎಸ್.ಸಿ., ಎಸ್.ಟಿ., ಜನಾಂಗದವರಿಗೆ ಮತ್ತು ಹಿಂದುಳಿದ ವರ್ಗದವರಿಗೆ ಅನ್ಯಾಯವಾಗುತ್ತದೆ. ಈ ರೀತಿಯ ತೊಂದರೆಗಳಾಗುತ್ತದೆ. ನನ್ನ ಪ್ರಶ್ನೆ ಏನೆಂದರೆ, ಶೇಕಡಾ 26 ರಷ್ಟು ಖಾಸಗಿಯವರಿಗೆ ಕೊಡಬೇಕೆಂದು ಷೇರಿನ ಬಗ್ಗೆ ಕೇಂದ್ರ ಸರ್ಕಾರ ಏನು ತೀರ್ಮಾನ ತೆಗೆದುಕೊಂಡಿದೆ. ಆ ರೀತಿಯಾಗಬಾರದೆಂದು ಅಲ್ಲಿನ ಕಾರ್ಮಿಕರು ಒತ್ತಡ ತರುತ್ತಿದ್ದು, ಇವರು ಸತತವಾಗಿ ಹೋರಾಟ ಮಾಡುತ್ತಿದ್ದಾರೆ. ಆದ್ದರಿಂದ, ಮಾನ್ಯ ಸಚಿವರು ಇದರ ಬಗ್ಗೆ ಉತ್ತರ ಕೊಡಬೇಕು. ಇವತ್ತು ಕೋಲಾರ ಜಿಲ್ಲೆಯಲ್ಲಿ ಉಳಿದುಕೊಂಡಿರುವುದೇ ಇದೊಂದು. ನಮ್ಮಲ್ಲಿ ನದಿ-ನಾಲೆಗಳು ಇಲ್ಲ, ನೀರಾವರಿ ಯೋಜನೆಗಳು ಇಲ್ಲ, ಅಲ್ಲಿ ಒಂದು ಸರ್ಕಾರಿ ಮೆಡಿಕಲ್ ಕಾಲೇಜುಗಳು ಇಲ್ಲ. ಇವತ್ತು ಬೆಂಗಳೂರು ಸುತ್ತಮುತ್ತಲಿರುವಂತಹ ಜಿಲ್ಲೆಯಲ್ಲಿ ಸರ್ಕಾರಿ ಮೆಡಿಕಲ್ ಕಾಲೇಜು ಮತ್ತು ಸರ್ಕಾರಿ ಇಂಜಿನಿಯರಿಂಗ್

ಕಾಲೇಜುಗಳು ಇವೆ. ಕೋಲಾರದಿಂದ ಸುಮಾರು 60 ಕಿ.ಮೀ. ಒಳಗೆ ಒಂದು ಸರ್ಕಾರಿ ಮೆಡಿಕಲ್ ಕಾಲೇಜು ಮತ್ತು ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಇಲ್ಲ. ಇರುವಂತಹ ಒಂದು ಸರ್ಕಾರಿ ಸಂಸ್ಥೆಯನ್ನು ಕೂಡ ತಾವು ಖಾಸಗಿಯವರಿಗೆ ಮಾರಾಟ ಮಾಡಿಬಿಟ್ಟರೆ ಹೇಗೆ? "ನೀತಿ ಆಯೋಗ"ದ recommendation ನಲ್ಲಿ ಮಾನ್ಯ ಮುಖ್ಯಮಂತ್ರಿಯವರು ಕ್ರಮ ತೆಗೆದುಕೊಂಡಿದ್ದಾರೆ. ನಾನು ಇಲ್ಲ ಎಂದು ಹೇಳುತ್ತಿಲ್ಲ. ಈ privatization ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಆಗ ಕೇಂದ್ರ ಸರ್ಕಾರದಿಂದ ಉತ್ತರ ಬಂದಿದೆ. While giving its recommendations was of the view that disinvestment of CPUC is likely to bring considerable value addition and improve its performance through latest technology and superior management practices. Disinvestment will result in the growth of Production, productivity and employment of the company ಎಂದು ಹೇಳುತ್ತಾರೆ. ಸರ್ಕಾರ ನಡೆಸುವಾಗ ಇದೆಲ್ಲಾ ಆಗುತ್ತಿರಲಿಲ್ಲವೇ? ಕೇವಲ ಖಾಸಗಿಯವರಿಗೆ ಕೊಟ್ಟ ಮಾತ್ರಕ್ಕೆ ಅವರು ಆಧುನಿಕ ತಂತ್ರಜ್ಞಾನವನ್ನು ತರುತ್ತಾರೆಯೇ? ಸರ್ಕಾರದಲ್ಲಿ ಆಧುನಿಕ ತಂತ್ರಜ್ಞಾನವನ್ನು ತರುವಂತಹ ವ್ಯವಸ್ಥೆ ಇಲ್ಲವೇ? ಇವತ್ತಿನ ದಿವಸ ಬಿಇಎಂಎಲ್., ನಷ್ಟದಲ್ಲಿ ನಡೆಯುತ್ತಿದೆಯೇ? ಪ್ರತಿ ವರ್ಷ ಕೂಡ ಲಾಭದಲ್ಲಿ ನಡೆಯುತ್ತಿದೆ. ಇದು ಏನಾದರೂ ನಷ್ಟದಲ್ಲಿ ನಡೆಯುತ್ತಿದ್ದರೆ ತಾವು ಖಾಸಗಿಯವರಿಗೆ ಮಾರಾಟ ಮಾಡುವಂತಹದ್ದು ನಿಜ. ಅದನ್ನು ನಾವು ಒಪ್ಪಬೇಕಾಗುತ್ತದೆ. ಒಂದು ಲಾಭದಾಯಕವಾಗಿರುವಂತಹ ಸರ್ಕಾರದ ಅಧೀನದಲ್ಲಿರುವಂತಹ ಸಂಸ್ಥೆಯನ್ನು privatization ಮಾಡುವಂತಹ ಉದ್ದೇಶ ಏನು? ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಗೋವಿಂದ ರಾಜು (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನಮ್ಮ ಸ್ನೇಹಿತರಾದ ಮಾನ್ಯ ಎಂ.ಎಲ್.ಅನಿಲ್‌ಕುಮಾರ್‌ರವರು ಮಾನ್ಯ ಮಂತ್ರಿಯವರ ಗಮನಕ್ಕೆ ಸಾಕಷ್ಟು ವಿಚಾರಗಳನ್ನು ತಂದಿದ್ದಾರೆ. ಕಳೆದ ವಾರ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕಾದರೆ ಇದು ಕೇಂದ್ರ ಸರ್ಕಾರದ "ನೀತಿ ಆಯೋಗ" ಸಂಸ್ಥೆಗಳನ್ನು ನಾವು ನಡೆಸುವಂತಹದ್ದಲ್ಲ. ಇದನ್ನು ನಾವು ಖಾಸಗಿಯವರ ವಶಕ್ಕೆ ಕೊಟ್ಟು, ನಾವು ಖಾಸಗಿಯವರ

ಕಡೆಯಿಂದ ನಮ್ಮ ದೇಶದ ಆಧುನೀಕತೆಯನ್ನು ಬದಲಾವಣೆ ಮಾಡುವುದು ಇವತ್ತು ಸರ್ಕಾರದ ಒಂದು ಭಾಗವಾಗಿದೆ ಎನ್ನುವ ಮಾತನ್ನು ಹೇಳಿದರು. ಇವತ್ತು ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ; . . . ಇದರ ಬಗ್ಗೆ ನನಗೆ ಆಳವಾಗಿ ಏನು ಗೊತ್ತಿಲ್ಲ. ಸಣ್ಣ ಸಣ್ಣ ಮುಂಗಡ ಪತ್ರದಲ್ಲೂ ಸಹ ಎಂತೆಂಥಹ ದೊಡ್ಡ ದೊಡ್ಡ ಕಾರ್ಖಾನೆಗಳನ್ನು ಮಾಡಿದರು. ಉದಾಹರಣೆಗೆ ಬಿಇಎಲ್., ಇರಬಹುದು, Electronics ಕಂಪನಿಗಳು ಮತ್ತು software development ಕಂಪನಿಗಳು ಇರಬಹುದು. ಅವುಗಳೆಲ್ಲಾ ಲಕ್ಷಾಂತರ ಕೋಟಿ ರೂಪಾಯಿಗಳ ವ್ಯವಹಾರ ಮಾಡುತ್ತಿದ್ದಾರೆ. ನಮ್ಮ ದೇಶದ ಅತಿ ಪ್ರತಿಷ್ಠಿತವಾದಂತಹ ಕಾರ್ಖಾನೆ ಬಿಇಎಲ್., ಕಾರ್ಖಾನೆಯಾಗಿತ್ತು. ಅದೇ ರೀತಿ ಬಿಹೆಚ್ಇಎಲ್., ಆಗಬಹುದು, ಇದೇ ರೀತಿ ಕೇಂದ್ರ ಸರ್ಕಾರದ ಸಾಕಷ್ಟು ಉದ್ದಿಮೆಗಳಿಗೆ ನಮ್ಮ ಹತ್ತಿರ ಬಂಡವಾಳ ಇಲ್ಲದೇ ಇದ್ದರೂ ಸಹ ಬಿಇಎಲ್. ಕಂಪನಿಯನ್ನು ಸುಮಾರು 5 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಆರಂಭಿಸಲಾಗಿದೆ.

(ಮುಂದು)

(601)/24-3-2022/1-30/ಎಲ್ಎಂ/ವಿಕೆ

**ಶ್ರೀ ಮುನಿರಾಜು ಗೌಡ ಪಿ.ಎಂ**(ಮುಂದು):-

ಬಿಇಎಂಎಲ್ ಕಾರ್ಖಾನೆ ಕೇವಲ 5 ಕೋಟಿ ರೂಪಾಯಿಗಳಿಂದ ಪ್ರಾರಂಭವಾಗಿರುವುದು, ಇವತ್ತು 25,000 ಜನರಿಗೆ ಉದ್ಯೋಗವನ್ನು ಕೊಟ್ಟಿದೆ. ಈ ಸಂಸ್ಥೆಯ ಇವತ್ತು share value ಒಂದು ಸಾವಿರ ರೂಪಾಯಿಗಳು ಇದೆ. 1995 ರಲ್ಲಿ 25% ಶೇರ್‌ಗಳನ್ನು ಅಂದಿನ ಸರ್ಕಾರ, ಆಗ ಯಾವ ಸರ್ಕಾರ ಇತ್ತು ಎನ್ನುವುದು ನನಗೆ ಗೊತ್ತಿಲ್ಲ.... ಸರ್ಕಾರಗಳು ಶೇರ್‌ಗಳನ್ನು ಮಾರಿಕೊಂಡೆ ಹಣ ಮಾಡಿಕೊಳ್ಳಬೇಕೆ? ಇದರ ಉದ್ದೇಶವೇನು? ಉಳಿದ 26% ಶೇರ್‌ಗಳನ್ನು ಮಾರಲು ಸರ್ಕಾರ ಏಕೆ ತಯಾರಿ ಮಾಡಿಕೊಂಡಿದೆ? ಸಾವಿರ ಕೋಟಿ ರೂಪಾಯಿಗಳು ಸರ್ಕಾರಕ್ಕೆ ಬರಬಹುದು ಎಂದು ವರದಿಯಲ್ಲಿ ಇದೆ. ಸಾವಿರ ಕೋಟಿ ರೂಪಾಯಿಗಳ ಸಲುವಾಗಿ ಈ ಸಂಸ್ಥೆಯನ್ನು ಖಾಸಗಿಯವರಿಗೆ ಕೊಡುವುದು ಯಾವ ನ್ಯಾಯ? ಇದು ಅತ್ಯಂತ ಖಂಡನೀಯ. ನಮ್ಮ ಕೋಲಾರ ಜಿಲ್ಲೆಯಲ್ಲಿ ಇರುವ ಈ ಒಂದು ಕಾರ್ಖಾನೆಯನ್ನು ಮಾರಿಬಿಟ್ಟರೆ ಹೇಗೆ? 900 ಎಕರೆ ಮಾತ್ರ ತೆಗೆದುಕೊಳ್ಳಲಾಗುತ್ತದೆ,

ಸಂಸ್ಥೆ ಹಾಗೆ ಉಳಿಯುತ್ತದೆ ಎಂದು ಸರ್ಕಾರ ಹೇಳುತ್ತದೆ. ಈ ಸಂಸ್ಥೆ ಸರ್ಕಾರಿ ಸ್ವಾಮ್ಯದಲ್ಲಿಯೇ ಇರುತ್ತದೆ ಎನ್ನುವ ಒಂದು ಆಶ್ವಾಸನೆಯನ್ನು ಮಂತ್ರಿಗಳು ಕೊಡಬೇಕು. ಈ ಒಂದು ಆಶ್ವಾಸನೆಯನ್ನು ಕೊಟ್ಟರೆ ಸಾಕು ಸರ್ಕಾರ ಬೇರೆ ಏನಾದರೂ ಮಾಡಿಕೊಳ್ಳಲಿ ನಾವು ಏನು ಹೇಳುವುದಿಲ್ಲ. ಇದು ಭಾರತ ಸರ್ಕಾರದ ಪ್ರತಿಷ್ಠಿತವಾದ ಸಂಸ್ಥೆ. ಇದನ್ನು ಭಾರತ ಸರ್ಕಾರದ ಸಂಸ್ಥೆಯಾಗಿಯೇ ಉಳಿಸಿಕೊಳ್ಳುತ್ತೇವೆ ಎಂದು ಹೇಳಬೇಕು. ಭಾರತ ಸರ್ಕಾರದ ಸಂಸ್ಥೆಯಾಗಿ ಉಳಿಸಿಕೊಳ್ಳದಿದ್ದರೂ, ಇದನ್ನು ಕರ್ನಾಟಕದ ಸಂಸ್ಥೆಯಾಗಿ ಉಳಿಸಿಕೊಳ್ಳುತ್ತೇವೆ ಎಂದು ಹೇಳಿಬಿಟ್ಟರೆ ಅದಕ್ಕಿಂತ ಬೇರೆ ಸಂತೃಪ್ತಿ ನಮಗೆ ಏನು ಇಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಈ ಹೇಳಿಕೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಮುರಗೇಶ್ ಆರ್.ನಿರಾಣಿ(ಕೈಗಾರಿಕಾ ಸಚಿವರು**):- ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಬೇಮಲ್ ಸಂಸ್ಥೆಯ ಬಗ್ಗೆ ಸಾಕಷ್ಟು ಮಾತನಾಡಿದ್ದಾರೆ. ಸದರಿ ಕಂಪನಿಯ ಶೇರ್‌ಗಳನ್ನು ಮಾರಬಾರದು ಇದು ಕೇಂದ್ರ ಸರ್ಕಾರದ ಸ್ವಾಮ್ಯದಲ್ಲಿಯೇ ನಡೆಯಬೇಕು ಎಂದು ಹೇಳಿದ್ದಾರೆ. ಹಿಂದೆ ರಾಜ್ಯ ಸರ್ಕಾರ- ಕೇಂದ್ರ ಸರ್ಕಾರಗಳೇ ಇಂತಹ ಸಂಸ್ಥೆಗಳನ್ನು ನಡೆಸಬೇಕಾಗಿತ್ತು. ಆಗ ಖಾಸಗಿಯವರಿಗೆ ಇಂತಹ ಕಾರ್ಖಾನೆಗಳನ್ನು ನಡೆಸುವಂತಹ ಸಾಮರ್ಥ್ಯ ಇರಲಿಲ್ಲ. ಆಗ ನಮ್ಮ ದೇಶಕ್ಕೆ ಯಾವ ಸೆಕ್ಟರ್‌ನಲ್ಲಿ ಏನು ಬೇಕು ಎನ್ನುವುದನ್ನು ಗುರುತಿಸಿ ಸರ್ಕಾರಗಳು ಕಾರ್ಖಾನೆಗಳನ್ನು ಪ್ರಾರಂಭ ಮಾಡಿದ್ದವು. ಅವು ಕೆಜಿಎಫ್ ಗೋಲ್ಡ್ ಕಂಪನಿ, ಬೆಮೆಲ್, Visvesvaraya Iron and Steel Plant ಇರಬಹುದು, ಸಿಮೆಂಟ್ ಕಾರ್ಪೋರೇಶನ್ ಆಫ್ ಇಂಡಿಯಾ ಕಂಪನಿ ಇರಬಹುದು, ಪೇಪರ್ ಮಿಲ್ ಇರಬಹುದು, ಕಾರ್ಪೋರೇಟ್ ಸೆಕ್ಟರ್‌ನಲ್ಲಿ 34 ಸಕ್ಕರೆ ಕಾರ್ಖಾನೆಗಳು ಇದ್ದವು. ಈ ರೀತಿ ಬೇರೆ-ಬೇರೆ ಸರ್ಕಾರಿ ಕಂಪನಿಗಳು ಇದ್ದಾಗ, ಆ ಸಮಯದಲ್ಲಿ ಖಾಸಗಿಯವರಿಗೆ ಇಂತಹ ಕಂಪನಿಗಳನ್ನು ನಡೆಸುವ ಶಕ್ತಿ ಇರಲಿಲ್ಲ. ಆದ್ದರಿಂದ ಆ ಸರ್ಕಾರಿ ಸ್ವಾಮ್ಯದಲ್ಲಿ ಈ ಕಂಪನಿಗಳು ಪ್ರಾರಂಭವಾದವು. ಪೂರ್ತಿ ಸಾರ್ವಜನಿಕರನ್ನು ಬಳಸಿಕೊಂಡು ಸರ್ಕಾರ ಮಾಡಬೇಕು ಎನ್ನುವ ಸಂದರ್ಭ ಬಂದಾಗ some share ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ equitant ಯನ್ನು ಕೊಡುತ್ತಿತ್ತು. ಸಾರ್ವಜನಿಕರಿಂದ ಶೇರ್‌ಗಳನ್ನು ಸಂಗ್ರಹ ಮಾಡಿ, cooperative sector ನಲ್ಲಿ

ಸಂಸ್ಥೆಗಳು ಪ್ರಾರಂಭವಾದವು. ಸ್ವತಂತ್ರ್ಯ ಸಿಕ್ಕಿ 75 ವರ್ಷಗಳಾದ ಮೇಲೆ ಖಾಸಗಿಯವರಿಗೆ ಸ್ವಂತ ಕಂಪನಿಗಳನ್ನು ಪ್ರಾರಂಭ ಮಾಡುವ ಶಕ್ತಿ ಬಂದಿದೆ. ಇವತ್ತು ಶಿವಮೊಗ್ಗದಲ್ಲಿರುವ Visvesvaraya Iron and Steel Plant ಬಂದ್ ಆಗಿದೆ. ಅದೇ capacity ಕ್ಕಿಂತ ಚಿಕ್ಕದಾಗಿರುವ JSW private company, less than 1 million ton ನಿಂದ ಪ್ರಾರಂಭ ಮಾಡಿರುವುದು, ಇವತ್ತು 28 million tons capacity per day ಆಗಿದೆ. ಒಂದು ಮಿಲಿಯನ್ ಅಂದರೆ 6000 ಕೋಟಿ ರೂಪಾಯಿಗಳು. 28 million ಅಂದರೆ almost 2,00,000 crore rupees investment JSW ದ್ದು ಆಗಿತ್ತು. ನಮ್ಮ VSIL ಕಂಪನಿ ಏಕೆ ಬೆಳೆಯಲಿಲ್ಲ? ಖಾಸಗಿಯವರಲ್ಲಿರುವ ಕಾಳಜಿ, ಕಳಕಳಿ, time management, marketing, ಅವರಂತಹ ದೂರದೃಷ್ಟಿ, ಸರ್ಕಾರದಲ್ಲಿ ಬರಲು ಸಾಧ್ಯವೇ ಇಲ್ಲ. ಇದು ಅಲ್ಲದೆ ಖಾಸಗಿ ಕಂಪನಿಯಲ್ಲಿ ಮೇಲಿಂದ ಮೇಲೆ Chairman, MD, Nomination ಆಗಿರುವವರು ಬದಲಾಣವೆಯಾಗುತ್ತಿರುತ್ತಾರೆ. ಕಾರ್ನಾಟಕ ಸರ್ಕಾರದ ಒಂದು ವರ್ಷದ ಬಜೆಟ್ ಎಷ್ಟು ಇದೆ ಅಷ್ಟು JSW turnover ಇದೆ. VSIL and JSW ಎಷ್ಟು ಒಂದೇ capacity ಯಲ್ಲಿ ಪ್ರಾರಂಭವಾಗಿದ್ದವು. ಎರಡನೆಯದು, Cement Corporation of India ಇದೆ, 0.5 ಮಿಲಿಯನ ಟನ್‌ನಲ್ಲಿಯೇ ಕಲಬುರ್ಗಿಯಲ್ಲಿ 12 ಎಸಿಸಿ ಸಿಮೆಂಟ್ ಕಾರ್ಖಾನೆಗಳು ಬಂದಿವೆ. ಎಸಿಸಿ, ರಾಜೇಶ್ವರಿ, ಜುವಾರಿ ಸಿಮೆಂಟ್ ಇವು 0.5 ಮಿಲಿಯನ್‌ನಿಂದ ಪ್ರಾರಂಭವಾದ ಕಾರ್ಖಾನೆಗಳು ಇವತ್ತು 12-20 million tons ಖಾಸಗಿಯವರು ಉತ್ಪಾದನೆಯಲ್ಲಿ ರಿಚ್ ಆಗಿದ್ದಾರೆ. ಆದರೆ ನಮ್ಮ ಸರ್ಕಾರಿ ಸಂಸ್ಥೆ 0.5 ಮಿಲಿಯನ್‌ಗೆ ಪ್ರಾರಂಭವಾಗಿ ಅಲ್ಲಿಗೆ sick ಆಗಿಬಿಟ್ಟಿತು.

ನಮ್ಮ ಇಡೀ ರಾಜ್ಯದಲ್ಲಿ ಸಾಕಷ್ಟು textile ಮಿಲ್‌ಗಳಿದ್ದವು. ಹಿಂದಿನ ಸರ್ಕಾರ ಯಾವುದೇ ಇರಲಿ, ಆ ಸರ್ಕಾರ ಆಗ ಅವೆಲ್ಲ ಮಿಲ್‌ಗಳನ್ನು auction ನಲ್ಲಿ ಮಾಡಿ sale ಮಾಡಿದರು. ಆದರೆ ನಜೀರ್ ಸಾಹೇಬ್‌ರವರು ನಡೆಸುವ ಟೆಕ್ಸ್‌ಟೈಲ್ Bombay Rayon Fashion Ltd ಇರಬಹುದು, ಹಾಸನದಲ್ಲಿ ಹಿಮ್ಮtf ಸಿಂಗ್‌ರವರು ನಡೆಸುವ textiles ಇರಬಹುದು, ಶಿವಮೊಗ್ಗದಲ್ಲಿ ಸಾಯಿ ಎಕ್ಸ್‌ಪೋರ್ಟ್ ಇರಬಹುದು ಇವುಗಳ ಬೆಳವಣಿಗೆಯನ್ನು ನಾವು imagine ಮಾಡಿಕೊಳ್ಳಲು ಆಗುವುದಿಲ್ಲ. Cooperative Sector ನಲ್ಲಿರುವುದೆಲ್ಲವು ಬಂದ್ ಆಗಿಬಿಟ್ಟವು. Private ನವರ

graph ನ್ನು ನಾವು ಕಲ್ಪನೆ ಮಾಡಿಕೊಳ್ಳಲು ಆಗದಷ್ಟು ಮಟ್ಟಿಗೆ ಅವರು ಅಭಿವೃದ್ಧಿಪಡಿಸುತ್ತಿದ್ದಾರೆ. ಸರ್ಕಾರಿ ಕಂಪನಿಗಳನ್ನು ನಡೆಸುವವರು ಬುದ್ಧಿವಂತರಲ್ಲ ಎಂದು ಅರ್ಥವಲ್ಲ. ಆದರೆ ಸರ್ಕಾರ ಬದಲಾದ ಹಾಗೆ ಎಂಡಿ ಗಳು ಬದಲಾಗುತ್ತಾರೆ, ನಿರ್ದೇಶಕರು ಬದಲಾವಣೆಯಾಗುತ್ತಾರೆ, ಅಧಿಕಾರಿಗಳು ಬದಲಾಗುತ್ತಾರೆ. ಯಾವುದೇ ಸೆಕ್ಟರ್ ಇರಲಿ ಯಾರಿಗೂ ಕಳಕಳಿ ಇರುವುದಿಲ್ಲ. Civil Aviation ಗ್ರಾಮೀಣ ಪ್ರದೇಶದಲ್ಲಿರುವ cooperative sector ಮತ್ತು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು cooperative sector ನಲ್ಲಿ ಬರುವಂತಹ ಎಲ್ಲವು ಸಿಕ್ ಆಗಿವೆ. ಅದಕ್ಕಾಗಿ ನಮ್ಮ ಗೌರವಾನ್ವಿತ ಪ್ರಧಾನ ಮಂತ್ರಿಗಳು ಒಂದು ಮಾತನ್ನು ಹೇಳಿದ್ದಾರೆ.

**ಶ್ರೀ ರುದ್ರೇಗೌಡ:-** Rudregowda ಮಾನ್ಯ ಸಭಾಪತಿಗಳೆ, ಎಲ್ಲದಕ್ಕಿಂತ the lack of professional management.

**ಶ್ರೀ ಮುರಗೇಶ್ ಆರ್.ನಿರಾಣಿ:-** ಮಾನ್ಯ ಸಭಾಪತಿಗಳೆ, ರಾಜ್ಯ ಸರ್ಕಾರವಿರಲಿ, ಕೇಂದ್ರ ಸರ್ಕಾರವಿರಲ್ಲಿ ನಮ್ಮ ಕೆಲಸ ಶಾಸಕಾಂಗ ಮಾಡುವಂತಹದ್ದಾಗಿರಬೇಕು ಹೊರತು ಕಾರ್ಖಾನೆ ಮಾಡುವಂತಹ ಕೆಲಸವನ್ನು ನಾವು ಮಾಡಬಾರದು. ಕಾರ್ಖಾನೆ ಮಾಡುವವರಿಗೆ ಯಾವುದೇ ಸೆಕ್ಟರ್‌ನಲ್ಲಿರಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ಮಾನ್ಯ ಪ್ರಧಾನ ಮಂತ್ರಿಗಳು ಹೇಳಿದ್ದಾರೆ. ಈಗ ಎಷ್ಟೇ important sector ಬಂದರು ಸಹಿತ ಕೇಂದ್ರ ಸರ್ಕಾರ ಹೊಸ ಕಾರ್ಖಾನೆಯನ್ನು ಪ್ರಾರಂಭ ಮಾಡುತ್ತಿಲ್ಲ. ಈಗ ಇರುವ ಕಾರ್ಖಾನೆಗಳು ಎಲ್ಲಿವರೆಗೆ ಇರುತ್ತವೆ ಎಂದು ಮಾನ್ಯ ಗೋವಿಂದರಾಜ್‌ರವರು ಕೇಳಿದರು. ಬೆಮೆಲ್‌ನ್ನು ಮಾರುವುದಿಲ್ಲ ಎನ್ನುವ ಮಾತನ್ನು ಹೇಳಬಯಸುತ್ತೇನೆ.

**ಶ್ರೀ ಪ್ರಕಾಶ್ ಕೆ.ರಾಠೋಡ್:-**ಮಾನ್ಯ ಸಭಾಪತಿಗಳೆ, ಯಾವುದೇ ಹೊಸ ಕಾರ್ಖಾನೆಗಳನ್ನು ಸರ್ಕಾರ ತನ್ನ ಸ್ವಾಮ್ಯದಲ್ಲಿ ಮಾಡಬಾರದು ಎಂದು ಮಾನ್ಯ ಪ್ರಧಾನ ಮಂತ್ರಿಗಳು ಹೇಳಿದ್ದಾರೆ ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ.

**ಶ್ರೀ ಮುರುಗೇಶ್ ಆರ್. ನಿರಾಣಿ:-** ಮಾಡಬಾರದು ಅಂತ ಅಲ್ಲ ಮಾಡುವವರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡಬೇಕು ಎಂದು ಹೇಳಿದ್ದಾರೆ.

**ಶ್ರೀ ಪ್ರಕಾಶ್ ಕೆ.ರಾಠೋಡ್:-** ಮಾನ್ಯ ಸಭಾಪತಿಗಳೆ, ಸ್ವಾತಂತ್ರ್ಯ ಬಂದ ಮೇಲೆ ಜನರಿಗೆ ಉದ್ಯೋಗವನ್ನು ಕೊಡಬೇಕು, ನಮಗೆ ಬೇಕಾದ ವಸ್ತುಗಳನ್ನು ನಾವೇ ಉತ್ಪಾದನೆ ಮಾಡಬೇಕು ಎಂದು ಕಾರ್ಖಾನೆಗಳನ್ನು ಪ್ರಾರಂಭ ಮಾಡಲಾಗಿದೆ. ಆದರೆ ಇದುವರೆಗೆ ನಿರುದ್ಯೋಗವನ್ನು ನಿವಾರಣೆ ಮಾಡಲು ಆಗಲೇ ಇಲ್ಲ. ಆದ್ದರಿಂದ ಕೇಂದ್ರದ ನೀತಿ ಸರಿ ಇಲ್ಲ ಎಂದು ನಾನು ಹೇಳಬಯಸುತ್ತೇನೆ.

**ಶ್ರೀ ಎಸ್.ಎಲ.ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಅನಿವಾರ್ಯವಾದ ಸಂದರ್ಭದಲ್ಲಿ privatization ಮಾಡಬೇಕಾಗುತ್ತದೆ. ಖಾಸಗಿ ವ್ಯಕ್ತಿ ಒಬ್ಬನಿಗೆ stable ಕೊಟ್ಟು ಮೇಲೆ ಎತ್ತುವಂತಹ ಶಕ್ತಿ ಇದೆ ಎಂದ ಮೇಲೆ ಸರ್ಕಾರ ಏಕೆ ಆ ಕೆಲಸ ಮಾಡಬಾರದು? ಸರ್ಕಾರಕ್ಕೆ ಶಕ್ತಿ ಇಲ್ಲ ಎಂದರೆ ನಮಗೆ ಅರ್ಥವಾಗುತ್ತಿಲ್ಲ. ಉದಾಹರಣೆಗೆ ಹೇಳುತ್ತೇನೆ, ಅಶೋಕ ಹೊಟೇಲ್ ಮತ್ತು ಹಾಸನ ಹೊಟೇಲ್ ಇವುಗಳ ಬಗ್ಗೆ ನಮಗೆ ಗೊತ್ತಿದೆ. ಇವು ಸಾವಿರಾರು ಕೋಟಿ ರೂಪಾಯಿಗಳ ಆಸ್ತಿ. ಸಾವಿರಾರು ಕೋಟಿ ರೂಪಾಯಿಗಳ ಆಸ್ತಿಯನ್ನು ಒಬ್ಬ ಖಾಸಗಿ ವ್ಯಕ್ತಿಗೆ 62 ಕೋಟಿ ರೂಪಾಯಿಗಳಿಗೆ ಮಾರಲಾಯಿತು. ಬೆಮೆಲ್‌ನ 1976 ಎಕರೆ valuation ಎಷ್ಟು ಆಗುತ್ತದೆ. ಬರಿ ಸಾವಿರ ಕೋಟಿ ರೂಪಾಯಿಗಳು ಬರುತ್ತವೆ ಎಂದು ಇದನ್ನು ಮಾರಲಾಗುತ್ತಿದೆ. ವರ್ಷಕ್ಕೆ ಎರಡು ಕೋಟಿ ಉದ್ಯೋಗವನ್ನು ಸೃಷ್ಟಿ ಮಾಡಿಕೊಡುತ್ತೇವೆ ಎನ್ನುವ ಮಾನ್ಯ ಪ್ರಧಾನ ಮಂತ್ರಿಗಳ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಆ ಯೋಜನೆ ಇಡೇರಬೇಕಾದರೆ ಇಂತಹ ಕಂಪನಿಗಳಿಗೆ ಪುನ:ಚ್ಚೇತನ ಕೊಟ್ಟು technically sound ಇರುವವರನ್ನು ಇಲ್ಲಿ ಹಾಕಿಕೊಂಡು ಕೆಲಸ ಮಾಡಿಸಿದ್ದರೆ, ನಮಗೆ ಸಾಧ್ಯವಿಲ್ಲ ಎನ್ನುವ ಮಾತೇ ಇಲ್ಲ. ಈ ಕಂಪನಿಯನ್ನು ಕೋಲಾರದಲ್ಲಿಯೇ ಏಕೆ ಸ್ಥಾಪನೆ ಮಾಡಿದರು ಎಂದರೆ, ಒಂದು ಕಾಲದಲ್ಲಿ ಕೋಲಾರನ್ನು ಬರಡು ನಾಡು ಎಂದು ಕರೆಯಲಾಗುತ್ತಿತ್ತು. ಈಗಲೂ ಕೂಡ ಅಲ್ಲಿನ ಜನರು ಎತ್ತಿನಹೊಳೆ ಯೋಜನೆಗಾಗಿ ಬಕ ಪಕ್ಷಿಯ ಹಾಗೆ ಕಾಯುತ್ತಿದ್ದಾರೆ. ಅಲ್ಲಿ ದ್ರಾಕ್ಷಿ, ಮಾವಿನ ಹಣ್ಣು ಇಂತಹ ಬೆಳೆಗಳನ್ನು ಬೆಳೆದುಕೊಂಡು ಬಂದಿದ್ದಾರೆ. ನಮ್ಮ ಮಲೆನಾಡಿನಲ್ಲಿ ಕೂರ್ಗಿನಿಂದ ಹಿಡಿದು ಕರಾವಳಿ ಪ್ರದೇಶದಲ್ಲಿ ಇಂತಹ ಕಂಪನಿಗಳನ್ನು ಏಕೆ

ತರಲಿಲ್ಲ. ಏಕೆಂದರೆ we are well-versed with the plantation side. ಲಕ್ಷಾಂತರ ಜನರಿಗೆ ಕೆಲಸ ಕೊಡುವಂತಹ ಶಕ್ತಿ plantation ಗೆ ಇತ್ತು. ಇವತ್ತು ಆ ಶಕ್ತಿ ಇಲ್ಲ, ಗಾರ್ಮೆಂಟ್ಸ್ ಬಂದರೆ ಸಾಕು ಎಂದು ನಮ್ಮಲ್ಲಿ ಇವತ್ತು ಹೇಳಲಾಗುತ್ತಿದೆ. Plantation ನವರು ಅಷ್ಟೊಂದು ಸುಸ್ತಾಗಿದ್ದೇವೆ. Agriculture ಆ ರೀತಿ ಸತ್ತೊಗಿರುವ ಸಂದರ್ಭದಲ್ಲಿ ಕೋಸ್ಟಲ್ ಬೆಲ್ಟ್‌ನಲ್ಲಿ ಒಳ್ಳೆಯ MRPL ಕಂಪನಿಗಳು ಬಂದು ಸಾವಿರಾರು ಜನರಿಗೆ ಉದ್ಯೋಗ ದೊರಕಿತ್ತು. ಸಾವಿರಾರು ಜನರಿಗೆ ಉದ್ಯೋಗ ಕೊಟ್ಟಿರುವ ಕೆಜಿಎಫ್ ಬಂದ್ ಆದಮೇಲೆ ಉದ್ಯೋಗ ಸೃಷ್ಟಿ ಕಷ್ಟವಾಯಿತು. ಯಾವುದೇ ಸರ್ಕಾರ ಇರಲಿ, ಅದನ್ನು ಸರ್ಕಾರಿ ಸ್ವಾಮ್ಯದಲ್ಲಿ ಇಟ್ಟುಕೊಂಡು ಅಭಿವೃದ್ಧಿಪಡಿಸಿ. ಏನೂ ಬೆಲೆ ಇಲ್ಲ, ಹುಳ್ಳಿಕಾಳು ಬೆಳೆಯುವ ಖುಷ್ಕಿ ಭೂಮಿಗೂ ಹೈವೆಯಲ್ಲಿ ಇವತ್ತು ಎಕರೆ 50 ಲಕ್ಷ ರೂಪಾಯಿ ಬೆಲೆ ಇದೆ. ಜಮೀನು ಅಲ್ಲಿಯೇ ದುಡಿಯುತ್ತದೆ. ಆದ್ದರಿಂದ ಇದನ್ನು ಖಾಸಗೀಕರಣ ಮಾಡುವ ಬಗ್ಗೆ ಸ್ವಲ್ಪ ಯೋಚನೆ ಮಾಡಿ.

(ಮುಂದು)

(602)24-03-2022(01-40)bsd-vk

**ಶ್ರೀ ಎಸ್.ಎಲ್. ಭೋಜೇಗೌಡ (ಮುಂದು)**

ಇದನ್ನು ಸರ್ಕಾರದ ಸ್ವಾಮ್ಯದಲ್ಲಿ ಇಟ್ಟುಕೊಂಡು, ಏನು development ಬೇಕಾದರೂ ಮಾಡಲಿ, ಆ ಆಸ್ತಿ ನಾಳೆ ಬೆಳಗ್ಗೆ ಎಂತಹ barren land ಆದರೂ ಏನೂ ಪ್ರಯೋಜನ ಇಲ್ಲ ಎಂದು ಹುರಳಿಕಾಳು ಬೆಳೆಯುವ ಜಮೀನು highway ಪಕ್ಕದಲ್ಲಿದ್ದರೆ ಎಕರೆಗೆ ರೂ.50 ಲಕ್ಷ ಬೆಲೆ ಇದೆ. ಆ ಜಮೀನಿನ value ಪ್ರಕಾರ ಅಲ್ಲಿಯೇ ದುಡ್ಡು ಬರುತ್ತದೆ. ದಯಮಾಡಿ ಇದನ್ನು privatisation ಮಾಡುವ ವಿಚಾರದಲ್ಲಿ ಸ್ವಲ್ಪ ಆಲೋಚನೆ ಮಾಡಬೇಕೆಂದು ಕೋರುತ್ತೇನೆ.

**ಶ್ರೀ ಮುರುಗೇಶ್ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೇ, ಒಳ್ಳೆಯ ಸಲಹೆಗಾಗಿ ಧನ್ಯವಾದಗಳು. ಮಾನ್ಯ ಗೋವಿಂದರಾಜ್ ರವರು ಹೇಳಿದಂತೆ BEML ಎಲ್ಲಿಯವರೆಗೆ

ಲಾಭದಾಯಕವಾಗಿ ನಡೆಯುತ್ತದೆಯೋ, ಅಲ್ಲಿಯವರೆಗೂ sale ಮಾಡುವ ಬಗ್ಗೆ ಅನುಮಾನ ಪಡುವ ಅವಶ್ಯಕತೆ ಇಲ್ಲ. ಅದು ಲಾಭದಾಯಕ ಇರುವವರೆಗೂ continue ಆಗಿಬಿಡುತ್ತದೆ. ಕೊನೆಯದಾಗಿ last time discussion ಆದಾಗ My Sugar ಕಾರ್ಖಾನೆ ಬಗ್ಗೆ ಚರ್ಚೆ ಬಂತು. ನಂತರ ಪಾಂಡವಪುರದ ಈ ಕಾರ್ಖಾನೆಗೆ ರೂ.415 ಕೋಟಿಗಳನ್ನು ಕೊಟ್ಟು, 90 ದಿವಸಗಳವರೆಗೆ ನಡೆಸಿ, ಪ್ರತಿವಾರ ರೈತರಿಗೆ bill ಕೊಟ್ಟು, ಎಲ್ಲಾ ಕಾರ್ಮಿಕರಿಗೆ ಪ್ರತಿ ತಿಂಗಳು salary ಕೊಟ್ಟು, transportation ವೆಚ್ಚವನ್ನು ಕೊಟ್ಟು ಎಲ್ಲಾ ರೈತರಿಗೆ ಅನುಕೂಲವಾಯಿತು. ಅದೇರೀತಿ ತಾವೆಲ್ಲರೂ ಕೂಡಿ My Sugar ಅನ್ನು ನಾನೇ ನಡೆಸಬೇಕು ಎನ್ನುವಂತೆ ಆ ಚರ್ಚೆಯಲ್ಲಿ ಅಭಿಪ್ರಾಯ ಮೂಡಿ ಬಂತು. ಆಗ ನಾನು ಸಾಕು ಇಷ್ಟು ಮಾಡಿದ್ದೇನೆ ಎಂದು ಹೇಳಿದ್ದೇನೆ. ಇವತ್ತು ಯುಗಾದಿಯಿಂದ Shriram Sugars ಪ್ರಾರಂಭ ಮಾಡುತ್ತೇವೆ. 70 ವರ್ಷ ಹಳೆಯದಾದ ಹಾಗೂ 12 ವರ್ಷಗಳಿಂದ ಬಂದ್ ಆಗಿರುವ ಕಾರ್ಖಾನೆಯನ್ನು 60 ದಿವಸಗಳಲ್ಲಿ ಪ್ರಾರಂಭ ಮಾಡುತ್ತೇವೆ. ಮೊನ್ನೆ My Sugar ಗೆ ರೂ.50 ಕೋಟಿಗಳನ್ನು ಪ್ರತಿ ವರ್ಷ ಕೊಡಬೇಕೆಂದು ಸರ್ಕಾರ ತೀರ್ಮಾನ ತೆಗೆದುಕೊಂಡಿದ್ದು, ಈ ತೀರ್ಮಾನವನ್ನು ಏಕೆ ತೆಗೆದುಕೊಂಡಿತು? ಮಂಡ್ಯ ಜಿಲ್ಲೆಯಲ್ಲಿನ ರೈತರು, ಜನ ಪ್ರತಿನಿಧಿಗಳು ಒತ್ತಾಯ ಮಾಡಿದ ಸಲುವಾಗಿ 2022-23 ಮತ್ತು 2023-24 ಈ ಎರಡು ಸಾಲುಗಳಿಗೆ ಸಂಬಂಧಿಸಿದಂತೆ ರೂ.50 ಕೋಟಿ ಕೊಡಬೇಕೆಂದು ತೀರ್ಮಾನ ಆಯಿತು. ನಾವು private ಮಾಡಿದ್ದೇವೆ ಎಂದಾಗ ಸರ್ಕಾರಕ್ಕೆ ರೂ.50 ಕೋಟಿ ಕೊಡುವ ಶಕ್ತಿ ನಮಗೆ ಇದೆ. ರೈತರಿಗೆ ಕೊಡುವಷ್ಟು bill ಕೊಡುತ್ತೇವೆ. ಇದು ಏಕೆ ಆಗುವುದಿಲ್ಲ ಎನ್ನುವುದಕ್ಕೆ ಕಾರಣ Administration ಆಗಿದೆ. ನಾನು ಒಂದು ಉದಾಹರಣೆಯನ್ನು ಹೇಳಿದೆ. ನಾನು ಅಷ್ಟು ಉದಾಹರಣೆಯನ್ನು ಕೊಟ್ಟಿದ್ದೇನೆ. SAIL, Cement, Textile ಇವುಗಳೆಲ್ಲದ್ದರ ಉದಾಹರಣೆ ಕೊಟ್ಟಿದ್ದೇನೆ. Textile Mill ಪ್ರತಿ ರಾಜ್ಯದ ತುಂಬ ಪ್ರತಿ ಜಿಲ್ಲೆಗಳಲ್ಲಿ ಇತ್ತು. ಅದು cooperative sector ನಲ್ಲಿ ಇತ್ತು. ಇವತ್ತು ಒಂದೇ ಒಂದು sector ನಲ್ಲಿಯೂ ಉಳಿಯಲಿಲ್ಲ. ಮಾನ್ಯ ಹೆಚ್.ಕೆ. ಪಾಟೀಲರು Textile Minister ಇದ್ದಾಗ ಎಲ್ಲವೂ sale ಆಯಿತು. ಅದೇ private ನಲ್ಲಿರುವುದನ್ನು ನೋಡಿ ನಾನು ಹೆಮ್ಮೆ ಪಡುತ್ತೇನೆ. ನಾನು ಅಲ್ಲಿಗೆ ಹೋಗಿ ಬಂದಿದ್ದೇನೆ ಮತ್ತು ನಾಲ್ಕೈದು ಬಾರಿ appointment ಅನ್ನು ಸಹ ಬೇಡಿದ್ದೇನೆ. ನಾನು ಬಾಗಲಕೋಟೆಯಲ್ಲಿ Textile Mill ಮಾಡುವಾಗ ಅವರ guidance

ತೆಗೆದುಕೊಂಡಿದ್ದೇನೆ. ನಾಲ್ಕೈದು ಸಾವಿರ ಜನರು ಇರುತ್ತಾರೆ. Private ನಲ್ಲಿ less than five percent sick ಆಗುತ್ತದೆ. 95 percent ಅದರ growth increase ಆಗುತ್ತದೆ. ಸರ್ಕಾರಿ ಮತ್ತು ಅರೆ ಸರ್ಕಾರಿ ವಲಯಗಳಲ್ಲಿ ನಡೆಯುತ್ತಿರುವ ಕಾರ್ಖಾನೆಗಳು 95 percent sick ಆಗುತ್ತದೆ, ಉಳಿದಂತೆ 5 percent ಅಲ್ಲೊಂದು ಇಲ್ಲೊಂದು ನಡೆಯುತ್ತದೆ. ಅದರ ಸಲುವಾಗಿ BEML ಅನ್ನು ಲಾಭದಾಯಕ ಇರುವವರೆಗೂ sale ಮಾಡುವುದಿಲ್ಲ. ಅದರಲ್ಲಿರುವ workers ಗಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆ ಎಂದು ಹೇಳಬಯಸುತ್ತೇನೆ.

**ಪ್ರಶ್ನೆ ಸಂಖ್ಯೆ 1176 ಕ್ಕೆ ನೀಡಿದ ಉತ್ತರದಿಂದಾಗಿ ಉದ್ಭವಿಸಿದ ವಿಷಯ ಕುರಿತು**

**ಆ) ವಿಷಯ: ರಾಜ್ಯದಲ್ಲಿರುವ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಅಗ್ನಿ ಸುರಕ್ಷತೆ ಬಗ್ಗೆ.**

**ಶ್ರೀ ಕೆ. ಹರೀಶ್ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಸಂಖ್ಯೆ 1176 ಗೆ ನೀಡಿದ ಉತ್ತರದಿಂದಾಗಿ ಸದನದಲ್ಲೂ ಉದ್ಭವಿಸಿದ ವಿಷಯದಿಂದಾಗಿ ಅರ್ಧಗಂಟೆಯ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು.

ಶಿಕ್ಷಣ ಬಹಳ ಅವಶ್ಯಕವಾದ ವಲಯವಾಗಿದ್ದು, ಅನೇಕ ಶಿಕ್ಷಣ ಪ್ರೇಮಿಗಳು ಸ್ವಾತಂತ್ರ್ಯ ಪೂರ್ವದಿಂದಲೇ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿಕೊಂಡು ಬಂದಿದ್ದಾರೆ. ಶಿಕ್ಷಣದಿಂದ ಸ್ವತಂತ್ರರಾಗಿರಿ ಎಂದು ಬ್ರಹ್ಮಶ್ರೀ ನಾರಾಯಣ ಗುರುಗಳ ಚಿಂತನೆ ಇತ್ತು. ಅದೇ ಪ್ರಕಾರ ಇವತ್ತು ಶಿಕ್ಷಣ ಸಂಸ್ಥೆಗಳು ಅಂದರೆ ಸರ್ಕಾರಿ ಮತ್ತು ಖಾಸಗಿ ವಲಯದಲ್ಲಿ ಸೊರಗಿದ್ದನ್ನು ನಾವು ನೋಡುತ್ತಿದ್ದೇವೆ. ನಮ್ಮ ಮಲೆನಾಡು ಮತ್ತು ಕರಾವಳಿ ಪ್ರದೇಶಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ಶಿಕ್ಷಣ ಪ್ರೇಮಿಗಳು ಮನೆ, ಜಗಲಿ, ಕೊಟ್ಟಿಗೆ, shed ಗಳಂತಹ ಕಡೆಗಳಲ್ಲಿ ಪ್ರಾರಂಭ ಮಾಡಿದರು. ಶಿಕ್ಷಣ ಕೊಡಬೇಕೆಂಬ ದೊಡ್ಡ ಉದ್ದೇಶದಿಂದ ಪ್ರಾರಂಭ ಮಾಡಿದರು. ಕ್ರಮೇಣವಾಗಿ ಸರ್ಕಾರಿ ಮತ್ತು ಖಾಸಗಿ ಶಾಲೆಗಳು ಹೆಚ್ಚಾಗಿ ಈಗ ದೊಡ್ಡ ವಲಯವಾಗಿ ಬೆಳೆದಿದೆ. ಶಿಕ್ಷಣ ಇವತ್ತು ಇಷ್ಟೊಂದು ಸೊರಗಲು ಕಾರಣವೆಂದರೆ ಕಾಲಕಾಲಕ್ಕೆ ಸರಿಯಾಗಿ ಅನೇಕ ಕಾನೂನುಗಳು, Court ನ directions, ಅದು Supreme Court

---

ಇರಬಹುದು ಅಥವಾ High Court ಇರಬಹುದು, ಬೇರೆ ಬೇರೆ ವಿಚಾರಗಳಲ್ಲಿ court ಕೂಡ ಕೈಹಾಕಿರುವುದರಿಂದ ಶಿಕ್ಷಣ ವಲಯದಲ್ಲಿ ಬಹಳಷ್ಟು ಸಂಕಷ್ಟಗಳನ್ನು ಎದುರಿಸುತ್ತಿದ್ದೇನೆ.

**ಸಭಾಪತಿಯವರು:–** ತಾವು ಏನು ಮಾಡಬೇಕೆಂದು ಹೇಳಿಬಿಡಿ. ಪ್ರಶ್ನೆಯಲ್ಲಿ ಈಗಾಗಲೇ ಉತ್ತರ ಬಂದಿರುವುದರಿಂದ ಏನು ಮಾಡಬೇಕೆಂದು solution ಹೇಳಿ.

**ಶ್ರೀ ಕೆ. ಹರೀಶ್ ಕುಮಾರ್:–** ಮಾನ್ಯ ಸಭಾಪತಿಯವರೇ, ಇವತ್ತು ಶಾಲೆಗಳಲ್ಲಿ ಅಗ್ನಿ ಸುರಕ್ಷತಾ ಕಾಯ್ದೆ ಮತ್ತು National Building Code ಗಳ ವಿಚಾರಗಳಲ್ಲಿ ಶಿಕ್ಷಣ ಸಂಸ್ಥೆಗಳು ಸಾಕಷ್ಟು ಸಂಕಷ್ಟಗಳನ್ನು ಎದುರಿಸುತ್ತಿವೆ. Soil test certificate, structural certificate, building certificate, fitness certificate, builders completion certificate ಇಂತಹ ಅನೇಕ safety certificate ತೆಗೆದುಕೊಳ್ಳಬೇಕಾದರೆ ಅವನು ಪ್ರತಿ ವರ್ಷ renewal ಮಾಡಬೇಕಾಗುತ್ತದೆ. ಇದನ್ನು renewal ಮಾಡಲು ಆತನಿಂದ ಸಾಧ್ಯವಾಗದ ಮಾತಾಗಿದೆ. ಅದೇರೀತಿ fire certificate ಕೂಡ ಆಗಿದೆ. Fire certificate ತರಬೇಕಾದರೆ ಖಂಡಿತ ಅವರಿಗೆ 6 ತಿಂಗಳ ಸಮಯ ಸಾಕಾಗುವುದಿಲ್ಲ. ಇಲ್ಲಿಯವರೆಗೆ District Fire Officer ಗಳು ಅಗ್ನಿ ಶಾಮಕ ಸುರಕ್ಷಾ ಪತ್ರವನ್ನು ಕೊಡುತ್ತಿದ್ದರು. ಈಗ recent ಆಗಿ ಅದನ್ನು Chief Fire Officer ಗೆ transfer ಮಾಡಿದ್ದಾರೆ. ಅವರಿಗೆ ಐದಾರು ಜಿಲ್ಲೆಗಳಿದ್ದು, ಈಗ ಮೊದಲಿಗಿಂತಲೂ ಕ್ಲಿಷ್ಟವಾಯಿತು. ಅವರು inspection ಬರುವಾಗಲೇ 6 ತಿಂಗಳ ಸಮಯ ಹೋಗುತ್ತದೆ. 6 ತಿಂಗಳು ಕಳೆದ ನಂತರ ಅವರು inspection ಮಾಡಿ ಸರಿಯಾದ ವ್ಯವಸ್ಥೆ ಇಲ್ಲದಿದ್ದರೆ ಮತ್ತೊಮ್ಮೆ ಬರುತ್ತಾರೆ. ಅದಕ್ಕೊಂದು 6 ತಿಂಗಳು 1 ವರ್ಷದ ಅವಧಿ ಮುಗಿಯುತ್ತದೆ. ಈ ಸಮಯದಲ್ಲಿ ಕೆಲವು ನಿಯಮಗಳನ್ನು ನೋಡಿದಾಗ fire certificate ಸಿಗುವುದು ಬಹಳ ಕಷ್ಟವಾಗಿದೆ. ಅದಕ್ಕೆ ಬೇಕಾದ tank ಗಳು, pump ಗಳು, ಪ್ರತಿ hose ಗಳು, ಪ್ರತಿ floor ಗೆ ಬೇಕಾದಂತಹ siren ಗಳು ಸೇರಿದಂತೆ ಇಂತಹ ಅನೇಕ ವಿಚಾರಗಳಿವೆ. ಮೊನ್ನೆ ಉತ್ತರ ಕೊಡುವಾಗ ಮಾನ್ಯ ಸಚಿವರು ಸರ್ಕಾರಿ ಶಾಲೆಗಳಿಗೆ ಈ ನಿಯಮ ಅನ್ವಯಿಸುವುದಿಲ್ಲ, ಏಕೆಂದರೆ multi–storied buildings ಗಳಲ್ಲಿ ಇಲ್ಲ, ಶಾಲೆಗಳೆಲ್ಲವೂ ಒಂದೇ ಹಂತದಲ್ಲಿ ಇರುವುದರಿಂದ ಇಂತಹ ಸಂಕಷ್ಟಗಳು ಬರುವುದಿಲ್ಲ ಎಂದು ಹೇಳಿದ್ದಾರೆ. ಇದನ್ನು

private ಶಾಲೆಗಳಿಗೆ ಮಾತ್ರ ಹೆಚ್ಚಾಗಿ insist ಮಾಡುವುದಾಗಿದೆ. ಆದರೆ ಪಟ್ಟಣಗಳಲ್ಲಿ ಸರ್ಕಾರಿ ಶಾಲೆಗಳು ಸಹ multi-storied building ಗಳಲ್ಲಿ ಇವೆ ಅಥವಾ multi-storied building ಗಳು ಇಲ್ಲದಿದ್ದರೂ ಆ ಒಂದೇ ಹಂತದ ಕಟ್ಟಡವಿದ್ದರೂ ಅದಕ್ಕೂ ಸುರಕ್ಷತೆ ಬೇಕಾಗಿರುತ್ತದೆ. ಸರ್ಕಾರಿ ಶಾಲೆಗಳಿಗೆ ಒಂದು ನಿಯಮ ಮತ್ತು ಖಾಸಗಿ ಶಾಲೆಗಳಿಗೆ ಮತ್ತೊಂದು ನಿಯಮ ಮಾಡುವುದರಿಂದ ಸಾಕಷ್ಟು ಸಂಕಷ್ಟಗಳನ್ನು ಎದುರಿಸಬೇಕಾದ ಪರಿಸ್ಥಿತಿ ಇದೆ. ಕೋವಿಡ್ ಸಮಯದಲ್ಲಿ ಹೆಚ್ಚು ಸಂಕಷ್ಟಕ್ಕೆ ಮಕ್ಕಳು ಒಳಗಾಗಿದ್ದು, ಬಹುಶ: 2 ವರ್ಷ ಸರಿಯಾದ ರೀತಿಯಲ್ಲಿ ಶಾಲೆಗಳು ಇರಲಿಲ್ಲ. Online ಶಿಕ್ಷಣ ಇದ್ದು, ಬಹಳಷ್ಟು ವಿದ್ಯಾರ್ಥಿಗಳು ತೊಂದರೆ ಅನುಭವಿಸಿದ್ದಾರೆ. Supreme Court ನ direction ಏನಿದೆ, ಅದನ್ನು relaxation ಮಾಡುವ ಮೂಲಕ ಅಥವಾ ಸರಳೀಕರಣಗೊಳಿಸಬೇಕು. ಪ್ರತಿವರ್ಷ ನವೀಕರಣ ಮಾಡುವ ಅವಶ್ಯಕತೆ ಇರುವುದಿಲ್ಲ. ಐದು ಅಥವಾ ಹತ್ತು ವರ್ಷಗಳಿಗೊಮ್ಮೆ ನವೀಕರಣ ಸಾಕಾಗುತ್ತದೆ. ಪ್ರತಿವರ್ಷ ನವೀಕರಣ ಮಾಡಿಕೊಂಡು certificate ತೆಗೆದುಕೊಳ್ಳುವಾಗ ಬಹಳಷ್ಟು ಸಂಕಷ್ಟ ಆಗುವುದರಿಂದ, ದಯವಿಟ್ಟು ಈ ವಿಚಾರವನ್ನು ಗಮನಿಸಬೇಕೆಂದು ಕೋರುತ್ತೇನೆ. ಇನ್ನೊಂದು ವಿಚಾರವೆಂದರೆ ಇವತ್ತು ITI ಗಳಿವೆ, ಈ ITI ಗಳಲ್ಲಿ ಅವರ ಅನುದಾನವನ್ನು ಸುಮಾರು 20 ವರ್ಷಗಳಿಂದ ಕೊಟ್ಟದ್ದನ್ನು ರದ್ದು ಮಾಡಿದ್ದಾರೆ.

**Mr. CHAIRMAN:-** ITI ಅವರಿಗೆ ಬರುವುದಿಲ್ಲ. ಬಹಳಷ್ಟು ಮಂದಿ ಮಾತನಾಡಲು ಹೆಸರು ಕೊಟ್ಟಿದ್ದು, ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಯಡಿಯೂರಪ್ಪನವರು ಇಂದು ಊಟಕ್ಕೆ ಆಹ್ವಾನಿಸಿದ್ದು, ನಂತರ ವಿಷಯವನ್ನು ತೆಗೆದುಕೊಳ್ಳೋಣ. ಈಗ ಸದನವನ್ನು 3 ಗಂಟೆಯವರೆಗೂ ಮುಂದೂಡುತ್ತೇನೆ.

**(ಸದನವು ಮಧ್ಯಾಹ್ನ 1 ಗಂಟೆ 48 ನಿಮಿಷಗಳಿಗೆ ಮುಂದೂಡಲ್ಪಟ್ಟು, ಪುನಃ ಅಪರಾಹ್ನ 3 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)**

(603) 24.3.2022 3.10 ಪಿಕೆ:ಬಿಎಸ್ಎಸ್

**(ಭೋಜನ ವಿರಾಮದ ನಂತರ ಸದನವು ಅಪರಾಹ್ನ 3 ಗಂಟೆ 12 ನಿಮಿಷಕ್ಕೆ ಸಮಾವೇಶಗೊಂಡಿತ್ತು. ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಪೀಠಾಸೀನರಾದರು)**

**<u>ಅರ್ಧ ಗಂಟೆ ಕಾಲಾವಧಿ ಚರ್ಚೆ</u>**

**ಆ) ವಿಷಯ:** ರಾಜ್ಯದಲ್ಲಿರುವ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಅಗ್ನಿ ಸುರಕ್ಷತೆ ಕುರಿತು.
(ಮುಂದುವರೆದದ್ದು)

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಈ ಸದನದಲ್ಲಿ ಈ ವಿಚಾರವಾಗಿ ಹಲವಾರು ಬಾರಿ ಪ್ರಶ್ನೆಗಳ ಸುರಿಮಳೆಯಾಗಿದೆ. ಸದನದ ಹೊರಗಡೆ ಕೂಡ ಒಂದು ಇತ್ಯರ್ಥ ಕಾಣಬೇಕು, ಇದಕ್ಕೊಂದು ಅಂತ್ಯ ಹಾಡಬೇಕೆಂದು ಮಾನ್ಯ ಮಂತ್ರಿಗಳು ಹಲವಾರು ಸಲ ಪದವೀಧರ ಕ್ಷೇತ್ರ ಮತ್ತು ಶಿಕ್ಷಕರ ಕ್ಷೇತ್ರದಿಂದ ಆಯ್ಕೆಯಾಗಿರುವಂತಹ ಸದಸ್ಯರುಗಳ ಜೊತೆ ಸಭೆಗಳನ್ನು ಮಾಡಿದ್ದಾರೆ. ಆ ಸಭೆಗಳು ಆದ ಪರಿಣಾಮವಾಗಿ, ಮಾನ್ಯ ಸಂಕನೂರರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದರು. ಆ ಸಮಿತಿಯು ಹುಬ್ಬಳ್ಳಿವರೆಗೆ ಹೋಗಿ ಡಿವಿಷನಲ್ ಆಫೀಸ್‌ಗಳಲ್ಲಿ ಕುಳಿತು, ಡಿವಿಷನಲ್ ಕೇಂದ್ರಗಳಲ್ಲಿ ಸಭೆ ಮಾಡಿ, ಅಲ್ಲಿ ಎಲ್ಲಾ ಶಾಲಾ-ಕಾಲೇಜುಗಳ ಮುಖ್ಯಸ್ಥರನ್ನು ಕರೆದು ಎಲ್ಲಾ ವಿಚಾರಗಳನ್ನು ಸುದೀರ್ಘವಾಗಿ ಚರ್ಚೆ ಮಾಡಲಾಯಿತು. ನಡೆದ ಒಟ್ಟು 9 ಸಭೆಗಳಲ್ಲಿ ಮತ್ತು ಬೆಂಗಳೂರಿನಲ್ಲಿ ಆದ ಎಲ್ಲಾ ವಿಚಾರಗಳೂ ಸೇರಿದಂತೆ ವರದಿ ಕೊಡಲಾಯಿತು. 9 ಸಭೆಗಳಲ್ಲಿ ಕುಳಿತ ಯಾವುದೇ ಶಾಸಕರು ಒಂದು ರೂಪಾಯಿಯ ಟಿ.ಎ., ಡಿ.ಎ.,ಯನ್ನೂ ತೆಗೆದುಕೊಳ್ಳಲಿಲ್ಲ. In the interest of Institution ನಾವೆಲ್ಲರೂ ಕೂಡ ಕೆಲಸ ಮಾಡಿದ್ದೇವೆ. ನಮಗೆ ಒಂದು ಜವಾಬ್ದಾರಿ ಕೊಟ್ಟರು. ಆ ಜವಾಬ್ದಾರಿಯನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಬೇಕೆಂದು ಎಲ್ಲಾ ರೀತಿಯ ಜಾಗರೂಕತೆಯನ್ನು ವಹಿಸಿ, ಸುಪ್ರೀಮ್ ಕೋರ್ಟ್‌ನ ಆದೇಶಕ್ಕೆ ಎಲ್ಲೂ ಕೂಡ ವ್ಯತಿರಿಕ್ತವಾದ ಪರಿಣಾಮ ಬರಬಾರದು ಎಂಬುದನ್ನು

ಮನಗಂಡು, ಕಾನೂನು ಇಲಾಖೆಯ ಅಭಿಪ್ರಾಯಗಳನ್ನು ಪಡೆದುಕೊಂಡು ವರದಿ ಕೊಡಲಾಯಿತು. ಆ ವರದಿಯನ್ನು ಸರ್ಕಾರ ಒಪ್ಪಿದೆಯೋ ಇಲ್ಲವೋ ಎನ್ನುವ ವಿಷಯ ಇವತ್ತಿನವರೆಗೂ ಕೂಡ ನಮಗೆ ಗೊತ್ತಾಗುತ್ತಿಲ್ಲ. ಮುಖ್ಯಮಂತ್ರಿಯವರನ್ನು ಕಂಡು ಮಾತನಾಡಿದೆವು. Is there any financial burden for anybody? Unnecessarily ಖಾಸಗಿ ಅನುದಾನಿತ ಅಥವಾ ಅನುದಾನ ರಹಿತ ಶಾಲೆಗಳಿಗೆ ಈ ರೀತಿ ಕಿರುಕುಳ ಕೊಟ್ಟು ತಾವೇ ತಮ್ಮ ಸಂಸ್ಥೆಗಳನ್ನು ಮುಚ್ಚಿಕೊಂಡು ಹೋಗುವಂತಹ ಪರಿಸ್ಥಿತಿಯನ್ನು ಸರ್ಕಾರ ನಿರ್ಮಾಣ ಮಾಡುತ್ತಿದ್ದೆಯೇ ಎನ್ನುವ ಅನುಮಾನ ನನಗೆ ಬರಲಾರಂಭಿಸಿದೆ. ಈ ಶಿಕ್ಷಣ ಸಂಸ್ಥೆಗಳು ಗುಣಮಟ್ಟದ ಶಿಕ್ಷಣವನ್ನು ಕೊಟ್ಟು ಅಗಾಧವಾದ ಸೇವೆಯನ್ನು ಮಾಡುತ್ತಿವೆ. ಅವರಿಗೆ ನಾವು ಕಿರುಕುಳ ಕೊಡಬಾರದು. "ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಯ ಕಟ್ಟಡಗಳ ಕಾಮಗಾರಿ ಸರ್ಕಾರದಿಂದ ಮಾನ್ಯತೆ ಪಡೆದ ಅಭಿಯಂತರರಿಂದ ಕಟ್ಟಲಾಗಿದೆಯಾದ್ದರಿಂದ ಚೆನ್ನಾಗಿವೆ" ಎನ್ನುವ ಮಾತನ್ನು ಹೇಳುತ್ತಾರೆ. ಲೋಕೋಪಯೋಗಿ ಇಲಾಖೆಯವರು ಕಟ್ಟಿರುವಂತಹ ಶಾಲಾ ಕಟ್ಟಡಗಳ ಗೋಡೆ ಬಿದ್ದು, ಸೋರಿಕೆ ಆಗುವುದನ್ನು ನಾವು ನೀವೆಲ್ಲರೂ ನೋಡಿದ್ದೇವೆ. ಈಗ ಆರ್‌ಸಿಸಿ ಕಟ್ಟಡಗಳನ್ನು ಕಟ್ಟುತ್ತಿದ್ದಾರೆ. ನಿಮ್ಮ ಅಧಿಕಾರಿಗಳ ನೇತೃತ್ವದಲ್ಲಿ ಕಟ್ಟಿದ ಕಟ್ಟಡಗಳು ಬಹಳ ಚೆನ್ನಾಗಿವೆ ಎನ್ನುವುದನ್ನು ಯಾವ ಆಧಾರದ ಮೇಲೆ ಹೇಳುತ್ತೀರಿ ಎಂಬುದನ್ನು ತಿಳಿಸಬೇಕು. ಈ ವಿಚಾರವನ್ನು ನಾನು ಬೇರೆ ತರಹ ಹೇಳಬೇಕಾಗುತ್ತದೆ. ಆದರೆ, ಹೇಳುವುದಕ್ಕೆ ಹೋಗುವುದಿಲ್ಲ. ಖಾಸಗಿ ಶಾಲೆಯವರಿಗೆ ಅವರಿಗೆ ಆದ ಜವಾಬ್ದಾರಿ ಇರುತ್ತದೆ. ಸರ್ಕಾರಿ ಕಟ್ಟಡ ಕಟ್ಟುವುದಕ್ಕೆ ನಮ್ಮ ಇಂಜಿನಿಯರ್‌ಗಳಿಗೆ ಕಡಿಮೆ ಜವಾಬ್ದಾರಿ ಇರುತ್ತದೆ. ಖಾಸಗಿಯವರು, ನನ್ನ ಶಾಲೆ, ನಾನು ಈ ಕಟ್ಟಡವನ್ನು ಸರಿಯಾಗಿ ಕಟ್ಟಬೇಕು ಎನ್ನುವ ಜವಾಬ್ದಾರಿಯಿಂದ ಕಟ್ಟಡವನ್ನು ಕಟ್ಟುತ್ತಾರೆ. ಮೊದಲನೆ ಮಹಡಿಯಲ್ಲಿ ನಮ್ಮ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿವೆ ಎನ್ನುವ ಮಾತನ್ನು ಹೇಳಿದ್ದೀರಿ. Ground floor + 1, 15 ಮೀಟರ್ ಇರಬೇಕು ಎಂದು fire clearance ಹೇಳುತ್ತದೆ. ಇಲ್ಲದಿದ್ದರೆ, 15 ಮೀಟರ್ ಒಳಗಿರುವಂತಹ ಯಾವುದೇ ಕಟ್ಟಡಕ್ಕೆ ನಾವು fire clearance ಕೇಳುವುದಿಲ್ಲ ಎಂದು ಹೇಳಿಬಿಡಿ. ಖಾಸಗಿಯವರು, ಬೇಕಾದರೆ ಹೆಬ್ಬಾಗಿಲನಲ್ಲೇ ನಾವು ಒಂದು ಸಿಲೆಂಡರ್ ಹಾಕುತ್ತೇವೆ ಮತ್ತು ಅದಕ್ಕೆ ಮುಂಜಾಗರೂಕತೆಯ ಕ್ರಮವನ್ನು ಕೈಗೊಳ್ಳುತ್ತೇವೆ ಎಂದು ಹೇಳುತ್ತಾರೆ. ಲೋಕೋಪಯೋಗಿ ಇಲಾಖೆಯವರು ಒಂದು ಕಟ್ಟಡವನ್ನು ಕಟ್ಟಿದರೆ ಕನಿಷ್ಠ 15

ವರ್ಷಗಳ ಗ್ಯಾರಂಟಿ ಇರುತ್ತದೆ ಎಂದು ಹೇಳುತ್ತಾರೆ ಅಲ್ಲವೇ? ಪ್ರತಿ ವರ್ಷ ಅದಕ್ಕೆ ಮಾನ್ಯತೆ ತೆಗೆದುಕೊಳ್ಳಬೇಕೇ? ಒಂದು ಕಟ್ಟಡವನ್ನು ಕಟ್ಟಿದರೆ ಕನಿಷ್ಠ 25 ವರ್ಷಗಳ ಕಾಲ ಅದನ್ನು ಮುಟ್ಟಬಾರದು. 25 ವರ್ಷದ ನಂತರ 5 ವರ್ಷಕ್ಕೋ 10 ವರ್ಷಕ್ಕೋ ಒಂದು ಸಲ ಸೂಕ್ತ ಮಾನದಂಡವನ್ನು ಅನುಸರಿಸಲಿ. ಮ್ಯಾನೇಜ್‌ಮೇಂಟ್‌ನವರು ಪ್ರತಿವರ್ಷ PWD, fire and emergency services Department, education department ಇವರುಗಳ ಹತ್ತಿರ ಹೋಗಿ ನಿಂತುಕೊಳ್ಳಬೇಕೇ? ನಮ್ಮ ಅಧಿಕಾರಿಗಳಿಗೆ, ಸುಮ್ಮನೆ ಮಲಗಿದವನಿಗೆ ಹಾಸಿಗೆ ಒದಗಿಸಿ ಕೊಟ್ಟ ಹಾಗೆ" ಎಂದು ಹೇಳುವ ಹಾಗಾಗಿದೆ. ಖಾಸಗಿ ಶಾಲೆಯವರು ಬಹಳ ನೊಂದುಕೊಂಡಿದ್ದಾರೆ, ಅಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರೂ ಕೂಡ ನೊಂದುಕೊಂಡು ಕೆಲಸ ಮಾಡುತ್ತಿದ್ದಾರೆ. ಈ ಪರಿಸ್ಥಿತಿಯನ್ನು ನಿವಾರಿಸಬೇಕಾಗುತ್ತದೆ. ಮಾನ್ಯ ಮಂತ್ರಿಗಳು ಸದನಕ್ಕೆ ಬಂದಿಲ್ಲ. ಇದಕ್ಕೆ ಮಾನ್ಯ ಸಚಿವರು ಸ್ಪಷ್ಟವಾಗಿ ಉತ್ತರ ಕೊಡಬೇಕಾಗುತ್ತದೆ. ಮಾನ್ಯ ಸಭಾಪತಿಗಳೆ, ನಿಮಗೂ ಗೊತ್ತಿದೆ. ನೀವು ಸಭಾ ಪೀಠದಿಂದ ಹಿಂದಕ್ಕೆ ಹೋಗಿ ನೋಡಿದರೆ ನಿಮಗೂ ಗೊತ್ತಾಗುತ್ತದೆ. ಇದರ ಆಳ-ಅಗಲ ಪೂರ್ತಿಯಾಗಿ ನಿಮಗೂ ಗೊತ್ತಿದೆ. ಆದ್ದರಿಂದ ನೀವು ಸರ್ಕಾರಕ್ಕೆ, ಹೌದು ಪರಿಸ್ಥಿತಿ ಹೀಗಿದೆ; ನೀವು ಹೀಗೆ ಕ್ರಮ ತೆಗೆದುಕೊಳ್ಳಿ ಎಂದು ನಿರ್ದೇಶನ ಕೊಡಿ. ಸರ್ಕಾರಿ ಶಾಲೆಗಳಿಗೆ ಮತ್ತು ಖಾಸಗಿ ಶಾಲೆಗಳಿಗೆ ಬೇರೆ ಬೇರೆ ಮಾನದಂಡವೇಕೇ? ಸುಪ್ರೀಂ ಕೋರ್ಟ್ ಹೇಳುವುದು ಎಲ್ಲಕ್ಕೂ ಅನ್ವಯಿಸುತ್ತದೆ. ಮಾನ್ಯ ಸಭಾಪತಿಗಳೆ, ನೀವು ಪೀಠದಿಂದ ಸರ್ಕಾರಕ್ಕೆ ಆದೇಶ ಕೊಡಬೇಕಾಗುತ್ತದೆ.

**ಸಭಾಪತಿಯವರು:-** ಸುಪ್ರೀಂ ಕೋರ್ಟ್ 2009ರಲ್ಲೇ ಇದನ್ನು ಹೇಳಿದೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಗಳೆ, ಸುಪ್ರೀಂ ಕೋರ್ಟ್‌ನ ಆದೇಶಕ್ಕೆ ಗೌರವ ಕೊಡಬೇಕು. ನಮ್ಮ ಸಮಿತಿಯ ವರದಿಯಲ್ಲಿ ಯಾವುದನ್ನೂ ತಪ್ಪಾಗಿ ಹೇಳಿಲ್ಲ . ಸರ್ಕಾರಕ್ಕೆ ಅನುಕೂಲ ಮಾಡಿಕೊಡತಕ್ಕಂಥ, ಶಿಕ್ಷಣ ಸಂಸ್ಥೆಗಳಿಗೆ ಏನೂ ತೊಂದರೆ ಆಗದ ಹಾಗೆ ವರದಿ ಕೊಟ್ಟಿದ್ದೇವೆ ಎಂದು ನಾವು ಭಾವಿಸುತ್ತೇವೆ; ನಾವು ಸರ್ವಜ್ಞರೇನು ಅಲ್ಲ. ನಿಮ್ಮ ಶಿಕ್ಷಣ ಇಲಾಖೆಯಲ್ಲಿ ಯಾರು ಸರ್ವಜ್ಞರಿದ್ದಾರೋ, ತಜ್ಞರಿದ್ದಾರೋ ಅವರಿಗೆ ಕೇಳಿ, ನಮ್ಮ ವರದಿಯಲ್ಲಿ ಏನಿದೆ ಎಂಬುದನ್ನು ಹೇಳುತ್ತಾರೆ. ಅವರನ್ನು ಕೂರಿಸಿಕೊಂಡೇ ವರದಿಯನ್ನು ತಯಾರಿಸಲಾಗಿದೆ. ಅದು

ಸರಿಯಾಗಿದೆಯೋ ಇಲ್ಲವೋ ಎಂದು ಹೇಳಬಿಡಲಿ. ಅದರಲ್ಲಿ ಏನಾದರೂ ಮಾಡಿಫಿಕೇಷನ್ ಇದ್ದರೆ ಅದನ್ನೂ ಮಾಡಲಿ. ದಯಮಾಡಿ ಈ ಚಿತ್ರಹಿಂಸೆಯ ಪರಿಸ್ಥಿತಿಗಯನ್ನು ಅಂತ್ಯಗೊಳಿಸಬೇಕೆಂದು ಪೀಠದ ಮುಖಾಂತರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ತಮಿಳುನಾಡಿನ ಕುಂಬಕೋಣಂನ ಲಾರ್ಡ್ ಕೃಷ್ಣ ಮಿಡ್ಲ್ ಸ್ಕೂಲ್‌ನಲ್ಲಿ ಏನು ಅವಗಡ ಆಯಿತೋ ಆಗ 94 ಮಕ್ಕಳ ಸಜೀವ ದಹನ ಆಯಿತು. ಜೊತೆಗೆ 134 ಮಕ್ಕಳಿಗೆ ಬಹಳಷ್ಟು ಗಾಯಗಳಾಯಿತು. ಈ ವಿಚಾರದ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್ ಒಂದು ತೀರ್ಪು ನೀಡಿತು. ಅದರ ಅಡಿಯಲ್ಲಿ ಕೇಂದ್ರ ಸರ್ಕಾರದ (HRD) Human Resources Development ನವರು ಎಲ್ಲಾ ರಾಜ್ಯಗಳಿಗೆ National Building Code ಪ್ರಕಾರ building safety and fire safety ಕಡ್ಡಾಯವಾಗಿ ಪಾಲಿಸಬೇಕೆಂದು ನಿರ್ದೇಶನ ಕೊಟ್ಟಿತು ಮತ್ತು ಆ ಹಿನ್ನೆಲೆಯಲ್ಲಿ ಸುತ್ತೋಲೆ ಹೊರಡಿಸಲಾಯಿತು. ಆಗ ಕರ್ನಾಟಕದಲ್ಲೂ 2018ರಲ್ಲಿ ಒಂದು ಆದೇಶ ಮಾಡಿದರು. ಹೊಸ ಶಾಲೆ ಪ್ರಾರಂಭ ಮಾಡಬೇಕಾದರೆ, ನವೀಕರಣಗೊಳಿಸಬೇಕಾದರೆ compulsorily building safety and fire safety certificates produce ಮಾಡಬೇಕೆಂದು G.O. ಮಾಡಿದರು. ಆಗ ರಾಜ್ಯದಲ್ಲಿದ್ದ ವಿವಿಧ ಸಂಘಟನೆಗಳು, ಸಂಘ–ಸಂಸ್ಥೆಗಳು, ಬಹಳಷ್ಟು ಹಳೆಯ ಶಾಲೆಗಳು, ಜಿ.ಓ. ಮಾಡಿರುವಂತೆ ಅನುಸರಿಸಲು ಬಹಳ ತೊಂದರೆಯಾಗುತ್ತದೆ; ಕಷ್ಟವಾಗುತ್ತದೆ. ಇದನ್ನು ಸರಳೀಕರಣಗೊಳಿಸಬೇಕು ಸರ್ಕಾರಕ್ಕೆ ಮನವಿ ನೀಡಿತು. ಆ ಹಿನ್ನೆಲೆಯಲ್ಲಿ ಶಿಕ್ಷಣ ಸಚಿವರು ಒಂದು ಸಮಿತಿ ರಚನೆ ಮಾಡಿದರು. ನಮ್ಮಲ್ಲಿನ 8 ಜನ ಶಾಸಕರು ಮತ್ತು 9 ಜನ ಅಧಿಕಾರಿಗಳಿದ್ದರು. ಲೋಕೋಪಯೋಗಿ ಇಲಾಖೆ, ಗೃಹ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಸಾರಿಗೆ ಇಲಾಖೆ ಹೀಗೆ 9 ಇಲಾಖೆಗಳ ಅಧಿಕಾರಿಗಳನ್ನೊಳಗೊಂಡ ಒಟ್ಟು 17 ಜನರ ಒಂದು ಸಮಿತಿಯನ್ನು ರಚನೆ ಮಾಡಿದರು.

(ಮುಂದು . . .)

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(604) 24/03/2022 / 3:20/ ಎಸ್‌ಪಿಆರ್/ಕೆಎಸ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ವ್ಹಿ.ಸಂಕನೂರ(ಮುಂದು):-**

ಈಗಷ್ಟೇ ಮಾನ್ಯ ಎಸ್.ಎಲ್.ಭೋಜೇಗೌಡರು ಪ್ರಸ್ತಾಪಿಸಿದಂತೆ, ನಾವುಗಳು ವಿಭಾಗ ಮಟ್ಟದಲ್ಲಿ ಸಭೆಗಳನ್ನು ಮಾಡಿದ್ದೇವೆ. ಪ್ರಶ್ನಿತ ವಿಷಯದ ಬಗ್ಗೆ ಸರ್ವೋಚ್ಛ ನ್ಯಾಯಾಲಯವು ತೀರ್ಪು ನೀಡಿದ್ದರಿಂದ, ನಾವು ಸರಿಯಾಗಿ ಕೆಲಸ ಮಾಡಬೇಕೆನ್ನುವ ದೃಷ್ಟಿಯಿಂದ ಕಾನೂನು ಇಲಾಖೆಯೊಂದಿಗೆ ಸಮಾಲೋಚಿಸಿ, ವರದಿಯನ್ನು ನೀಡಿ, ಆರು ತಿಂಗಳುಗಳಾಗಿವೆ. ಈ ವರದಿಯನ್ನು ಜಾರಿಗೊಳಸಬೇಕೆಂದು ಪುನಃ ಎಲ್ಲಾ ಶಾಸಕರು ಹಾಗೂ ಸಂಘಟನೆಗಳು ಒತ್ತಾಯಿಸಿದ್ದೇವೆ. ಆದರೆ ಇದರ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಅಧಿಕಾರ ವಿಕೇಂದ್ರೀಕರಣ ಮಾಡಬೇಕೆಂದು ವರದಿಯಲ್ಲಿ ಶಿಫಾರಸ್ಸು ಮಾಡಲಾಗಿದೆ. ಇವತ್ತು delegation of powers ನ್ನು ಮಾಡಬೇಕಾಗಿದೆ. ಇವತ್ತಿನ ದಿವಸ ರಾಜ್ಯದಲ್ಲಿ ಅಗ್ನಿ ಶಾಮಕ ಇಲಾಖೆಯಿಂದ ಅಗ್ನಿ ಸುರಕ್ಷತಾ ಪತ್ರವನ್ನು ಪಡೆದುಕೊಳ್ಳಬೇಕಾಗಿದೆ. ರಾಜ್ಯದ ಬೆಂಗಳೂರು, ಮೈಸೂರು, ಮಂಗಳೂರು ಹಾಗೂ ನಮ್ಮ ಭಾಗದ ಹುಬ್ಬಳ್ಳಿಗಳಲ್ಲಿ ಮಾತ್ರವೇ ಅಗ್ನಿ ಶಾಮಕ ಇಲಾಖೆಯ ವಿಭಾಗೀಯ ಕೇಂದ್ರಗಳಿವೆ. ಎಲ್ಲಿಯೋ ಹಳ್ಳಿಯಲ್ಲಿ ಇರುವ ಪ್ರಾಥಮಿಕ ಶಾಲೆಯ ಅಧ್ಯಕ್ಷರು ಮತ್ತು ಮುಖ್ಯ ಶಿಕ್ಷಕರು ಎಲ್ಲರೂ ಸಹ ಅಗ್ನಿ ಸುರಕ್ಷತೆ ದೃಢೀಕರಣವನ್ನು ಪಡೆಯಲು ವಿಭಾಗ ಮಟ್ಟದ ಕಛೇರಿಗಳಿಗೆ ಬರಬೇಕು. ಇವತ್ತಿನ ದಿವಸ ಉತ್ತರ ಕರ್ನಾಟಕ ಭಾಗದ ಹುಬ್ಬಳ್ಳಿಯಲ್ಲಿ ಮಾತ್ರವೇ ವಿಭಾಗೀಯ ಕಛೇರಿ ಇದೆ. ಹೀಗಾಗಿ ಕಲಬುರಗಿ ವಿಭಾಗದವರೂ ಸಹ ಹುಬ್ಬಳ್ಳಿಗೆ ಬರಬೇಕು. ಇದರಿಂದಾಗಿ ಬಹಳ ತೊಂದರೆಯಾಗುತ್ತದೆ ಎನ್ನುವ ಕಾರಣಕ್ಕಾಗಿ ಅಧಿಕಾರ ವೀಕೇಂದ್ರಕರಣ ಮಾಡಬೇಕೆಂದು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಅಧಿಕಾರ ನೀಡಬೇಕೆಂದು ಸಮಿತಿ ವತಿಯಿಂದ ಶಿಫಾರಸ್ಸು ಮಾಡಲಾಗಿದೆ. ಸುರಕ್ಷತಾ ದೃಢೀಕರಣವನ್ನು ವಿಭಾಗೀಯ, ಜಿಲ್ಲಾ ಅಥವಾ ತಾಲ್ಲೂಕು ಮಟ್ಟದ ಕಛೇರಿಗಳಲ್ಲಿಯೇ ನೀಡಬೇಕೆಂದು ಸರ್ವೋಚ್ಛ ನ್ಯಾಯಾಲಯವು ಎಲ್ಲಿಯೂ ಸಹ ಉಲ್ಲೇಖಿಸಿಲ್ಲ. ಈ ಎಲ್ಲಾ ಅಂಶಗಳ ಬಗ್ಗೆ ಅಧ್ಯಯನ ಮಾಡಿ ನಾವು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸುರಕ್ಷತಾ ದೃಢೀಕರಣ ನೀಡುವ ಬಗ್ಗೆ ಅಧಿಕಾರ ವಿಕೇಂದ್ರೀಕರಣ ಮಾಡಬೇಕೆಂದು ಸಮಿತಿಯು ಶಿಫಾರಸ್ಸು ಮಾಡಿದೆ. ಆದರೆ, ಇವತ್ತಿನವರೆಗೆ

ಸರ್ಕಾರ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳಲು ತಯಾರಿಲ್ಲ. ಇದು ಬಹಳ ಕಷ್ಟದ ಕೆಲಸವಾಗಿರುವುದರಿಂದ ನಾವು ಸಕಾರಣಗಳನ್ನು ನೀಡಿದ್ದೇವೆ. ನಮ್ಮ ರಾಜ್ಯದಲ್ಲಿ ಸುಮಾರು 83,285 ಶಾಲೆಗಳು ಇವೆ. ಇಷ್ಟೊಂದು ಸಂಖ್ಯೆಯ ಶಾಲೆಗಳನ್ನು ಅವರು ಪರಿಶೀಲಿಸಲು ಹೇಗೆ ಸಾಧ್ಯವಾಗುತ್ತದೆ? ಹೀಗಾಗಿ ಆಯಾಯಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಅಧಿಕಾರವನ್ನು ನೀಡಲಿ. ಜಿಲ್ಲಾ ಅಗ್ನಿ ಸುರಕ್ಷತಾ ಅಧಿಕಾರಿಗಳು ಪರಿಶೀಲನೆ ಮಾಡಿ, ದೃಢೀಕರಣ ನೀಡುತ್ತಾರೆ ಎಂದು ನಾವು ತಿಳಿದುಕೊಂಡಿದ್ದೇವೆ. ಈ ಸಂದರ್ಭದಲ್ಲಿ ನಾನು ಬಹಳ ಮಹತ್ವದ ವಿಷಯವನ್ನು ಸದನದ ಗಮನಕ್ಕೆ ತರಬಯಸುತ್ತೇನೆ. ನಮ್ಮ ನೆರೆಯ ತೆಲಂಗಾಣ ಸರ್ಕಾರವು 2017 ನೇ ಇಸ್ವಿಯಲ್ಲಿಯೇ ಕೇವಲ ನೆಲಮಹಡಿ ಕಟ್ಟಡವುಳ್ಳ ಶಾಲೆ ಇದ್ದರೆ, ಅಗ್ನಿ ಸುರಕ್ಷತಾ ದೃಢೀಕರಣದ ಅವಶ್ಯಕತೆ ಇಲ್ಲ ಹಾಗೂ ಅಗ್ನಿ ಶಾಮಕ ಇಲಾಖೆಯ ನಿರಪೇಕ್ಷಣಾ ಪತ್ರ ಪಡೆಯುವ ಅವಶ್ಯಕತೆ ಇಲ್ಲವೆಂದು ಆದೇಶವನ್ನು ಹೊರಡಿಸಿದೆ. ಇದನ್ನು ಅಲ್ಲಿನ ಸರ್ಕಾರವು ಅನುಷ್ಠಾನವೂ ಸಹ ಗೊಳಿಸಿದೆ. ಈ ಸರ್ಕಾರಿ ಆದೇಶವನ್ನು ನಾವು ಪಡೆದುಕೊಂಡು, ಈ ಅಂಶವನ್ನು ನಾವೂ ಸಹ ಶಿಫಾರಸ್ಸು ಮಾಡಿದ್ದೇವೆ. ಆದರೂ ಸಹ ಸರ್ಕಾರವು ಇದನ್ನು ಜಾರಿಗೆ ತರಲು ಸಿದ್ಧವಿಲ್ಲ. ಸರ್ಕಾರವು 10 ಸಾವಿರ ಲೀಟರ್ ಸಾಮರ್ಥ್ಯದ ಟ್ಯಾಂಕ್‌ನ್ನು ಅಳವಡಿಸಬೇಕೆಂದು ತಿಳಿಸುತ್ತದೆ. ಆದರೆ, ಕೇವಲ ನೆಲಮಹಡಿ ಕಟ್ಟಡಕ್ಕೆ ಇಷ್ಟು ದೊಡ್ಡ ಟ್ಯಾಂಕ್‌ನ ಅವಶ್ಯಕತೆ ಇದೆಯೇ ಎಂದು ನಾನು ಕೇಳಬಯಸುತ್ತೇನೆ. ಹೀಗಾಗಿ ನಾವು 10 ಸಾವಿರದ ಬದಲಾಗಿ ಕೇವಲ 5 ಸಾವಿರ ಲೀಟರ್ ಸಾಮರ್ಥ್ಯದ ಟ್ಯಾಂಕ್‌ನ ಅವಶ್ಯಕತೆ ಇದೆ ಎಂದು ನಾವು ಶಿಫಾರಸ್ಸು ಮಾಡಿದ್ದೇವೆ. ನಾವು ನೀಡಿರುವ ಶಿಫಾರಸ್ಸುಗಳನ್ನು ಸರ್ಕಾರವು ಗಮನಿಸುತ್ತಿಲ್ಲ. ಹೀಗಾಗಿ ಬಹಳ ತೊಂದರೆಯಾಗಿದೆ.

ಇದೇ ರೀತಿಯಾಗಿ ಕಟ್ಟಡ ಸುರಕ್ಷತೆಯ ವಿಚಾರದಲ್ಲಿಯೂ ಸಹ ಲೋಕೋಪಯೋಗಿ ಇಲಾಖೆಯು ಎಲ್ಲವನ್ನೂ ಪರಿಶೀಲಿಸಲು ಆಗುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ಒಂದು ಜಿಲ್ಲೆಯಲ್ಲಿರುವ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳನ್ನು ಒಟ್ಟುಗೂಡಿಸಿದರೆ ಅವುಗಳು 25,000 ದಷ್ಟಾಗುತ್ತವೆ. ಇಲಾಖೆಯ ಜಿಲ್ಲಾ ಮಟ್ಟದ ಕಾರ್ಯಪಾಲಕ ಇಂಜಿನಿಯರ್ ಎಲ್ಲಾ ಶಾಲಾ-ಕಾಲೇಜುಗಳನ್ನು ಪರಿಶೀಲಿಸಲಾಗುವುದಿಲ್ಲ. ಹೀಗಾಗಿ ಅಲ್ಲಿನ

ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಪರಿಶೀಲನಾ ಅಧಿಕಾರವನ್ನು ನೀಡಬೇಕೆಂದು ನಾವು ಹೇಳಿದ್ದೇವೆ. ಸಮಿತಿಯು ಶಿಫಾರಸ್ಸು ಮಾಡಿರುವ ಅಂಶಗಳು, ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪಿಗೆ ವ್ಯತಿರಿಕ್ತವಾಗಿರುವುದಿಲ್ಲ. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ನಾನು ಸರ್ಕಾರವನ್ನು ಒತ್ತಾಯಿಸುವುದೇನೆಂದರೆ, ದಯಮಾಡಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಮುಖ್ಯಮಂತ್ರಿಗಳೊಂದಿಗೆ ಸಭೆಯನ್ನು ಮಾಡಬೇಕು. ಇದಕ್ಕೆ ಲೋಕೋಪಯೋಗಿ, ಗೃಹ, ಸಾರಿಗೆ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯವರನ್ನೂ ಸಹ ಕರೆಸಬೇಕು. ಈ ವಿಚಾರದಲ್ಲಿ ಸರ್ಕಾರವು ನಿರ್ಣಯವನ್ನು ಕೈಗೊಳ್ಳಬೇಕೆಂದು ನಾನು ಒತ್ತಾಯಿಸುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಮ್ಮದು ಕೇವಲ ಅರಣ್ಯ ರೋದನವಾಗಿದೆಯಷ್ಟೆ. ಏಕೆಂದರೆ ಸಚಿವರು ಎಲ್ಲಿದ್ದಾರೆ ಎನ್ನುವುದು ಗೊತ್ತಿಲ್ಲ.

**ಶ್ರೀ ಮಂಜುನಾಥ್ ಭಂಡಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಪ್ರಶ್ನಿತ ವಿಷಯಕ್ಕೆ ಸಂಬಂಧಪಟ್ಟಂತೆ, ನೆಲಮಹಡಿ ಮತ್ತು 3 ಮಹಡಿಗಳನ್ನು ಸೇರಿಸಿ ಒಟ್ಟು 15 ಮೀಟರ್‌ಗಳಿಗಿಂತ ಹೆಚ್ಚಾದರೆ, ಒಂದು ಚದರಡಿಗೆ 65 ರೂಪಾಯಿಗಳಂತೆ ಶುಲ್ಕ ಸಂಗ್ರಹಿಸುತ್ತಾರೆ. ವಾಸ್ತವವಾಗಿ ಇಲಾಖೆಯವರಿಗೆ ಯಾವ ರೀತಿಯ ಕೆಲಸ ಅಲ್ಲಿ ಇದೆ ಎನ್ನುವುದು ಗೊತ್ತಿಲ್ಲ. ಈ ಸಂಬಂಧ ನಾನು ಉದಾಹರಣೆಯನ್ನು ನೀಡಬಯಸುತ್ತೇನೆ. ಸುಮಾರು 2 ಲಕ್ಷ ಚದರಡಿಗಳಷ್ಟು ಕಟ್ಟಡ ಇದೆ ಎಂದಾದರೆ, ಸುಮಾರು 8 ಲಕ್ಷ ರೂಪಾಯಿಗಳಷ್ಟು ಶುಲ್ಕವನ್ನು ಭರಿಸಬೇಕು. ಇದು ಕೇವಲ ಶುಲ್ಕದ ಮೊತ್ತವಾಗಿದೆ. ಇದಲ್ಲದೇ, ಅಗ್ನಿ ಸುರಕ್ಷತಾ ದೃಢೀಕರಣಕ್ಕೆ ಬೇರೆ ಶುಲ್ಕವನ್ನು ಪಾವತಿಸಬೇಕು. ಯಾವುದೇ ಖಾಸಗಿ ಶಾಲಾ-ಕಾಲೇಜುಗಳಿಗೆ 2 ಲಕ್ಷ ಚದರಡಿ ವಿಸ್ತೀರ್ಣದ ಕಟ್ಟಡಕ್ಕೆ ಸುರಕ್ಷತಾ ದೃಢೀಕರಣವನ್ನು ನೀಡಲು ಸುಮಾರು 40-50 ಲಕ್ಷ ರೂಪಾಯಿಗಳಷ್ಟು ಹಣದ ಅವಶ್ಯಕತೆ ಇದೆ. ಇಲಾಖೆಯವರು ಸುಮಾರು 8 ಲಕ್ಷ ರೂಪಾಯಿಗಳಷ್ಟು ಶುಲ್ಕವನ್ನು ಪಡೆದುಕೊಂಡು ಏನೂ ಕೆಲಸವನ್ನು ಮಾಡುವುದಿಲ್ಲ. Third party agency ಕಡೆಯಿಂದ ಪರಿಶೀಲನೆ ಮಾಡಿಸುತ್ತಾರೆ. ಕಟ್ಟಡದ ನಕಾಶೆಯನ್ನೂ ಸಹ ಅವರಿಂದಲೇ ಮಾಡಿಸಬೇಕು.

ಇಲಾಖೆಯವರು ಕೇವಲ ಬಂದು, ಅಲ್ಲಿನ ಸಂಗತಿಗಳನ್ನು ನೋಡಿ, ಸಹಿ ಹಾಕಿ ಹೋಗುತ್ತಾರೆ ಅಷ್ಟೇ ಹೊರತು ಯಾವುದೇ ಕೆಲಸವನ್ನು ಮಾಡುವುದಿಲ್ಲ. ಒಂದು ಚದರ ಅಡಿಗೆ 65/- ರೂಪಾಯಿಗಳಂತೆ ಸುಮಾರು 8 - 8.5 ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಇದರಲ್ಲಿ ವಸತಿ ಮತ್ತು ವಾಣಿಜ್ಯ ಎಂಬ ಎರಡು ರೀತಿಯ ಶುಲ್ಕವನ್ನು ವಿಧಿಸುತ್ತಾರೆ. ವಾಣಿಜ್ಯ ಚಟುವಟಿಕೆಗಳಿಗೆ ವಿಧಿಸುವ ಶುಲ್ಕವನ್ನೇ ಶಾಲೆಗಳಿಗೂ ಸಹ ವಿಧಿಸುತ್ತಾರೆ. ನೆಲಮಹಡಿಗೆ ಅಗ್ನಿ ಸುರಕ್ಷತಾ ದೃಢೀಕರಣ ಬೇಕು ಅಥವಾ ಬೇಡ ಎನ್ನುವುದು ಚರ್ಚಾ ಸಂಗತಿಯಾಗಿದೆ. ಸರ್ಕಾರಿ ಮತ್ತು ಖಾಸಗಿ ಶಾಲೆಗಳು ಎಂಬುದಾಗಿ ಏಕೆ ತಾರತಮ್ಯ ಮಾಡುತ್ತಾರೆ ಎಂದು ನಾನು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ. ಸರ್ಕಾರಿ ಅಥವಾ ಖಾಸಗಿ ಶಾಲೆ ಎಲ್ಲಿಯಾದರೂ ಸರಿ ಅಲ್ಲಿರುವ ಮಕ್ಕಳೆಲ್ಲರೂ ಮಕ್ಕಳಲ್ಲವೇ? ಎರಡೂ ರೀತಿಯ ಶಾಲೆಗಳಲ್ಲಿರುವ ಮಕ್ಕಳೆಲ್ಲರ ಜೀವವು ಒಂದೇ ಆಗಿರುತ್ತದೆ. ಶೈಕ್ಷಣಿಕ ಸಂಸ್ಥೆಗಳ ಕಟ್ಟಡಗಳಿಗೆ ವಾಣಿಜ್ಯ ದರವನ್ನು ಅಂದರೆ ಒಂದು ಚದರಡಿಗೆ 65/- ರೂಪಾಯಿಗಳಂತೆ ವಿಧಿಸುತ್ತಿದ್ದಾರೆ. ಹೀಗಾಗಿ ಇದನ್ನು ಕನಿಷ್ಠಗೊಳಿಸಬೇಕೆಂದು ಈ ವಿಚಾರದಲ್ಲಿ ನಾನು ಸರ್ಕಾರಕ್ಕೆ ಸಲಹೆ ನೀಡುತ್ತೇನೆ. ಈಗಾಗಲೇ ಹಲವಾರು ಸದಸ್ಯರು ಪ್ರಸ್ತಾಪಿಸಿದಂತೆ, ನೆಲ ಮಹಡಿ ಮತ್ತು ಒಂದನೇ ಮಹಡಿಗೆ ಅಂದರೆ 15 ಮೀಟರ್‌ಗಳಿಗಿಂತ ಹೆಚ್ಚಿನ ಕಟ್ಟಡಕ್ಕೆ ಬಹಳಷ್ಟು ಶುಲ್ಕವನ್ನು ಸಂಗ್ರಹ ಮಾಡುತ್ತಾರೆ. ಆದರೆ ಇಲಾಖೆಯವರು ಯಾವುದೇ ಕೆಲಸವನ್ನು ಮಾಡುವುದಿಲ್ಲ. ಹೀಗಾಗಿ ಈ ಶುಲ್ಕವನ್ನು ಕಡಿಮೆ ಮಾಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯಿಸುತ್ತೇನೆ. ಈಗಾಗಲೇ ಸದಸ್ಯರು ಪ್ರಸ್ತಾಪಿಸಿದಂತೆ, ಮಂಗಳೂರಿನಲ್ಲಿ ವಿಭಾಗೀಯ ಕಛೇರಿ ಇದೆ. ಹೀಗಾಗಿ ಅಲ್ಲಿನ ಅಧಿಕಾರಿಗಳು ಸ್ಥಳ ಪರಿಶೀಲನೆಗೆ ಹೋಗಬಹುದು. ವಿಭಾಗೀಯ ಕಛೇರಿಯಿಂದ ದೂರದ ಸ್ಥಳಗಳಿಗೆ ಪರಿಶೀಲನೆಗೆ ಹೋಗಬೇಕೆಂದು ಹೇಳಿದರೆ, ಇದು ನಿಜವಾಗಿಯೂ ಸಹ ಅಧಿಕಾರಿಗಳಿಗೆ ಹೊರೆಯಾಗುತ್ತದೆ ಎಂದು ನಾನು ಅಭಿಪ್ರಾಯ ಪಡುತ್ತೇನೆ.

**ಶ್ರೀ ಶಶೀಲ್ ಜಿ.ನಮೋಶಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶಾಲೆಗಳಲ್ಲಿ ಅಗ್ನಿ ಸುರಕ್ಷತಾ ಪರಿಕರಗಳನ್ನು ಅಳವಡಿಸಬೇಕು ಹಾಗೂ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ಪಡೆಯಬೇಕು ಎಂಬುದಾಗಿ ಕಡ್ಡಾಯಗೊಳಿಸಲಾಗಿದೆ. ಒಂದು ವೇಳೆ ಈ ರೀತಿಯ

ದೃಢೀಕರಣಗಳನ್ನು ಸಲ್ಲಿಸದಿದ್ದರೆ, ಪರವಾನಿಗೆಯನ್ನು ನವೀಕರಣ ಮಾಡುವುದಿಲ್ಲ ಎಂದು ಹೇಳುತ್ತಾರೆ. ಈ ಅಂಶಗಳ ಬಗ್ಗೆ ಸದನದಲ್ಲಿ ಅನೇಕ ಬಾರಿ ಚರ್ಚಿಸಲಾಗಿದೆ. ಈ ವಿಚಾರದಲ್ಲಿ ಸರ್ಕಾರವು ವಿಳಂಬ ನೀತಿಯನ್ನು ಅನುಸರಿಸುತ್ತಿದೆ ಎಂದು ನನಗೆ ಅನ್ನಿಸುತ್ತಿದೆ. ಇದೇ ವಿಚಾರವಾಗಿ ಶ್ರೀ ಎಸ್.ವ್ಹಿ.ಸಂಕನೂರು ರವರು ಮಾತನಾಡುವ ಸಂದರ್ಭದಲ್ಲಿ ಈಗಾಗಲೇ ಪ್ರಸ್ತಾಪಿಸಿದ್ದಾರೆ. ಪ್ರಶ್ನಿತ ವಿಚಾರವಾಗಿ ಸಮಿತಿಯು ತನ್ನ ವರದಿಯನ್ನು ಸಲ್ಲಿಸಿ ಸುಮಾರು ತಿಂಗಳುಗಳಾಗಿವೆ ; ಆದರೂ ಸಹ ಇದರ ಬಗ್ಗೆ ಸರ್ಕಾರವು ಯಾವುದೇ ರೀತಿಯ ಕ್ರಮ ಕೈಗೊಂಡಿಲ್ಲ. ಇತ್ತೀಚೆಗೆ, ರಾಜ್ಯದ ಉಚ್ಛ ನ್ಯಾಯಾಲಯವು ತನ್ನ ತೀರ್ಪಿನಲ್ಲಿ ಪ್ರತಿ ವರ್ಷದ ಬದಲಾಗಿ ಪ್ರತಿ 10 ವರ್ಷಕ್ಕೆ ನವೀಕರಣ ಮಾಡಬೇಕೆಂದು ತಿಳಿಸಿರುತ್ತದೆ. ಸರ್ಕಾರವು ಈ ಬಗ್ಗೆ ಗಮನಿಸಿ, ಹಾಲಿ ಇರುವ ನಿಯಮಗಳಿಗೆ ತಿದ್ದುಪಡಿ ತಂದರೆ, ಒಳ್ಳೆಯದಾಗುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಕ್ರಮಗಳನ್ನು ತೆಗೆದುಕೊಳ್ಳಬೇಕು. ಯಾವುದೇ ಶಾಲೆಯವರು ಹೊಸ ಕಟ್ಟಡವನ್ನು ನಿರ್ಮಿಸಿರುತ್ತಾರೆ. ಆಗ ಇವರಿಗೆ ಮುಂದಿನ 3 ವರ್ಷಗಳಲ್ಲಿ ಹೊಸ ಕಟ್ಟಡವನ್ನು ನಿರ್ಮಿಸಿ, ಅಲ್ಲಿ ಶಾಲೆಯನ್ನು ಸ್ಥಳಾಂತರಿಸಬೇಕೆಂದು ತಿಳಿಸಿ, ಅನುಮತಿ ನೀಡುತ್ತಾರೆ. ಪಾಪ! ಅವರು ಬಹಳ ಕಷ್ಟಪಟ್ಟು ಹೊಸ ಕಟ್ಟಡವನ್ನು ನಿರ್ಮಿಸುತ್ತಾರೆ. ಅನುಮತಿ ಪಡೆದ ದಿನವೇ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿದರೂ, ಸಹ ಸಹಜವಾಗಿಯೇ ನಿಗದಿತ 3 ವರ್ಷಗಳಲ್ಲಿ ನಿರ್ಮಾಣ ಕಾರ್ಯ ಪೂರ್ಣಗೊಳ್ಳುವುದಿಲ್ಲ. ಹಲವಾರು ಮೂಲಗಳಿಂದ ಹಣ ಸಂಗ್ರಹಣೆ ಮಾಡಿ, ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸುತ್ತಾರೆ. ಆದರೆ ಮುಂದಿನ 5-6 ವರ್ಷಗಳು ಕಳೆದರೂ ಸಹ ಅವರಿಗೆ ಹೊಸ ಕಟ್ಟಡಕ್ಕೆ ಪರವಾನಿಗೆಯು ದೊರೆಯುವುದೇ ಇಲ್ಲ. ಏಕೆಂದರೆ ಶಾಲೆಯನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಗೊಳಿಸುವ ಮುನ್ನ ಅವರುಗಳು ಅರ್ಜಿ ಸಲ್ಲಿಸಿ, ಅನುಮತಿಯನ್ನು ಪಡೆದುಕೊಳ್ಳಬೇಕು. ಅನೇಕ ಪ್ರಕರಣಗಳಲ್ಲಿ ಇದು ಸಾಧ್ಯವೇ ಆಗುವಿದಿಲ್ಲ. ನನ್ನ ಗಮನದಲ್ಲಿರುವಂತೆ ಬೀದರ್ ಜಿಲ್ಲೆಯಲ್ಲಿ ಶಾಲೆ ಸ್ಥಳಾಂತರ ಕಾರಣಕ್ಕಾಗಿ ಪರವಾನಿಗೆ ನವೀಕರಣಕ್ಕಾಗಿ ಬಾಕಿ ಇರುವ ಸುಮಾರು 30 ಕ್ಕಿಂತಲೂ ಹೆಚ್ಚಿನ ಪ್ರಕರಣಗಳಲ್ಲಿ ಶಾಲೆಯವರಿಗೆ ಅನುಮತಿಯು ದೊರೆಯುತ್ತಿಲ್ಲ. ಹೀಗಾಗಿ “ಏನು ಮಾಡಬೇಕೆಂದು ಹೇಳಿ, ಅದನ್ನೇ ಮಾಡುತ್ತೇವೆ” ಎಂದು ಶಾಲೆಯವರು ಹೇಳುತ್ತಿದ್ದಾರೆ. ಒಟ್ಟಾರೆಯಾಗಿ ಇಲ್ಲಿನ ಸಮಸ್ಯೆಗಳ ಬಗ್ಗೆ ಹೇಳುವುದಾದರೆ, ಹೊಸ ಕಟ್ಟಡಕ್ಕೆ ಅನುಮತಿಯು

ದೊರೆಯುತ್ತಿಲ್ಲ ; ಹಳೆಯ ಕಟ್ಟಡವನ್ನು ಬಿಡಲಾಗಿರುತ್ತದೆ ; ಕೆಲವೊಂದು ಕಡೆಗಳಲ್ಲಿ ಪ್ರಾಥಮಿಕ ಶಾಲೆಯು ನಡೆಯುತ್ತಿದ್ದು, ಅದನ್ನು ಮುಂದುವರೆಸಿಕೊಂಡು ಹೋಗಿರುತ್ತಾರೆ. ಇಂತಹ ಸಂದರ್ಭಗಳಲ್ಲಿ ಶಾಲೆಯವರು ಏನು ಮಾಡಬೇಕು ಎನ್ನುವುದು ಅವರಿಗೆ ತಿಳಿಯುತ್ತಿಲ್ಲ. ಇದಕ್ಕೆ ಅವಶ್ಯಕವಾದ ಪರಿಹಾರವನ್ನು ಶಾಲೆಯವರು ಕೇಳಿದರೂ ಸಹ ಯಾವುದೇ ಒಬ್ಬ ಅಧಿಕಾರಿಯು ಇದನ್ನು ಹೇಳುವುದಿಲ್ಲ. ಇಂತಹ ಪರಿಸ್ಥಿತಿಗಳು ಅಲ್ಲಿ ಆಗಿವೆ. ಸರ್ಕಾರಿ ಅಧಿಕಾರಿಗಳು ಕೇವಲ ಚಾಲ್ತಿಯಲ್ಲಿರುವ ನಿಯಮಾವಳಿಗಳನ್ನು ತಿಳಿಸಿ, ಮಿಕ್ಕಿದ್ದು ನಮಗೆ ಗೊತ್ತಿಲ್ಲ ಎಂಬುದಾಗಿ ಮಾತ್ರವೇ ತಿಳಿಸುತ್ತಾರೆಯೇ. ಇಲ್ಲಿನ ಮತ್ತೊಂದು ದುರ್ದೈವದ ಸಂಗತಿ ಏನೆಂದರೆ, ಕಲಬುರಗಿ ವಿಭಾಗದಲ್ಲಿ ಸ್ಥಳೀಯ ಡಿ.ಡಿ.ಪಿ.ಐ. ಅಥವಾ ಆಯುಕ್ತರ ಹಂತದಲ್ಲಿ ಹೊಸ ಪರವಾನಿಗೆಯು ದೊರೆಯುತ್ತದೆ ಆದರೆ, ಪರವಾನಿಗೆ ನವೀಕರಣಕ್ಕಾಗಿ ಸರ್ಕಾರಕ್ಕೆ ಮನವಿಯನ್ನು ಕಳುಹಿಸಿದರೆ, the Commissioner has no powers ಎಂದು ಬರೆಯುತ್ತಾರೆ. ಶಾಲಾ ಸ್ಥಳಾಂತರ ವಿಷಯ ಬಂದಾಗ ಸ್ಥಳೀಯ ಆಯಕ್ತರಿಗೆ ಯಾವುದೇ ಅಧಿಕಾರವಿಲ್ಲದೇ ಇರುವುದರಿಂದ ಮನವಿಯನ್ನು ಸರ್ಕಾರಕ್ಕೆ ಕಳುಹಿಸಿ ಕೊಡುತ್ತಾರೆ. Why don't you simplify it, ಎಂದು ನಾನು ಈ ಸಂದರ್ಭದಲ್ಲಿ ಕೇಳಲಚ್ಚಸುತ್ತೇನೆ. ಶಾಲೆಯವರು ಬಹಳ ಕಷ್ಟಪಟ್ಟು ಹೊಸ ಕಟ್ಟಡವನ್ನು ನಿರ್ಮಿಸಿರುತ್ತಾರೆ. ಈ ಹಿಂದೆ ನಾನು ಇದೇ ವಿಚಾರವನ್ನು ಪ್ರಸ್ತಾಪಿಸಿದಾಗ, ಆಗ ಸಚಿವರು ಯಾವುದಾದರೂ ಉದಾಹರಣೆ ಇದ್ದರೆ ಹೇಳಿ ಎಂದು ತಿಳಿಸಿದ್ದರು. ಹೀಗಾಗಿ ನಾನು ಈ ಸಂದರ್ಭದಲ್ಲಿ ಉದಾಹರಣೆಯನ್ನು ಹೇಳಲಚ್ಛಿಸುತ್ತೇನೆ. ಯಾರೋ ಒಬ್ಬರು 2003 ನೇ ಇಸ್ವಿಯಲ್ಲಿ ಶಾಲೆಯ ಪರವಾನಿಗೆಯನ್ನು ಪಡೆದುಕೊಳ್ಳುತ್ತಾರೆ. ಇದಾದ ಒಂದು ದಶಕದ ನಂತರ ಅಂದರೆ 2013-14 ನೇ ಇಸ್ವಿಯಲ್ಲಿ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಪ್ರಾರಂಭಿಸುತ್ತಾರೆ. ಎಲ್ಲಾ ನಿರ್ಮಾಣ ಕಾಮಗಾರಿಗಳು ಪೂರ್ಣಗೊಂಡು 2019 ನೇ ಇಸ್ವಿಯಲ್ಲಿ ಹೊಸ ಕಟ್ಟಡಕ್ಕೆ ಶಾಲೆಯನ್ನು ಸ್ಥಳಾಂತರಿಸುತ್ತಾರೆ. ಅಗ್ನಿ ಸುರಕ್ಷತಾ ಹಾಗೂ ಕಟ್ಟಡ ಸುರಕ್ಷತಾ ದೃಢೀಕರಣಗಳನ್ನು ಮೊದಲೇ ಪಡೆಯಬೇಕು ಎನ್ನುವ ಸಂಗತಿಯು ಅವರಿಗೆ ತಿಳಿದಿರುವುದಿಲ್ಲ. ಒಂದು ವೇಳೆ ಈ ದೃಢೀಕರಣಗಳ ಬಗ್ಗೆ ಅವರ ಗಮನಕ್ಕೆ ಬಂದಿದ್ದರೂ ಸಹ ಸರಿಯಾದ ಸಮಯದಲ್ಲಿ ಅನುಮತಿ ದೊರೆಯುವುದಿಲ್ಲ. ಹೀಗಾಗಿ ಶಾಲೆಯನ್ನು ಹೊಡ ಕಟ್ಟಡಕ್ಕೆ ಸ್ಥಳಾಂತರಿಸುತ್ತಾರೆ. ಹೀಗೆ ಸ್ಥಳಾಂತರಗೊಂಡು 3 ವರ್ಷಗಳು ಕಳೆದಿವೆ. ಹೀಗಾಗಿ ಸದರಿ ಶಾಲೆಯ ವಿದ್ಯಾರ್ಥಿಗಳು ಬೇರೆ

ಶಾಲೆಯಲ್ಲಿ ಪರೀಕ್ಷೆಯನ್ನು ತೆಗೆದುಕೊಳ್ಳಬೇಕು. ಈ ಶಾಲಾ ವಿದ್ಯಾರ್ಥಿಗಳನ್ನು ಬೇರೆ ಶಾಲೆಯೊಂದಿಗೆ ಸೇರಿಸುತ್ತಾರೆ. ಏಕೆಂದರೆ ಹೊಸ ಶಾಲೆ ನಿರ್ಮಿಸಿದವರಿಗೆ ಯಾವುದೇ ರೀತಿಯಾದ ಅನುಮತಿ ಅಥವಾ ಪರವಾನಿಗೆ ದೊರೆತಿರುವುದಿಲ್ಲ. ಹೊಸ ಶಾಲೆ ನಿರ್ಮಿಸಿದವರು ಅಕ್ಷರಶಃ ಅತ್ತುಕೊಂಡು, ಪರವಾನಿಗೆ ನಿಮಿತ್ತ ಬೆಂಗಳೂರು ನಗರದಲ್ಲಿನ ಆಯುಕ್ತರ ಕಛೇರಿಗೆ ಮೂರು ಬಾರಿ ಬಂದು ಹೋಗುತ್ತಾರೆ. ಆದರೆ ಯಾವುದೇ ಪ್ರಯೋಜನವಾಗುವುದಿಲ್ಲ. "ಏನು ಮಾಡಬೇಕು ಹೇಳಿ, ಇಲ್ಲವೆಂದಾದರೆ ನಾನು ಉರುಳು ಹಾಕಿ ಕೊಳ್ಳುತ್ತೇನೆ" ಎಂದು ತಿಳಿಸುತ್ತಾರೆ. ನೇಣು ಹಾಕಿಕೊಳ್ಳುವುದಕ್ಕೆ ನಮ್ಮ ಭಾಷೆಯಲ್ಲಿ "ಉರುಳು" ಹಾಕಿಕೊಳ್ಳುವುದು ಎಂದು ಹೇಳುತ್ತಾರೆ. ಹಲವಾರು ಹಂತಗಳಲ್ಲಿ ಈ ರೀತಿಯ ಸಮಸ್ಯೆಗಳುಂಟಾಗಿ ಶಾಲೆಯವರಿಗೆ ಶಾಲೆ ನಡೆಸಲು ಬಹಳ ಕಷ್ಟದಾಯಕವಾಗಿರುತ್ತದೆ. ಇಂತಹ ಸಮಸ್ಯೆಗಳ ಬಗ್ಗೆ ಸರ್ಕಾರವು ತಕ್ಷಣವೇ ಗಮನ ಹರಿಸಬೇಕು ಹಾಗೂ ದಯಮಾಡಿ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಅರುಣ ಶಹಾಪೂರ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಪ್ರಶ್ನಿತ ವಿಷಯವು ಬಹಳ ಗಂಭೀರವಾಗಿದೆ. ರಾಜ್ಯದಲ್ಲಿನ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಅಗ್ನಿ ಮತ್ತು ಕಟ್ಟಡ ಸುರಕ್ಷತೆಯ ದೃಢೀಕರಣ ಪತ್ರಗಳ ವಿಷಯವಾಗಿ ಈ ಮುಂಚೆಯೂ ಸಹ ಮಾತನಾಡಿದ್ದೇವೆ. ಹೀಗಾಗಿ ನಾನು ಹೆಚ್ಚು ಮಾತನಾಡದೇ, ಸರ್ಕಾರಕ್ಕೆ ಕೇವಲ ಒಂದು ಪ್ರಶ್ನೆಯನ್ನು ಮಾತ್ರವೇ ಕೇಳಲಿಚ್ಛಿಸುತ್ತೇನೆ. ಸರ್ಕಾರಿ ಹಾಗೂ ಖಾಸಗಿ ಶಾಲೆಗಳಲ್ಲಿರುವ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾದ ಮಾನದಂಡಗಳನ್ನು ಏಕೆ ಮಾಡಬೇಕು? ಅಗ್ನಿ ಮತ್ತು ಕಟ್ಟಡ ಸುರಕ್ಷತೆಗಳು ಸರ್ಕಾರಿ ಶಾಲೆಗಳಿಗೆ ಅವಶ್ಯಕವಿಲ್ಲದೇ, ಕೇವಲ ಖಾಸಗಿ ಶಾಲೆಗಳಿಗೆ ಮಾತ್ರವೇ ಅವಶ್ಯಕವೇ ಎಂದು ನಾನು ಪ್ರಶ್ನಿಸಬಯಸುತ್ತೇನೆ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ 60 ಲಕ್ಷಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.

(ಮುಂದು)

“ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

---

**605/24-3-2022/3-30/bkp-ks**

**(ಸಭಾಪತಿಯವರು ಪೀಠದಲ್ಲಿದ್ದರು)**

**ಶ್ರೀ ಅರುಣ ಶಹಾಪೂರ( ಮುಂದು..)**

ಈ ಅಗ್ನಿ ಸುರಕ್ಷತೆ ಮತ್ತು ಕಟ್ಟಡ ಸುರಕ್ಷತೆ ಬಗ್ಗೆ ನಿಮ್ಮದೇನು ನಿಲುವು? ನೀವು ಏನು ನಿಯಮ ಅನ್ವಯ ಮಾಡಿಕೊಳ್ಳುತ್ತೀರೋ ಅದೇ ನಿಯಮಗಳನ್ನು ಖಾಸಗಿಯವರಿಗೂ ಅನ್ವಯ ಮಾಡಿ. ನೀವು ಅನ್ವಯ ಮಾಡಿಕೊಳ್ಳದೇ ಖಾಸಗಿಯವರಿಗೆ ಅನ್ವಯ ಮಾಡಿಕೊಳ್ಳಲು ಹೇಳಲಿಕ್ಕೆ ಯಾವ ಸರ್ಕಾರಕ್ಕೆ ನೈತಿಕತೆ ಇದೆ? ಎನ್ನುವಂತಹ ಒಂದೇ ಒಂದು ಪ್ರಶ್ನೆಯನ್ನು ಕೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:-** ಇನ್ನು ಶ್ರೀಯುತ ಮರಿತಿಬ್ಬೇಗೌಡರು 2 ನಿಮಿಷ ಮತ್ತು ಶ್ರೀಯುತ ಶ್ರೀಕಂಠೇಗೌಡರು 2 ನಿಮಿಷ ಮಾತ್ರ ಮಾತನಾಡಿ ಮುಗಿಸಿ.

**ಶ್ರೀ ಮರಿತಿಬ್ಬೇಗೌಡ( ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಈ renewal ಸಂಬಂಧ ತಾವು ಶಿಕ್ಷಣ ಸಚಿವರಾಗಿದ್ದಾಗ, ಈ renewal ಅನ್ನು ಬಹಳ ಪರಿಷ್ಕರಣೆ ಮಾಡಿ 5 ವರ್ಷಕ್ಕೆ, 3 ವರ್ಷಕ್ಕೆ ತಾವು ಮಾಡಿದಿರಿ. ಈಗ ಪ್ರತಿ ವರ್ಷ renewal ಮಾಡಬೇಕು. ಆ renewal ನದ್ದು ಏನೋ ಒಂದು ವ್ಯವಸ್ಥೆ ಮಾಡಿದ್ದೀರಿ.

**ಸಭಾಪತಿಯವರು:-** ಈ ಸಂಬಂಧ ಕೋರ್ಟ್ ಆದೇಶ ಅಗಿದೆ.

**ಶ್ರೀ ಮರಿತಿಬ್ಬೇಗೌಡ:-** ಹೌದು, ಮಾನ್ಯ ಸಭಾಪತಿಯವರೆ, ಕೋರ್ಟ್ ಆದೇಶವನ್ನು ನಾವು ವಿರೋಧ ಮಾಡುತ್ತಿಲ್ಲ. ಆದರೆ, ಕೋರ್ಟ್ ಆದೇಶ ಸರ್ಕಾರಿ ಶಾಲೆಗೊಂದು, ಖಾಸಗಿ

ಶಾಲೆಗೊಂದು ಎಂದು ಹೇಳಿದೆಯೇ? ದಯಮಾಡಿ ಅದನ್ನು ಸರಿಪಡಿಸಿ. ಅಗ್ನಿ ಸುರಕ್ಷತೆ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಎಸ್.ವ್ಹಿ. ಸಂಕನೂರ ನೇತೃತ್ವದಲ್ಲಿ ಈಗ ತಾವೇ ಒಂದು ಸಮಿತಿಯನ್ನು ರಚನೆ ಮಾಡಿದ್ದೀರಿ. ಸಮಿತಿ ವರದಿಯನ್ನೇ ನೀವು ಪರಿಗಣಿಸುವುದಿಲ್ಲ ಎನ್ನುವುದಾದರೆ ಸರ್ಕಾರದ ಬದ್ಧತೆ ಏನು? ಖಾಸಗಿ ಶಿಕ್ಷಣ ಸಂಸ್ಥೆಗಳು ಇಂದಿಗೂ ಕೂಡ ಈ ನಾಡಿನಲ್ಲಿ ಉತ್ತಮವಾದ ಶಿಕ್ಷಣ ಕೊಡುವಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳೇ ಮೊದಲನೆಯ ಸ್ಥಾನದಲ್ಲಿವೆ. ಇವತ್ತು ತೊಂದರೆಯಾಗಿರುವುದು ಯಾರಿಗೆಂದರೆ, budgeted schools ನಡೆಸತಕ್ಕವರದ್ದು, ಸಮಸ್ಯೆಯಾಗಿದೆ. ಯಾವುದೋ ಇಂಟರ್‌ನ್ಯಾಷನಲ್ ಸ್ಕೂಲ್, ಮತ್ತೆ, ಬಹಳ ಹೈಟೆಕ್ ಸ್ಕೂಲ್‌ಗಳನ್ನು ಏನು ನಡೆಸುತ್ತಿದ್ದಾರೆ, ಅವರದ್ದು ಸಮಸ್ಯೆಯೇ ಇಲ್ಲ. ಬಹಳ ಹಿಂದಿನ ಕಾಲದಲ್ಲಿಯೇ ಮಠಾಧೀಶರು, Christian Missionaries ನವರು ದೊಡ್ಡ ದೊಡ್ಡ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿಬಿಟ್ಟಿದ್ದಾರೆ. ಅಂತಹವರಿಗೆ ಇವತ್ತು ಅಲ್ಲಿ ಅಗ್ನಿ ಸುರಕ್ಷತೆಯನ್ನು ಅಳವಡಿಸಬೇಕೆಂದು ಹೇಳಿದರೆ ಬಹಳ ತ್ರಾಸು ಆಗುತ್ತಿದೆ. ಮತ್ತೆ, ಸಾಮಾನ್ಯ ಜನರು ಇತ್ತೀಚಿನ ವರ್ಷಗಳಲ್ಲಿ ಶಾಲೆಗಳನ್ನು ಏನು ತೆರೆದರು, ಅವರುಗಳಿಗೆ ತೊಂದರೆಯಾಗುತ್ತಿದೆ. ಕೋರ್ಟ್ ಆದೇಶವನ್ನು ನಾವುಗಳು ಪಾಲನೆ ಮಾಡೋಣ. ಆದರೆ, ಅದರಲ್ಲಿ ಸರಳೀಕರಣ ಮಾಡಿ, ಮಕ್ಕಳ ಸುರಕ್ಷತೆಗೆ ಎಷ್ಟು ಬೇಕೋ ಅಷ್ಟನ್ನು ಮಾಡತಕ್ಕಂತಹದ್ದು ಸೂಕ್ತವಾಗಿದ್ದು, ಅದರ ಬಗ್ಗೆ ಚಿಂತನೆ ಇಲ್ಲ ಎನ್ನುವುದಾಗಿದೆ.

ಮಾನ್ಯ ಸಭಾಪತಿಯವರೆ, ಇನ್ನೊಂದು ವಿಚಾರ ಏನೆಂದರೆ, ಇವತ್ತು 1ನೇ ತರಗತಿಯಿಂದ 10ನೇ ತರಗತಿಯವರೆಗೂ ಶಿಕ್ಷಣ ಸಂಸ್ಥೆಗಳಲ್ಲಿ ತರಗತಿಗಳು ನಡೆಯುತ್ತಿವೆ. ಈಗ ಕೆಲವು ಸಂಸ್ಥೆಗಳಲ್ಲಿ 8ನೇ ತರಗತಿಯವರೆಗೂ ಇದ್ದು, 9 ಮತ್ತು 10ನೇ ತರಗತಿಗೆ ಅನುಮತಿಯನ್ನು ಕೇಳುತ್ತಿದ್ದಾರೆ. ಅವರಿಗೆ ಸ್ಥಳದ ವಿಸ್ತೀರ್ಣ ಜಾಸ್ತಿ ಬೇಕು, ಕೋರ್ಟ್ ಆದೇಶ ಈ ರೀತಿ ಇದೆ ಎಂದು ಹೇಳುತ್ತಿದ್ದಾರೆ, ನೀವು ಇದನ್ನು prospective ಆಗಿ ಮಾಡಿ. ನೀವು ಯಾವಾಗ ಆದೇಶ ಮಾಡಿದ್ದೀರಿ, ಆ ಮುಂದಕ್ಕೆ ಯಾರು ಕೇಳುತ್ತಾರೋ ಅಂದರೆ, ಹೊಸ ಶಾಲೆಗಳನ್ನು ಪ್ರಾರಂಭ ಮಾಡುವುದಕ್ಕೆ ಅವರಿಗೆ ಇಷ್ಟು ವಿಸ್ತೀರ್ಣದ ಸ್ಥಳ ಇರಬೇಕು ಎನ್ನುವುದನ್ನು ನೀವು ಕೇಳಿ. ಅದನ್ನು ಬಿಟ್ಟು ಹಿಂದಿನಿಂದಲೂ 8ನೇ ತರಗತಿಯವರೆಗೂ

ಬೆಳೆದುಕೊಂಡು ಬಂದಿರುವಂತಹ ಸಂಸ್ಥೆಯಲ್ಲಿ ೯ ಮತ್ತು 10ನೇ ತರಗತಿ ನಡೆಸುವುದಕ್ಕೆ ನಿಮಗೆ ಎರಡೂವರೆ ಎಕರೆ ಜಮೀನು ಬೇಕು, ಒಂದೂವರೆ ಎಕರೆ ಜಮೀನು ಬೇಕೆನ್ನುವುದು ಸರಿಯಲ್ಲ.

ಮಾನ್ಯ ಸಭಾಪತಿಯವರೆ, ಈ renewal ಬಗ್ಗೆ ಇದೆಲ್ಲವನ್ನೂ ಹದಗೆಡಿಸಿರುವುದು ಮತ್ತು ಕೋರ್ಟ್ ಆದೇಶವನ್ನು ನೆಪ ಮಾಡಿಕೊಂಡು ಈ ಇಲಾಖಾ ಅಧಿಕಾರಿಗಳು ಇದನ್ನು ಸರಿಯಾಗಿ ಅಂದರೆ ಜವಾಬ್ದಾರಿಯುತವಾಗಿ, ನಿರ್ವಹಣೆ ಮಾಡಲಿಕ್ಕೆ ಆಗದೇ ಈಗ ಮಂತ್ರಿಗಳು ಇದೆಲ್ಲವನ್ನೂ ನಿರ್ವಹಣೆ ಮಾಡಲಿಕ್ಕೆ ಆಗುತ್ತಿಲ್ಲ. ಹೀಗಾಗಿ, ಖಾಸಗಿ ಶಾಲೆಯಲ್ಲಿ ಕಲಿಯುತ್ತಿರುವಂತಹ ಮಕ್ಕಳಿಗೆ ಬಹಳ ತೊಂದರೆಯಾಗುತ್ತಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳವರು ಇಂದಿಗೂ ಸಹ ಗುಣಮಟ್ಟದ ಶಿಕ್ಷಣವನ್ನು ಕೊಡುತ್ತಿದ್ದಾರೆ. ಆದ್ದರಿಂದ, ಸರ್ಕಾರ ಇದರ ಬಗ್ಗೆ ದೀರ್ಘವಾದ ಚಿಂತನೆ ಮಾಡಿ, ಇದನ್ನು ಸರಳೀಕರಣ ಮಾಡಬೇಕು, ಶಾಲೆಯ renewal ಬಗ್ಗೆ ಮತ್ತು fire safety ಬಗ್ಗೆ ಸರಳೀಕರಣ ಮಾಡಬೇಕು.

ಸನ್ಮಾನ್ಯ ಸಭಾಪತಿಯವರೆ, ಈ ಅಗ್ನಿ ಸುರಕ್ಷತಾ ಇಂಜಿನೀಯರ್‌ಗಳನ್ನು ಈ ಹಿಂದೆ ಯಾರು ಮಾತನಾಡುಸುತ್ತಿರಲಿಲ್ಲ. ಈಗ ಇದನ್ನು ತಂದಿರುವುದರಿಂದ ಅವರು ಹೇಗೆ ಆಗಿದ್ದಾರೆಂದರೆ, ಅವರು ಈಗ ಕುದುರೆ ಮೇಲೆ ಇದ್ದಾರೆ. ಮತ್ತೆ, ಅವರೇ ಬರಬೇಕು, ಇವರೇ ಬರಬೇಕು, ಇಷ್ಟು ಹಣವನ್ನು ಕೊಡಬೇಕು ಎಂದೆಲ್ಲಾ ಹೇಳುತ್ತಾರೆ. ಇವರು ಲೋಕೋಪಯೋಗಿ ಇಲಾಖೆಯ ಇಂಜಿನೀಯರ್ ಆಗಿದ್ದಾರೆ, ಇವರು ಬಿಲ್ಡಿಂಗ್ ಸುರಕ್ಷತೆ ಬಗ್ಗೆ ಪತ್ರ ಕೊಡಬೇಕಾಗುತ್ತದೆ. ಈಗ ಪತ್ರಗಳು ಏನು ಬಂದಿವೆ, ಆ ಪತ್ರಗಳ ಸಂಬಂಧ ನಾವು ಹೋಗಿ ಆ ಬಿಲ್ಡಿಂಗ್‌ಗಳನ್ನು ತಪಾಸಣೆ ಮಾಡೋಣ. ಆ ಕಟ್ಟಡಗಳು ಸುಂದರವಾಗಿವೆ, ಸುರಕ್ಷಿತವಾಗಿವೆ ಎಂದು ನಿಮ್ಮ ಇಂಜಿನೀಯರ್‌ಗಳು ಏನು ಪತ್ರಗಳನ್ನು ಕೊಟ್ಟಿದ್ದಾರೆ, ಅಲ್ಲಿ ಯಾವ ಸುರಕ್ಷತೆಯಿಲ್ಲ, ಮತ್ತೊಂದಿಲ್ಲ ಎನ್ನುವುದರ ಬಗ್ಗೆ ನಾನು ಒಂದೇ ಒಂದು ಉದಾಹರಣೆಯನ್ನು ಕೊಡಲಿಕ್ಕೆ ಬಯಸುತ್ತೇನೆ. ಈ ನಾಡಿನಲ್ಲಿ ಈ ಸಂಬಂಧ ಪರೀಕ್ಷೆಯೇ ನಡೆಯಲಿ. ಗುಣಮಟ್ಟದಲ್ಲಿ ಸರ್ಕಾರಿ ಶಾಲಾ ಕಟ್ಟಡಗಳು

**"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು**

---

ಉತ್ತಮವಾಗಿವೆಯೋ ಖಾಸಗಿ ಶಿಕ್ಷಣ ಸಂಸ್ಥೆಗಳ ಶಾಲಾ ಕಟ್ಟಡಗಳು ಉತ್ತಮವಾಗಿವೆಯೋ ಎನ್ನುವುದರ ಬಗ್ಗೆ ಸರ್ವೆ ಮಾಡಿಸಿ ನೋಡಿ. ಇದರಲ್ಲಿ ಏನಾದರೂ ಕೂಡ ಸರ್ಕಾರಿ ಶಾಲೆಗಳ ಕಟ್ಟಡಗಳನ್ನು ಖಾಸಗಿ ಶಿಕ್ಷಣ ಸಂಸ್ಥೆಗಳ ಕಟ್ಟಡಗಳಗಿಂತ ಉತ್ತಮವಾಗಿ ಕಟ್ಟಿಕೊಂಡಿದ್ದಾರೆ, ಅವುಗಳು ಸರ್ಕಾರಿ ಶಾಲಾ ಕಟ್ಟಡಗಳಂತೆ ಇಲ್ಲ ಎನ್ನುವುದಾದರೆ, ನಾನು ಶಾಸಕ ಸ್ಥಾನಕ್ಕೆ ರಾಜೀನಾಮೆಯನ್ನು ಕೊಡುತ್ತೇನೆ. ಒಂದು ದಿವಸವೂ ಮುಂದುವರಿಯುವುದಿಲ್ಲ. ಇದೆಲ್ಲಾ ನೈಜತೆ ಇದ್ದರೂ ಕೂಡ ಮಂತ್ರಿಗಳಾದ ತಾವುಗಳು ಇದನ್ನು ಗಮನಿಸುವುದಿಲ್ಲ, ಅಧಿಕಾರಿಗಳು ಹೇಳಿದ ಮಾತನ್ನೇ ಕೇಳಿಕೊಂಡು ಬರುತ್ತೀರಿ. ಖಾಸಗಿ ಶಿಕ್ಷಣ ಸಂಸ್ಥೆಗಳು ತಮ್ಮ ಶಾಲೆಗಳನ್ನೆಲ್ಲಾ ಬರೆದುಕೊಡುತ್ತಾರೆ, ನೀವು ಅವುಗಳನ್ನು ಸರ್ಕಾರಕ್ಕೆ ವಹಿಸಿಕೊಳ್ಳಿ. ಇದನ್ನು ನೀವು ಸರಳೀಕರಣ ಮಾಡಲಿಲ್ಲವೆಂದರೆ ಮುಂದಿನ ದಿನಗಳಲ್ಲಿ ದೊಡ್ಡ ಚಳುವಳಿಯನ್ನು ಮಾಡಬೇಕಾಗುತ್ತದೆ, ಶಾಲೆಗಳು ಬಂದ್ ಆಗುತ್ತವೆ, ಮತ್ತೆ ಆ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ನಾವು ಎಲ್ಲರೂ ಆ ಚಳುವಳಿಯನ್ನು ಬೆಂಬಲಿಸುತ್ತೇವೆ. ಸರ್ಕಾರದ ವಿರುದ್ಧ ದೊಡ್ಡ ಚಳುವಳಿಯನ್ನು ಮಾಡಬೇಕಾಗುತ್ತದೆ. ಆದ್ದರಿಂದ, ಇದನ್ನು ಕೂಡಲೇ ಸರಳೀಕರಣ ಮಾಡಬೇಕೆಂದು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತೆ, ಈ ನಾಡಿನಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಶಾಲೆಗಳನ್ನು ನಡೆಸುತ್ತಿರುವ ಪೈಕಿ ಶೇಕಡ 75% ಶಾಲೆಗಳು budgeted schools ಆಗಿವೆ. ಆ ಶಾಲೆಗಳು ಶ್ರೀಮಂತರ ಶಾಲೆಗಳಲ್ಲ. ಅಂತಹವರಿಗೆ ದಯವಿಟ್ಟು ಕಿರುಕುಳ ಕೊಡಬೇಡಿ. ಅವರು ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದಾರೆ. ದಯವಿಟ್ಟು, ಇದನ್ನು ಸರಳೀಕರಣ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಈಗ ಸದನಕ್ಕೆ ಬಂದಿದ್ದು, ಈ ವಿಚಾರಗಳ ಜೊತೆಗೆ ಒಂದೇ ಒಂದು ವಾಕ್ಯವನ್ನು ಸೇರಿಸುತ್ತೇನೆ. ನೋಡಿ, ಈ ಅಗ್ನಿ ಸುರಕ್ಷತೆ ವಿಚಾರ ಏನಿದೆ, ಇದರಲ್ಲಿ ಸಾಕಷ್ಟು ಭ್ರಷ್ಟಾಚಾರ ನಡೆದಿದೆ. Decentralization of powers ಮಾಡಬೇಕೆಂದು ನಾವು ಹೇಳುತ್ತೇವೆ. Regional

Officer ಗೆ ಅಧಿಕಾರವಿದೆ. ಇದನ್ನು ಜಿಲ್ಲೆಗೆ ಕೊಡಿ ಎಂದು ನಾವು ಹೇಳುತ್ತೇವೆ. ಜಿಲ್ಲೆಗೆ ಕೊಟ್ಟರೆ ನನಗೆ ಬರತಕ್ಕಂತಹದ್ದು ನನಗೆ ಬಾರದೇ, ಬೇರೆ ಎಲ್ಲಿಯೋ ಹೋಗುತ್ತದೆ ಎಂದು ಹೇಳಿ regional officer ಕೊಡುವುದಿಲ್ಲ. ಇದರ ಬಗ್ಗೆ ಸುಪ್ರೀಂ ಕೋರ್ಟ್ ಒಂದು ವಾಕ್ಯವನ್ನು ಇಂತಹವರೇ ಸರ್ಟಿಫಿಕೇಟ್ ಕೊಡಬೇಕೆಂದು ಎಲ್ಲಿಯೂ ಹೇಳಿಲ್ಲ. ಸುಪ್ರೀಂ ಕೋರ್ಟ್ ಕೊಟ್ಟಿರುವ ಆದೇಶದ ವಿಚಾರವಾಗಿ decentralization of powers ಮಾಡಿ. Regional Officer ಗೆ ಕೊಟ್ಟಿರುವುದನ್ನು ಜಿಲ್ಲೆಗೆ ಕೊಟ್ಟರೆ ಸಮಸ್ಯೆ ಬಗೆಹರಿಯುತ್ತದೆ.

**ಸಭಾಪತಿಯವರು:–** ಇದರ ಬಗ್ಗೆ ವರದಿಯನ್ನು ಕೊಟ್ಟಿಲ್ಲವೇ?

**ಶ್ರೀ ಎಸ್.ವ್ಹಿ. ಸಂಕನೂರ:–** ಇದರ ಬಗ್ಗೆ ವರದಿಯನ್ನು ಕೊಟ್ಟಿದ್ದು, ನಡೆಯುತ್ತಿರುವ ಭ್ರಷ್ಟಾಚಾರವನ್ನು ನಿಲ್ಲಿಸಬೇಕು. ಅದಕ್ಕೆ ಕಡಿವಾಣ ಹಾಕಬೇಕು. 10–10 ಲಕ್ಷ, 15 ಲಕ್ಷ.

**ಸಭಾಪತಿಯವರು:–** ಸಚಿವರು ಉತ್ತರವನ್ನು ಹೇಳಬೇಕು.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೆ, ಈ ವಿಚಾರದಲ್ಲಿ ಒಂದು ಸರ್ಟಿಫಿಕೇಟ್ ಕೊಡುವುದಕ್ಕೆ 20 ಸಾವಿರ ರೂಪಾಯಿಗಳ ಶುಲ್ಕವನ್ನು ವಿಧಿಸುತ್ತಾರೆ. ಅವರು ಈ ದುಡ್ಡನ್ನು ಎಲ್ಲಿಂದ ತರಬೇಕು, ದಯಮಾಡಿ, ಅದನ್ನು 5 ಸಾವಿರ ರೂಪಾಯಿಗಳಿಗೆ ಇಳಿಸಿ. ಮತ್ತೆ ಅವರು ತೆಲಂಗಾಣ ರಾಜ್ಯದ ಒಂದು ಉದಾಹರಣೆಯನ್ನು ಹೇಳಿದರು. ನೆಲಮಹಡಿ ಕಟ್ಟಡವುಳ್ಳ ಶಾಲೆ ಇರುವುದಕ್ಕೆ 6 ಮೀಟರ್‌ಗೆ ಪೂರ್ಣ ವಿನಾಯಿತಿಯನ್ನು ಕೊಟ್ಟರು. 15 ಮೀಟರ್‌ಗೆ ಹೋದರೆ, ಬೆಂಗಳೂರಿನ construction unitಗೆ ಹೋಗಿ ಅನುಮತಿ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ. ಈ ಅಧಿಕಾರವನ್ನು

ತಾಲ್ಲೂಕು ಹಂತದಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ನವರಿಗೆ ಕೊಟ್ಟುಬಿಡಿ. ಜಿಲ್ಲಾ ಹಂತದಲ್ಲಿ ಅಗ್ನಿ ಸುರಕ್ಷತಾ ಅಧಿಕಾರಿಗಳಿಗೆ ಕೊಟ್ಟುಬಿಡಿ, ಇಷ್ಟೆ ವಿಚಾರ ಇರುವುದು.

**ಶ್ರೀ ಬಿ.ಸಿ. ನಾಗೇಶ್( ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವರು) :-** ಮಾನ್ಯ ಸಭಾಪತಿಯವರೆ, ಈ ವಿಚಾರವಾಗಿ ಮಾನ್ಯ ಸದಸ್ಯರಾದ ಶ್ರೀ ಕೆ. ಹರೀಶ್ ಕುಮಾರ್‌ರವರು ಚರ್ಚೆಯನ್ನು ಪ್ರಾರಂಭ ಮಾಡಿದರು.

**ಸಭಾಪತಿಯವರು:-** ನಾವು ನಿಮ್ಮ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡಿದ್ದೇವೆ.

**ಶ್ರೀ ಬಿ.ಸಿ. ನಾಗೇಶ್:-** ಮಾನ್ಯ ಸಭಾಪತಿಯವರೆ, ಎಲ್ಲಾ ಮಾನ್ಯ ಸದಸ್ಯರುಗಳು ಈ ವಿಚಾರವಾಗಿ ತಮ್ಮ ಕಳಕಳಿಯನ್ನು ವ್ಯಾಕ್ತ ಮಾಡಿದ್ದಾರೆ. ಮತ್ತೆ ಸರ್ಕಾರಕ್ಕೂ ಈ ವಿಚಾರದಲ್ಲಿ ಬಹಳ ಕಳಕಳಿ ಇದೆ. ಈ ವಿಚಾರವಾಗಿ ಸುಪ್ರೀಂ ಕೋರ್ಟ್ 2017 ರಲ್ಲಿ ಆದೇಶ ನೀಡಿರುವುದು ತಮಗೆಲ್ಲರಿಗೂ ಗೊತ್ತಿದೆ. ಆದರೂ ಸಹ ಈ ರೀತಿಯ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಸಹ ಮಕ್ಕಳಿಗೆ ಯಾವ ವರ್ಷವೂ ತೊಂದರೆಯಾಗಬಾರದು ಎಂದು ಹೇಳಿ ಪ್ರತಿ ವರ್ಷವೂ ಸಹ renewal ಮಾಡಿಕೊಂಡು ಬಂದಿರುತ್ತೇವೆ. ಅದೇ ರೀತಿಯಲ್ಲಿ ಈ ವರ್ಷವೂ ಸಹಿತ ತಮ್ಮೆಲ್ಲರ ಸಲಹೆಯನ್ನು ತೆಗೆದುಕೊಂಡು ಈ ವರ್ಷ ಮತ್ತು ಮುಂದಿನ ವರ್ಷಕ್ಕೆ ವಿಸ್ತರಣೆ ಮಾಡಿದ್ದೇವೆ. ಇದೇ ವಿಷಯವಾಗಿ ಕಳೆದ 6 ತಿಂಗಳಲ್ಲಿ ಸುಪ್ರೀಂ ಕೋರ್ಟ್ ತೀರ್ಪನ್ನು ಮಾನ್ಯ ಸದಸ್ಯರಾದ ಶ್ರೀ ಎಸ್.ವ್ಹಿ. ಸಂಕನೂರರವರ ವರದಿ ಬಂದಾದ ಮೇಲೆ repeatedly, 6 ಸಭೆಗಳನ್ನು ಮಾಡುವಂತಹದ್ದನ್ನು ನಾವುಗಳು ಮಾಡಿದ್ದೇವೆ. ತಮ್ಮ ಹಾಗೂ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಏರ್ಪಾಡು ಆದ ಸಭೆಗಳಲ್ಲಿ ಸಂಬಂಧಪಟ್ಟ ಎಲ್ಲಾ ಹಿರಿಯ ಅಧಿಕಾರಿಗಳ ಜೊತೆ ಬೆಳಗಾಂನಲ್ಲಿ ಸಭೆಯನ್ನು ಕರೆದು ಚರ್ಚೆ ಮಾಡಿರುವುದು ತಮಗೂ ಗೊತ್ತಿದೆ. ಅಲ್ಲಿ ಎಲ್ಲರೂ ಹೇಳಿದ್ದು ಏನೆಂದರೆ, ಇವತ್ತು ಮಾನ್ಯ ಮರಿತಿಬ್ಬೇಗೌಡರು ಹೇಳಿದ ಹಾಗೆ ಸುಪ್ರೀಂ ಕೋರ್ಟ್‌ನ ಆದೇಶವನ್ನು

ಉಲ್ಲಂಘಿಸುವಂತಿಲ್ಲ. ಇದು ಒಂದು ರೀತಿಯಲ್ಲಿ ಏನಾಗಿದೆ ಎಂದರೆ ಹಾವು ಸಾಯಬಾರದು, ಕೋಲು ಮುರಿಯಬಾರದು ಎನ್ನುವ ಸ್ಥಿತಿಯಲ್ಲಿದೆ. ಅದಕ್ಕೋಸ್ಕರ, ಈ ವಿಚಾರವಾಗಿ ಸಾಕಷ್ಟು ಸಭೆಗಳನ್ನು ಮಾಡಿ, ಪ್ರತಿಯೊಂದನ್ನು ಸಹ ಹೇಗೆ ಸರಳೀಕರಣ ಮಾಡಬೇಕೆಂದು, ಇವತ್ತು ಶಾಲೆಗಳಿಗೆ ಏನು ತೊಂದರೆಯಾಗುತ್ತಿದೆ, ಆ ತೊಂದರೆಗಳನ್ನು ಸರಿ ಮಾಡುವಂತಹ ಪ್ರಯತ್ನಗಳಿಗೆ ಸಂಬಂಧಿಸಿದಂತೆ ಈಗಾಗಲೇ ಸಾಕಷ್ಟು ಸಭೆಗಳಾಗಿವೆ. ಮಾನ್ಯ ಸದಸ್ಯರಾದ ಶ್ರೀ ಕೆ. ಹರೀಶ್ ಕುಮಾರ್‌ರವರು ಹೇಳಿದ fire safety ವಿಚಾರವಾಗಿ, ಮಾನ್ಯ ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮಾಡಿದ ಒಂದು ಸಭೆಯಲ್ಲಿ ಆದಂತಹ ಪರಿಶೀಲನೆ ಹಿನ್ನೆಲೆಯಲ್ಲಿ ಈ ವಿಚಾರ ಒಂದು ಹಂತಕ್ಕೆ ಬಂದಿದೆ.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಪರಿಶೀಲನಾ ಸಭೆಯಲ್ಲಿ ಏನೇನು ತೀರ್ಮಾನ ಮಾಡಿದ್ದೀರಿ, ಅದರ ಬಗ್ಗೆ ಹೇಳಿ.

**ಶ್ರೀ ಬಿ.ಸಿ. ನಾಗೇಶ್:-** ಸರ್ಕಾರಿ ಶಾಲೆಗಳ ಪೈಕಿ ಸುಮಾರು ೯೯% ಶಾಲೆಗಳ ಕಟ್ಟಡಗಳು ಸಾಮಾನ್ಯವಾಗಿ ನೆಲ ಹಂತಸ್ತಿನಲ್ಲಿಯೇ ಇವೆ. ಅವುಗಳನ್ನು ಒಳ್ಳೆಯ ಗುಣಮಟ್ಟದಲ್ಲಿ ಕಟ್ಟಿದ್ದರೆ, ಅವು ಚೆನ್ನಾಗಿಯೇ ಇರುತ್ತವೆ. ಆದುದರಿಂದ ಎಲ್ಲಾ ಶಾಲೆಗಳು ನೆಲಮಹಡಿಯಲ್ಲಿಯೇ ಇವೆ. ಯಾವುದೇ ಶಾಲೆಗೆ ಹೋಗಲಿ, ಶಾಲೆಯ ಬಾಗಿಲು ಓಪನ್ ಆದಲ್ಲಿ ಮಕ್ಕಳು ಆಟದ ಮೈದಾನಕ್ಕೆ ಬರುತ್ತಾರೆ, ಯಾವುದೇ ಶಾಲೆಯಲ್ಲಿ ಮೆಟ್ಟಿಲು ಇಳಿದು ಮಕ್ಕಳು ಬರುವಂತಿಲ್ಲ ಮತ್ತೆ, ಯಾರೋ ಒಬ್ಬರು ವಾಚ್‌ಮನ್ ಗೇಟ್ ತೆಗೆದಂತಹ ಸಮಯದಲ್ಲಿ ಮಕ್ಕಳು ಆಚೆ ಬರುವಂತಹ ಸರ್ಕಾರಿ ಶಾಲೆಗಳು ಯಾವುದೂ ಸಹ ಇರುವುದಿಲ್ಲ.

**(ಮುಂದು).**

**(606) 24.03.2022 03.40 ಎಸ್‌ವಿ-ಜಿಆರ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಿ.ಸಿ.ನಾಗೇಶ್ (ಮುಂದು):-**

ಆದರೆ ಸರ್ಕಾರಿ ಶಾಲೆಗಳ ಗುಣಮಟ್ಟವನ್ನು ಇನ್ನೂ ಚೆನ್ನಾಗಿ ಮಾಡಬೇಕು ಎನ್ನುವುದು ಎಲ್ಲರ ಆಶಯವಾಗಿದೆ. ಅದಕ್ಕಾಗಿ ಸರ್ಕಾರ ಯೋಚನೆ ಮಾಡಿ ಸುಪ್ರೀಂ ಕೋರ್ಟ್ ಹೇಳಿರುವ ಗೈಡ್‌ಲೈನ್ಸ್‌ಗಳಿಗೆ ತಕ್ಕಂತೆ ಸರ್ಕಾರಿ ಶಾಲೆಗಳನ್ನು ಮಾಡಲು ಪರಿಶೀಲನೆ ನಡೆಯುತ್ತಿದೆ. ಒಂದಷ್ಟು ಶಾಲೆಗಳನ್ನು ಮಾಡುವುದರಲ್ಲಿಯೂ ಯಶಸ್ವಿಯಾಗಿದ್ದೇವೆ. ಶಾಲೆಗಳಲ್ಲಿ ಅಗ್ನಿ ಸುರಕ್ಷತೆಯ ಬಗ್ಗೆ ಮುಖ್ಯ ಕಾರ್ಯದರ್ಶಿಯವರೊಂದಿಗೆ ಚರ್ಚೆ ಮಾಡಿದಾಗ ಒಂದಷ್ಟು ವಿಷಯಗಳನ್ನು ಗಮನಿಸಿದ್ದೇವೆ. ಸರ್ಕಾರಿ ಶಾಲೆಯಾಗಿರಲಿ ಅಥವಾ ಖಾಸಗಿ ಶಾಲೆಯಾಗಿರಲಿ ಅಲ್ಲಿ ನೀರಿನ ಬಕೆಟ್ ಇರಬೇಕು, ಮರಳಿನ ಬಕೆಟ್ ಇರಬೇಕು. Fire extinguish ಮಾಡುವಂತಹ ಒಂದು equipment ಇರಬೇಕು. ಮೊದಲ ಮಹಡಿಯಾದರೆ ಎಷ್ಟು ಲೀಟರ್‌ನ ಟ್ಯಾಂಕ್ ಇರಬೇಕು, ಎರಡನೆಯ ಮಹಡಿಯಿದ್ದರೆ ಎಷ್ಟು ಲೀಟರ್‌ನ ಟ್ಯಾಂಕ್ ಇರಬೇಕು, ಆ ಮಹಡಿಗೆ ನೀರು ಬರಲು ಪೈಪ್‌ಲೈನ್ ಇರಬೇಕು ಇಂತಹ ಅಂಶಗಳಿಗೆ ಒತ್ತು ನೀಡಲಾಗಿದೆ. ಶುಲ್ಕವನ್ನು ಸಾಕಷ್ಟು ಕಡಿಮೆ ಮಾಡುವ ಬಗ್ಗೆ ಕೂಡ ಯೋಚನೆ ಮಾಡಲಾಗಿದೆ. ಸಾವಿರ ರೂಪಾಯಿಯಿಂದಲೂ ಪ್ರಾರಂಭಿಸಲು ನಾವು ಯೋಚಿಸಿದ್ದೇವೆ. ರೂ.20,000 ಇರುವುದನ್ನು ರೂ.5,000 ಮಾಡಿ ಎಂದರು. ಇನ್ನೂ ಕಡಿಮೆ ಮಾಡಬೇಕು ಎಂಬುದನ್ನು ನಾವು ಪರಿಶೀಲನೆ ಮಾಡುತ್ತಿದ್ದೇವೆ. ಇನ್ನು 15 ದಿನಗಳು ಅಥವಾ ತಿಂಗಳೊಳಗಾಗಿ next renewal ಬರುವುದರ ಒಳಗೆ ಅದಕ್ಕೆ ಒಂದು ಇತಿಶ್ರೀ ಹಾಡುತ್ತೇವೆ ಎನ್ನುವಂತಹ ವಿಶ್ವಾಸ ಇದೆ.

ಎರಡನೆಯದಾಗಿ ನಾವು ಮಾಡಿರುವಂತಹ ತಪ್ಪು ಎಲ್ಲಿ ಆಗಿದೆ ಎಂದರೆ 2003ರಲ್ಲಿ N.B.C., (National Building Code) ಅನ್ನು ನಾವು ಒಪ್ಪಿಕೊಂಡಿದ್ದೇವೆ. ಮಾನ್ಯ ಮರಿತಿಬ್ಬೇಗೌಡರು ಹೇಳಿದಂತೆ ಆರೇಳು ವರ್ಷಗಳ ಹಿಂದೆ ರೂಲ್‌ನಲ್ಲಿ ಇದನ್ನು ಸೇರಿಸಲಾಗಿದೆ. 9 ಮತ್ತು 10 ಹೊಸಶಾಲೆ ಎನ್ನುವುದನ್ನು ಈಗ ಐದಾರು ವರ್ಷಗಳ ಹಿಂದೆ ತಂದಿರುವುದು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಚಿವರೇ, ಇದೆಲ್ಲವನ್ನೂ ಅಧಿಕಾರಿಗಳು ಮಾಡಿರುವುದು.

**ಶ್ರೀ ಬಿ.ಸಿ.ನಾಗೇಶ್:-** ಮಾನ್ಯ ಮರಿತಿಬ್ಬೇಗೌಡರೇ, ನಾನು ಹೇಳುತ್ತಿದ್ದೇನೆ. ಆ ರೂಲ್ ಅನ್ನು natural growth ಎಂದು ಬದಲಾವಣೆ ಮಾಡಿ ತರುವುದಕ್ಕೋಸ್ಕರ ಈಗಾಗಲೇ ಕಾನೂನಿನಲ್ಲಿ ಬದಲಾವಣೆಯನ್ನು ಮಾಡುತ್ತಿದ್ದೇವೆ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

**ಡಾ: ಕೆ.ಗೋವಿಂದರಾಜ್:-** ಮಾನ್ಯ ಸಚಿವರೇ, ನಾನು ಪಿ.ಡಬ್ಲ್ಯೂ.ಡಿ., ಬಗ್ಗೆ ತಮಗೆ ನಿನ್ನೆ ತಾನೇ ಹೇಳಿದೆನು.

**ಶ್ರೀ ಬಿ.ಸಿ.ನಾಗೇಶ್:-** ಮಾನ್ಯ ಗೋವಿಂದರಾಜ್ ಅವರೇ, ಮಾನ್ಯ ಸಂಕನೂರ ಅವರು ಕೊಟ್ಟಿರುವ ವರದಿಯಲ್ಲಿ ಹಾಗೂ ಮಾನ್ಯ ಸಭಾಪತಿಯವರು ನಡೆಸಿದ ಸಭೆಯಲ್ಲಿ ಸರ್ಕಾರಿ ಎ.ಇ.ಇ., ಮಟ್ಟಕ್ಕೆ ತರುವ ವಿಚಾರವಾಗಿಯೂ ಸಹ ಯೋಚನೆ ಮಾಡಲಾಗಿದೆ. ಅಂತಿಮವಾಗಿ ಇದು ಬರುವುದಕ್ಕೆ ಇನ್ನೊಂದೆರಡು ತಿಂಗಳುಗಳಾಗಬಹುದು.

ಮಾನ್ಯ ಸಭಾಪತಿಯವರೇ, ಮಾನ್ಯ ನಮೋಶಿಯವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು. ಈ ವಿಚಾರದಲ್ಲಿ ಒಂದಷ್ಟು ತೊಂದರೆಯನ್ನು ಅನುಭವಿಸುತ್ತಿರುವುದನ್ನು ನೋಡಿದ್ದೇವೆ. ಆದರೆ ಒಂದು ಶಾಲೆಯನ್ನು ಮಾಡುವವರಿಗೆ ರೂಲ್ಸ್ ಗೊತ್ತಿಲ್ಲ ಎಂದು ಹೇಳಿದರೆ ನಾನೇನು ಹೇಳಬೇಕೆಂದು ಅರ್ಥವಾಗುವುದಿಲ್ಲ. Shift ಮಾಡುವ ಪೂರ್ವದಲ್ಲಿ ಒಂದು application ಹಾಕಬೇಕೆಂದು ಹೇಳಿದರೆ ಅದು ಆಗುವುದಿಲ್ಲವೆಂದು lawlessness create ಮಾಡಬೇಕೆಂದು ಅಂದುಕೊಂಡಿದ್ದರೆ ಅದು ಒಳ್ಳೆಯದಲ್ಲ. "ಯಾರನ್ನೇನು ಕೇಳುವುದು, ನಾನು ಶಿಫ್ಟ್ ಮಾಡಿಕೊಂಡಿದ್ದೇನೆ, ನನಗೆ ಗೊತ್ತಿರಲಿಲ್ಲ. ಈಗ ಅನುಮತಿಯನ್ನು ಕೊಡಿ" ಎಂದು ಕೇಳುವುದಕ್ಕೆ ಇದು ಶಿಕ್ಷಣ ಇಲಾಖೆ. ಒಂದು ವೇಳೆ ಬೇರೆ ಇಲಾಖೆಯಲ್ಲಿ ಗೊತ್ತಿಲ್ಲ ಎಂದು ಹೇಳಿದರೂ ಪರವಾಗಿಲ್ಲ. ಶಾಲೆಗಳನ್ನು ಪ್ರಾರಂಭ ಮಾಡುವವರೆಲ್ಲಾ well educated, ಎಲ್ಲವನ್ನೂ ಅರಿತುಕೊಂಡವರಾಗಿರುತ್ತಾರೆ. ಮುಂದಿನ ಪೀಳಿಗೆಯನ್ನು ನಿರ್ಮಾಣ ಮಾಡುವಂತಹವರಾಗಿರುತ್ತಾರೆ. ಅವರೇ ರೂಲ್ಸ್‌ಗಳನ್ನು ನಾನೇಕೆ ಪಾಲಿಸಬೇಕು ಎನ್ನುವಂತಹ ಸ್ಥಿತಿಗೆ ಬಂದರೆ ಶಿಕ್ಷಣ ಇಲಾಖೆಗೆ ಅದು

ಶೋಭೆಯನ್ನು ತರುವಂತಹದ್ದಲ್ಲ. ತಪ್ಪು ಮಾಡಿದ್ದರೆ ಅದನ್ನು ಸರಿ ಮಾಡುವುದು ಹೇಗೆ ಎಂದು ಯೋಚನೆ ಮಾಡೋಣ. ಆದರೆ ಶಿಕ್ಷಣ ಇಲಾಖೆಯಲ್ಲಿ ಮಾಡಿರುವಂತಹ ನಿಯಮಗಳು ತಪ್ಪಿದ್ದರೆ ಅದನ್ನು ತಿದ್ದುವ ಬಗ್ಗೆ ನಾವು-ನೀವು ಕುಳಿತು ಯೋಚನೆ ಮಾಡೋಣ. ಆದರೆ ನಿಯಮಗಳನ್ನು ಪಾಲಿಸುವ ಬಗ್ಗೆ ಗೊತ್ತಿರಲಿಲ್ಲ, ಅದಕ್ಕೆ ಮಾಡಿರುವುದಿಲ್ಲ ಎನ್ನುವುದನ್ನು ಹೇಗೆ ಸಹಿಸಬೇಕೆಂದು ತಾವೇ ಹೇಳಬೇಕು.

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅರ್ಜಿಯನ್ನು ಹಾಕಿರುತ್ತಾರೆ. ಹಾಕಿಲ್ಲವೆಂದು ಅಲ್ಲ. ಆದರೆ ಬೇರೆ ಬೇರೆ ಕಾರಣಗಳಿಂದಾಗಿ ತಿರಸ್ಕರಿಸಿರುತ್ತಾರೆ. 28 ಶಾಲೆಗಳ ಪಟ್ಟಿಯನ್ನು ಕೊಡುತ್ತೇನೆ. ಅವರೆಲ್ಲರೂ ಕಷ್ಟದಲ್ಲಿದ್ದಾರೆ. ಅವರಿಗೆ ಅನುಮತಿಯನ್ನು ಕೊಡುತ್ತಿಲ್ಲ. ಅದನ್ನು ಹೇಗೆ ಸರಿಮಾಡುತ್ತೀರಿ ಎಂಬುದನ್ನು ನೋಡಿ. ಮೊದಲು ಶಾಲೆಯಿದ್ದದ್ದು ಸಣ್ಣದು.

**ಶ್ರೀ ಬಿ.ಸಿ.ನಾಗೇಶ್:-** ಮಾನ್ಯ ಸಭಾಪತಿಯವರೇ, ಇವರು ಶಿಫ್ಟ್ ಮಾಡಿಕೊಂಡಿರುವುದು ಈಗಲ್ಲ. ಎಂಟು-ಹತ್ತು ವರ್ಷಗಳ ಹಿಂದೆಯೇ ಶಿಫ್ಟ್ ಮಾಡಿಕೊಂಡಿದ್ದಾರೆ. ಈಗ renewal ಪ್ರಾರಂಭವಾದಾಗ ಇವರು ಬಂದಿದ್ದಾರೆ.

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೇ, ಅಂದಿನಿಂದ ಅನುಮತಿಯನ್ನು ಕೇಳುತ್ತಿದ್ದಾರೆ. ಆದರೆ ಇದುವರೆವಿಗೂ ಕೊಟ್ಟಿರುವುದಿಲ್ಲ.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಚಿವರೇ, ಒಂದೇ ಒಂದು ಸಲಹೆಯಿದೆ. ಒಂದು ವರ್ಷಕ್ಕೆ renewal of recognition ಅನ್ನು ಒಪ್ಪಿಕೊಂಡಿದ್ದೀರಿ. ಮುಂದೆ ಮಾಡಬಹುದು. ತೊಂದರೆಯೇನಾಗಿದೆ ಎಂದರೆ ಮುಂದಿನ ವರ್ಷ ಮತ್ತಷ್ಟು ಹಣವನ್ನು ಕಟ್ಟಬೇಕು.

**ಶ್ರೀ ಬಿ.ಸಿ.ನಾಗೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಅರುಣ ಶಹಾಪುರ ಅವರು ಪ್ರಸ್ತಾಪಿಸಿರುವಂತಹ ವಿಚಾರಕ್ಕೆ ಸಂಬಂಧಿಸಿದಂತೆ ಅದನ್ನು ಸಹಿತ ಮೂರು ವರ್ಷಗಳಿಗೆ ಮಾಡಬೇಕು ಎನ್ನುವ ಅಂಶ ಪರಿಶೀಲನೆಯಲ್ಲಿದೆ.

“ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**೦೪. ವಿಷಯ: ಬೆಂಗಳೂರು ನಗರದ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಮತ್ತು ವಸಿಷ್ಠ ಸೌಹಾರ್ದ ಸಹಕಾರ ಬ್ಯಾಂಕ್‌ನ ಅವ್ಯವಹಾರ ಕುರಿತು**

***

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಕಳೆದ ಅಧಿವೇಶನದಲ್ಲಿ ಬೆಂಗಳೂರು ನಗರದ ಬಸವನಗುಡಿಯಲ್ಲಿರುವ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಮತ್ತು ವಸಿಷ್ಠ ಸೌಹಾರ್ದ ಸಹಕಾರ ಬ್ಯಾಂಕ್‌ನ ಅವ್ಯವಹಾರದ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೆವು. ಆಗ ತಾವು ಇದರ ಬಗ್ಗೆ ಅರ್ಧಗಂಟೆ ಕಾಲಾವಧಿ ಚರ್ಚೆಯಲ್ಲಿ ವಿಚಾರ ಮಾಡೋಣ ಎಂದು ಹೇಳಿ, ಇಂದು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ. ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಮಾನ್ಯ ಸಚಿವರು ಇಲ್ಲಿ ಬಂದಿದ್ದಾರೆ.

ಗುರು ರಾಘವೇಂದ್ರ ಬ್ಯಾಂಕ್‌ನ ಅವ್ಯವಹಾರದ ಬಗ್ಗೆ ಪ್ರತಿಬಾರಿಯ ಸದನದಲ್ಲಿಯೂ ನಾವು ಸದ್ದು ಮಾಡುತ್ತಿದ್ದೇವೆ. ಆದರೆ ಯಾವುದೇ ಪ್ರಗತಿಯಾಗುತ್ತಿಲ್ಲ. ಏಕೆ ಎಂದು ಮಾನ್ಯ ಸಚಿವರನ್ನು ಕೇಳಬೇಕು. ೨೦೨೦ರಲ್ಲಿ ಶ್ರೀ ಅಶೋಕನ್ ಅವರು ಎಲ್ಲರಿಗೂ ಪತ್ರವನ್ನು ಬರೆದು, ನಾನು ಈಗ join ಆಗಿದ್ದೇನೆ, ತಮಗೆಲ್ಲರಿಗೂ ಇದರ ಬಗ್ಗೆ ಆದಷ್ಟು ಬೇಗ ಮಾಹಿತಿಯನ್ನು ನೀಡಿ ಎಲ್ಲವನ್ನೂ ಸರಿ ಮಾಡುತ್ತೇನೆ ಎಂದು ಹೇಳುತ್ತಾರೆ. ನಂತರ ಫೆಬ್ರವರಿ ೨೦೨೧ರಲ್ಲಿ ಮತ್ತೊಂದು ಪತ್ರವನ್ನು ಬರೆದು "ನಮಗೆ ಬ್ಯಾಂಕಿನ ಠೇವಣಿದಾರರ ಆತಂಕ, ಕಳವಳ, ಕಷ್ಟದ ಅರಿವಿದ್ದು, ಹಾಲಿ ನಾವು ಮಾಡುತ್ತಿರುವ ಕಾರ್ಯವನ್ನು ಶೀಘ್ರವಾಗಿ ಮುಗಿಸಲು ಸರ್ವಪ್ರಯತ್ನವನ್ನು ಮಾಡುತ್ತಿದ್ದೇವೆ. ದಯಮಾಡಿ ಅಲ್ಲಿಯವರೆಗೆ ನಮ್ಮೊಂದಿಗೆ ನೀವು ಸಹಕರಿಸಿ. ಸದರಿ ಕಾರ್ಯವನ್ನು ಪೂರ್ಣ ಮಾಡಲು ಅನುವು ಮಾಡಿಕೊಡಿ" ಎಂದು ಹೇಳುತ್ತಾರೆ. ಈ ಪತ್ರವನ್ನು ಬರೆದು ಒಂದು ವರ್ಷ ಒಂದು ತಿಂಗಳಾಯಿತು. ಆದರೆ ಪ್ರಗತಿ ಮಾತ್ರ ಏನೂ ಆಗುತ್ತಿಲ್ಲ. ಸಿ.ಐ.ಡಿ., ಗೆ ಪ್ರಕರಣವನ್ನು ವಹಿಸಿದ್ದು, ಸಿ.ಐ.ಡಿ., ಯವರು ಒಂದು ದಿನ ಸಭೆಯನ್ನು ಮಾಡಿದರು. ನೂರಾರು ಕೋಟಿ ರೂಪಾಯಿಯನ್ನು ಬರ್ಖಾಸ್ತು ಮಾಡಿದ್ದೇವೆ. ಎಲ್ಲವನ್ನೂ ಹೇಳುತ್ತೇವೆ ಎಂದು ಹೇಳಿದ್ದರು. ಇಂದಿನವರೆವಿಗೂ ಅದನ್ನು ಹೇಳಿರುವುದಿಲ್ಲ.

ಕಳೆದ ಫೆಬ್ರವರಿಯಲ್ಲಿ virtual ಆಗಿ ಎಲ್ಲಾ ಠೇವಣಿದಾರರ ಒಂದು ಸಭೆಯನ್ನು ಮಾಡಿಸಿ ಅವರ ಮುಖೇನ ಮಾಹಿತಿಯನ್ನು ಕೊಡಿಸಲಾಗುವುದು ಎಂದು ಮಾನ್ಯ ಸಚಿವರು ಹೇಳಿದ್ದರು. ಅದು ಆಗಲಿಲ್ಲ. ಹೀಗಾದರೆ ಹೇಗೆ. 24 ಜನ ರೂ.924 ಕೋಟಿ ರೂಪಾಯಿ ಸುಸ್ತಿದಾರರಾಗಿದ್ದಾರೆ. ಅವರ ಹೆಸರನ್ನು ಹೇಳಿ ಎಂದರೆ ಅವರ ಹೆಸರು ಹೇಳುವುದಕ್ಕೂ ಇವರು ಭಯ ಪಡುತ್ತಿದ್ದರೆ ಹೇಗೆ ಎನ್ನುವುದು ನಮಗೆ ಚಿಂತೆಯಾಗಿದೆ. ಫೆಬ್ರವರಿ ಅಂತ್ಯದೊಳಗಾಗಿ ನಾವು ಹೇಳುತ್ತೇವೆಂದು ಕಳೆದ ಬಾರಿ ಹೇಳಿದ್ದರು. 24 ಜನ ಮಹನೀಯರ ಹೆಸರು, ಫೋಟೋ ಕೊಟ್ಟರೆ ನಾವು ಅದರ ಬಗ್ಗೆ ಯಾರು, ಏನು ತೆಗೆದುಕೊಂಡಿದ್ದಾರೆ ಎಂದು ಹೇಳಬಹುದು. 10 ವರ್ಷದಿಂದಲೂ ಆರ್.ಬಿ.ಐ., ನವರು ಪ್ರತಿವರ್ಷ ಎಲ್ಲವೂ ಸರಿಯಾಗಿದೆ ಎಂದು ವರದಿ ಕೊಡುತ್ತಿದ್ದರು. 2019ರಲ್ಲಿ ಮಾತ್ರ ನ್ಯೂನತೆಯನ್ನು ಕಂಡು ಹಿಡಿದಿದ್ದೇವೆಂದು ಹೇಳುತ್ತಾರೆ. ಆರ್.ಬಿ.ಐ., ನವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಏಕೆ ಹಿಂದೆ ಮುಂದೆ ನೋಡುತ್ತಿದ್ದಾರೆ? ಯಾವಾಗ ಕೇಳಿದರೂ ಹೈಕೋರ್ಟ್ ಇದೆ, ಆರ್.ಬಿ.ಐ.,ನವರು ಇದ್ದಾರೆ ಎಂದು ಹೇಳುತ್ತಿರುತ್ತಾರೆ. ಆರ್.ಬಿ.ಐ., ನವರೇ ತಪ್ಪು ಮಾಡಿರುವಾಗ ಅದನ್ನು ಸಿ.ಬಿ.ಐ., ಗಾದರೂ ವಹಿಸಲಿ. ಯಾರು ಆಡಿಟ್ ಮಾಡಿ ಹೋಗಿದ್ದರೋ ಅವರ ಮೇಲೆ ಒಂದು ಕೇಸನ್ನಾದರೂ ಹಾಕಲಿ. ಇದಕ್ಕೆ ಆಗಿರುವ ಕಷ್ಟವೇನು ಎಂಬುದು ನನ್ನ ಪ್ರಶ್ನೆ.

**(ಈ ಹಂತದಲ್ಲಿ ವೈಸ್ ಛೇರ್‌ಮನ್ ಡಾ:ತೇಜಸ್ವಿನಿಗೌಡ ಅವರು ಪೀಠವನ್ನು ಅಲಂಕರಿಸಿದರು)**

ಬ್ಯಾಂಕ್‌ನ ಹಿಂದಿನ ಆಡಳಿತ ಮಂಡಳಿಯವರು 2000ನೇ ಇಸ್ವಿಯಿಂದಲೂ ಅವ್ಯವಹಾರ, ಹಣ ದುರುಪಯೋಗದಲ್ಲಿ ತೊಡಗಿದ್ದು ಬ್ಯಾಂಕ್‌ನ ಸಾಲದ ಖಾತೆಗಳು, ದಾಖಲೆಗಳು, ಪಡೆದಿರುವ ಹಣ, ನೀಡಿರುವ ಹಣ ಇವುಗಳಲ್ಲಿ ತೀವ್ರವಾದ ವ್ಯತ್ಯಾಸವಿರುತ್ತದೆ. Evergreen Account ಎಂದು ಸೃಷ್ಟಿಸಿ, ವಾಸ್ತವಿಕವಾಗಿ ಸಾಲಗಾರರಿಗೆ ಸಾಲ ನೀಡಲಾಗಿದೆ ಎಂದು ದಾಖಲೆಯನ್ನು ಸೃಷ್ಟಿಸಿ Evergreen Account ಅನ್ನು ಸೃಷ್ಟಿಸಿರುತ್ತಾರೆ. 10 ವರ್ಷದಿಂದ ಯಾರು ಆಡಿಟ್ ಮಾಡಿದ್ದಾರೆಯೋ ಅವರ ಮೇಲೆ ಸರ್ಕಾರ ಯಾವುದೇ ಕ್ರಮ ತೆಗೆದುಕೊಳ್ಳುವುದಿಲ್ಲ. ಅವರನ್ನು ಸಭೆಗೆ ಕರೆದು ಕಾಫಿ ಕೊಡಿಸಿ, ಅವರು ಹೇಳಿದಂತೆ ಕೇಳುತ್ತೀವಲ್ಲ, ಏಕೆ? ಬ್ಯಾಂಕ್‌ನ ಬ್ಯಾಲೆನ್ಸ್‌ಶೀಟ್‌ನಲ್ಲಿ

'Investments' ರೂ.443 ಕೋಟಿ ಎಂದು ಇದೆ. ಆ ಹಣವನ್ನು ತೆಗೆದುಕೊಂಡು ಯಾರಿಗಾದರೂ ಒಂದಷ್ಟು ಜನರಿಗೆ ಹಣವೋ, ಬಡ್ಡಿಯೋ ಏನೋ ಒಂದಷ್ಟು ಕೊಡಬಹುದಲ್ಲವೆ?

ಶ್ರೀ ಅಶೋಕನ್ ಅವರು 2021ರಲ್ಲಿ ಪತ್ರವನ್ನು ಬರೆದರು. ಆಮೇಲೆ ಅವರು ಹೋದ ಜನರನ್ನು ಸರಿಯಾಗಿ ಮಾತನಾಡಿಸುವುದಿಲ್ಲ. ಮಾತನಾಡಿದರೆ ಅವರಿಗೆ ಕೋಪ ಬರುತ್ತದೆ. ಆದ್ದರಿಂದ ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಸರ್ಕಾರದಿಂದ ಅಥವಾ ಇಲಾಖೆಯಿಂದ ಒಬ್ಬ ಪಿ.ಆರ್.ಓ., ಹಾಕಿ. ಯಾರಾದರೂ ಬಂದು ಅವರ ಬಳಿ ಅಹವಾಲನ್ನು ಹೇಳಿದರೆ ಅದನ್ನು ಕೇಳಿ ಅವರಿಗೆ reply ಕೊಡಲಿ.

ಮಾನ್ಯ ಸಭಾಪತಿಯವರೇ, ನಾನು ಒಂದು ಕೇಸ್ ಹೇಳುತ್ತೇನೆ. ಒಬ್ಬರು ಆ ಬ್ಯಾಂಕ್‌ನಲ್ಲಿ ರೂ.9 ಕೋಟಿ ಡೆಪಾಸಿಟ್ ಇಡುತ್ತಾರೆ. ಎರಡು ವರ್ಷ ಬ್ಯಾಂಕ್ ಅವರಿಗೆ ಬಡ್ಡಿಯನ್ನೂ ಕೊಟ್ಟಿದೆ. ಈ ಪತ್ರಗಳನ್ನು ಕಳುಹಿಸಿಕೊಡುತ್ತೇನೆ. ಅವರು ಸದರಿ ಹಣಕ್ಕೆ ಕೇಂದ್ರ ಸರ್ಕಾರಕ್ಕೆ ಕಟ್ಟಬೇಕಾದ ಟಿ.ಡಿ.ಎಸ್., ಎಲ್ಲವನ್ನೂ ಕಟ್ಟಿದ್ದಾರೆ. ಮೊನ್ನೆ ಅವರು ಹೋಗಿ ನಮ್ಮ ಹಣ ರೂ.9 ಕೋಟಿ ಇರುವುದಕ್ಕೆ certify ಮಾಡಿಕೊಡಿ ಎಂದು ಹೇಳಿದರೆ ಇದು fake deposit ಎಂದು ಹೇಳುತ್ತಾರೆ. ನಿಮಗೆ ಕೊಟ್ಟಿರುವ ಬಡ್ಡಿಯನ್ನೂ ವಾಪಸ್ ಕೊಡಬೇಕೆಂದು ಹೇಳಿ ಅವರಿಗೆ ಪತ್ರವನ್ನು ಕೊಡುತ್ತಾರೆ. ಜನರಿಗೆ ಯಾವ ರೀತಿಯ ಮಾಹಿತಿ ಕೊಡುವುದು? ಅಲ್ಲಿ ಒಬ್ಬ ಪಿ.ಆರ್.ಓ., ಇರಬೇಕು. ಒಮ್ಮೆ ನಾನು ಈ ವಿಷಯದಲ್ಲಿ ಒಂದು Expert Committee ಅನ್ನು ಮಾಡಿ ಎಂದು ಹೇಳಿದ್ದೆನು. ನಮಗೆ ಹೈಕೋರ್ಟ್ ಆದೇಶ ಅಡ್ಡಿಯಾಗುತ್ತದೆ ಎಂದು ಹೇಳಿದರು. ಹೈಕೋರ್ಟ್ ಎಲ್ಲಿಯಾದರೂ ಜನರಿಗೆ ಸಹಾಯ ಮಾಡಬೇಡಿ ಎಂದು ಹೇಳಿದೆಯೇ? ಅವರ ಪ್ರಕಾರವೇ ಮಾಡಿ. ಯಾರೋ ಒಬ್ಬ ಬಂದು ಕಷ್ಟ ಎಂದು ಹೇಳಿದಾಗ ಸರ್ಕಾರದಿಂದ ಒಬ್ಬ ಪಿ.ಆರ್.ಓ., ಇಟ್ಟು ನಿಜವೋ ಸುಳ್ಳೋ ಅಥವಾ ಮತ್ತೊಂದು ವಾರಕ್ಕೆ ಬನ್ನಿ ಎಂದು ಹೇಳಬೇಕು. ಒಂದು ಎಸ್.ಎಂ.ಎಸ್., ಅನ್ನು ಕಳುಹಿಸಿ ಎಂದು ನಾನು ಕಳೆದ ಬಾರಿ ಹೇಳಿದ್ದೆನು. ಯಾರು ಈ ಬ್ಯಾಂಕ್‌ನಲ್ಲಿ ಠೇವಣಿ ಇಟ್ಟಿದ್ದಾರೆಯೋ ಅವರಿಗೆ ಬ್ಯಾಂಕ್‌ನಲ್ಲಿ ಏನಾಗುತ್ತಿದೆ, ಎಷ್ಟು ಬಡ್ಡಿ ಬರುತ್ತದೆ, ಎಷ್ಟು ದಿನದಲ್ಲಿ ಬರುತ್ತದೆ ಎನ್ನುವ ಒಂದು

ಮಾಹಿತಿಯನ್ನು ಕೊಡಬೇಕು ಎಂದು ಮನವಿ ಮಾಡಿಕೊಂಡಿದ್ದೆನು. ಆದರೆ ಆ ಮಾಹಿತಿ ಇವತ್ತಿನವರೆಗೂ ಲಭ್ಯವಾಗಿಲ್ಲ.

**(...ಮುಂದು)**

**(607) 24-03-2022 (3.50) ಕೆಜಿ-ಜಿಆರ್**

**(ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಯು.ಬಿ.ವೆಂಕಟೇಶ್ (ಮುಂದು):-**

ಅದು ಇವತ್ತಿನವರೆಗೂ ಆಗಿಲ್ಲ. ಒಬ್ಬ P.R.O., ರವರನ್ನು ಇಡುವುದಕ್ಕೆ ಕೇಳುತ್ತೇನೆ. ಇದು ಒಂದು ಭಾಗ. ಇನ್ನೊಂದು ಶ್ರೀ ವಶಿಷ್ಠ ಸೌಹಾರ್ದ ಸಹಕಾರಿ ನಿಯಮಿತ ಬ್ಯಾಂಕ್ ಇದೆ. ಈ ಬ್ಯಾಂಕಿನಲ್ಲಿ 12,645 ಜನ ಸದಸ್ಯರಿದ್ದಾರೆ. ಈ ಬ್ಯಾಂಕಿನವರು ಒಟ್ಟು 291 ಕೋಟಿ ರೂಪಾಯಿಗಳ ವಿವಿಧ ಠೇವಣಿಗಳನ್ನು ಸಂಗ್ರಹಿಸಿದ್ದಾರೆ. ಈ ಬ್ಯಾಂಕಿನ 264 ಜನ ಸದಸ್ಯರಿಗೆ 255 ಕೋಟಿ ರೂಪಾಯಿಗಳನ್ನು ಸಾಲ ಕೊಟ್ಟಿರುತ್ತಾರೆ. ಇವರಲ್ಲಿ 5 ಜನ ಆ ಬ್ಯಾಂಕಿನ ಅಧ್ಯಕ್ಷರಿಗೆ ಬೇಕಾದವರು ಆಗಿರಬಹುದು, ಅವರ ಸಂಬಂಧಿಕರು ಆಗಿರಬಹುದು ಅಥವಾ ಅವರದ್ದೇ quotire ಎನ್ನಬಹುದು, ಮರಿಯಪ್ಪ & ಶಶಿಶೇಖರ, ಹೆಚ್.ಕೆ.ಗಣೇಶ, ಚೌರಾಶಿಯಾ, ಪ್ರೈಮ್ ಎಸ್ಟೇಟ್ ಮತ್ತು ಆದಿತ್ಯ ಪ್ರಿಂಟರ್ಸ್ ಇವರಿಗೆ 138 ಕೋಟಿ ರೂಪಾಯಿಗಳ ಸಾಲವನ್ನು ಕೊಟ್ಟಿದ್ದಾರೆ. One fine day ಅವರನ್ನು ಕರೆಸಿಬಿಟ್ಟು ಕೋಟ್ಯಾಂತರ ರೂಪಾಯಿ ಬಡ್ಡಿ ಹಣವನ್ನು 'One Time Settlement' ಮೂಲಕ ಮನ್ನಾ ಮಾಡಿ ಬ್ಯಾಂಕಿಗೆ ನಷ್ಟ ಮಾಡಿದ್ದಾರೆ. ಈಗ ಬ್ಯಾಂಕ್ ಲಾಸ್‌ನಲ್ಲಿದೆ. ಆ ಬ್ಯಾಂಕಿನವರಿಗೆ ಠೇವಣಿದಾರರಿಗೆ ಹಣ ವಾಪಸ್ಸು ಕೊಡುವುದಕ್ಕೆ ಹಣ ಇಲ್ಲ. ಅದಕ್ಕೂ ಮೊದಲೇ ಬೇರೆಯವರನ್ನು ಕರೆದು 'O.T.S.,' ಎಂದು ಹೇಳಿ, ಇರುವ ಹಣವನ್ನು ಲಾಸ್ ಮಾಡಿದ್ದಾರೆ.

ಮಾನ್ಯ ಸಭಾಪತಿಯವರೇ, ಇನ್ನೊಂದು interesting ವಿಷಯ ಏನೆಂದರೆ, ಯಾರಾದರೂ ಠೇವಣಿದಾರರು ಹಣ ಕೇಳುವುದಕ್ಕೆ ಹೋದರೆ, ಅದು ಸಿ.ಐ.ಡಿ., ತನಿಖೆಯಲ್ಲಿದೆ ಎಂದು ಹೇಳುತ್ತಾರೆ. ಆ ಬ್ಯಾಂಕಿನವರು ಸಿ.ಐ.ಡಿ.,ಯವರ ವಿರುದ್ಧ ತಡೆಯಾಜ್ಞೆಯನ್ನು ತಂದಿದ್ದಾರೆ. ಅದುದರಿಂದ, ಅದರಲ್ಲಿ ಏನು investigation ಮಾಡುವಂತಿಲ್ಲ, ಠೇವಣಿದಾರರಿಗೆ ಯಾರಿಗೂ ಹಣವನ್ನು ಕೊಡುವಂತಿಲ್ಲ, ಠೇವಣಿ ಇಟ್ಟವರೆಲ್ಲರೂ ಪಾಪತ್ಮರು, ಬಾಕಿಯವರು ಆರಾಮವಾಗಿ ತಿರುಗಾಡಿಕೊಂಡು ಇದ್ದಾರೆ.

ಸರ್ಕಾರ ನ್ಯಾಯಾಲಯ, ಅದು-ಇದು ಎಂದು ಹೇಳುತ್ತಾರೆ. ಇದನ್ನು ವಜಾ ಮಾಡಿಸಬೇಕು. ಇಲ್ಲವೆಂದರೆ, ಸರ್ಕಾರವೇ ಠೇವಣಿದಾರರನ್ನು ಒಂದು ಸಭೆಗೆ ಕರೆದು ಆ ಸಭೆಯಲ್ಲಿ ಸರ್ಕಾರ ಈ ರೀತಿ ಮಾಡುತ್ತಿದೆ ಎಂದು ಹೇಳಬೇಕು. ಒಂದು ತಿಂಗಳಲ್ಲ, ಮೂರು ತಿಂಗಳಲ್ಲ, ಆರು ತಿಂಗಳಗಲ್ಲ, ಒಂದು ವರ್ಷಕ್ಕೆ ಎಂದು ಹೇಳಲಿ. ಹಣ ಠೇವಣಿ ಇಟ್ಟವರು ಪಾಪತ್ಮರುಮ ಅದನ್ನು ಕೇಳುವುದಕ್ಕೆ ಪೋಲೀಸ್ ಠಾಣೆಗೆ ಹೋದರೆ, ಪೋಲೀಸರು ಈ ಬ್ಯಾಂಕಿನ ಮೇಲೆ ತಡೆಯಾಜ್ಞೆ ಇದೆ ಎಂದು ಹೇಳಿ ಕಳುಹಿಸುತ್ತಾರೆ. ಈ ರೀತಿಯಾದರೆ, ಸಾರ್ವಜನಿಕರು ಸಹಕಾರಿ ಬ್ಯಾಂಕುಗಳಲ್ಲಿ ಯಾವ ಧೈರ್ಯದ ಮೇಲೆ ಹಣವನ್ನು ಠೇವಣಿ ಇಡುತ್ತಾರೆ? ಬೇಕಾದಷ್ಟು ಜನರು ಬ್ಯಾಂಕ್‌ಗಳನ್ನು ನಂಬಿ ಠೇವಣಿ ಇಟ್ಟಿರುತ್ತಾರೆ. ಇಂತಹ ಯಾವುದೋ 1-2 ಬ್ಯಾಂಕುಗಳು ಮೋಸ ಮಾಡಿವೆ. ಈ ರೀತಿ ಮೋಸ ಮಾಡುತ್ತಿರುವವರ ಮೇಲೆ ಸರಿಯಾಗಿ ಸರ್ಕಾರ ಕ್ರಮತೆಗೆದುಕೊಳ್ಳಲಿಲ್ಲವೆಂದರೆ, ಸಾರ್ವಜನಿಕರು ಆ ಬ್ಯಾಂಕುಗಳಲ್ಲಿ ಯಾವ ನಂಬಿಕೆಯ ಮೇಲೆ ಹಣವನ್ನು ಠೇವಣಿ ಇಡುತ್ತಾರೆ? ಇದಕ್ಕೆ ಮಾನ್ಯ ಸಚಿವರು ಉತ್ತರವನ್ನು ಹೇಳಬೇಕು. ನಾನು ಮತ್ತೇ ಉಳಿದ ವಿಷಯವನ್ನು ಕೇಳುತ್ತೇನೆ.

**ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಯು.ವಿ.ವೆಂಕಟೇಶ್‌ರವರು ಈ ವಿಷಯವನ್ನು 3ನೇ ಬಾರಿ ಸದನದ ಗಮನವನ್ನು ಸೆಳೆಯುತ್ತಿದ್ದಾರೆ. ಈ ವಿಷಯ ಪ್ರತಿ ಅಧಿವೇಶನದಲ್ಲಿಯೂ ಇರುತ್ತದೆ. ಶ್ರೀ ಗುರುರಾಘವೇಂದ್ರ ಕ್ರೆಡಿಟ್ ಕೋ-ಆಪರೇಟಿವ್ ಬ್ಯಾಂಕ್‌ನ ಕಾರ್ಯವ್ಯಾಪ್ತಿ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ ರಾಮನಗರ ಮತ್ತು ತುಮಕೂರು ಜಿಲ್ಲೆಗಳಿಗೆ ಸೀಮಿತವಾಗಿರುತ್ತದೆ. ಯಾವಾಗಲೂ Reserve Bank of India ದವರು audit ಮತ್ತು inspection ಮಾಡುವಂತಹ ಕೆಲಸವನ್ನು ಮಾಡುತ್ತಿರುತ್ತಾರೆ. 2019 ರಲ್ಲಿ Reserve Bank of India ದವರು ಇಷ್ಟು ಹಣ ದುರ್ಬಳಕೆಯಾಗಿದೆ ಎಂಬುದನ್ನು ಪತ್ತೆ ಮಾಡಿದ್ದಾರೆ. ನಮ್ಮ ಇಲಾಖೆಯಿಂದ ಆ ಬ್ಯಾಂಕಿಗೆ ಆಡಳಿತಾಧಿಕಾರಿಯನ್ನು ನೇಮಿಸುವ ಮುಂಚೆ Reserve Bank of India ದ ಅನುಮತಿಯನ್ನು ತೆಗೆದುಕೊಳ್ಳಬೇಕು. ನಾವು ತಕ್ಷಣ Reserve Bank of India ದ ಅನುಮತಿಯನ್ನು ತೆಗೆದುಕೊಂಡು ಶ್ರೀ ದಿವಾಕರ, Additional Registrar ಎಂಬುವವರನ್ನು ಆಡಳಿತಾಧಿಕಾರಿಯನ್ನಾಗಿ ನೇಮಿಸಿದ್ದೇವು. ಮತ್ತೆ ಅವರು ಹೈಕೋರ್ಟ್‌ಗೆ ಹೋದರು. ಹೈಕೋರ್ಟ್‌ನಲ್ಲಿ Reserve Bank of India ದವರು ಸೂಚಿಸುವಂತಹ 2-3 ಹೆಸರುಗಳಲ್ಲಿ ಒಬ್ಬರನ್ನು ಆಡಳಿತಾಧಿಕಾರಿಯನ್ನಾಗಿ ನೇಮಿಸಬೇಕು ಮತ್ತು ನಾವು ನೇಮಿಸಿದ್ದವರನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳಿತ್ತು. ಅಂದಿದನಿಂದ Reserve Bank of India ದವರು

ಸೂಚಿಸಿದಂತಹ ಶ್ರೀ ಅಶೋಕನ್ ಎನ್ನುವವರನ್ನು ನೇಮಕ ಮಾಡಲಾಗಿದೆ. 2014 ರಿಂದ re-audit ಮಾಡುವುದಕ್ಕೆ ನಾವೆಲ್ಲರೂ ಸೇರಿ 4-5 ಸಭೆಗಳನ್ನು ಮಾಡಿ ತೀರ್ಮಾನ ಮಾಡಿದ್ದೇವೆ. 2014-15ನೇ ಸಾಲಿನಲ್ಲಿ 807 ಕೋಟಿ ರೂಪಾಯಿಗಳು, 2015-16 ನೇ ಸಾಲಿನಲ್ಲಿ 483 ಕೋಟಿ ರೂಪಾಯಿಗಳು, 2016-2017 ನೇ 333.66 ಕೋಟಿ ರೂಪಾಯಿಗಳು ಮತ್ತು 2017-2018ನೇ ಸಾಲಿನಲ್ಲಿ 380.72 ಕೋಟಿ ರೂಪಾಯಿಗಳು ಒಟ್ಟು 2,004 ಕೋಟಿ ರೂಪಾಯಿಗಳು misuse ಆಗಿದೆ ಎಂದು re-audit ನಿಂದ ತಿಳಿದುಬಂದಿದೆ. ಇಲ್ಲಿ 'misuse' ಎಂದರೆ, ಯಾರಿಗೆ ಭದ್ರತೆ ಇಲ್ಲ ಅವರಿಗೆ ಸಾಲ ಕೊಟ್ಟಿರುವಂತಹದ್ದು, ಯಾರಾದರೂ ಡಿಪಾಸಿಟ್ ಇಟ್ಟರೆ, ಆ ಡಿಪಾಸಿಟ್ ಹೆಸರಿನಲ್ಲಿ ಸಾಲ ಕೊಡುವಂತಹದ್ದು, ಈ ರೀತಿ ಮಾಡಿರುವುದನ್ನು ಪತ್ತೆ ಮಾಡಿದ್ದಾರೆ. ಮಾನ್ಯ ಸದಸ್ಯರಾದ ಯು.ಬಿ.ವೆಂಕಟೇಶ್‌ರವರು ಯಾವಾಗಲೂ ಸಭೆ ಮಾಡಬೇಕೆಂದು ಹೇಳುತ್ತಿದ್ದರು. ಅದರಂತೆ, ನಾವು ಕಳೆದ ವಾರ ಒಂದು ಸಭೆಯನ್ನು ಮಾಡಿದ್ದೇವೆ. ಅದರಲ್ಲಿ ಮಾನ್ಯ ಯು.ಬಿ.ವೆಂಕಟೇಶ್‌ರವರು ಇದ್ದರು. ಆ ಕ್ಷೇತ್ರದ ಮಾನ್ಯ ರವಿಸುಬ್ರಮಣ್ಯನ್ ಇದ್ದರು. ಶ್ರೀಮತಿ ಸೌಮ್ಯರೆಡ್ಡಿಯವರು ಇದ್ದರು. Virtual Meeting ಮುಖಾಂತರ ಸಂಸದರಾದ ಮಾನ್ಯ ತೇಜಸ್ವಿ ಸೂರ್ಯರವರು ಮಾತನಾಡಿದರು. ಮಾನ್ಯ ಸದಸ್ಯರಾದ ಯು.ಬಿ.ವೆಂಕಟೇಶ್‌ರವರು ಸಹ ಅನೇಕ ಸಲಹೆಗಳನ್ನು ಕೊಟ್ಟಿದ್ದರು. ಆ ಸಭೆಗೆ ಪೋಲೀಸ್ ಅಧಿಕಾರಿಗಳನ್ನು ಮತ್ತು ಸಹಕಾರ ಇಲಾಖೆಯ ಅಧಿಕಾರಿಗಳನ್ನು ಕರೆಸಿದ್ದೇವು. Audit ನವರನ್ನು ಕರೆಸಿದ್ದೇವು. ಇದಕ್ಕೆ ಸಂಬಂಧಪಟ್ಟ ಎಲ್ಲ ಅಧಿಕಾರಿಗಳು ಇದ್ದರು. ಸುಮಾರು 20 ಜನ ಸಂಬಂಧಪಟ್ಟ ಅಧಿಕಾರಿಗಳ ಜೊತೆಗೆ ಒಂದು ಸಭೆಯನ್ನು ಮಾಡಿದ್ದೇವು. ಎಷ್ಟೋ ಜನ ಸದಸ್ಯರಿಗೆ ಬ್ಯಾಂಕಿನಲ್ಲಿ ಏನಾಗುತ್ತದೆ ಎಂದು ಗೊತ್ತಾಗುವುದಿಲ್ಲ. ಎಷ್ಟು ರಿಕವರಿ ಮಾಡುತ್ತಿದ್ದಾರೆ, audit ನಿಂದ ಏನು punishment ಆಗಿದೆ ಎಂಬ ಹಲವಾರು ಪ್ರಶ್ನೆಗಳನ್ನು ಸಭೆಯಲ್ಲಿ ಕೇಳಿದರು. ಆ ಪ್ರಶ್ನೆಗಳಿಗೆ ಉತ್ತರ ಮಾಡಿದ್ದಾರೆ. ಆ ಸಭೆಯಾದ ನಂತರ ಒಂದು General Body Meeting ಮಾಡಬೇಕೆಂದು ಮಾಡಿದ್ದೇವೆ. ಎಷ್ಟು ಜನ ಸದಸ್ಯರಿದ್ದಾರೆ ಅವರಿಗೆ ಅದರ ವಾಸ್ತಾಂಶ ಗೊತ್ತಾಗಬೇಕೆಂದು ಆ ಸಭೆಯಲ್ಲಿ ತೀರ್ಮಾನ ಮಾಡಿದರು. Virtual Meeting ಮುಖಾಂತರವಾದರೂ ಮಾಡಿ, Virtual Meeting ಇಲ್ಲವೆಂದರೆ, ನೇರವಾಗಿಯಾದರೂ General Body Meeting ಮಾಡಬೇಕೆಂದು ಮಾಡಿದ್ದೇವೆ.. ಶ್ರೀ ಗುರುರಾಘವೇಂದ್ರ ಕ್ರೆಡಿಟ್ ಕೋ-ಅಪರೇಟಿವ್ ಬ್ಯಾಂಕಿನ ಸದಸ್ಯರು ಯಾರಿದ್ದಾರೆ, ಯಾರು ಠೇವಣಿ ಇಟ್ಟಿರುತ್ತಾರೆ, ಅವರಿಗೆ ಏನಾಗುತ್ತಿದೆ ಎಂಬ ವಿಷಯ ಹೋಗಬೇಕು. ಅದರ ಸಲುವಾಗಿ ದಿನಾಂಕ 29-03-2022 ಕ್ಕೆ ಆ ಸಭೆಯನ್ನು ನಿಗದಿ ಮಾಡಿದ್ದಾರೆ. ಎಲ್ಲರಿಗೂ ನೋಟೀಸ್ ಸಹ ಕೊಟ್ಟಿದೆ. ಕೋವಿಡ್-19 ಇದ್ದಿದರಿಂದ

ಇದನ್ನು ಮಾಡುವುದಕ್ಕೆ ಆಗುತ್ತಿರಲಿಲ್ಲ. ಠೇವಣಿದಾರರಿಗೆ ಕೊಡಬೇಕಾದಂತಹ ವಾಸ್ತಾಂಶವನ್ನು ಕಲೆಕ್ಟ್ ಮಾಡಿದ್ದಾರೆ. ಈಗ ಅದನ್ನು General Body Meeting ಗೆ ಇಟ್ಟಿದ್ದಾರೆ. ಅದರಲ್ಲಿ ಏನೇನೂ ತೀರ್ಮಾನವಾಗಿದೆ, ಅದರ ಒಂದು ಪ್ರತಿಯನ್ನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ. ನಾವು ಅದನ್ನು ಎಷ್ಟೇ ಗಂಭೀರವಾಗಿ ಕ್ರಮ ತೆಗೆದುಕೊಳ್ಳಬೇಕು ಎಂದರೂ ಸಹ, Reserve Bank of India ದ ಅನುಮತಿಯನ್ನು ತೆಗೆದುಕೊಂಡು ಮಾಡಬೇಕಾಗುತ್ತದೆ, ಸಹಕಾರ ಇಲಾಖೆಗೆ ಯಾವುದೇ ರೀತಿಯಲ್ಲೂ ಸಹ ಕ್ರಮಗಳನ್ನು ತೆಗೆದುಕೊಳ್ಳುವಂತಹ ಅಧಿಕಾರವನ್ನು ಕೊಟ್ಟಿಲ್ಲ. ನಾವು ಹೆಚ್ಚಿಗೆ ಏನಾದರೂ ಹೇಳಿದರೆ, ಅವರು ನ್ಯಾಯಾಲಯಕ್ಕೆ ಹೋಗುತ್ತಾರೆ. ನಮ್ಮ ಇಲಾಖೆಗೆ ಇರುವಂತಹ ಪ್ರತಿಯೊಂದು ಆಡಿಟ್‌ನ್ನು ಮೊದಲು identification ಮಾಡಬೇಕು. ಈಗ ಸುಮಾರು 2,004 ಕೋಟಿ ರೂಪಾಯಿಗಳು ದುರ್ಬಳಕೆಯಾಗಿದೆ. 2018-2019ನೇ ಸಾಲಿನಿಂದ ಆಚೆಗೂ ಮುಂದುವರಿಸಬೇಕೆಂದು ಆಗಿದೆ. ಯಾರು ಯಾರು cheat ಮಾಡಿದ್ದಾರೆ, ಯಾರು ಯಾರು misuse ಮಾಡಿದ್ದಾರೆ ಅವರೆಲ್ಲರೂ ಸಹ ನ್ಯಾಯಾಲಯದಿಂದ ಜಾಮೀನು ತೆಗೆದುಕೊಂಡಿದ್ದಾರೆ. E.D., ಯವರು ಸಹ ಅವರನ್ನು ಆರೆಸ್ಟ್ ಮಾಡಿ ಏನ್ನಲ್ಲಾ precautionary steps ಮಾಡಬಹುದೋ, ಅದನ್ನೆಲ್ಲಾ ಮಾಡಿದ್ದಾರೆ. ನಮ್ಮ ಇಲಾಖೆಯೂ Section 68 of the Karnataka Co-operative Societies Act ಅಡಿಯಲ್ಲಿ ವಿಚಾರಣೆಯನ್ನು ಮಾಡಿದೆ. ಈಗ 2,004 ಕೋಟಿ ರೂಪಾಯಿಗಳು ದುರ್ಬಳಕೆಯಾಗಿದೆ ಎಂದು ಆದ ಮೇಲೆ, ಅದನ್ನು ನಿಯಮದ ಪ್ರಕಾರ, ಅವರ ಆಸ್ತಿಯನ್ನು ಜಪ್ತಿ ಮಾಡುವುದಕ್ಕೆ notice ಕೊಡಬೇಕು, ನಂತರ ಅವರು ಅದಕ್ಕೆ ಉತ್ತರವನ್ನು ಕೊಡಬೇಕು. ನಂತರ ಅವರ ಆಸ್ತಿಗಳನ್ನು ನಮ್ಮ ಇಲಾಖೆಯ custody ಗೆ ತೆಗೆದುಕೊಳ್ಳಬೇಕು. ಹರಾಜು ಮಾಡುವುದಕ್ಕಿಂತ ಮುಂಚೆ ಅವರಿಗೆ ಒಂದು ನೋಟೀಸನ್ನು ಕೊಡಬೇಕಾಗುತ್ತದೆ. ಏಕೆಂದರೆ, ಅವರು ಹಣ ಕಟ್ಟಲು ರೆಡಿ ಇದ್ದರೆ, ಕಟ್ಟಿಸಿಕೊಳ್ಳಬೇಕಾಗುತ್ತದೆ. ಈಗ ಸುಮಾರು ಜನರು ಹಣ ಕಟ್ಟಲು ಮುಂದೆ ಬರುತ್ತಿದ್ದಾರೆ. ಅವರಿಗೆ ಏನೆಂದರೆ, ನಾವು ಎಷ್ಟು ಹಣ ಕಟ್ಟಬೇಕು, ಅವರು ಸುಮಾರು 10 ಲಕ್ಷ ರೂಪಾಯಿಗಳ ಸಾಲ ತೆಗೆದುಕೊಂಡಿದ್ದರೆ, ಅವರ ಹೆಸರಿನಲ್ಲಿ 30 ರಿಂದ 40 ಲಕ್ಷ ರೂಪಾಯಿಗಳನ್ನು ತೆಗೆದುಕೊಂಡಿರುವಂತಹದ್ದು ಎಂದಿದೆ, ಅದೇ ದೂರುಗಳು ಜಾಸ್ತಿಯಾಗಿದೆ. ಅದಕ್ಕೆ ಎಷ್ಟು ಬಡ್ಡಿ ಕಟ್ಟಬೇಕು ಎಂದು ಯಾರು ತೆಗೆದುಕೊಂಡಿರುತ್ತಾರೆ ಅವರಿಗೆ ಮಾಹಿತಿಯನ್ನು ಕೊಟ್ಟರೆ, ಹಣವನ್ನು ಕಟ್ಟುತ್ತೇವೆಂದು ಮುಂದೆ ಬಂದಿದ್ದಾರೆ. ಈಗ ಅದೆಲ್ಲವನ್ನು ಪಟ್ಟಿ ಮಾಡಲಾಗಿದೆ. ಈಗ ಅವರ ಒಂದೇ ಒಂದು ಆಸ್ತಿಯನ್ನು ಬಿಡುತ್ತಿಲ್ಲ. ಆ ರೀತಿಯ ವ್ಯವಸ್ಥೆಯನ್ನು ಹಾಗೂ audit ಅನ್ನು ಸಹ ಸರಿಯಾಗಿ ಮಾಡಲಾಗಿದೆ. ಶ್ರೀ ಅಶೋಕನ್ ಎಂಬುವರು Reserve Bank

of India ದ ಒಳ್ಳೆಯ ಅಧಿಕಾರಿ ಇದ್ದಾರೆ. ಈಗ ಕೇಂದ್ರ ಸರ್ಕಾರದಿಂದ ತೆಗೆದುಕೊಂಡಿರುವ ಕ್ರಮದ ಬಗ್ಗೆ ಅವರಿಗೂ ಗೊತ್ತಿದೆ. 5 ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ 713 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಇದರಿಂದ ಸುಮಾರು 42 ಸಾವಿರ ಜನರಿಗೆ ಅನುಕೂಲವಾಗಿದೆ. 5 ಲಕ್ಷ ರೂಪಾಯಿಗಳ ಮೇಲ್ಪಟ್ಟು ಠೇವಣಿ ಇಟ್ಟಿರುವವರು ಇದ್ದಾರೆ. ಅದನ್ನೇ ನಂಬಿಕೊಂಡವರು ಇದ್ದಾರೆ. ಅವರಿಗೆ ಈ property sale ಮಾಡುವುದಕ್ಕೆ, ಅವರಿಂದ ರಿಕವರಿ ಮಾಡುವಂತಹದ್ದಕ್ಕೆ ಮತ್ತು ಠೇವಣಿದಾರರಿಗೆ ಠೇವಣಿ ಹಣ ಕೊಡುವುದಕ್ಕೆ ಚಾಲನೆ ಮಾಡಿದ್ದೇವೆ. ಇದರ ಬಗ್ಗೆ ಇಲಾಖೆ ಮತ್ತು Reserve Bank of India ಬಹಳ ಗಂಭೀರವಾಗಿದೆ. ಇದರ ಬಗ್ಗೆ ಸಿ.ಓ.ಡಿ., ಅಧಿಕಾರಿಗಳ ಜೊತೆಗೂ ಸಭೆಯನ್ನು ಮಾಡಿದ್ದೇವೆ. ನಾವು ಸಿ.ಓ.ಡಿ., ಅಧಿಕಾರಿಗಳಿಗೂ ಸಹ ಯಾರಾದರೂ ತಡೆಯಾಜ್ಞೆ ತಂದಿದ್ದರೆ, ಅದನ್ನು stay vacate ಮಾಡಿಸಬೇಕೆಂದು ಹೇಳಿದ್ದೇವೆ. ನಮ್ಮಿಂದ ಏನಾದರೂ ಸಹಕಾರ ಬೇಕೆಂದರೆ, ನಾನು Advocate General ರವರಿಗೂ ಸಹ ಮನವಿಯನ್ನು ಮಾಡುತ್ತೇನೆ. Advocate General ರವರು ಇರುತ್ತಾರೆ. ಈ ರೀತಿ cheat ಮಾಡುವವರಿಗೆ, misuse ಮಾಡುವವರಿಗೆ ಯಾವುದೇ ಕಾರಣಕ್ಕೂ ಸಹ ಜಾಮೀನು ಸಿಗಬಾರದು ಎನ್ನುವುದನ್ನು ಬಹಳ ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಶ್ರೀ ಗುರು ರಾಘವೇಂದ್ರ ಬ್ಯಾಂಕಿನಲ್ಲಿ ಇದುವರೆಗೂ ಆಡಳತಾಧಿಕಾರಿಯಿಂದ ಏನಾಗಿದೆ, Reserve Bank of India ದ ವಿಚಾರಣೆಯಿಂದ ಏನಾಗಿದೆ, ಎಷ್ಟು ಜನರಿಗೆ ಮೋಸ ಆಗಿದೆ, ಎಷ್ಟು ಜನರು ದುರ್ಬಳಕೆ ಮಾಡಿದ್ದಾರೆ ಅದೆಲ್ಲವನ್ನು ಸದಸ್ಯರಿಗೆ ಹೇಳುವಂತಹದ್ದನ್ನು ಮಾಡುತ್ತಿದ್ದೇವೆ. Audit ಅನ್ನು ಸಹ ಬಹಳ ಬಿಗಿ ಬಂದೋಬಸ್ತಾಗಿ ಮಾಡಿದ್ದೇವೆ.

**(ಮುಂದು )**

**(608) 24-03-2022 (4.00) ಎಂವಿ-ಎಂಡಿ(ಆರ್‌ಎನ್)**

**(ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಎಸ್.ಟಿ.ಸೋಮಶೇಖರ್ (ಮುಂದು):-**

ಅಡಿಟ್ ಅನ್ನು ಸಹ ಬಿಗಿ ಬಂದೋಬಸ್ತ್ ಆಗಿ ಮಾಡಿದ್ದೇವೆ. ಈಗ ಒಂದು ವರ್ಷದ ಅಡಿಟ್ ಪೂರ್ಣಗೊಂಡರೆ, ಒಟ್ಟು ಎಷ್ಟು ಕೋಟಿ ಹಣ ಮೋಸವಾಗಿದೆ ಎಂಬ ಮಾಹಿತಿ ಸಿಗುತ್ತದೆ. ಈಗ

ಯಾರ್ಯಾರು ಸಾಲವನ್ನು ತೆಗೆದುಕೊಂಡಿದ್ದಾರೆ, ಅವರೆಲ್ಲರ property ಗಳನ್ನು ಕಾನೂನು ಪ್ರಕಾರ seize ಮಾಡುವಂಥದ್ದನ್ನು ಮಾಡುತ್ತಿದ್ದೇವೆ.

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಈಗ 2019ರಲ್ಲಿ ಆರ್.ಬಿ.ಐ.ನವರು ಈ ರೀತಿಯ ವರದಿ ನೀಡಿದ್ದಾರೆಂದು ಹೇಳಿದ್ದೀರಿ. ಆದರೆ, 2017 ಮತ್ತು 2018ರಲ್ಲಿ ಏನೆಂದು ವರದಿ ನೀಡಿದ್ದಾರೆ. ಅವರು ಯಾರು ನೀಡಿದ್ದಾರೆ, ಅವರ ಮೇಲೆ ಯಾವ ರೀತಿಯ ಕ್ರಮವನ್ನು ತೆಗೆದುಕೊಳ್ಳುತ್ತಾರೆ. ಈಗ ಇದನ್ನು 2019ರ ಪ್ರಕಾರ ಮಾಡುತ್ತಿದ್ದಾರೆ. ಕಳೆದ 10 ವರ್ಷಗಳಿಂದ ಮತ್ತು 2015 ರಿಂದ 2018ರವರೆಗೆ ಏನು ವರದಿ ನೀಡಿದ್ದಾರೆ. ಅವರ ಮೇಲೆ ಯಾವ ರೀತಿಯ ಕ್ರಮವನ್ನು ತೆಗೆದುಕೊಳ್ಳುತ್ತಾರೆ. ನಾನು ಒಂದು ವಿಷಯವನ್ನು ಸ್ವಾಗತ ಮಾಡುತ್ತೇನೆ. ಅಂದರೆ ಈ ತಿಂಗಳ 29ನೇ ತಾರೀಖಿಗೆ ವಾರ್ಷಿಕ ಮಹಾಸಭೆ ಇಟ್ಟಿರುವುದಕ್ಕೆ ತಮಗೆ ಧನ್ಯವಾದಗಳು. ಮಾನ್ಯ ಮಂತ್ರಿಗಳನ್ನು ನನ್ನನ್ನು ಸಹ ಒಂದು ಸಭೆಗೆ ಕರೆದಿದ್ದರು. ನಾನು ಅಂದಿನ ಸಭೆಯಲ್ಲೂ ಸಹ ಹೇಳಿದ್ದೆ. ಈಗ 924 ಕೋಟಿ ರೂಪಾಯಿಗಳಿಗೆ ಸಂಬಂಧಪಟ್ಟಂತೆ 24 ಜನ ಯಾರು ಸುಸ್ತಿದಾರರು ಇದ್ದಾರೆ, ಅವರ ಹೆಸರುಗಳನ್ನು ಬಹಿರಂಗಪಡಿಸಲಿ. ಅಂದರೆ, ಇಂತಹ 24 ಜನ ಮಹನೀಯರು ಸುಮಾರು 924 ಕೋಟಿ ರೂಪಾಯಿಗಳನ್ನು ಕಟ್ಟಬೇಕೆಂದು. ಸರ್ಕಾರ ಅವರ ಹೆಸರುಗಳನ್ನು ಬಹಿರಂಗಪಡಿಸುವುದಕ್ಕೆ ಏಕೆ ಹಿಂದೇಟು ಹಾಕುತ್ತಿದೆ? ಈಗ ಲಾಸ್ ಆಗುವುದು ಬೇರೆ. ಈಗ ಅದಕ್ಕೆ ಅಡಿಟ್ ಮಾಡುತ್ತಿದ್ದಾರೆ. ಅವರು ಸಾಲ ತೆಗೆದುಕೊಂಡಿರುವುದಕ್ಕಾದರೂ ಲೆಕ್ಕ ಇದೆಯಲ್ಲವೇ? ಉದಾಹರಣೆಗೆ; ನಾನು ಯು.ಬಿ.ವೆಂಕಟೇಶ್ ಒಂದು ಸಾವಿರ ಕೋಟಿ ರೂಪಾಯಿ ಸಾಲ ತೆಗೆದುಕೊಂಡಿದ್ದರೆ, ಅವರು ಕಟ್ಟಬೇಕೆಂದು ಹೇಳುವುದಕ್ಕೆ ಏನು ತೊಂದರೆ? ಅವರು ಅದನ್ನು ಏಕೆ ಬಹಿರಂಗಪಡಿಸುತ್ತಿಲ್ಲ. ಆದರೆ, ಇನ್ನೂ ಒಂದು ವರ್ಷದ ಅಡಿಟ್ ಆಗಬೇಕೆಂದು ಹೇಳುತ್ತಾರೆ. ಕಳೆದ ಬಾರಿಯ ಅಧಿವೇಶನದಲ್ಲಿ ಮಾತನಾಡಿದಾಗ, ಅದು ಒಂದು ತಿಂಗಳ ಒಳಗೆ ಮುಗಿದುಹೋಗುತ್ತದೆ ಎಂದು ಹೇಳಿದರು. ಹಾಗಾದರೆ ಇದು ಯಾವಾಗ ಮುಗಿಯುತ್ತದೆ ಹೇಳಲಿ.

**ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು):-** ಮಾನ್ಯ ಸಭಾಪತಿಯವರೇ, 2019-20ರಲ್ಲಿ identification ಆದರೂ ಕೂಡ, 2014-15ರಿಂದಲೇ ಅಡಿಟ್ ಮಾಡಬೇಕೆಂದು ಆಗಿದೆ. 2014-15 ಮತ್ತು 2015-16ರಲ್ಲಿ ಮಧುರಾಜ್ ಮತ್ತು ರಾಜ್‌ಚಾಂಪ್ ಎನ್ನುವವರು ಲೆಕ್ಕಪರಿಶೋಧಕರಾಗಿದ್ದರು.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಈಗ ನಾನು ಕೇಳುತ್ತಿರುವುದು ಆರ್.ಬಿ.ಐ. ವರದಿಯ ಬಗ್ಗೆ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, 2019ನೇ ಸಾಲಿಗೆ ಸಂಬಂಧಪಟ್ಟಂತೆ ಆರ್.ಬಿ.ಐ. ವರದಿ ನೀಡಿದೆ.

**ವೈಸ್ ಛೇರ್ಮನ್:-** ಮಾನ್ಯ ಯು.ಬಿ.ವೆಂಕಟೇಶ್‌ರವರೆ, ಮಾನ್ಯ ಸಚಿವರು ಉತ್ತರವನ್ನು ಹೇಳಿ ಮುಗಿಸಲಿ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, 2014-15ರಲ್ಲಿ ಯಾರು ಆಡಿಟ್ ಮಾಡಿದ್ದಾರೆ. ಅವರನ್ನು ಪ್ಯಾನಲ್‌ನಿಂದ ಕೈಬಿಡಲಾಗಿದೆ. 2016-17 ಮತ್ತು 2017-18ನೇ ಸಾಲಿನಲ್ಲಿ ಗಣೇಶ್ ಎಂಬ ಲೆಕ್ಕಪರಿಶೋಧಕರು ಇದ್ದರು, ಅವರನ್ನು ಸಹ ಪ್ಯಾನಲ್‌ನಿಂದ ಕೈಬಿಡಲಾಗಿದೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಅವರನ್ನು ಪ್ಯಾನಲ್‌ನಿಂದ ಏಕೆ ಬಿಡಬೇಕು. ಇಷ್ಟು ಮೋಸ ಮಾಡಿದಂತಹವರನ್ನು ಬ್ಲಾಕ್‌ಲಿಸ್ಟ್ ಮಾಡಿ, ಅವರ ಮೇಲೆ ಒಂದು ಕೇಸ್ ಹಾಕುವುದಕ್ಕೆ ಆಗುವುದಿಲ್ಲವೇ?

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಈಗ ಅದರ ಆಡಿಟ್ ಫೈನಲ್ ಆಗಬೇಕು.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ನಾಲ್ಕು ವರ್ಷದ ಆಡಿಟ್ ವರದಿ ಬಂದಿದೆ. ಆ ನಾಲ್ಕು ವರ್ಷಕ್ಕೆ ಸಂಬಂಧಪಟ್ಟಂತೆ ಏನಾದರೂ ಮಾಡಿ.

**ವೈಸ್ ಛೇರ್ಮನ್:-** ಮಾನ್ಯ ಸಚಿವರೆ, ಆರ್ಥಿಕ ಅಪರಾಧಗಳು ತುಂಬ ಸಂಕೀರ್ಣವಾದ ವಿಚಾರಗಳು. ಇಲ್ಲಿ ಎರಡು ವಿಷಯಗಳು ಅಡಗಿವೆ. ಸಾಮಾನ್ಯ ಜನತೆ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಇಟ್ಟಿರುವಂತಹ ವಿಶ್ವಾಸ ಕುಂದದ ಹಾಗೆ ನೋಡಿಕೊಳ್ಳುವಂಥದ್ದು. ಆ ನಿಟ್ಟಿನಲ್ಲಿ ಅದನ್ನು ಅರ್ಥ ಮಾಡಿಕೊಳ್ಳುವಂಥದ್ದರಲ್ಲಿ ಮಾನ್ಯ ಸಚಿವರು ತುಂಬಾ ಸುದೀರ್ಘವಾದ ಅನುಭವ ಮತ್ತು ಕಾಠೀಣ್ಯತೆ ಹೊಂದಿದ್ದಾರೆ ಎಂಬುದು ಅವರ ಉತ್ತರದಲ್ಲಿ ಇದೆ ಎಂದು ನನಗೆ ಅನಿಸುತ್ತಿದೆ. ತಾವು ಕೂಡ ಈ ವಿಷಯವನ್ನು ನಾಲ್ಕು ಬಾರಿ ಪ್ರಸ್ತಾಪಿಸಿರುವುದು ತಮ್ಮ ಕಾಳಜಿಯನ್ನು ತೋರಿಸುತ್ತದೆ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಕಾಳಜಿ ಇದೆ ಮತ್ತು ಸಹಕಾರಿ ಕ್ಷೇತ್ರದ ಬಗ್ಗೆ ಗೊತ್ತಿದೆ ಎಂದು ಅವರನ್ನು ಕೇಳುತ್ತಿದ್ದೇನೆ. ಈಗ ನಾಲ್ಕು ವರ್ಷದ ಅಡಿಟ್ ಆಗಿದ್ದು, ಇವರು ಆ ಅಡಿಟರ್‌ಗಳ ಮೇಲೆ ಏಕೆ ಕ್ರಮ ಕೈಗೊಳ್ಳಬಾರದು.

**ವೈಸ್ ಛೇರ್ಮನ್:–** ಮಾನ್ಯ ಸಚಿವರೆ, ಅವರ ಲಿಸ್ಟ್ ಬಹಿರಂಗಪಡಿಸುವುದಕ್ಕಿಂತ ಮುಂಚೆ, ಕಟ್ಟಕಡೆಯತನಕ ಅವರಿಂದ ಏನಾದರೂ ವಸೂಲಾತಿಗೆ ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡಬೇಕು ಎನ್ನುವಂತಹ ಕಾರಣಕ್ಕೆ ಅವರ ಹೆಸರುಗಳನ್ನು ಬಹಿರಂಗಪಡಿಸಿಲ್ಲವೇ? Final declaration ಮಾಡುತ್ತೀರಲ್ಲ defaulters ಎಂದು.

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಇನ್ನು ಫೈನಲ್ ಆಗಬೇಕು. ಏಕೆಂದರೆ, ಈಗ ಯಾರೋ ಹತ್ತು ಲಕ್ಷ ರೂಪಾಯಿ ಡಿಪಾಸಿಟ್ ಇಟ್ಟಿದ್ದರೆ, ಬೇರೆಯವರ ಹೆಸರಿನಲ್ಲಿ ಸಾಲ ತೆಗೆದುಕೊಂಡು ಇದನ್ನು ಶ್ಯೂರಿಟಿ ಹಾಕಿದ್ದಾರೆ. ಆದುದರಿಂದ ಇಂತಹವರೆ ಎನ್ನುವುದಕ್ಕೆ ಫೈನಲ್ ಹಂತಕ್ಕೆ ಬಂದಿದೆ. ಈಗ ನಾವು 64 ಲೆಕ್ಕಪರಿಶೋಧಕರನ್ನು ಪ್ಯಾನಲ್‌ನಿಂದ ಕೈಬಿಟ್ಟಿದ್ದೇವೆ. ಏನು ಈ ಎಂಟು ಜನರು ಇದ್ದಾರೆ. ಅವರನ್ನು ದೆಹಲಿಯ ಅಸೋಸಿಯೇಷನ್‌ಗೆ ಕಳುಹಿಸಬೇಕು. ನಮಗ ಅವರನ್ನು punishment ಮಾಡುವಂತಹ ಅಧಿಕಾರವಿಲ್ಲ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದೇನೆಂದರೆ, ಅವರು 64 ಜನರನ್ನು ಪ್ಯಾನಲ್‌ನಿಂದ ಕೈಬಿಟ್ಟಿದ್ದಾರೆ. ಆದರೆ, ಅವರು ತಮ್ಮ ಮಕ್ಕಳನ್ನು ಪ್ಯಾನಲ್ ಮಾಡಿದ್ದಾರೆ.

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಈಗ ನಾವು ಏಕಾಏಕಿ ಅವರ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ಆಗುವುದಿಲ್ಲ. ಈಗ ದೆಹಲಿಯವರು ಏನು ಮಾಡುತ್ತಾರೆಂದರೆ, ಇವರು ದೋಷಪೂರಿತರು ಎಂದು ಅವರು ಎಲ್ಲೂ ಕೂಡ ಚಾರ್ಟರ್ಡ್ ಅಕೌಂಟೆಂಟ್ ಕೆಲಸ ಮಾಡಬಾರದು. ಅದಕ್ಕೆ 64 ಜನರಲ್ಲಿ ಎಂಟು ಜನರು serious ಮಾಡಿದ್ದಾರೆ. ಅವರು serious ಇದ್ದರೂ ಸಹ ಅದನ್ನು identification ಮಾಡಿಲ್ಲವೆಂದು ಮಾಹಿತಿಯನ್ನು ಕಳುಹಿಸಿದ್ದೇವೆ. ಒಟ್ಟು 2317 ಕೋಟಿ ರೂಪಾಯಿ ಹಣ ದುರುಪಯೋಗವಾಗಿದೆ ಎಂದು ಇದೆ. ನಾವು ಈಗ ಸುಮಾರು 313 ಕೋಟಿ ರೂಪಾಯಿಗಳನ್ನು ಪತ್ತೆ ಹಚ್ಚಿದ್ದೇವೆ. ನಾನು ಎರಡು ತಿಂಗಳನಲ್ಲಿ ಆಗುತ್ತದೆಂದು ಹೇಳಿದೆ ಎಂದರೆ, ಮಾನ್ಯ ಸದಸ್ಯರು ಕೇಳಿದಂತಹ ಸಂದರ್ಭದಲ್ಲಿ 2017–18ರ ಅಡಿಟ್ ವರದಿ ಇನ್ನು ಫೈನಲ್

ಆಗಿರಲಿಲ್ಲ. 2017-18ನೇ ಸಾಲಿನ ಅಡಿಟ್ ಆಗಿದೆ. ಈಗ ಸುಮಾರು 380 ಕೋಟಿ ರೂಪಾಯಿಗಳೆಂದು ಫೈನಲ್ ಮಾಡಿದ್ದಾರೆ. ಇನ್ನು ಒಂದು ವರ್ಷದ ಅಡಿಟ್ ಮಾಡಬೇಕಾಗಿದೆ. ಅದರ ಅಡಿಟ್ ಆದಮೇಲೆ, ಯಾರು ತೆಗೆದುಕೊಂಡಿದ್ದಾರೆಂದು ಪೇಪರ್ ನೋಟಿಫಿಕೇಶನ್ ಮಾಡುವುದಕ್ಕೆ ಭಯವಿಲ್ಲ. ಈಗ ಅವರ identification ಆಗಬೇಕು. ಅಂದರೆ, ಅವರು ಇಷ್ಟು ಕೋಟಿ ಹಣವನ್ನು ತೆಗೆದುಕೊಂಡಿದ್ದಾರೆ ಮತ್ತು ನೀವು defaulter ಆಗಿದ್ದೀರಿ ಎಂದು ಹೇಳುವುದಕ್ಕೆ ಅದರ ಅಡಿಟ್ ಫೈನಲ್ ಆದಮೇಲೆ, ಯಾರ್‍ಯಾರು ತೆಗೆದುಕೊಂಡು defaulter ಆಗಿದ್ದಾರೆ, ಅದೆಲ್ಲವನ್ನು ಸಹ announce ಮಾಡುತ್ತೇವೆ. ಈ ತಿಂಗಳ 29ನೇ ತಾರೀಖಿಗೆ ನಡೆಯುವ ವಾರ್ಷಿಕ ಮಹಾಸಭೆಗೆ ಸಂಪೂರ್ಣ ಮಾಹಿತಿಯನ್ನು ನೀಡಬೇಕಾಗುತ್ತದೆ. ಅದಕ್ಕಿಂತ ಮುಂಚೆ ಎಲ್ಲಾ ಆದತಕ್ಷಣ, ಅವರೆಲ್ಲರಿಗೂ ಸಹ ಮಾಹಿತಿಯನ್ನು ನೀಡಬೇಕಾಗುತ್ತದೆ. ಏಕೆಂದರೆ, ಕೆಲವರು ದುಡ್ಡು ತೆಗೆದುಕೊಳ್ಳದೇ ಇದ್ದರೂ ಸಹ ದುಡ್ಡನ್ನು ಕಟ್ಟುತ್ತೇವೆ, ನನ್ನ ಹೆಸರಿನಲ್ಲಿ ದುರುಪಯೋಗವಾಗುವುದು ಬೇಡ. ಈಗ ಅಸಲು ಮತ್ತು ಬಡ್ಡಿಯನ್ನು ಎಷ್ಟು ಕಟ್ಟಬೇಕು ಅಷ್ಟನ್ನು ಕಟ್ಟುತ್ತೇವೆಂದು ಮಾನ್ಯ ಅಶೋಕ್‌ರವರ ಬಂದಿದ್ದಾರೆಂದು ಮಾಹಿತಿ ಇದೆ. ಈಗಾಗಲೇ 313 ಕೋಟಿ ರೂಪಾಯಿಗಳ ಹಣವನ್ನು ವಸೂಲು ಮಾಡಿದ್ದಾರೆ ಎಂಬ ಮಾಹಿತಿಯನ್ನು ನೀಡಿದ್ದಾರೆ. ಈಗ Enforcement Directorate ರವರು ಕ್ರಮ ಮಾಡಿದ್ದಾರೆ. ಅಡಿಟರ್‌ಗೂ ಸಹ ICAI (Institute of Chartered Accountants of India) ನಲ್ಲಿ ದೂರನ್ನು ದಾಖಲು ಮಾಡಿದ್ದೇವೆ. ಈಗ ಸಾರ್ವಜನಿಕರ ಹಿತದೃಷ್ಟಿಯಿಂದ, ಸಹಕಾರಿ ಕ್ಷೇತ್ರದಲ್ಲಿ ಸುಮಾರು 260 ಕೋ-ಆಪರೇಟಿವ್ ಬ್ಯಾಂಕುಗಳಿವೆ. ಯಾವುದೋ ಎರಡು-ಮೂರು ಕೋ-ಆಪರೇಟಿವ್ ಬ್ಯಾಂಕ್‌ಗಳಲ್ಲಿ ಈ ರೀತಿಯ ಅವ್ಯವಹಾರವಾಗಿದೆ ಎಂದರೆ, ಇಡೀ ಸಹಕಾರ ಕ್ಷೇತ್ರಕ್ಕೆ ಕೆಟ್ಟ ಹೆಸರು ಬರುತ್ತದೆ ಎಂಬ ದೃಷ್ಟಿಯಿಂದ ಏನೆಲ್ಲಾ ಕಠಿಣ ಕಾನೂನುಗಳನ್ನು ತೆಗೆದುಕೊಳ್ಳಬೇಕು, ಅದೆಲ್ಲಾ ಕಾನೂನನ್ನು ತೆಗೆದುಕೊಳ್ಳುವುದಕ್ಕೆ ಸಂಬಂಧಪಟ್ಟಂತೆ ಮೂರ್‍ನಾಲ್ಕು ಮೀಟಿಂಗ್‌ಗಳನ್ನು ಮಾಡಿದ್ದಾರೆ. ಕಾನೂನು ಮಂತ್ರಿಗಳು ಮತ್ತು ಕಾನೂನು ಕಾರ್ಯದರ್ಶಿಯವರ ಜೊತೆ ಸಹ ಸಭೆಗಳನ್ನು ಮಾಡಿದ್ದೇವೆ. ಇನ್ನು ಮುಂದೆ ಕೋಟ್ಯಂತರ ರೂಪಾಯಿ ಹಣ ದುರುಪಯೋಗವಾದರೂ ನಾವು ಚೇತರಿಸಿಕೊಳ್ಳಬಹುದು ಮತ್ತು ಅದರಿಂದ ಬಚಾವ್ ಆಗಬಹುದು ಎನ್ನುವಂಥದ್ದು, ಯಾವ ಕಾರಣಕ್ಕೂ ಈ ರಾಜ್ಯದ ಸಹಕಾರಿಗಳಿಗೆ ಒಂದು ಸಂದೇಶ ಹೋಗಬಾರದು ಎಂಬ ದೃಷ್ಟಿಯಿಂದ ಇದನ್ನು ಮಾಡುತ್ತಿದ್ದೇವೆ. ಅದರ ಜೊತೆಗೆ ಯಾರು ಡಿಪಾಸಿಟ್ ಇಟ್ಟಿರುತ್ತಾರೆ.

**ವೈಸ್ ಛೇರ್ಮನ್:-** ಮಾನ್ಯ ಸಚಿವರೆ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗುವ ರೀತಿ ಆಗಬೇಕು.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಅದಕ್ಕೋಸ್ಕರ ಕಾನೂನು ಮಂತ್ರಿಗಳು ಮತ್ತು ಕಾನೂನು ಕಾರ್ಯದರ್ಶಿಯವರ ಜೊತೆ ಮಾತನಾಡಿದ್ದೇವೆ. ಕೇವಲ ಇದೇ ಬ್ಯಾಂಕ್ ಅಲ್ಲ ಯಾವುದೇ ಕೋ-ಆಪರೇಟಿವ್ ಬ್ಯಾಂಕ್‌ನಲ್ಲಿ ಡಿಪಾಸಿಟ್ ಇಟ್ಟರೆ, ಶೇಕಡಾ 100ರಷ್ಟು ವಾಪಸ್ಸು ಬರುತ್ತದೆ ಎಂಬ ನಂಬಿಕೆ ಇಡೀ ರಾಜ್ಯಕ್ಕೆ ಹೋಗಬೇಕು ಎನ್ನುವಂತಹ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರು ಹೇಳುತ್ತಿರುವುದನ್ನು ಒಪ್ಪಿಕೊಳ್ಳುತ್ತೇನೆ. ಈಗ ಸಹಕಾರಿ ಸಂಘದಲ್ಲಿ ಸುಮಾರು ಜನರು ಹಣವನ್ನು ಡಿಪಾಸಿಟ್ ಇಡುತ್ತಾರೆ. ಅದಕ್ಕೆ ಕೇಂದ್ರ ಸರ್ಕಾರದ ವಿಮಾ ಯೋಜನೆ ಪ್ರಕಾರ, ಇಲ್ಲಿ ಸ್ವಲ್ಪ ಹೆಚ್ಚಿನ ದುಡ್ಡು ಸಂಗ್ರಹ ಮಾಡಿ, ಇದಕ್ಕೂ ಏನಾದರೂ ಒಂದು ರೂಪ ನೀಡಲಿ. ಏಕೆಂದರೆ, ಅಲ್ಲಿಂದ **DGCI&S (Directorate General of Commercial Intelligence and Statistics)** ಯಿಂದ ಐದೈದು ಲಕ್ಷ ರೂಪಾಯಿ ಹಣ ಬಂತು. ಆ ರೀತಿ ಸಹಕಾರ ಸಂಘದಲ್ಲೂ ಮಾಡಬಹುದು.

**ವೈಸ್ ಛೇರ್ಮನ್:-** ಮಾನ್ಯ ಸಚಿವರೆ, ಈಗ ವಸಿಷ್ಠ ಬ್ಯಾಂಕ್ ಬಗ್ಗೆ ಮುಗಿಯಲ್ಲಿ. ಏಕೆಂದರೆ, ಇನ್ನು ಕೇವಲ ಹತ್ತು ನಿಮಿಷ ಮಾತ್ರವಿದೆ. ಈ ವಿಷಯವನ್ನು 4.15ಕ್ಕೆ ಮುಗಿಸಬೇಕು.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಈಗ close ಮಾಡಿಬಿಡುವುದೇ?

**ವೈಸ್ ಛೇರ್ಮನ್:-** ಮಾನ್ಯ ಸದಸ್ಯರೇ, ಆ ರೀತಿಯಲ್ಲ. ನೀವು ಬಹಳ ಚೆನ್ನಾಗಿ ಪ್ರಸ್ತಾಪ ಮಾಡಿದ್ದೀರಿ. ಮಾನ್ಯ ಸಚಿವರು ಸಹ ಚೆನ್ನಾಗಿ ಉತ್ತರ ನೀಡಿದ್ದಾರೆ. ಈಗ ನಿಮ್ಮ ಉದ್ದೇಶ ಏನಿದೆ ಅದನ್ನು ಕಾಪಾಡಬೇಕು. ಮಾನ್ಯ ಸಚಿವರು ಅದನ್ನು ಮಾಡುತ್ತಿದ್ದಾರೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಈಗ ನನ್ನ ಉದ್ದೇಶ ಏನೆಂದರೆ, 24 ಜನರ ಹೆಸರನ್ನು ಬಹಿರಂಗಪಡಿಸುತ್ತೇವೆಂದು ಹೇಳಿದರು. ಆದರೆ, ಅವರ ಹೆಸರನ್ನು ಬಹಿರಂಗಪಡಿಸಿಲ್ಲ. ಅದನ್ನು ಮಾಡಿ ಎಂಬುದು ನನ್ನ ಕೋರಿಕೆ. ಮುಂದಿನ ವಿಷಯವನ್ನು ತಮಗೆ ಬಿಡುತ್ತೇನೆ.

**ವೈಸ್ ಛೇರ್ಮನ್:-** ಮಾನ್ಯ ಸಚಿವರೆ, ತಾವು ಮಾನ್ಯ ಸದಸ್ಯರ ಆತಂಕವನ್ನು ನಿವಾರಣೆ ಮಾಡಿ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಈಗ 2,317 ಕೋಟಿ ರೂಪಾಯಿಗಳಷ್ಟು ಹಣವನ್ನು ಮೋಸ ಮಾಡಿರುವಂಥದ್ದು. ಅಷ್ಟು ಜನರಿಗೂ ಪಕ್ಕ ಮಾಡುವಂತಹ ಕೆಲಸಕ್ಕೆ ಚಾಲನೆ ಮಾಡಿದ್ದೇವೆ. ಇಂತಹವರನ್ನು ರಕ್ಷಣೆ ಮಾಡುತ್ತಾರೆ ಎಂಬುದನ್ನು ಅವರ ಮನಸ್ಸಿನಿಂದ ತೆಗೆದು ಹಾಕಲಿ. ನಾವು ಯಾರನ್ನೂ ಸಹ ರಕ್ಷಣೆ ಮಾಡುವಂಥದ್ದು ಇಲ್ಲ. ಸಾರ್ವಜನಿಕರಿಗೆ ಮೋಸ ಮತ್ತು ದುರುಪಯೋಗ ಮಾಡಿರುವವರು ಎಷ್ಟೇ ದೊಡ್ಡರಾಗಿದ್ದರೂ ಪ್ರಾಮಾಣಿಕವಾಗಿ ಅವರನ್ನು ದೋಷಾರೋಪಣೆ ಮಾಡುತ್ತೇವೆ. ಇಲ್ಲಿ ಬಡವರು ಇರಬಹುದು, ಮಧ್ಯಮ ವರ್ಗದವರು ಇರಬಹುದು ಮತ್ತು ನಿವೃತ್ತಿ ಹೊಂದಿದಂತಹ ವ್ಯಕ್ತಿಗಳು ಇರಬಹುದು. ಇವರುಗಳು ಬರುವಂತಹ ಬಡ್ಡಿಯಿಂದಲೇ ಜೀವನ ಮಾಡುವಂತಹವರು.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಕೇವಲ ಕೋ-ಆಪರೇಟಿವ್ ಮಂತ್ರಿಗಳಲ್ಲ, ಅವರು ಕೋ-ಆಪರೇಟಿವ್‌ನಲ್ಲಿ ಸಾಕಷ್ಟು ಅನುಭವ ಮತ್ತು ಹಿಡಿತ ಇರುವಂತಹವರು. ಮಾನ್ಯ ಯು.ಬಿ.ವೆಂಕಟೇಶ್‌ರವರು ಸದನದಲ್ಲಿ ಸಾಕಷ್ಟು ಬಾರಿ ಇದಕ್ಕೆ ಸಂಬಂಧಪಟ್ಟಂತೆ ಚರ್ಚೆ ಮಾಡಿದ್ದಾರೆ. ಕೆಳಮನೆಯಲ್ಲೂ ಸಹ ಇದಕ್ಕೆ ಸಂಬಂಧಪಟ್ಟಂತೆ ಚರ್ಚೆಯಾಗಿದೆ. ಇದರಲ್ಲಿ ಆಗಿರುವಂಥದ್ದು ಏನೆಂದರೆ, ಒಂದೇ ಒಂದು ಸಮುದಾಯದ ಬಹಳ ಬಡವರು ಅಲ್ಲಿ ಒಳ್ಳೆಯ ಬಡ್ಡಿ ಸಿಗುತ್ತದೆಂದು, ನಿವೃತ್ತಿ ಹೊಂದಿದ ನಂತರ ಬಂದ ಎಲ್ಲಾ ಹಣವನ್ನು ತೆಗೆದುಕೊಂಡು ಆ ಬ್ಯಾಂಕ್‌ನಲ್ಲಿ ಇಟ್ಟಿದ್ದಾರೆ. ಒಬ್ಬರು ಬೆಂಗಳೂರಿನ ಮಾಜಿ ಮೇಯರ್, ಅವರ ಮಗ ಲಂಡನ್‌ನಲ್ಲಿ veterinary doctor. ಅವರು ನಿವೃತ್ತಿಯಾಗಿ ಬಂದಂತಹ ಸುಮಾರು ಐದು ಕೋಟಿ ರೂಪಾಯಿಗಳನ್ನು ಈ ಬ್ಯಾಂಕ್‌ನಲ್ಲಿಟ್ಟಿದ್ದಾರೆ. ಆ ಮಾಜಿ ಮೇಯರ್ ಯಾರು ಎಂದು ಮಾನ್ಯ ಎಸ್.ಟಿ.ಸೋಮಶೇಖರ್‌ರವರಿಗೂ ಸಹ ಗೊತ್ತಿದೆ. ಬ್ಯಾಂಕ್‌ನವರು ಅವರಿಗೆ ಕೈ ಎತ್ತಿಬಿಟ್ಟಿದ್ದಾರೆ. ಅವರು ಲಂಡನ್‌ನಿಂದ ವಾಪಸ್ಸು ಬಂದಿದ್ದಾರೆ. ಈಗ ಅವರಿಗೆ ಊಟ ಮಾಡುವುದಕ್ಕೂ ಕಷ್ಟವಾಗಿದೆ. ಆದುದರಿಂದ ಎಲ್ಲವೂ ಸಹ ಮಾನ್ಯ ಮಂತ್ರಿಗಳ ಕೈಯಲ್ಲಿ ಇದೆ. ಮಾನ್ಯ ಮಂತ್ರಿಗಳು ಮನಸ್ಸು ಮಾಡಿದರೆ ಎಲ್ಲವನ್ನು ಸಹ ಮಾಡಬಹುದು. ಮಾನ್ಯ ಯು.ಬಿ.ವೆಂಕಟೇಶ್‌ರವರು ಸಿ.ಬಿ.ಐ. enquiry ಗೂ ಸಹ ಕೇಳುತ್ತಿದ್ದಾರೆ. ಇದು ಸಿ.ಬಿ.ಐ.ಗೂ ಸಹ ಬೇಕಾಗಿಲ್ಲ. ಮಾನ್ಯ ಎಸ್.ಟಿ.ಸೋಮಶೇಖರ್‌ರವರ enquiry ಆದರೆ ಸಾಕು. ಎಲ್ಲವೂ ಸಹ ಸರಿಯಾಗುತ್ತದೆಂದು ಎಲ್ಲರಿಗೂ ನಂಬಿಕೆ ಇದೆ. ದಯವಿಟ್ಟು ಮಾನ್ಯ ಮಂತ್ರಿಗಳು ಆ ಬಡವರಿಗೆ ಸಹಾಯ ಮಾಡಲಿ ಎಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರೆ, ನಾನು ಯಾವುದೇ ಕಾರಣಕ್ಕೂ ಸಹ ಇದನ್ನು ನಿಲ್ಲಿಸುವುದಂಥದ್ದಕ್ಕೆ ಅವಕಾಶ ನೀಡುವುದಿಲ್ಲ.

**(ಮುಂದು)**

(609) 24.03.2022 04.10 LL-RN

**(ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಎಸ್.ಟಿ. ಸೋಮಶೇಖರ್(ಮುಂದು)**

ಈ ಪ್ರಕರಣವನ್ನು ಇ.ಡಿ.ಯವರಿಗೂ ಸಹ ಕೊಟ್ಟಿರುತ್ತೇವೆ. ಈ ಬಗ್ಗೆ ಮಾನ್ಯ ಸದಸ್ಯರಿಗೆ ಯಾವ ಮಾಹಿತಿಯನ್ನು ಕೇಳಿದ್ದಾರೆ ಅದೆಲ್ಲವನ್ನೂ ಸಹ ಕೊಟ್ಟಿರುತ್ತೇವೆ. ಇವೊತ್ತಿನ ಪರಿಸ್ಥಿತಿಯಲ್ಲಿ ಏನಾಗುತ್ತದೆ ಎಂಬುದನ್ನು ಹೇಳಬೇಕೋ ಅಥವಾ ಬೇಡವೋ ಅದು ಗೊತ್ತಿರುವುದಿಲ್ಲ. ಇಂತಹ ಬ್ಯಾಂಕ್‌ಗಳಿಗೆ ಒಂದು ನೋಟಿಸ್ ಕೊಟ್ಟ ಕೂಡಲೇ ಅವರು ಹೈಕೋರ್ಟ್‌ಗೆ ಹೋಗುತ್ತಾರೆ. ಮಾರನೆಯ ದಿವಸವೇ ತಡೆಯಾಜ್ಞೆ ತರುತ್ತಾರೆ. ಈ ಪರಿಸ್ಥಿತಿ ಇರುತ್ತದೆ. ಅದಕ್ಕಾಗಿ ನಾವು ಇರುವಂತಹ ಕಾನೂನನ್ನೇ ಬದಲಾವಣೆ ಮಾಡಬೇಕೆನ್ನುವುದು ನಮ್ಮ ಚಿಂತನೆಯಾಗಿರುತ್ತದೆ. ಏಕೆಂದರೆ, 2317 ಕೋಟಿ ರೂಪಾಯಿ ಚೀಟ್ ಮಾಡಿರುವಂತಹ ಪ್ರಕರಣವಾಗಿರುತ್ತದೆ. ಇವೊತ್ತಿನ ದಿವಸ ನಾನು ಏನು ಚೀಟ್ ಮಾಡಿದರೂ ಸಹ ನಾನು ನಂತರ ಜಯಿಸಿಕೊಳ್ಳುತ್ತೇನೆ ಎನ್ನುವ ರೀತಿ ಇದರಲ್ಲಿ ಆಗಿರುತ್ತದೆ. ಒಂದೇ ಒಂದು ಬ್ಯಾಂಕಿನಿಂದ ಇಡೀ ಬ್ಯಾಂಕಿಗ್ ವ್ಯವಸ್ಥೆಗೆ ಹಾಗೂ ಸಹಕಾರ ಕ್ಷೇತ್ರಕ್ಕೆ ಕೆಟ್ಟ ಹೆಸರು ಬರತಕ್ಕಂತಹದ್ದು ಆಗಿರುತ್ತದೆ.

**ವೈಸ್ ಛೇರ್ಮನ್:-** ಈ ಬಗ್ಗೆ ಮಾನ್ಯ ಕಾನೂನು ಸಚಿವರ ಜೊತೆ ಚರ್ಚೆ ಮಾಡಿ.

**ಶ್ರೀ ಎಸ್.ಟಿ. ಸೋಮಶೇಖರ್(ಸಹಕಾರ ಸಚಿವರು):-** ಮಾನ್ಯ ಸಭಾಪತಿಯವರೇ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಕಾನೂನು ಸಚಿವರು ಹಾಗೂ ಕಾನೂನು ಇಲಾಖೆಯ ಕಾರ್ಯದರ್ಶಿಯವರ ಜೊತೆ ಸಹ ಚರ್ಚೆ ಮಾಡುತ್ತಿದ್ದೇವೆ. ಈ ಪ್ರಕರಣದಲ್ಲಿ ಕಠಿಣ ಕ್ರಮ

ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಗುರು ರಾಘವೇಂದ್ರ ಸಹಕಾರ ಬ್ಯಾಂಕಿಗೆ ಸಂಬಂಧಪಟ್ಟ ಆಸ್ತಿಯನ್ನು ನಮ್ಮ ವಶಕ್ಕೆ ತೆಗೆದುಕೊಂಡು ಆಕ್ಷನ್ ಮಾಡುವಂತಹ ಕೆಲಸಕ್ಕೆ ಈಗಾಗಲೇ ಚಾಲನೆ ನೀಡಿರುತ್ತೇನೆ. ಈಗ ನಾನು ವಶಿಷ್ಟ ಸೌಹಾರ್ದ ಸಹಕಾರ ಬ್ಯಾಂಕ್‌ನ ವಿಷಯಕ್ಕೆ ಹೋಗಲೇ?

**ವೈಸ್ ಛೇರ್ಮನ್:-** ಆಯಿತು. ಆದರೆ, ಸ್ವಲ್ಪ ಬೇಗ ಮುಗಿಸಿ. ಏಕೆಂದರೆ, ಇನ್ನು ಬೇರೆ ವಿಷಯಗಳು ಚರ್ಚೆಗೆ ಬಾಕಿ ಇರುತ್ತವೆ.

**ಶ್ರೀ ಎಸ್.ಟಿ. ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಈ ದಿನ ಸಂಜೆ 04-00 ಗಂಟೆಗೆ ಸಭೆ ಕರೆದಿದ್ದಾರೆ. ಆ ಸಭೆಗೆ ನಾನು ಸಹ ಹೋಗಬೇಕಾಗಿರುತ್ತದೆ.

**(ಗೊಂದಲ)**

ವಶಿಷ್ಟ ಸೌಹಾರ್ದ ಸಹಕಾರ ಬ್ಯಾಂಕ್‌ನವರು ಕೋರ್ಟ್‌ಗೆ ಹೋಗಿ ತಡೆಯಾಜ್ಞೆ ತಂದಿರುತ್ತಾರೆ. ಸದರಿ ತಡೆಯಾಜ್ಞೆಯನ್ನು ತೆರವು ಮಾಡುವುದಕ್ಕೆ ಮಾನ್ಯ ಅಡ್ವೋಕೇಟ್ ಜನರಲ್‌ರವರ ಜೊತೆ ಮಾತನಾಡಿದ್ದು, ಈ ವಿಷಯಕ್ಕೆ ಸಂಬಂಧಪಟ್ಟ ಪ್ರಕರಣ ಯಾವ ದಿನ ವಿಚಾರಣೆಗೆ ಇದೆ, ಅದಕ್ಕಾಗಿ ಪ್ಯಾರಾವೈಸ್ ರಿಪ್ಲೈ ಮಾಡಿ, ಆ ತಡೆಯಾಜ್ಞೆ ತೆರವುಗೊಳಸುವುದಕ್ಕೆ ಪ್ರಯತ್ನ ಮಾಡಿರುತ್ತೇವೆ. ಇದರ ಜೊತೆಗೆ, ಸದರಿ ಬ್ಯಾಂಕಿಗೆ ಸಂಬಂಧಪಟ್ಟಂತೆ ಸಹಕಾರ ಸಂಘಗಳ ಕಾಯಿದೆ, 64 ರ ಪ್ರಕಾರ ವಿಚಾರಣೆ ಕೂಡ ಮಾಡುತ್ತಿದ್ದೇವೆ. ಇನ್ನುಳಿದಂತೆ, ಸದರಿ ಬ್ಯಾಂಕಿನಲ್ಲಿ ಸಿಬ್ಬಂದಿಗಳು ಏನು ಚೀಟ್ ಮಾಡಿದ್ದಾರೆ, ಆ ಬಗ್ಗೆಯೂ ಕೂಡ ಕ್ರಮ ತೆಗೆದುಕೊಂಡಿರುತ್ತೇವೆ. ಸದರಿ ತಡೆಯಾಜ್ಞೆ ತೆರವು ಆದ ತಕ್ಷಣವೇ, ಮಾನ್ಯ ಸದಸ್ಯರ ಜೊತೆ ಸಮಾಲೋಚಿಸಿ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಪ್ರಕರಣದಲ್ಲಿ ಯಾವ ರೀತಿ ಗಂಭೀರ ಕ್ರಮ ತೆಗೆದುಕೊಳ್ಳಬೇಕೆನ್ನುವ ಬಗ್ಗೆ ಚರ್ಚೆ ಮಾಡುತ್ತೇವೆ.

**ಶ್ರೀ ಯು.ಬಿ. ವೆಂಕಟೇಶ್(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ನಾನು ಈ ಎರಡೂ ಬ್ಯಾಂಕುಗಳಗೆ ಸಂಬಂಧಿಸಿದಂತೆ ಒಂದು ವಿಚಾರವನ್ನು ಹೇಳುವುದಕ್ಕೆ ಬಯಸುತ್ತೇನೆ. ಸದರಿ ತಡೆಯಾಜ್ಞೆಯನ್ನು ತೆರವುಗೊಳಸಬೇಕಾಗಿರುವುದು ಸರ್ಕಾರ ಅಲ್ಲವೇ? ಇಷ್ಟು

ದಿನ ಆದರೂ ಆ ತಡೆಯಾಜ್ಞೆ ತೆರವು ಆಗುತ್ತಿಲ್ಲ, ಕಾರಣ ಏನು? ಅಷ್ಟೇ ಅಲ್ಲದೇ, ಸದರಿ ಬ್ಯಾಂಕಿನ ವಿರುದ್ಧ ಯಾರಾದರೂ ಡಿಪಾಸಿಟರ್ ದೂರು ನೀಡುವುದಕ್ಕೆ ಪೊಲೀಸ್ ಸ್ಟೇಷನ್‌ಗೆ ಹೋದರೆ, ಈ ಬ್ಯಾಂಕಿಗೆ ಸಂಬಂಧಪಟ್ಟಂತೆ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇದೆ. ಹಾಗಾಗಿ, ಪ್ರಕರಣ ದಾಖಲಿಸುವುದಿಲ್ಲವೆಂದು ಹೇಳುತ್ತಾರೆ. ಇದರಲ್ಲಿ ಇನ್ನು ಬಹಳಷ್ಟು ಡಿಪಾಸಿಟರ್ ದೂರು ನೀಡುವವರಿದ್ದಾರೆ. ಈ ರೀತಿಯಾದರೆ ಡಿಪಾಸಿಟರ್ ಸಹಕಾರ ಸಂಘಗಳ ಮೇಲೆ ಹೇಗೆ ನಂಬಿಕೆ ಉಳಿಸಿಕೊಳ್ಳುತ್ತಾರೆ? ಅದೇ ರೀತಿ ಕಳೆದ ಬಾರಿಯೂ ಸಹ ಈ ವಿಚಾರವನ್ನು ಪ್ರಸ್ತಾಪ ಮಾಡಿರುತ್ತೇನೆ. ಈ ವಿಚಾರದಲ್ಲಿ ಮಾನ್ಯ ಸಚಿವರ ಚಿಂತನೆಗಳು ಸರಿಯಾಗಿದೆ. ಆದರೆ, ಈ ವಿಷಯದಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳುವ ಕಾಲಘಟ್ಟಕ್ಕೆ ಆ ಬ್ಯಾಂಕಿನವರು ತಮ್ಮ ಆಸ್ತಿಯಲ್ಲಿ ಈಗಾಗಲೇ ಶೇಕಡ 50 ರಷ್ಟು ಅವರ ಬೇನಾಮಿಗಳಿಗೆ ಮಾರಿರುತ್ತಾರೆ ಅಥವಾ ಹಸ್ತಾಂತರ ಮಾಡಿರುತ್ತಾರೆ. ಬರುವ ಮಾರ್ಚ್ ತಿಂಗಳು ಮುಕ್ತಾಯವಾದ ನಂತರ, ಇರುವಂತಹ ಆಸ್ತಿ ಸಹ ಬೇರೆಯವರ ಹೆಸರಿಗೆ ಹೋಗುತ್ತದೆ. ಹಾಗಾಗಿ, ಈ ಪ್ರಕರಣಗಳಲ್ಲಿ ಎಷ್ಟು ನಿಧಾನ ಮಾಡುತ್ತಿದ್ದಾರೆ, ಅದು ಅವರಿಗೆ ಸಹಕಾರ ನೀಡಿದ ರೀತಿ ಆಗುತ್ತದೆ. ಅದರ ಮೇಲೆ ಮಾನ್ಯ ಸಚಿವರು ಏನು ಕ್ರಮ ತೆಗೆದುಕೊಳ್ಳುತ್ತಾರೆ, ಅದನ್ನು ತೆಗೆದುಕೊಳ್ಳಲಿ. ಆ ಜನ ಪಾಪಾತ್ಮರು ಇವೊತ್ತಿನ ದಿವಸ ಅಳುತ್ತಿದ್ದಾರೆ. ಅವರಿಗೆ ಏನಾದರೂ ದಯಪಾಲಿಸಿ ಎಂದು ಮಾನ್ಯ ಸಚಿವರಲ್ಲಿ ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ.

**ಶ್ರೀ ಎಸ್.ಟಿ. ಸೋಮಶೇಖರ್(ಸಹಕಾರ ಸಚಿವರು):-** ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ಪೊಲೀಸ್ ಇಲಾಖೆ ಅಧಿಕಾರಿಗಳೊಂದಿಗೆ ಏನು ಸಭೆ ನಡೆದಿರುತ್ತದೆ, ಅದರ ಪ್ರಕಾರ ಅವರು ಕ್ರಮ ತೆಗೆದುಕೊಂಡಿರುತ್ತಾರೆ. ಅಂದರೆ, ಸದರಿ ಬ್ಯಾಂಕ್‌ಗಳಿಗೆ ಸಂಬಂಧಪಟ್ಟ ಆಸ್ತಿಯನ್ನು ಮಾರದೇ ಇರುವಂತಹ ರೀತಿಯಲ್ಲಿ ಕ್ರಮ ತೆಗೆದುಕೊಂಡಿದ್ದಾರೆ. ಇನ್ನೊಂದು ಆಡಿಟ್ ರಿಪೋರ್ಟ್ ಮುಗಿದ ತಕ್ಷಣವೇ, ಯಾವೆಲ್ಲಾ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ, ಏನು ಆಕ್ಷನ್ ಮಾಡಬೇಕು ಎಂಬ ಎಲ್ಲಾ ಮಾಹಿತಿಗಳನ್ನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ. ಮಾನ್ಯ ಸದಸ್ಯರ ಜೊತೆ ನಾವು ಸಭೆ ನಡೆಸಿದ ನಂತರ, ಈ ಪ್ರಕರಣಗಳಲ್ಲಿ ಏನು ಕ್ರಮ ತೆಗೆದುಕೊಂಡಿದ್ದೇವೆಂಬ ಬಗ್ಗೆಯೂ ಸಹ ನಾನು ಮಾಹಿತಿ ನೀಡುತ್ತೇನೆ.

ಇನ್ನು ವಶಿಷ್ಠ ಸೌಹಾರ್ದ ಸಹಕಾರ ಬ್ಯಾಂಕಿಗೆ ಸಂಬಂಧಪಟ್ಟಂತೆ, ಮಾನ್ಯ ಹೈಕೋರ್ಟ್‌ನಲ್ಲಿ 2-3 ವಿಚಾರಣೆಗೆ ನಮ್ಮ ಇಲಾಖೆಯ ಅಧಿಕಾರಿಗಳು ಹಾಜರಾಗಿರುತ್ತಾರೆ. ಅದಕ್ಕೆ ಸಂಬಂಧಪಟ್ಟಂತೆ ಪ್ಯಾರಾವೈಸ್ ರಿಪ್ಲೈ ಕೂಡ ಎಲ್ಲವೂ ಅಪ್-ಟು-ಡೇಟ್ ರೆಡಿ ಇರುತ್ತದೆ. ಅಡ್ವೋಕೇಟ್ ಜನರಲ್‌ರವರಿಗೆ ರಿಕ್ವೆಸ್ಟ್ ಮಾಡಿದ್ದು, ಒಂದು ಸಲ ಅಥವಾ ಎರಡು ಸಲ ಅವರು ನ್ಯಾಯಾಲಯದಲ್ಲಿ ಹಾಜರಾದರೆ ಆ ತಡೆಯಾಜ್ಞೆ ಶೇಕಡಾ ನೂರಕ್ಕೆ ನೂರರಷ್ಟು ತೆರವಾಗುತ್ತದೆ. ತಮಗೆಲ್ಲಾ ಗೊತ್ತಿರುವಂತೆ, ಹೈಕೋರ್ಟ್‌ನಲ್ಲಿ ಈಗ ಒಂದು ದಿನ ಎಂದು ಹೇಳಿದರೆ ಒಂದು ವಾರ; ಒಂದು ವಾರ ಎಂದು ಹೇಳಿದರೆ ಒಂದು ತಿಂಗಳು; ಆದರೆ, ಈ ಎರಡು ಪ್ರಕರಣಗಳಲ್ಲಿಯೂ ಸಹ ನಾವು ಹಿಂದೆ ಬಿದ್ದಿರುತ್ತೇವೆ. ಯಾವುದೇ ಕಾರಣಕ್ಕೂ ಈ ರೀತಿಯ ಚೀಟ್ ಮಾಡಿರುವವರಿಗೆ ಬುದ್ಧಿ ಕಲಿಸದೇ ಬಿಡುವುದಿಲ್ಲ. ಏಕೆಂದರೆ, ಇಂತಹ ಪ್ರಕರಣಗಳಿಂದ ಜನರು ಇಡೀ ಸಹಕಾರ ಕ್ಷೇತ್ರವನ್ನು ಕೆಟ್ಟ ಹೆಸರಿನಿಂದ ನೋಡುವುದು ಶುರುವಾಗಿರುತ್ತದೆ. ಇನ್ನು ಮುಂದೆ ಜನರು ಯಾವುದೇ ಬ್ಯಾಂಕಿನಲ್ಲಿ ಡೆಪಾಸಿಟ್ ಇಡುವುದಿಲ್ಲ. ಅದಕ್ಕಾಗಿಯೇ, ಆ ಜನರಿಗೆ ಗೌರವ ಬರುವ ರೀತಿ ಕ್ರಮ ತೆಗೆದುಕೊಳ್ಳಬೇಕು.

ಮಾನ್ಯ ಬಿ.ಕೆ. ಹರಿಪ್ರಸಾದ್‌ರವರು ಹೇಳಿದ ಪ್ರಕರಣ ಒಂದೇ ಅಲ್ಲದೇ, ಈ ರೀತಿಯ ಬೇಕಾದಷ್ಟು ಪ್ರಕರಣಗಳು ಇರುತ್ತವೆ. ಇಂತಹ ಬ್ಯಾಂಕ್‌ಗಳಲ್ಲಿ ಕೇವಲ 10 ಲಕ್ಷ ರೂಪಾಯಿ ಡಿಪಾಸಿಟ್ ಇಟ್ಟಂತಹ ಹಣವನ್ನು ವಾಪಸ್ಸು ಕೊಡಿಸುವುದಕ್ಕೆ ಆಗಿರುವುದಿಲ್ಲ. ಆ ಮಟ್ಟಕ್ಕೆ ಚೀಟ್ ಆಗಿರುತ್ತದೆ. ಆದರೆ, ಇಂತಹ ಪ್ರಕರಣಗಳಲ್ಲಿ ಕಾನೂನು ವ್ಯಾಪ್ತಿಯೊಳಗೆ ಏನೆಲ್ಲಾ ಕ್ರಮಗಳನ್ನು ತೆಗೆದುಕೊಂಡು ಅವರನ್ನು ಬಲಿ ಹಾಕಬೇಕು, ಆ ಎಲ್ಲಾ ಕ್ರಮಗಳನ್ನು ತೆಗೆದುಕೊಂಡು, ಚೀಟ್ ಆಗಿರತಕ್ಕಂತಹ 2317 ಕೋಟಿ ರೂಪಾಯಿ ಹಣವನ್ನು ರಿಕವರಿ ಮಾಡತಕ್ಕಂಥದ್ದಕ್ಕೆ ಏನೆಲ್ಲಾ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕು, ಆ ಎಲ್ಲಾ ಕ್ರಮಗಳನ್ನು ನೂರಕ್ಕೆ ನೂರು ತೆಗೆದುಕೊಳ್ಳುತ್ತೇವೆಂದು ಈ ಸದನದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾನು 9 ಕೋಟಿ ರೂಪಾಯಿ ಡಿಪಾಸಿಟ್ ಇಟ್ಟಿರುವಂತಹ ಪ್ರಕರಣದ ಬಗ್ಗೆ ಮಾನ್ಯ ಸಚಿವರಿಗೆ ಹೇಳಿರುತ್ತೇನೆ. ಅವರಿಗೆ ಆ ಬ್ಯಾಂಕಿನಿಂದ ಸುಮಾರು 2 ವರ್ಷಗಳ ಕಾಲ ಬಡ್ಡಿಯನ್ನು ಸಹ ಕೊಟ್ಟಿರುತ್ತಾರೆ. ಅದಕ್ಕೆ ಸಂಬಂಧಪಟ್ಟ

ತೆರಿಗೆಯನ್ನು ಅವರು ಸರ್ಕಾರಕ್ಕೆ ಕಟ್ಟಿರುತ್ತಾರೆ. ಆದರೆ, ಈಗ ಆ ಹಣವನ್ನು ಕೇಳುವುದಕ್ಕೆ ಹೋದರೆ, "ತಮ್ಮದು ಫೇಕ್ ಡಿಪಾಸಿಟ್, ಬಡ್ಡಿ ಕೊಟ್ಟಿರುವ ಹಣ ವಾಪಸ್ಸು ಕೊಡಿ" ಎಂದು ಹೇಳುತ್ತಾರೆ. ಈ ವಿಷಯದಲ್ಲಿ ಯಾವ ರೀತಿಯ ಕ್ರಮ ತೆಗೆದುಕೊಳ್ಳುತ್ತಾರೆಂದು ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

**ಶ್ರೀ ಎಸ್.ಟಿ. ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ನಾನು ಹೇಳಿದ ರೀತಿ, ಡಿಪಾಸಿಟ್ ಅನ್ನು ಒಬ್ಬರು ಇಟ್ಟಿರುತ್ತಾರೆ. ಆ ಡಿಪಾಸಿಟ್ ಅನ್ನು ನಕಲಿ ಮಾಡಿ ಮತ್ತೊಬ್ಬರಿಗೆ ಕೊಟ್ಟಿರುತ್ತಾರೆ. ಅವೆಲ್ಲವೂ ಸಹ ಈಗ ಪತ್ತೆ ಮಾಡುತ್ತಿದ್ದೇವೆ. ಅದರಂತೆ, ಒರಿಜನಲ್ ಡಿಪಾಸಿಟರ್ ಯಾರು, ಡೂಪ್ಲಿಕೇಟ್ ಯಾರು; ಒರಿಜಿನಲ್ ಡಿಪಾಸಿಟ್ ಅನ್ನು ಯಾರು ಡೂಪ್ಲಿಕೇಟ್ ಮಾಡಿದ್ದಾರೆ. ಆ ಎಲ್ಲಾ ಮಾಹಿತಿ ಸದ್ಯದಲ್ಲಿಯೇ ಗೊತ್ತಾಗುತ್ತದೆ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಅದು ಎಷ್ಟು ದಿವಸದಲ್ಲಿ ಗೊತ್ತಾಗಬಹುದು?

**ಶ್ರೀ ಎಸ್.ಟಿ. ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಬರುವ ಏಪ್ರಿಲ್ ತಿಂಗಳ ಅಂತ್ಯದೊಳಗೆ ಅಥವಾ ಮೇ ತಿಂಗಳಲ್ಲಿ ಅದು ಆಗಬಹುದು.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾವು ಜೂನ್ ತಿಂಗಳವರೆಗೂ ಸಹ ಕೇಳುವುದಿಲ್ಲ.

**ಶ್ರೀ ಎಸ್.ಟಿ. ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಆಯಿತು.

**ವೈಸ್ ಛೇರ್ಮನ್:-** ಮಾನ್ಯ ಸಭಾಪತಿಯವರು ಈಗ ನಿಯಮ 72 ರ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಸೂಚಿಸಿದ್ದಾರೆ. ಈ ಮಧ್ಯದಲ್ಲಿ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಗೆ ಸಂಬಂಧಪಟ್ಟ ಒಂದು ವಿಷಯ ಇದೆ. ಹಾಗಾಗಿ, ಈಗ ಯಾವ ವಿಚಾರ ತೆಗೆದುಕೊಳ್ಳಬೇಕೆಂದು ಸಭಾನಾಯಕರು ತಿಳಿಸಬೇಕು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

---

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಸದನದಲ್ಲಿ ಹಾಜರಿರುವುದರಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖಾ ನೀತಿ ಹಾಗೂ ಕಾರ್ಯಾಚರಣೆಯ ಮೇಲಿನ ಚರ್ಚೆ ಶುರು ಮಾಡಬಹುದು. ಅದಕ್ಕೆ ಮೊದಲು ಮಾನ್ಯ ಸಚಿವರಿಗೆ ಸಂಬಂಧಪಟ್ಟ ನಿಯಮ 72ರ ವಿಷಯವನ್ನು ಚರ್ಚೆಗೆ ತೆಗೆದುಕೊಂಡು ನಂತರ ಉಳಿದ ಚರ್ಚೆಯನ್ನು ತೆಗೆದುಕೊಳ್ಳಬಹುದು.

**೦೯. ಗಮನ ಸೆಳೆಯುವ ಸೂಚನೆಗಳು**

ಅ) ವಿಷಯ:- ಮಂಡ್ಯ ವೈದ್ಯಕೀಯ ವಿಜ್ಞಾನ ಶಿಕ್ಷಣ ಸಂಸ್ಥೆಯಲ್ಲಿ ಅಸೋಸಿಯೇಟ್ ಪ್ರೊಫೆಸರ್‌ಗಳಿಗೆ ನಿವೃತ್ತಿ ವೇತನವನ್ನು ಮಂಜೂರು ಮಾಡುವ ಕುರಿತು

-- -

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಂಡ್ಯ ವೈದ್ಯಕೀಯ ವಿಜ್ಞಾನ ಶಿಕ್ಷಣ ಸಂಸ್ಥೆಯಲ್ಲಿ ಅಸೋಸಿಯೇಟ್ ಪ್ರೊಫೆಸರ್‌ಗಳಿಗೆ ನಿವೃತ್ತಿ ವೇತನವನ್ನು ಮಂಜೂರು ಮಾಡುವ ಕುರಿತು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

**ಡಾ: ಕೆ. ಸುಧಾಕರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ,

**(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)**

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದಂತಹ ಶ್ರೀ ಮರಿತಿಬ್ಬೇಗೌಡರವರು ಮಂಡ್ಯ ವೈದ್ಯಕೀಯ ವಿಜ್ಞಾನ ಶಿಕ್ಷಣ ಸಂಸ್ಥೆಯಲ್ಲಿ ಅಸೋಸಿಯೇಟ್ ಪ್ರೊಫೆಸರ್‌ಗಳಿಗೆ ನಿವೃತ್ತಿ ವೇತನವನ್ನು ಮಂಜೂರು ಮಾಡುವ ಕುರಿತು ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಆದರೆ, ಇವೊತ್ತಿನ ದಿವಸ ಖಾಯಂ ಆಗಿ ನೇಮಕಗೊಂಡಿರುವ ಬೋಧಕ ಮತ್ತು ಬೋಧಕೇತರ ವೃಂದದ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ದಿನಾಂಕ:27.08.2020 ರಿಂದ ಜಾರಿಗೆ ಬರುವಂತೆ, ರಾಷ್ಟ್ರೀಯ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಸದರಿ ಆದೇಶ ಹೊರಡಿಸಿದ ದಿನಾಂಕದಿಂದ ಉದ್ಯೋಗದಾರರ ವಂತಿಗೆಗಾಗಿ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.

ಅದರಂತೆ, ದಿನಾಂಕ:27.08.2020ರಿಂದ ಹೊಸ ಪಿಂಚಣಿ ಯೋಜನೆಯಡಿಯಲ್ಲಿ ಸಂಸ್ಥೆಯ ವಂತಿಕೆ ಹಾಗೂ ಸಿಬ್ಬಂದಿ ವಂತಿಕೆಯನ್ನು ಎನ್.ಪಿ.ಎಸ್. ಟ್ರಸ್ಟ್ ಅಕೌಂಟ್ ಇಲ್ಲಿಗೆ ಜಮೆ ಮಾಡಲಾಗಿರುತ್ತದೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಉತ್ತರ ನೀಡಿದ್ದೀರಾ?

**ಡಾ: ಕೆ. ಸುಧಾಕರ್:-** ಮಾನ್ಯ ಸಭಾಪತಿಯವರೇ, ಹೌದು ಉತ್ತರ ನೀಡಿರುತ್ತೇನೆ.

**ಸಭಾಪತಿಯವರು:-** ಹಾಗಾದರೆ, ಮಾನ್ಯ ಮರಿತಿಬ್ಬೇಗೌಡರೇ ತಮಗೆ ಉತ್ತರ ನೀಡಿರುವುದರಿಂದ, ಈಗ ತಾವು ಸ್ಪಷ್ಟೀಕರಣ ಕೇಳಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನನಗೆ ಈಗ ಉತ್ತರ ಬಂದಿರುತ್ತದೆ. ಇನ್ನೂ ನಾನು ಅದನ್ನು ಓದುತ್ತಿದ್ದೇನೆ.

**ಸಭಾಪತಿಯವರು:-** ಹಾಗಾದರೆ, ಈ ಬಗ್ಗೆ ಸ್ಪಷ್ಟೀಕರಣ ಇದ್ದರೆ ಕೇಳಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನನಗೆ ಈಗ ಉತ್ತರ ನೀಡಿರುತ್ತಾರೆ ಹಾಗೂ ನನಗೆ ನೀಡಿರುವ ಉತ್ತರ ಬಹಳ ಚಿಕ್ಕದಾಗಿದೆ. ಮಾನ್ಯ ಸಚಿವರು ಪೂರ್ಣ ಉತ್ತರ ನೀಡಿದ ನಂತರ ನಾನು ಸ್ಪಷ್ಟೀಕರಣ ಕೇಳುತ್ತೇನೆ.

**ಸಭಾಪತಿಯವರು:-** ತಾವು ಯಾವಾಗಲೂ ಸಹ ಹೀಗೆಯೇ ಮಾಡುತ್ತೀರಿ. ನಿಯಮ 72 ರಡಿಯಲ್ಲಿ ವಿಷಯ ಪ್ರಸ್ತಾಪಿಸಿದಾಗಲೇ ಸಂಬಂಧಪಟ್ಟ ಸಚಿವರು ಉತ್ತರ ಕೊಡುತ್ತಾರೆ.

**ಶ್ರೀ ಬಿ.ಕೆ. ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸಚಿವರು ಉತ್ತರ ನೀಡುತ್ತಿದ್ದಾರೆ. ಅಷ್ಟರಲ್ಲಿ ಮಾನ್ಯ ಮರಿತಿಬ್ಬೇಗೌಡರು ಉತ್ತರವನ್ನು ಓದಿಕೊಳ್ಳುತ್ತಾರೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ನಿಯಮ 72ರಡಿಯಲ್ಲಿ ಮಾನ್ಯ ಸಚಿವರು ಉತ್ತರ ನೀಡುತ್ತಿದ್ದೇನೆಂದು ಹೇಳಬೇಕಷ್ಟೆ. ಆ ನಂತರ ಸ್ಪಷ್ಟೀಕರಣ ಕೇಳಬೇಕು. ಅದಕ್ಕೆ ಮಾನ್ಯ ಸಚಿವರು ಉತ್ತರ ನೀಡಬೇಕು.

**ಡಾ: ಕೆ. ಸುಧಾಕರ್:-** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ವಿವರಣೆ ನೀಡುತ್ತೇನೆ. ಆ ನಂತರ ಮಾನ್ಯ ಸದಸ್ಯರು ಸ್ಪಷ್ಟೀಕರಣ ಕೇಳಲಿ. ಮಂಡ್ಯ ವೈದ್ಯಕೀಯ ವಿಜ್ಞಾನ ಶಿಕ್ಷಣ ಸಂಸ್ಥೆ, ಮಂಡ್ಯ ಇಲ್ಲಿ ಪ್ರಸ್ತುತ ಈ ಕೆಳಕಂಡ ಖಾಯಂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರಿಗೆ ಹೊಸ ಪಿಂಚಣಿಯನ್ನು ಪಾವತಿಸಲಾಗುತ್ತಿದೆ. ಒಟ್ಟು Non-Teaching Staff-227. ಅದರಲ್ಲಿ Professors-18, Associate Professors-41, Assistant Professors-51, Senior Resident-10, CMO & LMO-11 ಇರುತ್ತಾರೆ. ಇಲ್ಲಿ ಏನಾಗಿದೆಯೆಂದರೆ, ದಿನಾಂಕ:01.04.2006ರ ನಂತರ ಹೊಸ ಪಿಂಚಣಿ ಯೋಜನೆ ಜಾರಿಗೆ ಬಂದಿರುತ್ತದೆ. ಅದರ ಪ್ರಕಾರ ಇವೊತ್ತಿನ ದಿವಸ ಯಾರು ಸಿಬ್ಬಂದಿ ಇರುತ್ತಾರೆ ಅವರು ಹಾಗೂ ಸರ್ಕಾರ ಇಬ್ಬರೂ ತಲಾ ಶೇಕಡ 50 ರಷ್ಟು ಎನ್.ಪಿ.ಎಸ್. ವಂತಿಕೆಯನ್ನು ಸಂದಾಯ ಮಾಡಬೇಕಾಗುತ್ತದೆ. ಅದಕ್ಕೆ ಅವರನ್ನು ನೇಮಕಾತಿ ಮಾಡುವಂತಹ ಸಂದರ್ಭದಲ್ಲಿ ನೇಮಕಾತಿ ಆದೇಶದಲ್ಲಿಯೂ ಸಹ ಬರೆದಿರುತ್ತಾರೆ. ಆ ಆದೇಶದ 3ನೇ

ಅಂಶದಲ್ಲಿ, " he/she would be entitled for contributory pension or contribution for PF Schemes status' ಈ ರೀತಿ ಕೊಟ್ಟಿದ್ದಾರೆ. ಇವೊತ್ತಿನ ದಿವಸ ಮಾನ್ಯ ಸದಸ್ಯರು ವ್ಯಕ್ತಪಡಿಸಿರುವ ಮುಖ್ಯವಾದ ವಿಚಾರದಲ್ಲಿ ನಾವು ನಮ್ಮ ಇಲಾಖೆಯಿಂದ ಡಿ.ಪಿ.ಎ.ಆರ್. ಗೆ ಅಭಿಪ್ರಾಯಕ್ಕಾಗಿ ಕಳುಹಿಸುತ್ತೇವೆ. ಈ ಬಗ್ಗೆ ಡಿ.ಪಿ.ಎ.ಆರ್. ಜೊತೆ ಚರ್ಚೆ ಮಾಡಿ, ಪುನಃ ಆರ್ಥಿಕ ಇಲಾಖೆಗೆ ಕಳುಹಿಸಿಕೊಟ್ಟು ಈ ಸಿಬ್ಬಂದಿಗಳನ್ನು ಪುನಃ ಹಳೆಯ ಪಿಂಚಣಿ ಯೋಜನೆಗೆ ಒಳಪಡಿಸುವುದಕ್ಕೆ ಸಾಧ್ಯವಿದೆಯೇ ಎಂಬುದನ್ನು ಪರಮರ್ಶಿಸುತ್ತೇವೆ.

(ಮುಂದು)

(610) 24.03.2022 4.20 ವೈಎಲ್-ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 2005ನೇ ಸಾಲಿನಲ್ಲಿ ಮಂಡ್ಯ ವೈದ್ಯಕೀಯ ಶಿಕ್ಷಣ ಸಂಸ್ಥೆ ಪ್ರಾರಂಭವಾಗಿತ್ತು. ಆದರೆ, ಮಾನ್ಯ ಸಚಿವರು ಉತ್ತರದಲ್ಲಿ "ದಿನಾಂಕ: 27.08.2020ರ ಆದೇಶದಂತೆ ದಿನಾಂಕ: 27.08.2020 ರಿಂದ ಜಾರಿಗೆ ಬರುವಂತೆ ರಾಷ್ಟ್ರೀಯ ಪಿಂಚಣಿ ಯೋಜನೆಯನ್ನು ಜಾರಿಗಳಿಸಲಾಗಿರುತ್ತದೆ" ಎಂದು ತಿಳಿಸಿದ್ದಾರೆ. ಮಾನ್ಯ ಸಚಿವರು ಸಹ ಒಬ್ಬ ವೈದ್ಯರು. ಈ ಕಾಲೇಜು ಪ್ರಾರಂಭವಾಗಿ 15 ವರ್ಷಗಳಾಗಿದ್ದು, ಈಗ ದಿನಾಂಕ: 27.08.2020 ರಿಂದ ಪಿಂಚಣಿ ಯೋಜನೆಯಲ್ಲಿ ಹಣ ತೊಡಗಿಸಬೇಕೆಂದು ಹೇಳಿದ್ದಾರೆ. ಹಾಗಾದರೆ, 15 ವರ್ಷಗಳಿಂದ ಏನು ಮಾಡಿದ್ದಾರೆ? ಈಗ ಜಾರಿಗೊಳಿಸಿರುವ ರಾಷ್ಟ್ರೀಯ ಪಿಂಚಣಿ ಯೋಜನೆಯಲ್ಲಿ ಏನಾಗಿದೆ ಎಂದರೆ, ಪ್ರೊಫೆಸರ್ ಸಹ ಹಣ ಭರಿಸಬೇಕು ಮತ್ತು ಸರ್ಕಾರವು ಹಣ ಭರಿಸಬೇಕು. ಆದರೆ, ಅವರ ಉತ್ತರದಿಂದಾಗಿ ಕಳೆದ 15 ವರ್ಷಗಳಿಂದ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ.

ಈ ಸಂಸ್ಥೆಗೆ ಹೊಸ ಪಿಂಚಣಿ ಯೋಜನೆ ಬರುವ ಮುನ್ನಾ ಹಳೆಯ ಪಿಂಚಣಿ ಯೋಜನೆ ಅಡಿ ಕೆಲವರು ನೇಮಕಗೊಂಡಿದ್ದು, ಅವರ ಸಮಸ್ಯೆಯನ್ನು ಬಗೆಹರಿಸುವವರು ಯಾರು? ಹೊಸ ಪಿಂಚಣಿ ಯೋಜನೆ ಬರುವ ಮುನ್ನಾ ಯಾರು ನೇಮಕಗೊಂಡಿದ್ದಾರೆ, ಅವರು Dean ಮತ್ತು Director

ಮೂಲಕ ಅನೇಕ ಪತ್ರ ವ್ಯವಹಾರ ಮಾಡಿದ್ದಾರೆ. ಜೊತೆಗೆ ಅವರಿಗೆ ಹೊಸ ಪಿಂಚಣಿ ಯೋಜನೆ ನೀಡುತ್ತೇವೆ ಎಂದಾಗಲಿ ಮತ್ತು ಹಳೆಯ ಪಿಂಚಣಿ ಯೋಜನೆ ನೀಡುತ್ತೇವೆ ಎಂದಾಗಲಿ ಇದುವರೆವಿಗೂ ಸಹ ಉತ್ತರ ನೀಡಿಲ್ಲ. 15 ವರ್ಷಗಳ ನಂತರ ಅಂದರೆ ದಿನಾಂಕ: 27.08.2020 ರಿಂದ ಜಾರಿಗೆ ಬರುವಂತೆ ರಾಷ್ಟ್ರೀಯ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಲಾಗಿರುತ್ತದೆ ಎಂದು ಸರ್ಕಾರ ಹೇಳುತ್ತಿದೆ. ಕಳೆದ 15 ವರ್ಷಗಳಿಂದ ಅವರ contribution ಹಣವನ್ನು ಸರ್ಕಾರ ಎಲ್ಲಿ ತೊಡಗಿಸಿದೆ? ಇಷ್ಟೊಂದು ಅಜಾಗ್ರತೆಯಿಂದ ವೈದ್ಯಕೀಯ ಶಿಕ್ಷಣ ಇಲಾಖೆ ಕಾರ್ಯನಿರ್ವಹಿಸಿದರೆ ಹೇಗೆ? ಆ ಸಿಬ್ಬಂದಿಗಳು ದೀರ್ಘಕಾಲದವರೆಗೂ ಸೇವೆ ಮಾಡಿದ್ದು, ಕೋವಿಡ್-19 ಸಂದರ್ಭದಲ್ಲಿ ಸಹ ಅವರೆಲ್ಲರೂ ಮಂಡ್ಯ ವೈದ್ಯಕೀಯ ಕಾಲೇಜಿನಲ್ಲಿ ತುಂಬಾ ಉತ್ತಮ ಸೇವೆ ಮಾಡಿದಂಥವರಾಗಿದ್ದಾರೆ. ಅವರಿಗೆ ನಿವೃತ್ತಿ ವೇತನ ನೀಡುವಲ್ಲಿ ಸರಿಯಾದ ಕಾನೂನು ಮತ್ತು ನಿಯಮಗಳ ಬಗ್ಗೆ ಅಧಿಕಾರಿಗಳು ಗಮನಿಸದೇ ಈ ರೀತಿ ತಪ್ಪಾಗಿ ಉತ್ತರ ನೀಡಿದರೆ ಹೇಗೆ? ಉದಾಹರಣೆಗೆ ಹೇಳುವುದಾದರೆ, ಡಾ॥ ಜಿ.ಎಂ.ಪ್ರಕಾಶ್‌ರವರು ನೇಮಕಗೊಂಡಿದ್ದು ದಿನಾಂಕ: 26.12.2005 ಹಾಗೂ date of reporting ದಿನಾಂಕ: 28.12.2005; ಡಾ॥ ಕೆ.ಎಂ.ಶಿವಕುಮಾರ್ ನೇಮಕಗೊಂಡಿದ್ದು ದಿನಾಂಕ: 02.07.2005 ಹಾಗೂ date of reporting ದಿನಾಂಕ: 22.12.2005; ಡಾ॥ ಷಣ್ಮುಖಪ್ಪರವರು ನೇಮಕಗೊಂಡ ಆದೇಶದ ದಿನಾಂಕ: 02.01.2005 ಹಾಗೂ date of reporting ದಿನಾಂಕ: 06.03.2006. ಇವರುಗಳೆಲ್ಲರೂ ಮಂಡ್ಯ ವೈದ್ಯಕೀಯ ಕಾಲೇಜಿನಲ್ಲಿ ಹಳೆಯ ಪಿಂಚಣಿ ಅಡಿ ನೇಮಕಗೊಂಡವರಾಗಿದ್ದಾರೆ. ಹಾಗೆಯೇ ಹೊಸ ಪಿಂಚಣಿ ಯೋಜನೆ ಅಡಿ ನೇಮಕಗೊಂಡವರು ಬಹಳಷ್ಟು ಮಂದಿ ಇದ್ದಾರೆ.

ಆದರೆ, ಮಾನ್ಯ ಸಚಿವರು 15 ವರ್ಷಗಳ ನಂತರ ಅವರೆಲ್ಲರಿಗೂ ಹೊಸ ಪಿಂಚಣಿ ಯೋಜನೆಯ ಪ್ರಕಾರ ಕ್ರಮವಹಿಸಲಾಗುವುದೆಂದು ಉತ್ತರದಲ್ಲಿ ತಿಳಿಸಿದ್ದಾರೆ. ಹಾಗಾದರೆ, 2005ನೇ ಸಾಲಿನಲ್ಲಿಯೇ ಹಳೆಯ ಪಿಂಚಣಿ ಯೋಜನೆ ಅಡಿ ನೇಮಕಾತಿ ಆದೇಶ ಮಾಡಿಕೊಳ್ಳಲಾಗಿದೆ ಹಾಗೂ ಆ ಸಂಬಂಧ ದಿನಾಂಕ: 09 ಮಾರ್ಚ್ 2005 ಸುತ್ತೋಲೆ ಸಹ ಹೊರಡಿಸಲಾಗಿದೆ. ಆ ಸುತ್ತೋಲೆ ಪ್ರಕಾರ ನೇಮಕಾತಿ ಆಗಿ, ಡಿಸೆಂಬರ್ 2005 ರಲ್ಲಿಯೇ ರಿಪೋರ್ಟ್ ಮಾಡಿಕೊಂಡು, ಕೆಲಸಕ್ಕೆ

ಹಾಜರಾಗಿರುವಂಥವರು ಬಹಳಷ್ಟು ಮಂದಿ ಇದ್ದಾರೆ. ತಾವು ನೀಡಿರುವ ಉತ್ತರದಲ್ಲಿ 227 ಮಂದಿ ಏನಿದ್ದಾರೆ, ಅವರಲ್ಲಿ ಹಳೆಯ ಪಿಂಚಣಿ ಯೋಜನೆ ಅಡಿ ನೇಮಕಗೊಂಡವರು ಬಹಳಷ್ಟು ಮಂದಿ ಇದ್ದಾರೆ. ಹಾಗೆಯೇ ಹೊಸ ಪಿಂಚಣಿ ಯೋಜನೆ ಅಡಿ ನೇಮಕಗೊಂಡವರು ಬಹಳಷ್ಟು ಮಂದಿ ಇದ್ದಾರೆ. ದಿನಾಂಕ: 01.04.2006ರ ನಂತರ ನೇಮಕಗೊಂಡವರಿಗೆ ಹೊಸ ಪಿಂಚಣಿ ಯೋಜನೆ ಜಾರಿ ಮಾಡುವಲ್ಲಿ ನಮ್ಮ ಆಕ್ಷೇಪಣೆ ಏನಿಲ್ಲ. ಏಕೆಂದರೆ, ಸರ್ಕಾರದ ನಿಯಮಾವಳಿ ಪ್ರಕಾರ ಅದು ಇರುವುದು ಪ್ರಸ್ತುತ. ಆದರೆ, ದಿನಾಂಕ: 01.04.2006ರ ಹಿಂದೆಯೇ ನೇಮಕಗೊಂಡು, ಕೆಲಸಕ್ಕೆ ಸೇರ್ಪಡೆಗೊಂಡವರಿಗೆ ಹಳೆಯ ಪಿಂಚಣಿ ಯೋಜನೆಯನ್ನು ನೀಡಬೇಕಲ್ಲವೇ? ಇದರ ಬಗ್ಗೆ ಮಾನ್ಯ ಸಚಿವರ ಇಲಾಖೆ ಸ್ಪಷ್ಟತೆ ಮಾಡದೆಯೇ, 2020ರಿಂದ ರಾಷ್ಟ್ರೀಯ ಪಿಂಚಣಿ ಯೋಜನೆಯನ್ನು ನೀಡುತ್ತೇವೆ ಎಂದರೆ, ಕಳೆದ 15 ವರ್ಷಗಳ ಅವರ ಪಿಂಚಣಿ ಬಗ್ಗೆ ಇಲಾಖೆ ಏನು ಕಾಳಜಿವಹಿಸಿದೆ? ಈ ರೀತಿ ತಪ್ಪು ಮಾಡಿರುವಂಥ ಅಧಿಕಾರಿಗಳು ಯಾರು? ಎಂಬುದರ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು.

**ಡಾ॥ ಕೆ.ಸುಧಾಕರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರವರು ಹೇಳಿದ ಹಾಗೆ ದಿನಾಂಕ: 01.04.2006ರ ನಂತರ ಹೊಸ ಪಿಂಚಣಿ ಯೋಜನೆ ಜಾರಿಗೆ ಬಂದಿರುವುದು. ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ದಿನಾಂಕ: 01.04.2006ರ ನಂತರ ಯಾರು ನೇಮಕಗೊಂಡಿದ್ದಾರೆ, ಅವರು ಹೊಸ ಪಿಂಚಣಿ ಯೋಜನೆ ಮೂಲಕವೇ ಸೇರ್ಪಡೆಗೊಳ್ಳಬೇಕಾಗುತ್ತದೆ. ಅದೇ ರೀತಿಯಲ್ಲಿಯೇ ಬೋಧಕೇತರ ವೃಂದದ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಹಣವನ್ನು ನೀಡಲಾಗುತ್ತದೆ. ಆದರೆ, ದಿನಾಂಕ: 01.04.2006ಕ್ಕೂ ಮೊದಲು ನೇಮಕಗೊಂಡ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಹಳೆಯ ಪಿಂಚಣಿ ಯೋಜನೆ ಪ್ರಕಾರವೇ ನೀಡಬೇಕಾಗುತ್ತದೆ. ಆದರೆ, ದಿನಾಂಕ: 01.04.2006ಕ್ಕೂ ಮೊದಲು ಅಂದರೆ ಫೆಬ್ರವರಿ ಮಾಹೆಯಲ್ಲಿ ಸುಮಾರು 10 ಮಂದಿ ನೇಮಕಗೊಳ್ಳುತ್ತಾರೆ. ಆ 10 ಮಂದಿ ನೇಮಕಗೊಂಡಾಗ ಆದೇಶದಲ್ಲಿ ಒಂದು ಷರತ್ತು ವಿಧಿಸಿ, ನೇಮಕ ಮಾಡಿಕೊಳ್ಳಲಾಗಿದೆ. ಅದೇನೆಂದರೆ, "He or she would be entitled for contributory pension of contribution, PF scheme status" ಎಂದು ನೀಡಲಾಗಿದೆ. ಅದರ ಹೊರತಾಗಿ ಸಹ ಅದರ

ಬಗ್ಗೆ ಗಮನಹರಿಸಿ ಯಾರಿಗೂ ಸಹ ಅನ್ಯಾಯವಾಗಬಾರದು ದಿನಾಂಕ: 01.04.2006ರ ನಂತರ ನೇಮಕವಾಗಿದರೆ Gazette Order/Government Order ಸಹ ತುಂಬಾ ಮುಖ್ಯವಾಗುತ್ತದೆ. ಏನು ಷರತ್ತು ವಿಧಿಸಲಾಗಿದೆ ಅದು ಮುಖ್ಯವಲ್ಲವೆಂದು ಹೇಳಿ, D.P.A.R (Department of Personnel and Administrative Reforms) ರವರೊಂದಿಗೆ ಮತ್ತು ಆರ್ಥಿಕ ಇಲಾಖೆಯವರೊಂದಿಗೆ ಚರ್ಚೆ ಮಾಡಿ, ಅವರ ಸಲಹೆ ತೆಗೆದುಕೊಂಡು ಹಿಂದೆ ಆಗಿರುವಂಥ ತಪ್ಪನ್ನು ಸರಿಪಡಿಸುವಂಥ ಕೆಲಸ ಮಾಡುತ್ತೇನೆ. ಈ ಹಿಂದೆ ತಪ್ಪಾಗಿದೆ ಇಲ್ಲವೆಂದು ಹೇಳುವುದಿಲ್ಲ. ಅದನ್ನು ಸರಿಪಡಿಸುವಂಥ ಕೆಲಸ ಮಾಡುತ್ತೇನೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಫೆಬ್ರವರಿ ಮಾಹೆಯಲ್ಲಿ ಸೇರ್ಪಡೆಗೊಂಡವರಿಗೆ ಕಂಡಿಕೆ 03 ನಲ್ಲಿ ಷರತ್ತು ವಿಧಿಸಲಾಗಿತ್ತು ಎಂದು ಮಾನ್ಯ ಸಚಿವರು ಹೇಳಿದರು. ಭವಿಷ್ಯ ವರ್ತಿಯಾಗಿ "ಎರಡು ತಿಂಗಳುಗಳಲ್ಲಿ ಹೊಸ ಪಿಂಚಣಿ ಯೋಜನೆ ಜಾರಿಗೆ ಬರುತ್ತದೆ, ಆಗ ನೀವು ಹೊಸ ಪಿಂಚಣಿ ಯೋಜನೆ ಅನ್ವಯಿಸುತ್ತೀರಿ" ಎಂದು ಅಧಿಕಾರಿ ಷರತ್ತು ವಿಧಿಸಿದ್ದು, ಅವರಿಗೆ ಯಾವ ಶಿಕ್ಷೆ ನೀಡಬೇಕು? ಸರ್ಕಾರದ ಯಾವುದೇ ಆದೇಶ ಇಲ್ಲದೇ ಭವಿಷ್ಯ ವರ್ತಿಯಾಗಿ ಬರುತ್ತಿರುವ ಕಾನೂನನ್ನು ಆ ದಿನಾಂಕದಿಂದಲೇ ಅನ್ವಯವಾಗುತ್ತದೆ ಎಂದು ಇಲಾಖೆಯವರು ಷರತ್ತು ವಿಧಿಸಿದ್ದು, ಯಾವ ರೀತಿ ವೈದ್ಯರು ಆ ಇಲಾಖೆಯಲ್ಲಿ ಕೆಲಸ ಮಾಡಬೇಕು? ಮಾನ್ಯ ಸಚಿವರು ಒಬ್ಬ ವೈದ್ಯರು. ಆ ರೀತಿ ಇರುವಾಗ ಆ ಇಲಾಖೆ ಯಾವ ಮಟ್ಟದಲ್ಲಿ ನಡೆಯುತ್ತಿದೆ. 2020ರ ನಂತರ ರಾಷ್ಟ್ರೀಯ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಲಾಗುತ್ತದೆ ಎಂದು ಹೇಳಿದರೆ, ಕಳೆದ 15 ವರ್ಷಗಳಿಂದ ಆ ಸಂಸ್ಥೆಯಲ್ಲಿ ಕೆಲಸ ಮಾಡಿರುವವರ pension ಗಾಗಿ contribution ಅನ್ನು ಎಲ್ಲಿಯೂ deduct ಮಾಡಿಯೇ ಇಲ್ಲ.

**ಸಭಾಪತಿಯವರು:-** ಆಯಿತು. ಮಾನ್ಯ ಸಚಿವರು ಅದಕ್ಕೆ ಸಂಬಂಧಿಸಿದಂತೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಆ ರೀತಿ ಹೇಳಿಲ್ಲ. ದಿನಾಂಕ: 01.04.2006 ರಿಂದ ಯಾರು ನೇಮಕಗೊಂಡಿದ್ದಾರೆ, ಅವರಿಗೆ ಹೊಸ ಪಿಂಚಣಿ ನೀಡಲಾಗುತ್ತದೆ ಎಂದು ಹೇಳಿದರು.

**Mr. CHAIRMAN:** It is simple. Those who are appointed after 01/04/2006 are not coming under the Old Pension Scheme. ಅದರ ಪ್ರಕಾರ ಹೊಸ ಪಿಂಚಣಿ ಯೋಜನೆ ಅಡಿ ಬರುತ್ತಾರೆ. ಅಂತಹ ಒಂದು system ಮಾಡಿದರೆ ಸರಿಯಾಗುತ್ತದೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಆಯಿತು. ಅದರ ಬಗ್ಗೆ ಮಾನ್ಯ ಸಚಿವರು ಸರಿಪಡಿಸುತ್ತೇನೆ, ತಪ್ಪಾಗಿದೆ ಎಂದು ಹೇಳಿದರು. ಆ ಸಂಸ್ಥೆಗೆ ಅವರ ಇಲಾಖಾಧಿಕಾರಿಗಳು ದಿನಾಂಕ: 27.08.2020 ರಿಂದ ಹೊಸ ಪಿಂಚಣಿ ಯೋಜನೆ ಅಡಿ ವಂತಿಕೆಯನ್ನು ಕಡಿತಗೊಳಿಸಬೇಕೆಂದು ಹೇಳಿದ್ದಾರೆ. ಕಳೆದ 15 ವರ್ಷಗಳವರೆಗಿನ ಅವರ ಹಣವನ್ನು ಎಲ್ಲಿ ಇಟ್ಟಿದ್ದಾರೆ, ಏನು ಮಾಡಿದ್ದಾರೆ? ಈ ಆದೇಶವನ್ನು ಯಾವಾಗಿನಿಂದ ಜಾರಿಗೆ ಬರುವಂತೆ ಮಾಡಬೇಕಾಗಿತ್ತು? ಈ ಸಂಸ್ಥೆ ಮಾನ್ಯ ಸಚಿವರ ಇಲಾಖೆಗೆ ಸಂಬಂಧಿಸಿರುವುದು.

**ಡಾ|| ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, 15 ವರ್ಷಗಳ ಹಿಂದೆ ಆಗಿರುವಂಥ ನೇಮಕಾತಿ. ಅದನ್ನು ಸರಿಪಡಿಸುತ್ತೇನೆ ಎಂದು ಹೇಳಿದ್ದೇನೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಆಯಿತು. ಮಾನ್ಯ ಸಚಿವರು ಸರಿಪಡಿಸುತ್ತೇನೆ ಎಂದು ಹೇಳಿದ್ದಾರೆ, ನಾನು ಅವರ ಮಾತನ್ನು ಸ್ವಾಗತ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರವರೆ ಅಂತಿಮವಾಗಿ ಏನಾಗಬೇಕು ಎಂಬುದನ್ನು ಹೇಳಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, 15 ವರ್ಷಗಳ ಹಿಂದೆಯೇ ಏನು ನಿರ್ದೇಶನ ನೀಡಬೇಕಾಗಿತ್ತು, ದಿನಾಂಕ: 01.04.2006ರ ನಂತರ ಯಾರು ಆ ಸಂಸ್ಥೆಗೆ ಸೇರ್ಪಡೆಗೊಳ್ಳುತ್ತಾರೆ, ಅವರೆಲ್ಲರಿಗೂ ಸಹ ಹೊಸ ಪಿಂಚಣಿ ಯೋಜನೆ ಅಡಿ ವಂತಿಕೆ ಕಡಿತಗೊಳಿಸಬೇಕು ಎಂದು ಹೇಳುವುದನ್ನು ಬಿಟ್ಟು, 2020 ರಲ್ಲಿ ಹೇಳಿದ್ದಾರೆ. ಅವರ 15 ವರ್ಷಗಳ ಪಿಂಚಣಿ ಮೊತ್ತಕ್ಕೆ ಪರಿಹಾರ ನೀಡುವವರು ಯಾರು? ಯಾವ ರೀತಿ ವಂತಿಕೆಯನ್ನು ಕಡಿತಗೊಳಿಸುತ್ತಾರೆ? ಆ ವಿಚಾರವಾಗಿಯೇ ನಾನು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರನ್ನು ಕೇಳುತ್ತಿರುವುದು. ನಾಳೆ ದಿವಸ ಏನಾದರೂ ಇದು ಪತ್ರಿಕೆಯಲ್ಲಿ ವರದಿಯಾಗಿರುವುದನ್ನು ಓದಿದರೆ, ಆ ಡಾಕ್ಟರ್‌ಗಳಿಗೆ ಹುಚ್ಚು ಹಿಡಿಯುತ್ತದೆ.

(ಮುಂದು)

(611) 24.03.2022/4.30/ಎಸ್‌ಕೆ- ಎಕೆ

**(ಸಭಾಪತಿಯವರ ಉಪಸ್ಥಿತಿ)**

**ಡಾ. ಕೆ. ಸುಧಾಕರ್ (ಆರೋಗ್ಯ, ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಸಚಿವರು):-**

ಹಳೆಯ ಪಿಂಚಣಿ ಯೋಜನೆ ಪ್ರಕಾರ ನೂರಕ್ಕೆ ನೂರರಷ್ಟು ಅನ್ವಯವಾದರೆ, ಅದನ್ನು ಮಾಡಿಸುವುದಕ್ಕೆ ...

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಇದನ್ನು ಮಾಡಿಸಬೇಕಲ್ಲ.

**ಡಾ. ಕೆ. ಸುಧಾಕರ್:-** ಖಂಡಿತವಾಗಿಯೂ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಅದರಲ್ಲಿ ಅನುಮಾನ ಬೇಡ.

**ಶ್ರೀ ಮರಿತಿಬ್ಬೇಗೌಡ:-** ಡಾಕ್ಟರೇ, ನಾನು ಮೊದಲೇ ಓದಿದೆ. ಅವರು ಕರ್ತವ್ಯಕ್ಕೆ ಸೇರಿದ ದಿನಾಂಕ, ಆ ಪ್ರಕಾರದಲ್ಲಿ ಅವರಿಗೆಲ್ಲಾ ಹಳೆ ಪಿಂಚಣಿ ಯೋಜನೆಯನ್ನು ಕೊಡಲೇಬೇಕು. ಅದೇನ್ನೇನು ತಾವು ಧರ್ಮಕ್ಕೆ ಕೊಡುತ್ತೀರಾ?

**ಡಾ. ಕೆ. ಸುಧಾಕರ್:-** ಮಾನ್ಯ ಸಭಾಪತಿಯವರೇ, ಅಲ್ಲಿ ಏನಾಗಿದೆ ಎಂದರೆ, 2005 ರ ಫೆಬ್ರವರಿಯಲ್ಲಿ ನೇಮಕಾತಿಯಾಗುತ್ತದೆ. ಆಗಲೇ ಹೊಸ ಪಿಂಚಣಿ ಯೋಜನೆಯ ಬಗ್ಗೆ ಚರ್ಚೆಯಾಗಿತ್ತು.

**ಶ್ರೀ ಅರುಣ ಶಹಾಪುರ:-** 2009 ರಲ್ಲಿ ಪೂರ್ತಿಯಾಗಿ ಅನುಷ್ಠಾನಕ್ಕೆ ಬಂತು. ದಿನಾಂಕ 01.04.2006 ರಲ್ಲಿ ಹೊಸ ಪಿಂಚಣಿ ಯೋಜನೆ ಜಾರಿಗೊಳಿಸಿದ್ದು, ಅದನ್ನು retrospective ಆಗಿ ಕೊಟ್ಟಿದ್ದಾರೆ.

**ಶ್ರೀ ಮರಿತಿಬ್ಬೇಗೌಡ:-** ಅದು ಹೇಗೆ ಕೊಟ್ಟರು?

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಚಿವರೇ, ನಾನು ಸ್ವಲ್ಪ addition ಮಾಡುತ್ತೇನೆ, ತಾವು ಉತ್ತರ ಕೊಡಿ. ಮಾನ್ಯ ಸಭಾಪತಿಯವರೇ, ಈ ಚರ್ಚೆಯನ್ನು ಇಷ್ಟೇ ಎಂದು ಅರ್ಥ ಮಾಡಿಕೊಂಡು, ಅವರು ಕೊಟ್ಟಿರುವ ಮಾಹಿತಿಯನ್ನು ಆಧರಿಸಿಕೊಳ್ಳುತ್ತೇನೆ. 2006 ಕ್ಕಿಂತ ಮುಂಚೆ ಯಾರೇ ನೇಮಕಾತಿಯಾಗಿದ್ದರೂ ಕೂಡ ಅವರು ಖಡಾ ಖಂಡಿತವಾಗಿ ಹಳೆ ಪಿಂಚಣಿ ಯೋಜನೆಗೆ ಬರಲೇಬೇಕು. ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿ 2006ರ ನಂತರ, ಆಗಿದ್ದವರಿಗೆ ಎಂತಿದೆ. ಅಂದರೆ, ಅದಕ್ಕಿಂತ ಮುಂಚೆ ಯಾರಾದರೂ ನೇಮಕಾತಿಯಾಗಿ, ಖಾಯಮಾತಿ 2006 ರ ನಂತರ ಆಗಿದ್ದರೂ ಕೂಡ ನೇಮಕಾತಿಯ ದಿನಾಂಕವನ್ನು ಪರಿಗಣಿಸಬೇಕು. 2006 ರ ನಂತರ ಖಾಯಂ ಆಗಿರುವವರಿಗೆ ಕೂಡ ಹಳೆ ಪಿಂಚಣಿ ಯೋಜನೆಯನ್ನು ಕೊಡಬೇಕಾಗುತ್ತದೆ. ಎರಡನೇ ಅಂಶ ಮಾನ್ಯ ಮರಿತಿಬ್ಬೇಗೌಡರು ಓದಿದ್ದರೊಳಗೆ ಮುಂದೆ ಬರುವ ಎನ್.ಪಿ.ಎಸ್. ಬಗ್ಗೆ 2005 ರಲ್ಲಿ ಹೇಗೆ ಕಂಡಿಷನ್‌ನಲ್ಲಿ ಹೇಳಿದ್ದಾರೆ? ನಮ್ಮ ರಾಜ್ಯದಲ್ಲಿ 2010 ರಲ್ಲಿ ಹೊಸ ಪಿಂಚಣಿ ಯೋಜನೆ ಜಾರಿಗೆ ಬಂದಿದ್ದು. ಅದಕ್ಕೆ retrospective effect ಕೊಟ್ಟರು. ಸನ್ಮಾನ್ಯ ಹೆಚ್.ಡಿ. ಕುಮಾರಸ್ವಾಮಿ ಮತ್ತು ಮಾನ್ಯ ಬಿ.ಎಸ್. ಯಡಿಯೂರಪ್ಪನವರ ಸಮ್ಮಿಶ್ರ ಸರ್ಕಾರವಿದ್ದಾಗ, ಬಜೆಟ್‌ನಲ್ಲಿ 2006-07ರ ಸಂದರ್ಭದಲ್ಲಿ ಪ್ರಸ್ತಾಪವಾಯಿತು. ಅದು ಅಂಗೀಕಾರವಾಗಲಿಲ್ಲ. ಬಜೆಟ್ 2010 ರಲ್ಲಿ ಅಂಗೀಕಾರ ಮಾಡುವಾಗ retrospective effect ಅನ್ನು 2006 ರಿಂದ ಕೊಟ್ಟರು. ಅವೊತ್ತಿನ ದಿನ ಸದನಗಳು ಒಪ್ಪಿಕೊಂಡಿದ್ದವು. ನಾಲ್ಕು ವರ್ಷಗಳ ಹಿಂದಕ್ಕೆ ಮಾಡಿ ಎಂದು ಅವೊತ್ತಿನ ದಿವಸ

ಯಾವ ಕಾರಣಕ್ಕೆ ಒಪ್ಪಿಕೊಳ್ಳಲಾಯಿತು ಎಂಬುದರ ಬಗ್ಗೆ ಚರ್ಚೆ ಮಾಡುವುದಕ್ಕೆ ನನ್ನ ಬಳಿ ಆಧಾರಗಳಿಲ್ಲ. ಆ ತರಹ 2005 ರೊಳಗೆ 2010 ರಲ್ಲಿ ಕಾಯಿದೆ ಬರುತ್ತದೆ. ಅದು retrospective effect ಕೊಡುತ್ತಾರೆಂದು, ಬೃಹಸ್ಪತಿಗೆ ಗೊತ್ತಾಗಿದ್ದು ಹೇಗೆ? 2005 ರಲ್ಲಿಯೇ ಹೇಳಬೇಕಾದರೆ, ಆ ಮನುಷ್ಯನನ್ನು ಕೂರಿಸಿಕೊಂಡು ಮುಂದೆ ಏನೇನಾಗುತ್ತೆ ಎಂದು ಕೇಳುವುದಕ್ಕೆ ಜ್ಯೋತಿಷ್ಯಾಲಯ ಇದ್ದರೆ ಒಳ್ಳೆಯದಿರುತ್ತಿತ್ತು. ಆ ತರಹ Trust Account ಎಂದು ಇದೆ. ಹೊಸ ಪಿಂಚಣಿ ಯೋಜನೆಯಲ್ಲಿ ಬಹಳ ದೊಡ್ಡ ಸಂಶಯ ಅನುಮಾನ ಇರುವುದು ಏನೆಂದರೆ, ನಮ್ಮ ಅಕೌಂಟ್‌ನಲ್ಲಿನ ಹಣವನ್ನು ಎಲ್ಲಿ ತೊಡಗಿಸಲಾಗುತ್ತದೆ? At present, ನನ್ನ ಬ್ಯಾಲೆನ್ಸ್ ಎಷ್ಟು? ಅಲ್ಲಿ ಅಮೌಂಟ್ ಎಷ್ಟಿದೆ? ನಾನು ನಿವೃತ್ತಿಯಾದರೆ, ನನಗೆ ಎಷ್ಟು ಹಣ ಸಿಗುತ್ತದೆ ಎನ್ನುವ ಲೆಕ್ಕಾಚಾರ ಯಾರಿಗೂ ಸಿಗುತ್ತಿಲ್ಲ. ನನ್ನ ಹಕ್ಕು, ನನ್ನ ಹಣ; ನಾನು ದುಡಿದಿದ್ದೇನೆ, ನನ್ನ ಹಣವನ್ನು ಎಲ್ಲಿ ತೊಡಗಿಸಿದ್ದಾರೆ; ಠೇವಣಿಯ ಹಣ ಎಲ್ಲಿ ಇಟ್ಟಿದ್ದಾರೆ? ಅದಕ್ಕೆ ಎಷ್ಟು ಬಡ್ಡಿ ಸಿಗುತ್ತದೆ ಎಷ್ಟು ಲಾಭ ಸಿಗುತ್ತದೆ ಎಂದು ತಿಳಿದುಕೊಳ್ಳುವ ಪ್ರಾಥಮಿಕ ಹಕ್ಕು ಕೂಡ ಎಲ್ಲಾ ಹೂಡಿಕೆದಾರರಿಗೆ ಇದೆ. ಆದರೆ, ಇವತ್ತಿನವರೆಗೂ ಅದು ನಮಗೆ ಗೊತ್ತಾಗಿಲ್ಲ. ಬಹುಶಃ ಈ ಮಂಡ್ಯ ಕಾಲೇಜಿನವರಿಗೆ ಗೊತ್ತಾದರೆ, ಇಂಥ ಸಂಸ್ಥೆಯಲ್ಲಿ ತೊಡಗಿಸಿದ್ದೇವೆ; ಅವರದು ಇಷ್ಟಿಷ್ಟು ಮೊತ್ತ ಇದೆ ಎಂದು ಹೇಳಿದರೆ ಒಳ್ಳೆಯದು. ಈಗಿರುವ ಮಾಹಿತಿ ಪ್ರಕಾರ 2006 ಕ್ಕಿಂತ ಮುಂಚೆ ಅವರು temporary ಇರಲಿ, ಇನ್ನೊಂದರಲ್ಲಿ ಇರಲಿ, ಅವರನ್ನು ಸಹ ಗಣನೆಗೆ ತೆಗೆದುಕೊಂಡು 2006ರ ನಂತರ ನೇಮಕಾತಿ ಆದವರಿಗೂ ಕೊಡಬೇಕು. ಏಕೆಂದರೆ, ಸರ್ಕಾರದ ಕೆಲವು ಇಲಾಖೆಗಳು ನೇಮಕಾತಿ ಮಾಡಿವೆ. ಆ ನೋಟಿಫಿಕೇಷನ್ 2006 ಕ್ಕಿಂತ ಮುಂಚೆ ಆಗಿದೆ. ನೇಮಕಾತಿ ಆದೇಶ ಕೂಡ ಆಗಿದೆ. ಆದರೆ 2006 ರ ನಂತರ ಅವರು ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದಾರೆ.

**ಸಭಾಪತಿಯವರು:-** ಅಂತಿಮ ದಿನಾಂಕ 01.04.2006 ಆಗಿದೆ.

**ಶ್ರೀ ಆಯನೂರು ಮಂಜುನಾಥ್:-** ಅಂತಹವರಿಗೆಲ್ಲಾ, ನೇಮಕಾತಿ ಆದೇಶದ ದಿನಾಂಕದ ಪ್ರಕಾರ ಅವನು ಯಾವಾಗ ಸೇವೆಗೆ ಸೇರಿದ್ದಾನೋ, ಅವೊತ್ತಿನಿಂದಲೇ, ಕೊಟ್ಟಿದ್ದಾರೆ. ಅವನು 2006 ರ ನಂತರ ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದಾನೆ. ನೇಮಕಾತಿ ಆದೇಶವಾದ ದಿನಾಂಕದ ಲೆಕ್ಕದಲ್ಲಿ

ಅವರಿಗೆ ಕೊಡಬೇಕು ಎಂದಾದರೆ, ಸರ್ಕಾರದ ಬೇರೆ ಬೇರೆ ಇಲಾಖೆಗಳಲ್ಲಿ ಏಕೆ ಕೊಡಬಾರದು? ಆ ಕಾರಣಕ್ಕೋಸ್ಕರ ಈ ಎನ್.ಪಿ.ಎಸ್. ಬಗ್ಗೆ ಒಂದು ತರಹ ವಿಚಿತ್ರವಾದಂತಹ interpretation ನಿಂದಾಗಿ ಎಲ್ಲಾ ಇಲಾಖೆಗಳಲ್ಲಿ ಬಹಳ ದೊಡ್ಡ ಗೊಂದಲ ಸೃಷ್ಟಿ ಮಾಡುತ್ತಾರೆ. ಅದಕ್ಕೆ ಸರಿಯಾದ ಉತ್ತರವನ್ನು ಮಾನ್ಯ ಸಚಿವರು ಕೊಡಬೇಕು. ಇಲ್ಲ, 2006 ಕ್ಕಿಂತ ಮುಂಚೆ ಯಾವುದೇ ರೂಪದಲ್ಲಿ ನೇಮಕಾತಿ ಆಗಿರಲಿ, ಆ ದಿನಾಂಕವನ್ನು ಪರಿಗಣಿಸಿ ಅವರು 2006 ರ ನಂತರ confirm ಆಗಿದ್ದಾರೆಂದು ಅವರಿಗೆ ಹಳೆ ಪಿಂಚಣಿ ಯೋಜನೆ ಕೊಡಿಸಿದರೆ, ಆ ಸಿಬ್ಬಂದಿ ಇವರನ್ನು ಎಷ್ಟು ಹಾಡಿ ಹೊಗಳುತ್ತಾರೋ; ಕರೋನಾ ಸೇವೆಗಿಂತ ಜಾಸ್ತಿ ಹೊಗಳುತ್ತಾರೆ. ಏಕೆಂದರೆ, ಇದನ್ನು ಇಟ್ಟುಕೊಂಡು ಬೇರೆ ಇಲಾಖೆಗಳಲ್ಲಿ ಕೇಳುವುದಕ್ಕೆ ದಾರಿ ಆಗುತ್ತದೆ. ನಿಮ್ಮ ಕಾನೂನು ಇಲಾಖೆ, ಒಂದೊಂದು ಇಲಾಖೆಗೆ ಒಂದೊಂದು ಸಲಹೆ ಕೊಡುತ್ತದೆ. ಅದು ಯಾವ ಕಾನೂನಿನ ಪುಸ್ತಕ ಹೇಳುತ್ತದೆಯೋ ಗೊತ್ತಿಲ್ಲ. ನಾನು ಎಲ್.ಎಲ್.ಬಿ., ಏಕೆ ಮಾಡಲಿಲ್ಲ ಎಂದು ನನಗೆ ಈಗ ಅನಿಸುತ್ತದೆ. ಹಾಗಾಗಿ, ಮಾನ್ಯ ಮರಿತಿಬ್ಬೇಗೌಡರ ಬೇಡಿಕೆ ಸರಿ ಇದೆ. ಹದಿನೈದು ವರ್ಷಗಳಲ್ಲಿ ಅವರಿಗೆ ಬೇಕಾದಂತಹ ಭವಿಷ್ಯದ ಭದ್ರತಾ ಠೇವಣಿ ಹಣವನ್ನು ಈಗ ಯಾರು ಭರಿಸಬೇಕು? ಈಗಾಗಲೇ ಅವರ ಅರ್ಧ ಸೇವೆಯೇ ಮುಗಿದು ಹೋಯಿತು.

**ಸಭಾಪತಿಯವರು:–** ಅದರ ಬಗ್ಗೆ ಮಾನ್ಯ ಸಚಿವರು ಹೇಳುತ್ತಾರೆ.

**ಶ್ರೀ ಆಯನೂರು ಮಂಜುನಾಥ್:–** ಅದಕ್ಕೋಸ್ಕರ, ಅವರಿಗೆ ಭದ್ರತೆ ಕೊಡಬೇಕೆಂದು ನಾನು ತಮ್ಮ ಮೂಲಕ ಅವರಿಗೆ ವಿನಂತಿ ಮಾಡುತ್ತೇನೆ.

**ಸಭಾಪತಿಯವರು:–** ಮಾನ್ಯ ಸಚಿವರೇ ಹೇಳಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಡಾಕ್ಟರು ಬಹಳ ಶಾಣೆಯಿದ್ದಾರೆ.

**ಸಭಾಪತಿಯವರು:–** ತಾವೇನೂ ಕಡಿಮೆ ಇದ್ದೀರಾ?

**ಶ್ರೀ ಮರಿತಿಬ್ಬೇಗೌಡ:–** ನಾವು ದಡ್ಡರು ಸ್ವಾಮಿ.

**ಸಭಾಪತಿಯವರು:–** ಈಗ ತಾವು ಹೇಳಿರುವುದು ಸರಿಯಿದೆ ಬಿಡಿ. ಇದನ್ನು rectify ಮಾಡಬೇಕು, ಹೌದಲ್ಲವೆ?

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೆ, ನನ್ನದು ಎರಡೇ...

**ಶ್ರೀ ಬಿ.ಕೆ. ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):–** ಮೊದಲು ಶಿಕ್ಷಕರ ಬಗ್ಗೆ ಮಾತನಾಡುವುದು ಬಿಟ್ಟು, ಡಾಕ್ಟರ್ ಬಗ್ಗೆ ಸ್ವಲ್ಪ ಮಾತನಾಡುತ್ತಿದ್ದಾರೆ.

**(ಈ ಹಂತದಲ್ಲಿ ಸದನ ನಗೆಗಡಲಿನಲ್ಲಿ ತೇಲಿತು)**

**ಸಭಾಪತಿಯವರು:–** ಅದು, ಅವರು ಶಿಕ್ಷಕರಾಗಿ ಉಳಿಯಬೇಕಿತ್ತು.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಮರಿತಿಬ್ಬೇಗೌಡರು ಬಹಳ ತಾಳ್ಮೆಯಿಂದ, ಶಾಂತವಾಗಿ ಮಾತನಾಡುತ್ತಿರುವುದರಿಂದ ನಮಗೆ ಅವರು ಹೊಸದಾಗಿ ಕಾಣಿಸುತ್ತಾರೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಎರಡೇ ನಿಮಿಷದಲ್ಲಿ ಮಾತನಾಡುತ್ತೇನೆ. ಈ ನಾಡಿನಲ್ಲಿ ಕೋವಿಡ್ ನಿರ್ವಹಣೆಯಲ್ಲಿ ವೈದ್ಯರ ಪಾತ್ರ ಬಹಳ ಮುಖ್ಯವಾಗಿದೆ. ದಿನಾಂಕ 01.04.2006 ಕ್ಕಿಂತ ಹಿಂದೆ ಅಧಿಸೂಚನೆ ಹೊರಡಿಸಿ, ಆ ಪ್ರಕಾರ ಯಾರು ನೇಮಕಾತಿ ಹೊಂದಿ permanent ಆಗಿ ನೌಕರರಿಗೆ join ಆಗಿದ್ದಾರೋ, ಅವರಿಗೆ ಹಳೆ ಪಿಂಚಣಿ ಯೋಜನೆಯನ್ನು ನೀಡಲೇಬೇಕು. ಇದನ್ನು ಯಾರು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಅಂತಹ ಕೆಲವರು ನಿವೃತ್ತಿಯ ಅಂಚಿಗೆ ಬಂದಿದ್ದಾರೆ. ಇದನ್ನು ಕೂಡಲೇ ಇತ್ಯರ್ಥಪಡಿಸಿ, ಹಳೆ ಪಿಂಚಣಿ ಯೋಜನೆಯನ್ನು ಕೊಡಿಸಬೇಕು ಮತ್ತು ಹೊಸ ಪಿಂಚಣಿ ಯೋಜನೆಯಲ್ಲಿ ಈ ಸಂಸ್ಥೆಯಲ್ಲಿ ಬಹತೇಕ ನೌಕರರಿದ್ದಾರೆ. ಆದರೆ ತಮ್ಮ ಉತ್ತರದಲ್ಲಿರುವಂತೆ, 2020 ರಿಂದ ಇವರಿಗೆ ಹೊಸ ಪಿಂಚಣಿ ಯೋಜನೆ ಪ್ರಕಾರ ಕ್ರಮ ಕೈಗೊಳ್ಳಬೇಕು ಎಂದು ಅಲ್ಲಿನ ನಿರ್ದೇಶಕರು ಮತ್ತು Dean ಗೆ ಆದೇಶವನ್ನು ಕೊಟ್ಟಿದ್ದೀರಿ. ಹಾಗಾದರೆ, 15 ವರ್ಷ ಸೇವೆ ಸಲ್ಲಿಸಿದ್ದರಲ್ಲಾ, ಸರ್ಕಾರದವರು ಆ ಹಣವನ್ನು ಹೇಗೆ ತುಂಬುತ್ತಾರೆ? ಈಗ ನಿರ್ದೇಶನವನ್ನು ಕೊಟ್ಟಿದ್ದೀರಿ. ಆದರೆ ಅದನ್ನು ಹೇಗೆ ಭರಿಸುತ್ತೀರಿ? ದಯವಿಟ್ಟು, ಮಾನ್ಯ ಸಚಿವರು ಇಷ್ಟು ಹೇಳಿದರೆ ಸಾಕು.

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಸಚಿವರು ಉತ್ತರ ಹೇಳುತ್ತಾರೆ.

**ಡಾ. ಕೆ. ಸುಧಾಕರ್:-** ಮಾನ್ಯ ಸಭಾಪತಿಯವರೇ, ಕೋವಿಡ್ ಬಂದಂತಹ ಸಂದರ್ಭದಲ್ಲಿ, 2020 ರಲ್ಲಿ ನಮ್ಮ ಸರ್ಕಾರ ಈ ಹೊಸ ಪಿಂಚಣಿ ಯೋಜನೆಯನ್ನು ತಂದು, ಅದನ್ನು retrospective ಆಗಿ ಕೊಡಲು, ಆ ಕಡತವನ್ನು ಆರ್ಥಿಕ ಇಲಾಖೆಗೆ ಕಳುಹಿಸಿದಾಗ, retrospective ಆಗಿ ಕೊಡುವುದಕ್ಕಾಗುವುದಿಲ್ಲ prospective ಆಗಿ ಕೊಡುತ್ತೇವೆಂದು ಹೇಳಿ, ಅವರು prospective ಆಗಿ ಕೊಟ್ಟಿದ್ದಾರೆ. ಆದರೆ ಹೊಸ ಪಿಂಚಣಿ ಯೋಜನೆ ದಿನಾಂಕ 01.04.2006 ರ ಹಿಂದೆ ನೇಮಕಗೊಂಡಿರುವಂತಹ ಸಿಬ್ಬಂದಿಯವರಿಗೆ ಹಳೆ ಪಿಂಚಣಿ ಯೋಜನೆಯನ್ನು ಕೊಡಬೇಕಾಗುತ್ತದೆ. ಅದರ ನಂತರ ನೇಮಕಗೊಂಡಂತಹ ಸಿಬ್ಬಂದಿಗೆ ಹೊಸ ಪಿಂಚಣಿ ಯೋಜನೆಯನ್ನು ಕೊಡಬೇಕು. ಅದಕ್ಕೋಸ್ಕರ, ಈಗಾಗಲೇ D.P.A.R ಜೊತೆ ಚರ್ಚೆ ಮಾಡಿದ್ದೇನೆ. ಆರ್ಥಿಕ ಇಲಾಖೆಯವರಿಗೆ ಕಡತವನ್ನು ಕಳುಹಿಸಿ, ದಿನಾಂಕ 01.04.2006 ರ ತರುವಾಯ, ಯಾರೆಲ್ಲಾ ನೇಮಕಾತಿ ಹೊಂದಿದ್ದಾರೋ, ಅವರಿಗೆ ಹೊಸ ಪಿಂಚಣಿ ಯೋಜನೆ ಪ್ರಕಾರ ಮತ್ತು ದಿನಾಂಕ 01.04.2006 ಕ್ಕಿಂತ ಮುಂಚೆ ಇದ್ದ ಸಿಬ್ಬಂದಿಯವರಿಗೆ ಹಳೆ ಪಿಂಚಣಿ ಯೋಜನೆ ಪ್ರಕಾರ ಮಾಡಲು ನಮ್ಮ ಇಲಾಖೆ ಬದ್ಧವಿದೆ. ಹೇಗಾದರೂ ಮಾಡಿ, ಆರ್ಥಿಕ ಇಲಾಖೆಯವರ ಜೊತೆ ಚರ್ಚೆ ಮಾಡಿ, ಕೆಲಸ ಮಾಡುತ್ತೇವೆ.

**ಶ್ರೀ ಮರಿತಿಬ್ಬೇಗೌಡ:-** ತಾವು ಹೇಳಿರುವುದು ಸರಿ ಇದೆ. ಆದರೆ ಹೊಸ ಪಿಂಚಣಿ ಯೋಜನೆಯಲ್ಲಿ ಇರುವವರಿಗೆ ಇದುವರೆಗೂ contribution ಅನ್ನು deduct ಮಾಡಿಲ್ಲ. ಆ ಬಗ್ಗೆ ಏನು ಹೇಳುತ್ತೀರಿ?

**ಡಾ. ಕೆ. ಸುಧಾಕರ್:-** ನಾನು ಆರ್ಥಿಕ ಇಲಾಖೆಯವರ ಜೊತೆ ಚರ್ಚೆ ಮಾಡಿ, ಎಲ್ಲಾ ವಿಷಯಗಳನ್ನು ಅವರ ಗಮನಕ್ಕೆ ತಂದು, ಅದನ್ನು ಆರ್ಥೈಸಿ, ಆ ಬಗ್ಗೆ ಕ್ರಮ ತೆಗೆದುಕೊಳ್ಳುವಂತಹ ಕೆಲಸವನ್ನು ಖಂಡಿತವಾಗಿಯೂ ಮಾಡುತ್ತೇನೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಚಿವರೇ, ಇದನ್ನು ಎಷ್ಟು ಸಮಯದೊಳಗೆ ಮಾಡುತ್ತೀರಿ?

**ಡಾ. ಕೆ. ಸುಧಾಕರ್:–** ಮಾನ್ಯ ಸಭಾಪತಿಯವರಿಗೂ ಗೊತ್ತಿದೆ. ಆರ್ಥಿಕ ಇಲಾಖೆಗೆ ಹೋದಾಗ, ...

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಚಿವರೇ, ಇದಕ್ಕೆ ಎಷ್ಟು ಸಮಯಾವಕಾಶ ಬೇಕಾಗುತ್ತದೆ ಹೇಳಿ.

**ಸಭಾಪತಿಯವರು:–** ತಾವು ಒಂದು ಸಭೆ ಮಾಡಿ.

**ಡಾ. ಕೆ. ಸುಧಾಕರ್:–** ಮಾನ್ಯ ಸಭಾಪತಿಯವರೇ, ನಾವು ಈ ವಿಷಯವನ್ನು ಗಂಭೀರವಾಗಿ ತೆಗೆದುಕೊಂಡಿದ್ದೇವೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಮಾನ್ಯ ಮರಿತಿಬ್ಬೇಗೌಡರನ್ನು ಸಭೆಗೆ ಕರೆಯಿರಿ.

**ಡಾ. ಕೆ. ಸುಧಾಕರ್:–** ಇಷ್ಟು ವರ್ಷಗಳಲ್ಲಿ ಹೊಸ ಪಿಂಚಣಿ ಯೋಜನೆಯ ಸೌಲಭ್ಯವನ್ನು 2020 ರ ನಂತರವೇ ಕೊಟ್ಟಿರುವುದು ಅದಕ್ಕಿಂತ ಮುಂಚೆ ಯಾವ ಸರ್ಕಾರವೂ ಕೊಟ್ಟಿರಲಿಲ್ಲ.

**ಸಭಾಪತಿಯವರು:–** ಸಭೆ ಕರೆದು ಚರ್ಚೆ ಮಾಡಿ.

**Dr. K. SUDHAKAR:** 7$^{th}$ AICTE pay scale ಕೂಡ ನಾವೇ ಮಾಡಿದ್ದು.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಚಿವರೇ, ತಾವು ಸಮರ್ಥರಿದ್ದೀರಿ.

**ಶ್ರೀ ಶಶೀಲ್ ಜಿ. ನಮೋಶಿ:–** ಮಾನ್ಯ ಸಭಾಪತಿಯವರೇ, 2006 ರ ನಂತರ ನೇಮಕಗೊಂಡವರಿಗೆ ಹೊಸ ಪಿಂಚಣಿ ಯೋಜನೆ ಜಾರಿಗೆ ಬಂದಿದೆ. ಆದರೆ ಮಾನ್ಯ ಸಚಿವರು 2020 ಎಂದು ಹೇಳುತ್ತಿದ್ದಾರೆ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಚಿವರು ಹೇಳಿರುವುದು ಸರಿಯಿದೆ. ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಇಲ್ಲಿ ಒಂದು ಏನಾಗಿತ್ತು ಎಂದರೆ, ...

**ಸಭಾಪತಿಯವರು:–** ತಮ್ಮ ಮಾತನ್ನು ಸಾಕು ಮಾಡಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಚಿವರೇ, ತಾವು ಸಮರ್ಥರಿದ್ದೀರಿ. ಒಂದು ತಿಂಗಳು, ಎರಡು ತಿಂಗಳು ಅಥವಾ ಮೂರು ತಿಂಗಳು ಎಂದು ಇದಕ್ಕೊಂದು ಸಮಯವನ್ನಾದರೂ ಹೇಳಿ. (ಗೊಂದಲ) ಏನು ಸರ್ಕಾರ, ಇಷ್ಟೊಂದು ಅಲಕ್ಷ್ಯ ಮಾಡಿದರೆ ಹೇಗೆ?

**ಡಾ. ಕೆ. ಸುಧಾಕರ್:–** ಮಾನ್ಯ ಸಭಾಪತಿಯವರೇ, ನಾನು ಆರ್ಥಿಕ ಇಲಾಖೆಯವರ ಜೊತೆ ಮಾತನಾಡುತ್ತೇನೆ. ಮನ್ಯ ಸದಸ್ಯರಿಗೆ ಇರುವಷ್ಟು ಬದ್ಧತೆ ನಮಗೂ ಇದೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಚಿವರೇ, ತಾವು ಬಹಳ ಸಮರ್ಥರಿದ್ದೀರಿ. ...

**ಡಾ. ಕೆ. ಸುಧಾಕರ್:–** ಮಾನ್ಯ ಸಭಾಪತಿಯವರೇ, ವೈದ್ಯಕೀಯ ಶಿಕ್ಷಣದಲ್ಲಿ 7$^{th}$ AICTE pay scale ಇರಲಿಲ್ಲ. ಅದನ್ನು ಕೂಡ ನಾವೇ ಮಾಡಿದ್ದು.

**ಸಭಾಪತಿಯವರು:–** ಬೇಗ ಸಭೆಯನ್ನು ಕರೆದು ಇದನ್ನು ತೀರ್ಮಾನ ಮಾಡಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಚಿವರೇ, ಇದನ್ನು ಎಷ್ಟು ಸಮಯದೊಳಗೆ ಮಾಡುತ್ತೀರಾ ಎಂಬುದನ್ನು ಹೇಳಿ. ತಾವು ಕೂಡ ಡಾಕ್ಟ್ರು

**ಡಾ. ಕೆ. ಸುಧಾಕರ್:–** ಆದಷ್ಟು ಶೀಘ್ರದಲ್ಲಿ ಮಾಡುತ್ತೇವೆ.

**ಸಭಾಪತಿಯವರು:–** ಆಯಿತು, ಇದು ಸಾಕು ಬಿಡಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಆದಷ್ಟು ಶೀಘ್ರ ಎಂದರೆ, ಅವಧಿ ಏನಾದರೂ ಇದೆಯಾ ಸಾರ್.

**ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರನ್ನು ಸಭೆಗೆ ಕರೆಯಿರಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಯಾವ ಮಂತ್ರಿಯವರನ್ನು ಕೇಳಿದರೂ ಶೀಘ್ರದಲ್ಲಿ ಮಾಡುತ್ತೇವೆ ಎಂದು ಹೇಳುತ್ತಾರೆ.

**ಸಭಾಪತಿಯವರು:-** ತಾವೇ ಇದನ್ನು ಏಕೆ ಹೇಳುತ್ತೀರಾ?

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮೂರು ತಿಂಗಳು ಅಥವಾ ಆರು ತಿಂಗಳಿನಲ್ಲಿ ಮಾಡುತ್ತೇವೆ ಎಂದು ಹೇಳುವ ಧೈರ್ಯವೇ ಇವರಿಗೆ ಇಲ್ಲವಲ್ಲ. **(ಗೊಂದಲ)** ತಾವು ಸಚಿವರಿದ್ದಾಗ, ಒಂದು ತಿಂಗಳಿನಲ್ಲಿ ಮಾಡುತ್ತೇವೆ. ಒಂದು ವಾರದಲ್ಲಿ ಮಾಡುತ್ತೇವೆ ಎಂದು ಹೇಳುತ್ತಿದ್ದಿರಿ.

**(ಗೊಂದಲ)**

**ಡಾ. ತೇಜಸ್ವಿನಿ ಗೌಡ:-** ಮಾನ್ಯ ಮರಿತಿಬ್ಬೇಗೌಡರೇ, ಅತೀ ಶೀಘ್ರದಲ್ಲಿ ಎಂದು ಹೇಳಿದ್ದಾರಲ್ಲವೆ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಎಷ್ಟು ಮಂಡನೆ ಮಾಡಿದ್ದೀರಿ.

(ಮುಂದು)

**(612) 24-03-2022 4.40 ಟಿಸಿಹೆಚ್-ಆರ್ಎನ್(ಎಂಡಿ) (ಸಭಾಪತಿಯವರ ಉಪಸ್ಥಿತಿ)**

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ (ಮುಂದು):-**

ಮಾನ್ಯ ಸಭಾಪತಿಯವರೇ, ಇವರಿಗೆ ಯಾರಿಗೂ ತಾಕತ್ತೇ ಇಲ್ಲ. ಮಾನ್ಯ ಸಭಾನಾಯಕರು ಮಾತ್ರ ಖಚಿತವಾದ ಉತ್ತರ ಕೊಡುತ್ತಾರೆ.

**(ಗೊಂದಲ)**

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ವಿಧಾನ ಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಮ್ಮ ಮಾನ್ಯ ಮರಿತಿಬ್ಬೇಗೌಡರವರ ಕಥೆ ಯಾವ ರೀತಿ ಆಗಿದೆಯೆಂದರೆ, ನಮ್ಮ ಪಕ್ಷದಲ್ಲಿ ಕೆಲವು ಶಾಸಕರು ಮಾನ್ಯ ಮರಿತಿಬ್ಬೇಗೌಡರವರಿಗೆ ಜೆಡಿಎಸ್ (ಜಾ) ಪಕ್ಷದವರು ಮಂತ್ರಿಯನ್ನಾಗಿ ಮಾಡಲಿಲ್ಲವೆಂದು ಆಗಾಗ ಹೇಳುತ್ತಿರುತ್ತಾರೆ; ಹೌದಲ್ಲವೇ. ಇದು ಏನಾಗಿದೆಯೆಂದರೆ. . .

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನಮ್ಮ ಪಕ್ಷ ಪೂರ್ಣ ಪ್ರಮಾಣದಲ್ಲಿ ಅಧಿಕಾರಕ್ಕೆ ಬಂದಾಗ ನನ್ನನ್ನು ಮಂತ್ರಿಯನ್ನಾಗಿ ಮಾಡುತ್ತಾರೆ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ನಾವು ಮೊದಲು ನಿಮ್ಮ ಸಹವಾಸ ಮಾಡಿ ಕೆಟ್ಟೆವು. ಆಮೇಲೆ ಕಾಂಗ್ರೆಸ್ ಪಕ್ಷದ ಸಹವಾಸ ಮಾಡಿ ಕೆಟ್ಟೆವು. ಈಗ ಅಲ್ಲೂ ಇಲ್ಲ, ಹಾಗೆಯೇ ಇದ್ದೇವೆ, ನಮಗೆ ಸಾಕು.

**ಡಾ|| ತೇಜಸ್ವಿನಿ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ನಮ್ಮ ಪಕ್ಷದ ಸಹವಾಸ ಮಾಡಿದವರು ಸಾಕಷ್ಟು ಜನ ಸಚಿವರಾಗಿದ್ದಾರೆ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ದಕ್ಷಿಣ ಭಾರತದ ಕರ್ನಾಟಕದಲ್ಲಿ ಬಿ.ಜೆ.ಪಿ ಸರ್ಕಾರ ಏನಾದರು ಅಧಿಕಾರಕ್ಕೆ ಬಂದಿದೆಯೆಂದರೆ, ಅದು ಜೆಡಿಎಸ್ ಪಕ್ಷದ ಕೊಡುಗೆ ಎಂದು ತಿಳಿದುಕೊಳ್ಳಿ.

**(ಗೊಂದಲ)**

**ಡಾ|| ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಜೆಡಿಎಸ್ (ಜಾ) ಪಕ್ಷದವರೂ ಕೂಡ ತುಂಬಾ ಜನ ಸಚಿವರಾಗಿದ್ದರು.

**(ಗೊಂದಲ)**

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-** ಮಾನ್ಯ ಸಭಾಪತಿಯವರೇ, ಪಾಪ, ಮಾನ್ಯ ಮರಿತಿಬ್ಬೇಗೌಡ ರವರ ಪರಿಸ್ಥಿತಿ ಯಾವ ರೀತಿ ಆಗಿದೆಯೆಂದರೆ, ತಮಗೂ ಕೂಡ ಗೊತ್ತಿದೆ. ಮಾನ್ಯ ಸಭಾಪತಿಯವರೇ, ತಾವು ಮಹಾರಾಷ್ಟ್ರ ಭಾಗದಲ್ಲಿ ಸ್ವಲ್ಪ ಓಡಾಡುತ್ತೀರಿ. ಮರಾಠಿಯಲ್ಲಿ ‘ಅತೀ ಶಾಣೇಂಚ ಬೈಲ್ ರಿಕಮೆ ಅಸ್ತೆಯಂ’ ಎಂದು ಒಂದು ಗಾಧೆ ಮಾತಿದೆ. ಅಂದರೆ ‘ಅತ್ಯಂತ ಬುದ್ಧಿವಂತನ ಎತ್ತುಗಳು ಯಾವಾಗಲೂ ಖಾಲಿಯೇ ಇರುತ್ತವೆ’. ಇದಕ್ಕೆ ಕಾರಣ ಏನೆಂದು ಕೇಳಿದೆನು. ಒಂದು ಊರಿನಲ್ಲಿ ಒಬ್ಬ ದಡ್ಡ ರೈತ ಇರುತ್ತಾನೆ, ಇನ್ನೊಬ್ಬ ಬಹಳ ಬುದ್ಧಿವಂತ ರೈತ ಇರುತ್ತಾನೆ. ಆ ದಡ್ಡ ರೈತನಿಗೂ ಎರಡು ಎತ್ತುಗಳಿರುತ್ತವೆ, ಆ ಬುದ್ಧಿವಂತ ರೈತನಿಗೂ ಎರಡು ಎತ್ತುಗಳು ಇರುತ್ತವೆ. ಅವರಿಬ್ಬರೂ ಕೂಡ ಪ್ರತಿ ದಿನ ಬೇರೆಯವರ ಜಮೀನಿನಲ್ಲಿ ಬಾಡಿಗೆಗೆ ಹೋಗುತ್ತಿರುತ್ತಾರೆ. ಯಾರೋ ಒಬ್ಬ ಜಮೀನುದಾರ ಆ ದಡ್ಡ ರೈತನ ಹತ್ತಿರ ಬಂದು, ‘ನಾಳೆ ನಮ್ಮ ಹೊಲದಲ್ಲಿ ಜೋಳ ಬಿತ್ತುವುದು ಇದೆ, ನೀನು ಬರುತ್ತೀಯ’ ಎಂದು ಕೇಳುತ್ತಾನೆ. ಆಯಿತು ನಡೆ ಎಂದು ಬೆಳಗ್ಗೆ ಎತ್ತುಗಳನ್ನು ಕರೆದುಕೊಂಡು ಹೊಲ ಬಿತ್ತುವುದಕ್ಕೆ ಹೋಗಿಬಿಡುತ್ತಾನೆ. ಮಾನ್ಯ ಮರಿತಿಬ್ಬೇಗೌಡರವರ ರೀತಿ ಅಂದರೆ ಬುದ್ಧಿವಂತ ರೈತರ ಹತ್ತಿರ ಎರಡು ಎತ್ತುಗಳಿರುತ್ತವೆ. ಇವರ ಹತ್ತಿರ ಕೂಡ ಹೋಗಿ ‘ನಾಳೆ ನಮ್ಮ ಜಮೀನಿನಲ್ಲಿ ಜೋಳ ಬಿತ್ತುವುದು ಇದೆ, ಬರುತ್ತೀರಾ’ ಎಂದು ಕೇಳಿದಾಗ, ಆಯಿತು ನಾನು ಬರುತ್ತೇನೆ. ಆದರೆ ಅದು ಯಾವ ಜೋಳ, ಅದನ್ನು ಎಲ್ಲಿಂದ ತಂದಿದ್ದೀಯಾ, ಅದು ಎಷ್ಟು ಇದೆ, ಅದನ್ನು ಒಂದು ಎಕರೆಗೆ ಎಷ್ಟು ಬಿತ್ತಬೇಕು, ಅದಕ್ಕೆ ಗೊಬ್ಬರ ಯಾವುದನ್ನು ಹಾಕುತ್ತೀಯ ಎಂದು ಕೇಳುತ್ತಾರೆ. ಈ ಹಿಂದೆ ಅಕಡಿ ಹಾಕತಕ್ಕಂಥ ಹೆಣ್ಣು ಮಕ್ಕಳು ಇದ್ದರು. ನೀವು ಆ ಹೆಣ್ಣು-ಮಕ್ಕಳಿಗೆ ಯಾರ್ಯಾರಿಗೆ ಹೇಳಿದ್ದೀರಿ, ಆ ಅಕಡಿಯನ್ನು ಯಾವುದರಲ್ಲಿ ಹಾಕುತ್ತೀಯಾ, ಗೊಬ್ಬರ ಎಷ್ಟು ಹಾಕುತ್ತೀಯಾ, ಈ ಎಲ್ಲಾ ಚೌಕಾಸಿ ಮಾಡಿದ ನಂತರ ಆ ಬಾಡಿಗೆಗೆ ಬನ್ನಿ ಎಂದು ಕೇಳಿಕೊಂಡು ಬಂದಿರತಕ್ಕಂಥವನು ಈತನ್ನು ಏಕೆ ಕರೆದುಕೊಂಡು ಹೋಗುವುದು, ಖಾಲಿ ಇರತಕ್ಕಂಥವನನ್ನು ಕರೆದುಕೊಂಡು ಹೋಗೋಣವೆಂದು ವಾಪಸ್ಸು ಹೋಗುತ್ತಾನೆ. ಆ ರೀತಿ ಅತೀ ಬುದ್ಧಿವಂತಿಕೆ ಮಾಡುವವರನ್ನು ಖಾಲಿ ಕೂರಿಸುವುದಕ್ಕೆ ಆಗುತ್ತದೆಯೇ?

**(ಈ ಹಂತದಲ್ಲಿ ಸದನದಲ್ಲಿ ನಗು)**

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಒಂದು ವಿಚಾರವನ್ನು ಹೇಳಲೇಬೇಕಾಗುತ್ತದೆ. ಅದಕ್ಕೆ ದಯಮಾಡಿ ಒಂದು ನಿಮಿಷ ಸಮಯ ಕೊಡಿ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರವರ ಬಗ್ಗೆ ಮಾನ್ಯ ಶಾಸಕರಾದ ಲಕ್ಷ್ಮಣ ಸಂಗಪ್ಪ ಸವದಿಯವರು ಹೇಳಿದರು. ಒಬ್ಬ ಏನು ಮಾಡಿದನೆಂದರೆ, ನಾವು ಮುಂಚೆ ಎಲ್ಲಾ. . .

**(ಗೊಂದಲ)**

**ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡ ರವರು ಮರೆಯಬಾರದು. . .

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ಈಗ ತಾವು ರೂಲ್ 68 ರಡಿಯಲ್ಲಿ ಮಾತನಾಡಿ.

**(ಗೊಂದಲ)**

**ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರವರು ಒಂದು ವಿಚಾರವನ್ನು ಮರೆಯಬಾರದು. ಏಕೆಂದರೆ ಸನ್ಮಾನ್ಯ ಹೆಚ್.ಡಿ.ದೇವೇಗೌಡರವರು ನಮ್ಮ ಪಕ್ಷದ ಎಂ.ಎಲ್.ಎ.,ರವರಿಂದ ಮೊದಲ ಬಾರಿಗೆ ಸಚಿವರಾಗಿದ್ದರು. ಅವರು ನಮ್ಮ ಪಕ್ಷದ ತ್ಯಾಗದಿಂದ ಸಚಿವರಾಗಿದ್ದರು. ನಮ್ಮ ಪಕ್ಷದವರು ಅವರಿಗೆ

ನಿಸ್ವಾರ್ಥವಾಗಿ ಬಂಬಲವನ್ನು ಕೊಟ್ಟಿದ್ದೇವೆ. **(ಗೊಂದಲ)** ಅವರಿಗೆ ಕಾಂಗ್ರೆಸ್ ಬೆಂಬಲ ಕೊಟ್ಟಿಲ್ಲ, ನಮ್ಮ ಪಕ್ಷದವರು ಬೆಂಬಲ ಕೊಟ್ಟು ಸಚಿವರನ್ನಾಗಿ ಮಾಡಿದ್ದೇವೆ. ಇದು ತಮಗೆ ಗೊತ್ತಿರಲಿ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಅತಿ ಶೀಘ್ರದಲ್ಲೇ ಮಾಡುತ್ತೇವೆ, ತೋರಿಸುತ್ತೇನೆ ಹೇಳಿದ್ದರಲ್ಲಾ, ಅದಕ್ಕೆ ಒಂದು ಕಥೆ ಇದೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ಈಗ ತಾವು ರೂಲ್ 68 ರಡಿಯಲ್ಲಿ ಮಾತನಾಡುತ್ತೀರೋ, ಇಲ್ಲವೋ? ಈಗ ತಾವು ಮಾತನಾಡದಿದ್ದರೆ, ಬೇರೆ ಶಾಸಕರ ಹೆಸರನ್ನು ಕರೆಯುತ್ತೇನೆ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.. .

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ನಮ್ಮ ಸಹವಾಸ continue ಮಾಡಿದ್ದರೆ, ಸನ್ಮಾನ್ಯ ಹೆಚ್.ಡಿ.ರೇವಣ್ಣನವರು ಕೂಡ ಮುಖ್ಯಮಂತ್ರಿ ಆಗುತ್ತಿದ್ದರು. ಅವರು ಅಂತಹ ಸದಾವಕಾಶವನ್ನು ಕಳೆದುಕೊಂಡರು.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಲಹರ್ ಸಿಂಗ್ ಸಿರೋಯಾ ರವರು ಈ ಸದನಕ್ಕೆ ತಪ್ಪು ಮಾಹಿತಿ ಕೊಡುತ್ತಿದ್ದಾರೆ. ಅವರು ಸನ್ಮಾನ್ಯ ಹೆಚ್.ಡಿ.ಕುಮಾರಸ್ವಾಮಿ ಎಂದು ಹೇಳುವುದನ್ನು, ಸನ್ಮಾನ್ಯ ಹೆಚ್.ಡಿ.ದೇವೇಗೌಡರವರು ಎಂದು ಹೇಳಿದ್ದಾರೆ.

**(ಗೊಂದಲ)**

**ಶ್ರೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. . .

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ಮಾನ್ಯ ಶಶೀಲ್ ಜಿ.ನಮೋಶಿಯವರೇ, ದಯವಿಟ್ಟು ತಾವು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್‌ನವರು ನಮ್ಮ ಸನ್ಮಾನ್ಯ ಹೆಚ್.ಡಿ.ದೇವೇಗೌಡರವರನ್ನು ಮುಖ್ಯಮಂತ್ರಿಗಳನ್ನಾಗಿ ಮಾಡಿದ್ದರು.

**(ಗೊಂದಲ)**

**ಶ್ರೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. . .

**ಸಭಾಪತಿಯವರು:-** ಮಾನ್ಯ ಲಹರ್ ಸಿಂಗ್ ಸಿರೋಯಾ ರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

**(ಈ ಹಂತದಲ್ಲಿ ಆಡಳಿತ ಪಕ್ಷದವರು ಹಾಗೂ ಜೆಡಿಎಸ್ (ಜಾ) ಪಕ್ಷದವರು ಒಮ್ಮೆಲೆ ಎದ್ದು ನಿಂತು ಮಾತನಾಡಿದರು)**

**ಡಾ|| ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ನಾನು ಬಹಳ ನೋವಿನಿಂದ ಈ ವಿಚಾರವನ್ನು ಹೇಳುತ್ತಿದ್ದೇನೆ. . .

(ಗೊಂದಲ)

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ಬದ್ಧತೆ ಇಲ್ಲ.

(ಗೊಂದಲ)

**10. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಚರ್ಚೆ**

**ವಿಷಯ:-** ಬಿಎಂಆರ್‌ಸಿಎಲ್‌ಗೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿರುವ ಜಮೀನುಗಳನ್ನು ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್ ಸಂಸ್ಥೆಗೆ ಸೇರಿದ ಭೂಮಿಯನ್ನು ಕೆಐಎಡಿಬಿ ವತಿಯಿಂದ ಪಡೆದಿರುವ ಕುರಿತು ಮುಂದುವರೆದ ಚರ್ಚೆ ಕುರಿತು.

----

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ನಾನು ಕೆಲವು ಪೀಠಿಕಾ ಮಾತುಗಳನ್ನು ಆಡಿದ್ದೆ. ಈಗಾಗಲೇ ಮಾನ್ಯ ಶಾಸಕರುಗಳಾದ ಶ್ರೀ ಕೆ.ಎ.ತಿಪ್ಪೇಸ್ವಾಮಿ, ಶ್ರೀ ಎಸ್.ಎಲ್.ಭೋಜೇಗೌಡ, ಶ್ರೀ ರಮೇಶ್ ಗೌಡರವರು ನಿಯಮ 68 ರಡಿಯಲ್ಲಿ ನೈಸ್ ಕಂಪನಿ Bengaluru-Mysuru Expressway ಬಗ್ಗೆ ಸಾಕಷ್ಟು ಮಾಹಿತಿಗಳನ್ನು ಹೇಳಿದ್ದಾರೆ. ನಾನು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರಲು ಬಯಸುವುದೇನೆಂದರೆ, ಈ ಯೋಜನೆಯಲ್ಲಿ 100 ಕಿ.ಮೀ ಬೆಂಗಳೂರು-ಮೈಸೂರು ವೇಗದ ಹೆದ್ದಾರಿ, 41 ಕಿ.ಮೀ. Peripheral Road, 9.8 ಕಿ.ಮೀ. ಲಿಂಕ್ ರಸ್ತೆ, 3.1 ಕಿ.ಮೀ Elevated Corridor Road ಸೇರಿದೆ. ಇದರ ಜೊತೆಗೆ ಐದು Township ಗಳು ಸೇರಿವೆ. ಅದಾದ ನಂತರ ನಮ್ಮ ಸೋಮಶೇಖರ್ ರೆಡ್ಡಿರವರ ವಿಚಾರದಲ್ಲಿ ಕೋರ್ಟ್ ಒಂದು ತೀರ್ಮಾನ ಕೊಟ್ಟಿದ್ದೆ. ಆ ಜಡ್ಜ್‌ಮೆಂಟ್ ಬರುವ ಮುನ್ನಾ ಯೋಜನೆಗೆ ಅವಶ್ಯವಿರುವ 6950 ಎಕರೆ ಸರ್ಕಾರಿ ಜಮೀನು ಹಾಗೂ 13237 ಎಕರೆ ಖಾಸಗಿ ಜಮೀನುಗಳನ್ನು ಗುರುತಿಸಲಾಗಿತ್ತು. ತೀರ್ಪು ಹೊರ ಬಂದನಂತರ, ನೈಸ್ ಸಂಸ್ಥೆಯು KIADB (*Karnataka Industrial Areas Development Board)* ಯೊಂದಿಗೆ 23,844 ಖಾಸಗಿ ಜಮೀನನ್ನು ಸ್ವಾಧೀನಪಡಿಸಿಕೊಂಡು ಹಸ್ತಾರಿಸಲು ದಿನಾಂಕ 14.10.1998ರಂದು 5873 ಎಕರೆ ಸರ್ಕಾರಿ

ಜಮೀನನ್ನು ಹಸ್ತಾಂತರಿಸಲು ದಿನಾಂಕ 23.11.1990ರಂದು ಒಂದು ಒಪ್ಪಂದ ಮಾಡಿಕೊಂಡಿರುತ್ತದೆ. ಇದು ಒಟ್ಟು 29719 ಎಕರೆಗಳಾಗಿದ್ದು, ಮೇಲಿನ ಆದೇಶದಲ್ಲಿ ಅದು ಕ್ರಿಯಾ ಒಪ್ಪಂದದಲ್ಲಿ ನಿಗದಿಪಡಿಸಲಾದ ಗರಿಷ್ಠ ಜಮೀನು 20193 ಎಕರೆಗಿಂತ ಹೆಚ್ಚಾಗಿರುತ್ತದೆ. ಈ ಸಂಬಂಧ KIADB ಯ ವಿಶೇಷ ಭೂಸುಧಾರಣಾ ಅಧಿಕಾರಿಯವರು;

"ದಿನಾಂಕ 22.05.2004ರ ಪತ್ರದಲ್ಲಿ "the land acquisition notification was issued based on the requirement indicated by the promoter company and not on the basis of any technical drawings, maps which are approved by the Government in Public Works Department or Project Report." ಹೇಳಿದ್ದಾರೆ.

ಅಂದರೆ ಪ್ರಾಜೆಕ್ಟ್ ರಿಪೋರ್ಟ್ ಅಥವಾ ಪಿಡಬ್ಲ್ಯೂಡಿಯ ಒಪ್ಪಿಗೆ ಇಲ್ಲದೇ 21719 ಎಕರೆಗೆ ಒಂದು ಒಪ್ಪಂದವನ್ನು ಮಾಡಿಕೊಂಡಿದ್ದಾರೆ. ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ, peripheral road. ಈ peripheral road ಯೋಜನೆಯಲ್ಲಿ Phase 1 and 2 ನ್ನು 9.8 ಕಿ.ಮೀ ರಸ್ತೆ, 41 ಕಿ.ಮೀ peripheral road ಹಾಗೂ 13 ಕಿ.ಮೀ ವೇಗದ ಹೆದ್ದಾರಿಯನ್ನು ಸೆಕ್ಷನ್-ಎ ಕಾಮಗಾರಿಗಳು ಎಂದು ಕರೆಯುತ್ತಾರೆ. ಈ ಸೆಕ್ಷನ್-ಎ ಕಾಮಗಾರಿಗಳನ್ನು ಇವರು ಆರಂಭ ಮಾಡಿದ 8 ವರ್ಷಗಳ ಅವಧಿಯೊಳಗೆ ಪೂರ್ಣಗೊಳಿಸಬೇಕಾಗಿತ್ತು. ಅಂದರೆ ದಿನಾಂಕ 28.03.2012 ರೊಳಗಾಗಿ ಈ ಎಲ್ಲಾ ಕಾಮಗಾರಿಗಳನ್ನು ಸಂಪೂರ್ಣಗೊಳಿಸಬೇಕಾಗಿತ್ತು. ಆದರೆ ಇಲ್ಲಿಯವರೆಗೂ ಪೂರ್ಣಗೊಳಿಸಿಲ್ಲ. ಅವರು ಮಾಡಿಕೊಂಡಂತಹ ಒಪ್ಪಂದ ಪ್ರಕಾರ ಯಾವ ನಿಯಮಗಳನ್ನೂ ಪಾಲಿಸಿಲ್ಲ. ಈ ಪರಿಸ್ಥಿತಿ ಎಲ್ಲಿಯವರೆಗೆ ಹೋಗಿದೆಯೆಂದರೆ, ಇವತ್ತಿನ ದಿವಸ ನೈಸ್ ಕಂಪನಿಯವರು 41 ಕಿ.ಮೀ ರಸ್ತೆ ಕಾಂಕ್ರೀಟ್ ರಸ್ತೆ ಮಾಡಬೇಕು, ಅದನ್ನು ಸುಮಾರು ಒಂದು ಅಡಿ ಆಳದವರೆಗೆ ಹಾಕಬೇಕು, ಆ ರಸ್ತೆಯಲ್ಲಿ ಹಾದು ಹೋಗುವಂತಹ ಎಲ್ಲಾ heavy load vehicles ಗಳ ಶಕ್ತಿಯನ್ನು ತಡೆಯುವಂತಹ ಮತ್ತು 60 ವರ್ಷಗಳ ಕಾಲ ಧೀರ್ಘ ಬಾಳಿಕೆ ಬರುವಂತಹ ರಸ್ತೆಯನ್ನು ಅವರು ನಿರ್ಮಾಣ ಮಾಡಬೇಕಾಗಿತ್ತು; ಆದರೆ ಅವರು ಮಾಡಲಿಲ್ಲ. ಅದಕ್ಕಾಗಿ ಅವರಿಗೆ ಎಲ್ಲಾ ಜಮೀನನ್ನು ಪರಭಾರೆ ಮಾಡುವಂತಹ ಕೆಲಸ ನಡೆಯಿತು. ಏನೇನು requirement ಇತ್ತು,

5176 ಸರ್ಕಾರಿ ಜಮೀನು, 2155 private land ನ್ನು ಅವರಿಗೆ handover ಮಾಡುತ್ತಾರೆ. ಈ ಸರ್ಕಾರಿ ಜಮೀನಿಗೆ ಒಂದು ವರ್ಷಕ್ಕೆ 1 ಎಕರೆಗೆ ರೂ.10 ಗಳನ್ನು ಕಟ್ಟಬೇಕು. ಇನ್ನುಳಿದ ಖಾಸಗಿ ಜಮೀನು ಒಟ್ಟು 7351 ಎಕರೆಯನ್ನೂ ಕೂಡ ಅವರಿಗೆ ಪರಭಾರೆ ಮಾಡುತ್ತಾರೆ. ಆದರೆ ಅವರು ಆ ಇಡೀ ಯೋಜನೆಯನ್ನು ಕೇವಲ 1237 ಎಕರೆಯಲ್ಲಿ ಮುಗಿಸುತ್ತಾರೆ. ಆದರೆ ಅವರು ಬರೀ asphalt road ಮಾಡಿರುತ್ತಾರೆ. ಅವರು ಯಾವ ಕಂಡಿಷನ್‌ನ್ನು ಕೂಡ ಸಂಪೂರ್ಣವಾಗಿ ಮಾಡುವುದಿಲ್ಲ. ಇವತ್ತಿಗೂ ಕೂಡ ಅಲ್ಲಲ್ಲಿ White Topping Road ನ್ನು ಪ್ರಾರಂಭ ಮಾಡಿದ್ದಾರೆ. ಅವರು ನಾವು White Topping Road ಮಾಡುತ್ತೇವೆ, ನಾವು ಕಾಂಕ್ರೀಟ್ ರಸ್ತೆ ಮಾಡುವುದಿಲ್ಲವೆಂದು ಪಿಡಬ್ಲ್ಯೂಡಿ ಇಲಾಖೆಗೆ ಪತ್ರ ಬರೆದಿದ್ದಾರೆ. ಪಿಡಬ್ಲ್ಯೂಡಿ ಇಲಾಖೆಯಿಂದ ಅವರಿಗೆ ಇನ್ನೂ ಏನೂ ಉತ್ತರ ಹೋಗಿಲ್ಲ. ಒಬ್ಬ ಅಧಿಕಾರಿ ಕೂಡ ಅಲ್ಲಿಗೆ ಹೋಗಿ inspect ಮಾಡಿಲ್ಲ. ಸದನ ಸಮಿತಿ ವರದಿಯಲ್ಲಿ 'ನೀವು ಸರ್ಕಾರದ ಯಾವ ಷರತ್ತನ್ನೂ ಪೂರೈಸಿಲ್ಲ, ನೀವು ಉಳಿದ ಎಲ್ಲಾ ಜಮೀನುಗಳಲ್ಲಿ ರೆಸ್ಟೋರೆಂಟ್ ಮಾಡಬೇಕಾಗಿತ್ತು, ಶಾಲೆಗಳನ್ನು ನಿರ್ಮಾಣ ಮಾಡಬೇಕಾಗಿತ್ತು, truck lay-by ಗಳನ್ನು ಮಾಡಬೇಕಾಗಿತ್ತು; Rest Room ಗಳನ್ನು ಮಾಡಬೇಕಾಗಿತ್ತು.

**(ಮುಂದು)**

(613)24.3.2022/4.50/ಎಂ.ಎಂ-ಎಂ.ಡಿ

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಟಿ. ಶ್ರೀಕಂಠೇಗೌಡ(ಮುಂದು):-**

Dormitory ಮಾಡಬೇಕಾಗಿತ್ತು ಎಂದು ಎಲ್ಲಾ ಷರತ್ತುಗಳನ್ನು ಹಾಕುತ್ತಾರೆ. ಈ ಯಾವ ಷರತ್ತನ್ನೂ ಅವರು ಮುಟ್ಟುವುದಿಲ್ಲ. ಕಾಂಕ್ರೀಟ್ ರಸ್ತೆಯನ್ನೂ ಮಾಡುವುದಿಲ್ಲ, ಇದನ್ನೂ ಮಾಡುವುದಿಲ್ಲ. ಬದಲಾಗಿ ಒಂದಿಷ್ಟು concrete road ಮಾಡಿ Toll ಗಳನ್ನು ಮಾಡಿ ಇನ್ನಿಲ್ಲದ Toll ದಂಧೆಗೆ ಆರಂಭ ಮಾಡಿ ಬಿಡುತ್ತಾರೆ. ಈ ದೇಶದಲ್ಲಿ ಯಾವ ಟೋಲ್‌ನಲ್ಲಿಯೂ ದ್ವಿಚಕ್ರ ವಾಹನಗಳಿಗೆ Toll ತೆಗೆದುಕೊಳ್ಳುವುದಿಲ್ಲ. ಇಲ್ಲಿ ತೆಗೆದುಕೊಳ್ಳುತ್ತಾರೆ. ಯಾರೂ ತೆಗೆದುಕೊಳ್ಳದಷ್ಟು ಪ್ರಮಾಣದಲ್ಲಿ ಹಣ

ತೆಗೆದುಕೊಳ್ಳುತ್ತಾರೆ. ಅವರು ಇಲ್ಲಿಯವರೆಗೂ ಎಷ್ಟು Toll ಅನ್ನು ಕಲೆ ಹಾಕಿದ್ದಾರೆ ಎಂದು ನಮ್ಮ ಸರ್ಕಾರಕ್ಕೆ ಯಾವುದೇ ಮಾಹಿತಿಯನ್ನೂ ಸಚಿವರು ಇಲ್ಲಿಯವರೆಗೂ ಕೊಟ್ಟಿಲ್ಲ. ಸದನ ಸಮಿತಿ ಏನು ಮಾಡುತ್ತದೆ ಎಂದರೆ ರೂ. ೦5 ಲಕ್ಷ ಹಣವನ್ನು ತೊಡಗಿಸಿ ಒಂದು ವಾರಗಳ ಕಾಲ ನಮ್ಮ ಲೋಕೋಪಯೋಗಿ ಸಿಬ್ಬಂದಿಯನ್ನು ಅಲ್ಲಿ ಬಿಡುತ್ತಾರೆ. ಅವರು ಹಣವನ್ನು ಕಲೆ ಹಾಕುತ್ತಾರೆ. 2015ರ ಮುಂಚೆ ಅಲ್ಲಿ ಒಂದು ದಿನಕ್ಕೆ ರೂ.80 ಲಕ್ಷದಿಂದ 01 ಕೋಟಿ ರೂಪಾಯಿ Toll ಸಂಗ್ರಹ ಆಗುತ್ತಿತ್ತು. 2015ರ ನಂತರ 01 ಕೋಟಿ 60 ಲಕ್ಷದಿಂದ ರೂ.02 ಕೋಟಿ ರೂಪಾಯಿಗಳವರೆಗೆ ಸಂಗ್ರಹವಾಗುತ್ತಿದೆ. 2015ರ ನಂತರದ 07 ವರ್ಷಗಳಲ್ಲಿ ಅವನಿಗೆ ಸಂದಿರುವ ಹಣ ಒಂದು ತಿಂಗಳಿಗೆ 45 ಕೋಟಿ ಹಣವನ್ನು 1 ½ ಕೋಟಿ ಹಾಗೆ ಸರಾಸರಿ ಅಂದಾಜು ಹಾಕಿಕೊಂಡರೆ ಒಂದು ವರ್ಷಕ್ಕೆ 440 ಕೋಟಿ ಆಗುತ್ತದೆ. ಏಳು ವರ್ಷಕ್ಕೆ 3080 ಕೋಟಿ ಹಣವಾಗುತ್ತದೆ. ಇದು ಹೊಸದು. 2015ರ ಅನಂತರದ್ದು. ಮುಂಚಿನ ಲೆಕ್ಕವನ್ನು ಅವರು ಕೊಟ್ಟಿಲ್ಲ, ನಮ್ಮ ಸದನ ಸಮಿತಿಯೂ ಲೆಕ್ಕ ತೆಗೆಯುವುದಕ್ಕೆ ಆಗಲಿಲ್ಲ. ಇವರು ಎಲ್ಲಾ ಷರತ್ತುಗಳನ್ನು ಪೂರೈಸದೇ Toll ಸಂಗ್ರಹ ಮಾಡುವುದನ್ನು ನಿಲ್ಲಿಸಿ ಎಂದು ಹೇಳುತ್ತಾರೆ, ಇವರು ನಿಲ್ಲಿಸುವುದಿಲ್ಲ, ಕೋರ್ಟ್‌ಗೆ ಹೋಗಿ stay ತೆಗೆದುಕೊಳ್ಳುತ್ತಾರೆ. ಕೋರ್ಟ್‌ಗೆ ಹೋಗಿ stay ತೆಗೆದುಕೊಳ್ಳುವುದಕ್ಕೆ ಇಲಾಖೆಯು ಮೌನ ವಹಿಸಿದ್ದೇ ಕಾರಣವಾಗುತ್ತದೆ. ಲೋಕೋಪಯೋಗಿ ಇಲಾಖೆಯವರು ಏನೆಲ್ಲಾ lacuna ಗಳಿವೆ, ಏನೆಲ್ಲಾ ತಪ್ಪುಗಳನ್ನು ಮಾಡಿದ್ದಾರೆ ಎನ್ನುವ ಮಾಹಿತಿಯನ್ನು ಕೋರ್ಟ್‌ಗೆ ಕೊಡುವುದಿಲ್ಲ. ಇವತ್ತಿಗೂ stay ಇದೆ, ಅದನ್ನು vacate ಮಾಡಿಸುವ ಪ್ರಯತ್ನ ಮಾಡುವುದೇ ಇಲ್ಲ. ನಮ್ಮ ಸದನ ಸಮಿತಿಯ ವರದಿ ವಿಧಾನಸಭೆಯಲ್ಲಿ ಅಂಗೀಕಾರವಾಗಿದೆ. ಯಾವುದೇ ಷರತ್ತುಗಳನ್ನು ಪೂರೈಸಿಲ್ಲ, ಯಾವುದೇ ಕಾರಣಕ್ಕೂ Toll ಹಾಕಬಾರದು ಎಂದು ಹೇಳುತ್ತಾರೆ, stay order ಇದೆ, ಅದನ್ನು vacate ಮಾಡಿಸುವ ಪ್ರಯತ್ನ ನಮ್ಮ ಕಡೆಯಿಂದ ಆಗಲೇ ಇಲ್ಲ. ಬಹಳ ಮುಖ್ಯವಾದ ವಿಚಾರಕ್ಕೆ ಬರುತ್ತೇನೆ. ಅವರಿಗೆ ನಾವು ಸರ್ಕಾರಿ ಮತ್ತು ಖಾಸಗಿ ಜಮೀನನ್ನು ಕೊಟ್ಟಿವಲ್ಲಾ ಹಾಗೆ ಕೊಟ್ಟ 7000 ಎಕರೆಯಲ್ಲಿ ಇವರು 1,237 ಎಕರೆ ರಸ್ತೆಗೆ Toll ಮಾಡಿದ್ದಾರಷ್ಟೇ. ಉಳಿದಂತೆ ಯಾವ ಕೆಲಸಗಳನ್ನೂ ಅವರು ಮಾಡಲಿಲ್ಲ. ಅದರ ಬದಲಾಗಿ ಇವರು ರಸ್ತೆಗಳ ಇಕ್ಕೆಲಗಳಲ್ಲಿ ಇರುವ ಹೆಚ್ಚುವರಿ ಜಮೀನನ್ನು ರಸ್ತೆಗಾಗಿ ಸ್ವಾಧೀನಪಡಿಸಿಕೊಂಡಿದ್ದಿರಲಿ, ಅದನ್ನು ಬೇರೆ ಉದ್ದೇಶಕ್ಕೆ ಮಾಡಿದ್ದಿರಲಿ ಅದನ್ನು Real Estate

---

ವ್ಯವಹಾರ ಮಾಡುವುದಕ್ಕೆ ಪ್ರಾರಂಭ ಮಾಡುತ್ತಾರೆ. ಸುಮ್ಮನೆ 3–4 ಸಣ್ಣ ಉದಾಹರಣೆಗಳನ್ನು ನಿಮಗೆ ಕೊಡುತ್ತೇನೆ. ನೈಸ್ ಸಂಸ್ಥೆ ಮುಖ್ಯಸ್ಥರು peripheral road ನಿರ್ಮಿಸಲು ಹಾಗೂ truck terminal ನಿರ್ಮಿಸಲು ಕೊಮ್ಮಘಟ್ಟ ಗ್ರಾಮದಲ್ಲಿ ಭೂಸ್ವಾಧೀನಪಡಿಸಿಕೊಂಡು ಹಸ್ತಾಂತರಿಸಿದ 42 ಎಕರೆ 30 ಗುಂಟೆ ಜಮೀನನ್ನು *Umang Realtech* Private *Limited* ಅವರಿಗೆ *Group Housing* ಗೆ ಜಂಟಿ ಕರಾರು ಮಾಡಿಕೊಳ್ಳುತ್ತಾರೆ. ಇದು Township ಜಾಗವಲ್ಲ. Township ಜಾಗವನ್ನು ಅವರು ಏನಾದರೂ ಮಾಡಿಕೊಳ್ಳಬಹುದು ಅಡ್ಡಿ ಇಲ್ಲ. ಇದು ರಸ್ತೆಗಾಗಿ ಸ್ವಾಧೀನಪಡಿಸಿಕೊಂಡ 45 ಎಕರೆ 30 ಗುಂಟೆ ಜಮೀನಿದು. ಇನ್ನೊಂದು ಲಿಂಕ್ ರಸ್ತೆ ಮತ್ತು interchange road ನಿರ್ಮಿಸುವ ಸಲುವಾಗಿ ಪಂತರಪಾಳ್ಯದಲ್ಲಿ ಗ್ರಾಮದಲ್ಲಿ ಭೂಸ್ವಾಧೀನಪಡಿಸಿಕೊಂಡು ಹಸ್ತಾಂತರಿಸಿದ 08 ಎಕರೆ 36 ಗುಂಟೆ ಜಮೀನನ್ನು ಮತ್ತೆ *Umang Realtech* Private *Limited* ನವರಿಗೆ Residential Apartment ಮಾಡುವುದಕ್ಕೆ ಜಂಟಿ ಕರಾರು ಮಾಡಿಕೊಳ್ಳುತ್ತಾರೆ. ಅದರ ಜೊತೆಗೆ peripheral and interchange road ನಿರ್ಮಿಸುವ ಸಲುವಾಗಿ ಕೆಂಗೇರಿ ಮತ್ತು ಕೋನಪ್ಪನ ಅಗ್ರಹಾರ ಗ್ರಾಮದಲ್ಲಿ ಭೂಸ್ವಾಧೀನ ಪಡಿಸಿಕೊಂಡು ಹಸ್ತಾಂತರಿಸಿದ 25 ಎಕರೆ 35 ಗುಂಟೆ ಜಮೀನನ್ನು *Dhammanagi Developers Private Limited* ಅವರಿಗೆ Group Housing ಗೆ ಕೊಡುತ್ತಾರೆ. ಇವು ಮೂರು ಸಣ್ಣ ಉದಾಹರಣೆಗಳು. ಇನ್ನು ಸದನ ಸಮಿತಿ ಈ ವಿಚಾರದಲ್ಲಿ ಒಂದು ದೊಡ್ಡ ಪ್ರಯತ್ನವನ್ನೇ ಮಾಡಿದೆ. ಬಹುಶಃ ಈ ವಿಚಾರವನ್ನು ಕೇಳಿದರೆ ನಮ್ಮ ನಿಮ್ಮೆಲ್ಲರಿಗೂ ಆಶ್ಚರ್ಯವಾಗುವ ಮಟ್ಟಿಗೆ;

**ಸಭಾಪತಿಯವರು:–** ಮಾನ್ಯ ಶ್ರೀಕಂಠೇಗೌಡರೇ ಇನ್ನೂ ಎಷ್ಟು ಸಮಯ ಮಾತನಾಡುತ್ತೀರಿ?

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಇನ್ನೂ 35 ನಿಮಿಷ ಮಾತನಾಡುತ್ತೇನೆ.

**ಸಭಾಪತಿಯವರು:–** ಈ ವಿಚಾರವಾಗಿ ಇದುವರೆಗೂ ಒಟ್ಟು 02 ಗಂಟೆಗಳ ಕಾಲ ಮಾತನಾಡಿದ್ದಾರೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಇದು ಸುಮಾರು 15 ರಿಂದ 20 ಸಾವಿರ ಕೋಟಿ ಸರ್ಕಾರದ ಜಮೀನಿನಲ್ಲಿ ನಡೆದಿರುವ ಅವ್ಯವಹಾರದ ದೊಡ್ಡ ಹಗರಣವಾಗಿದೆ. ಈ ವಿಚಾರದಲ್ಲಿ ಸದನ ಸಮಿತಿ ಬಹಳ ಚೆನ್ನಾಗಿ ಕೆಲಸ ಮಾಡಿದೆ. ಈ ಸದನ ಸಮಿತಿಯಲ್ಲಿದ್ದ ಮಾನ್ಯ ಸಚಿವರಾದ ಸೋಮಶೇಖರ್‌ರವರು ಹೊರಟು ಹೋದರು, ಸಚಿವರು ಇದ್ದರು. ಆ ಸಮಿತಿಯಲ್ಲಿ ಬಿ.ಜೆ.ಪಿ., ಕಾಂಗ್ರೆಸ್ ನವರು ಮತ್ತು ಜೆ.ಡಿ(ಎಸ್) ನವರು ಇದ್ದರು. ಅವತ್ತಿನ ಕಾನೂನು ಸಚಿವರಾದ ಶ್ರೀ ಟಿ.ಬಿ. ಜಯಚಂದ್ರ ರವರ ಅಧ್ಯಕ್ಷತೆಯಲ್ಲಿ 21 ಸಭೆಗಳನ್ನು ಮಾಡಿದ್ದಾರೆ. ಅವರು ಬರೀ ಸಭೆ ಮಾಡಲಿಲ್ಲ, ಸ್ಥಳ ತನಿಖೆ ಮಾಡಿದ್ದಾರೆ. ದಾಖಲೆಗಳನ್ನು ತೆಗೆದುಕೊಂಡಿದ್ದಾರೆ, ಅಧಿಕಾರಿಗಳ ಜೊತೆ ಸಭೆ ಮಾಡಿದ್ದಾರೆ. ಎಲ್ಲಾ ವಿಚಾರಗಳ ಬಗ್ಗೆ ಮಾಹಿತಿ ಕಲೆ ಮಾಡಿ 750 ಎಕರೆ ಜಮೀನಿಗೆ ಏನು ಬೆಲೆ ಬಾಳುತ್ತದೆ, ಏನಾಗಿದೆ ಎಲ್ಲಿ ಹೋಗಿ ನಿಂತಿತು ಎಂದರೆ ಹೇಗೆ 7,777 ಕೋಟಿ ರೂಪಾಯಿಗಳ ವಹಿವಾಟನ್ನು ಮಾಡಿಕೊಂಡರು ಎಂದರೆ ಕೆಂಗೇರಿ ಬಳಿ 7 ಎಕರೆ 45 ಗುಂಟೆ, 175 ಎಕರೆ ಮತ್ತು 50 ಗುಂಟೆ. ಒಂದು ಮಾರ್ಗಸೂಚಿ ಬೆಲೆಯಲ್ಲಿ 1367 ಕೋಟಿ ಆದರೆ ಮಾರುಕಟ್ಟೆ ಬೆಲೆ 3,282 ಕೋಟಿ 15 ಲಕ್ಷ. ಇನ್ನೊಂದು 08 ಕೋಟಿ 11 ಲಕ್ಷ ಮಾರುಕಟ್ಟೆ ಬೆಲೆ 19 ಕೋಟಿ. ಕೊಮ್ಮಘಟ್ಟದಲ್ಲಿ 43 ಎಕರೆ 13 ಗುಂಟೆ ಇನ್ನೊಂದು 11 ಎಕರೆ 01 ಗುಂಟೆ, ಒಂದು ಜಮೀನು 72 ಕೋಟಿ ರೂಪಾಯಿ ಇನ್ನೊಂದು 28 ಕೋಟಿ. ಮಾರುಕಟ್ಟೆ ಬೆಲೆ ಕೂಡ ಅದೇ ಇದೆ. ರಾಮಸಂದ್ರದಲ್ಲಿ 6 ಎಕರೆ 3 ಗುಂಟೆ, ಇದಕ್ಕೆ 09 ಕೋಟಿ 19 ಲಕ್ಷ ಮಾರ್ಗಸೂಚಿ ಬೆಲೆ. ಮಾರುಕಟ್ಟೆ ಬೆಲೆ 72ಕೋಟಿ 52 ಲಕ್ಷ. ಗೋಣಿಪುರದಲ್ಲಿ 225 ಎಕರೆಗೆ 1323 ಕೋಟಿ ಮಾರ್ಗಸೂಚಿ ಬೆಲೆ. ಮಾರುಕಟ್ಟೆ ಬೆಲೆ ಅದೇ ಆಗಿರುತ್ತೆ. ಹಾಗೆಯೇ 13 ಎಕರೆ ಜಮೀನು ಮಾದಾಪುರದಲ್ಲಿ 05 ಎಕರೆ 8 ಗುಂಟೆ, 3 ಎಕರೆ 8 ಗುಂಟೆ, 10 ಎಕರೆ 23 ಗುಂಟೆ. ಪಂತರಪಾಳ್ಯದಲ್ಲಿ 24 ಎಕರೆ 93 ಗುಂಟೆ 325 ಕೋಟಿ ಮಾರುಕಟ್ಟೆ ಬೆಲೆಯೂ ಅಷ್ಟೇ, prescribed ಬೆಲೆಯೂ ಅಷ್ಟೇ ಆಗಿದೆ. ಪಿಳ್ಳಗಾನಹಳ್ಳಿಯೂ ಅಷ್ಟೇ. ಸೀಗೆಹಳ್ಳಿಯಲ್ಲಿ 38 ಎಕರೆ 78 ಗುಂಟೆ, 168 ಕೋಟಿ 92 ಲಕ್ಷ ಮಾರ್ಗಸೂಚಿ ಬೆಲೆ, ಮಾರುಕಟ್ಟೆ ಬೆಲೆ 202 ಕೋಟಿ 71 ಲಕ್ಷ. ತಿಪ್ಪೂರಿನಲ್ಲಿ 125 ಎಕರೆ 8 ಗುಂಟೆ ಅದು ಮಾರುಕಟ್ಟೆ ಬೆಲೆ 599 ಕೋಟಿ ಮಾರ್ಗಸೂಚಿ ಬೆಲೆ 599 ಕೋಟಿ ಆಗಿದೆ. ವರಹಾಸಂದ್ರದಲ್ಲಿ 15 ಎಕರೆಗೆ 40 ಕೋಟಿ ಮಾರ್ಗಸೂಚಿ ಬೆಲೆಯಾಗಿದ್ದು 80 ಕೋಟಿ ಮಾರುಕಟ್ಟೆ ಬೆಲೆ ಆಗಿದೆ. ಬಿ.ಎಂ. ಕಾವಲು 90 ಎಕರೆ

75 ಗುಂಟೆ 513 ಕೋಟಿ ಮಾರ್ಗಸೂಚಿ ಬೆಲೆ, ಮಾರುಕಟ್ಟೆ ಬೆಲೆ ಅಷ್ಟೇ ಆಗಿದೆ. ಒಟ್ಟು 756 ಎಕರೆ 33 ಗುಂಟೆ ಭೂಮಿಗೆ ಮಾರ್ಗಸೂಚಿ ಬೆಲೆ 4951 ಕೋಟಿ. ಇವರು ಮಾರಾಟ ಮಾಡಿರುವುದು 7,777 ಕೋಟಿ. ಯಾವ ಯಾವ ಕಂಪನಿಗೆ ಮಾರಾಟ ಮಾಡಿದ್ದಾರೆ ಎಂದರೆ 4ಕ್ಕೆ ಪೂರ್ಣವಾಗಿ sale deed ಮಾಡಿದ್ದು joint venture ಕೊಟ್ಟಿರುವುದು 6ಕ್ಕೆ, ಇನ್ನುಳಿದವು ಅವರಿಗೆ pledge ಮಾಡಿರುವುದು ಮತ್ತು joint venture ನಲ್ಲಿ ಸ್ಕೀಂಗಳನ್ನು ಮಾಡಿರುವುದು. ಒಟ್ಟು 14 ಸ್ಥಳಗಳಲ್ಲಿ 19 ಪ್ರಾಜೆಕ್ಟ್‌ಗಳಿಗೆ 750 ಎಕರೆಗಳನ್ನು ಇವರು ಬಳಸಿಕೊಳ್ಳುತ್ತಾರೆ. ಸದನ ಸಮಿತಿ ಈ ವಿಚಾರದಲ್ಲಿ ಹೇಳುತ್ತದೆ ಖಾಸಗಿ ಪಾಲುದಾರರು ಎಂದರೆ 'ನೈಸ್' ಕಂಪನಿಯವರು ಟೋಲ್ ರಸ್ತೆಗೆ 6999 ವಿಸ್ತೀರ್ಣವನ್ನು ಸಮರ್ಥಿಸಿಕೊಳ್ಳಲು ಪ್ರಮಾಣ ಪತ್ರ ಹಾಗೂ ತಕರಾರು ಅರ್ಜಿಗಳಲ್ಲಿ ಜಮೀನನ್ನು ರಸ್ತೆಗೆ ಹೊರತಾಗಿ ಬೇರೆ ಯಾವುದೇ ವಾಣಿಜ್ಯ ಅಭಿವೃದ್ಧಿಗಾಗಿ ಅಥವಾ ರಿಯಲ್ ಎಸ್ಟೇಟ್ ಅಭಿವೃದ್ಧಿಗೆ ಬಳಸುವುದಿಲ್ಲ ಎಂದು ಪ್ರತಿಪಾದಿಸುವುದನ್ನು ಸಮಿತಿ ಗಮನಿಸಿದೆ. ರಸ್ತೆ ಬಿಟ್ಟು ಬೇರೆ ಯಾವುದಕ್ಕೂ ಬಳಸುವುದಿಲ್ಲ ಎಂದು ವಹಿವಾಟು ಮಾಡಿದೆ. ಈ ಪ್ರಮಾಣ ಪತ್ರಕ್ಕೆ ವ್ಯತಿರಿಕ್ತವಾಗಿ ನ್ಯಾಯಾಲಯಕ್ಕೆ ಕೊಟ್ಟ ಭರವಸೆಗಳನ್ನು ಉಲ್ಲಂಘಿಸಿ ಕ್ರಿಯಾ ಒಪ್ಪಂದವನ್ನು ಉಲ್ಲಂಘಿಸಿ ಖಾಸಗಿ ಪಾಲುದಾರರು ಸೆಕ್ಷನ್ ಎ ವ್ಯಾಪ್ತಿಯಲ್ಲಿ ಅನಧಿಕೃತ ತ್ರಿಪಕ್ಷೀಯ ಒಪ್ಪಂದದ ನೆಪದಲ್ಲಿ ಜಂಟಿ ಅಭಿವೃದ್ಧಿ ಕರಾರುಗಳನ್ನು ಜಾರಿಗೊಳಿಸಿರುವುದು ಅಕ್ರಮ ಮತ್ತು ಕಾನೂನುಬಾಹಿರ ಎಂದು ಸಮಿತಿ ತೀರ್ಮಾನಿಸುತ್ತದೆ. 7,777 ಕೋಟಿಯನ್ನು ಸರ್ಕಾರಿ ಜಮೀನಿನಲ್ಲಿ ಇಷ್ಟು ಮಾಡುತ್ತಾರೆ. ಅವರಿಗೆ ರಸ್ತೆಗೆ ಎಂದು ಕೊಟ್ಟಿದ್ದರಲ್ಲಿ ಇಷ್ಟು ಮಾಡುತ್ತಾರೆ. ಇನ್ನೊಂದು ಕರ್ಮಕಾಂಡ ಇದೆ. ಖಾಸಗಿ ಜಮೀನಿನವರಿಗೆ section 28(1) preliminary notification ನ್ನು ಮಾಡುತ್ತಾರೆ. ಅದರಲ್ಲಿ ಖಾಸಗಿಯವರ ಹತ್ತಿರ ವ್ಯವಹಾರ ಕುದುರಿಸುತ್ತಾರೆ. ರೂ. 2-10 ಲಕ್ಷಕ್ಕೆ ತೆಗೆದುಕೊಳ್ಳುತ್ತಾರೆ. 2,376 ಎಕರೆ ಜಮೀನನ್ನು ಅವರ ಬಳಿ ಒಪ್ಪಂದ ಮಾಡಿಕೊಳ್ಳುವುದು, ಇವರ ಕೈ ಇಂದ ಅರ್ಜಿ ಕೊಡಿಸುವುದು, KIADB (Karnataka Industrial Area Development Board) ಅವರಿಂದ NOC (No Objection Certificate) ಕೊಡಿಸುವುದು. ಇದು ಯಾವ ಲೋಕೋಪಯೋಗಿ ಇಲಾಖೆಯ ಗಮನಕ್ಕೂ ಬರುವುದಿಲ್ಲ. 2376 ಎಕರೆ ಜಮೀನನ್ನು ಸಂಪೂರ್ಣವಾಗಿ ಅವರ ಮನೆಯಲ್ಲಿ ಅಡುಗೆ ಮಾಡುವವನು, ಕಂಪನಿಯ ವೈಸ್ ಛೇರ್ಮನ್, ಅವರ ಕಂಪನಿಯ ನೌಕರನ ಮತ್ತು ಅವರ ಬಂಧು-

ಬಳಗದವರ ಹೆಸರಿನಲ್ಲಿ ತೆಗೆದುಕೊಳ್ಳುತ್ತಾರೆ. ಅದರ ಮೇಲೆ ಸಾವಿರಾರು ಕೋಟಿ ಅಂದರೆ 15-20 ಸಾವಿರ ಕೋಟಿ ವ್ಯವಹಾರ ನಡೆಯುತ್ತದೆ. 100, 10, 20 ಕೋಟಿ ಅಲ್ಲ.

(ಮುಂದು)

(614) 24-03-2022 KH/VK 5-00

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಮುಂದು):-**

ಇದೊಂದು ರೀತಿಯ ಪ್ರಕರಣ. ಒಂದು ಕಡೆ ಟೋಲ್ ವ್ಯವಸ್ಥೆಗೆ ಯಾವುದೇ ಷರತ್ತುಗಳನ್ನು fulfil ಮಾಡಲಿಲ್ಲ. ಇನ್ನೊಂದು ಕಡೆ ಟೋಲ್ ರಸ್ತೆಗಾಗಿ ಸ್ವಾಧೀನಪಡಿಸಿಕೊಂಡ ಜಮೀನುಗಳಲ್ಲಿ ಇಷ್ಟೊಂದು ವಹಿವಾಟು ಅನ್ನು ಖಾಸಗಿ ಜಮೀನಿನಲ್ಲಿ ಪ್ರತ್ಯೇಕವಾಗಿ ಅವರೇ ನೇರವಾಗಿ ಸೇಲ್ ಡೀಡ್ ಮಾಡಿಕೊಂಡಿದ್ದು, ಇದರ ಜೊತೆಗೆ ಸರ್ಕಾರಿ ರಸ್ತೆಗೆ ಬಂದಂತಹ ಜಮೀನನ್ನು 7,777 ಕೋಟಿ ರೂಪಾಯಿಗಳಿಗೆ ಮಾರಾಟ ಮಾಡಿದ್ದಾರೆ. ಆದರೆ, ಮಾನ್ಯ ಸಚಿವರೇ, ಇವರು ಇಷ್ಟು ಜಮೀನಿಗೆ 150 ಕೋಟಿ ರೂಪಾಯಿಗಳ ಪರಿಹಾರ ಹಣವನ್ನು ಕಟ್ಟಿದ್ದಾರೆ. ಇದೇ ಆಸ್ತಿಯನ್ನು ಐಸಿಐಸಿ ಬ್ಯಾಂಕ್‌ನಲ್ಲಿ pledge ಮಾಡಿ ಕಟ್ಟಿರುತ್ತಾರೆ. ಅದರಲ್ಲಿ ರೈತರಿಗೆ 145 ಕೋಟಿ ರೂಪಾಯಿಗಳ ಪರಿಹಾರ ಹಣ ಸಂದಾಯವಾಗಿರುತ್ತದೆ. 145 ಕೋಟಿ ರೂಪಾಯಿಗಳ ಹಣ ಕೊಟ್ಟು, ನಾವು ಕೊಟ್ಟ ಜಮೀನಿನಲ್ಲಿ ಇವತ್ತು ಕನಿಷ್ಠ 10 ರಿಂದ 15 ಸಾವಿರ ಕೋಟಿ ರೂಪಾಯಿಗಳ ಹಣವನ್ನು ಸಂಪಾದನೆ ಮಾಡಿಕೊಳ್ಳುತ್ತಾರೆ. ಇದು ಯಾವ ಜಮೀನು ಎಂದರೆ, 30 ವರ್ಷಗಳು ಆದ ಮೇಲೆ ಯೋಜನೆ ಸಮೇತ ಸರ್ಕಾರಕ್ಕೆ ವಾಪಸ್ಸು ಕೊಡಬೇಕಾದಂತಹ ಜಮೀನು ಆಗಿದೆ. ಇದನ್ನು ಸಂಪೂರ್ಣವಾಗಿ ಖರೀದಿ ಮಾಡಿಬಿಟ್ಟಿದ್ದಾರೆ. ಈಗ ಆ ಜನ ರಸ್ತೆಯ ಜಾಗದಲ್ಲಿ ಆಪಾರ್ಟ್‌ಮೆಂಟ್ ಮಾಡಿದವನು, ರಸ್ತೆಯ ಜಾಗದಲ್ಲಿ ಲೇಔಟ್ ಮಾಡಿದವನು, ರಸ್ತೆಯ ಜಾಗದಲ್ಲಿ ಬೇರೆ ಬೇರೆ ಕಮರ್ಷಿಯಲ್ ಉದ್ದೇಶಗಳಿಗೆ ಬಳಸಿಕೊಂಡಂತಹವನು, ಹೇಗೆ ವಾಪಸ್ಸು ತಂದುಕೊಡುತ್ತಾನೆ? ಇದು ತಮ್ಮಲ್ಲಿ ಕೇಳುವಂತಹ ವಿಚಾರ ಮತ್ತು ಈ ಸದನ ಸಮಿತಿ ಪ್ರಶ್ನೆ ಮಾಡಿರುವಂತಹ ವಿಚಾರವಾಗಿದೆ. ಮತ್ತೊಂದು ಭೂಪರಿಹಾರದ

ಮಹತ್ವದ ವಿಚಾರವೇನೆಂದರೆ, 1916 ಎಕರೆ township ಗಾಗಿ ಇವರು ಸ್ವಾಧೀನಪಡಿಸಿಕೊಳ್ಳುತ್ತಾರೆ. ಸದನದಲ್ಲಿ ನಮ್ಮ ಶಾಸಕರು ಇದ್ದಾರೆ. ನಮ್ಮ ಶಾಸಕರ ಜಮೀನು ಸೇರಿದ ಹಾಗೆ ಸ್ವಾಧೀನಪಡಿಸಿಕೊಳ್ಳುತ್ತಾರೆ. ಇವರಿಗೆ ಪರಿಹಾರ ಕೊಡುವುದಕ್ಕೆ ಒಂದು ತಕರಾರು ಪ್ರಾರಂಭವಾಗುತ್ತದೆ. ಜಿಲ್ಲಾಧಿಕಾರಿಗಳ ಸಮಿತಿಯಲ್ಲಿ 1 ಎಕರೆಗೆ 40 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ತೀರ್ಮಾನವಾಗುತ್ತದೆ. 1 ಎಕರೆಗೆ 40 ಲಕ್ಷ ರೂಪಾಯಿಗಳನ್ನು ಎಲ್ಲಿ ಕೊಡುವುದಕ್ಕೆ ಆಗುತ್ತದೆ ಎಂದು ನೈಸ್ ಕಂಪನಿಯ Ashok Kheny ಯವರು ಕೋರ್ಟ್‌ಗೆ ಹೋಗುತ್ತಾರೆ. ನಂತರ 2014 ರಲ್ಲಿ ಹೊಸ land Act ಬರುತ್ತದೆ. ಹೊಸ land Act ನಲ್ಲಿ ಬಹಳ ದುಪ್ಪಟ್ಟಾಗಿ ಪರಿಹಾರ ಕೊಡಬೇಕಲ್ಲವೇ? ಅವರು ತಕ್ಷಣವೇ ಕೇಸ್ ಅನ್ನು immediate withdraw ಮಾಡಿಬಿಡುತ್ತಾರೆ. ವಿತ್ ಡ್ರಾ ಮಾಡಿ 40 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳುತ್ತಾರೆ. ಇಲ್ಲಾ, ಹೊಸ land Act ಪ್ರಕಾರವೇ ಹಣವನ್ನು ಕೊಡಿ ಎಂದು ರೈತರು ಹೇಳುತ್ತಾರೆ. ರೈತರು ಕೇಳುವುದು ಸರಿಯಲ್ಲವೇ? 1916 ಎಕರೆ ಜಾಗವನ್ನು township ನವರು ಏನು ಬೇಕಾದರೂ ಮಾಡಿಕೊಳ್ಳಬಹುದು. ಆದರೆ, ರೈತರಿಗೆ ಇನ್ನು ಯಾವುದೇ ಪರಿಹಾರವನ್ನು ಕೊಟ್ಟಿಲ್ಲ. 1916 ಎಕರೆ ಜಾಗಕ್ಕೆ ಯಾವುದೇ ರೀತಿ ಪರಿಹಾರವನ್ನು ಇಲ್ಲಿಯವರೆಗೂ ಯಾರಿಗೂ ಪಾವತಿ ಮಾಡಿಲ್ಲ. ಮಾನ್ಯ ಮುನಿರಾಜುಗೌಡರವರೇ ನಾನು ಸತ್ಯ ಹೇಳುತ್ತಿದ್ದೇನೆಯಲ್ಲವೇ? ಹಾಗಾಗಿ 1916 ಎಕರೆಯ ರೈತರು ಇವತ್ತಿನ ದಿವಸ ಕಂಗಾಲಾಗಿ ಹೋಗಿದ್ದಾರೆ. ಅವರ ಪರಿಸ್ಥಿತಿ ಹೇಳಲು ಸಾಧ್ಯವಾಗುವುದಿಲ್ಲ. ಮೂರನೆಯದಾಗಿ, ನಮ್ಮ ಈ ಯೋಜನೆ ಬೆಂಗಳೂರಿನಿಂದ ಪ್ರಾರಂಭವಾಗಿ ಮೈಸೂರಿಗೆ ತಲುಪುತ್ತದೆ. ಬೆಂಗಳೂರು ಗ್ರಾಮಾಂತರ, ರಾಮನಗರ ಜಿಲ್ಲೆ, ಮಂಡ್ಯ ಜಿಲ್ಲೆ, ಮೈಸೂರು ಜಿಲ್ಲೆ ಬರುತ್ತದೆ. ನಮ್ಮ ಮಂಡ್ಯ ಜಿಲ್ಲೆಯಲ್ಲಿ ಮದ್ದೂರು ತಾಲ್ಲೂಕು, ಮಂಡ್ಯ ತಾಲ್ಲೂಕು, ಶ್ರೀರಂಗಪಟ್ಟಣ ತಾಲ್ಲೂಕು ಎಲ್ಲಾ ಸೇರುತ್ತದೆ. ಆರಂಭದಲ್ಲಿ 18 ಸಾವಿರ ಎಕರೆಯನ್ನು 28/1 preliminary notification ಮಾಡಿಬಿಡುತ್ತಾರೆ. ಇದು ನಮ್ಮ ಸರ್ಕಾರದ ನೋಟಿಫಿಕೇಷನ್ ರೀತಿಯಾಗಿ ಇರುವುದಿಲ್ಲ. 3 ವರ್ಷಗಳಾದ ಮೇಲೆ laps ಆಗುತ್ತದೆಯಲ್ಲವೇ? ಆ ರೀತಿಯಲ್ಲ. Preliminary notification ಆದ ಮೇಲೆ ನಮ್ಮ ರೈತ ಅಲ್ಲಿ ಏನು ಮಾಡುವಹಾಗಿಲ್ಲ. ಅಲ್ಲಿ ಭತ್ತ, ರಾಗಿ ಬೆಳೆದುಕೊಳ್ಳಬಹುದಷ್ಟೇ. ತೆಂಗು ಹಾಕುವ ಹಾಗಿಲ್ಲ. ಬೇರೆ ಮರಗಳನ್ನು ಬೆಳೆಸುವ ಹಾಗಿಲ್ಲ. ಮನೆಗಳನ್ನು ಕಟ್ಟುವ ಹಾಗಿಲ್ಲ.

ಅದನ್ನು ಅಡವಿಡುವ ಹಾಗಿಲ್ಲ. ಭಾಗ ಮಾಡಿಕೊಳ್ಳುವ ಹಾಗಿಲ್ಲ. ಖಾತೆ ಬದಲಾವಣೆ ಮಾಡುವ ಹಾಗಿಲ್ಲ. 2 ½ ಯಿಂದ 3 ಕಿ.ಮೀ ಸುತ್ತಳತೆಯಲ್ಲಿ ಏನೇ construction ಮಾಡಬೇಕಾದರೂ, ಈ ಬಿಎಂಐಸಿ Ashok Kheny Office ಗೆ ಬಂದು ನಮ್ಮ ಜನ ಎನ್‌ಒಸಿ ತೆಗೆದುಕೊಂಡು ಹೋಗಬೇಕು. ಬಿಎಂಐಸಿಗೆ ಒಂದು ಕಛೇರಿಯನ್ನು ಮಾಡಿಕೊಂಡಿದ್ದಾರೆ. ಇವರಿಂದ ಎನ್‌ಒಸಿ ತೆಗೆದುಕೊಂಡರೆ ಮಾತ್ರ ಅವರು ಏನಾದರೂ ವಹಿವಾಟು, ವ್ಯವಹಾರ ಮಾಡುವುದಕ್ಕೆ ಸಾಧ್ಯ. ಮಾನ್ಯ ಸಚಿವರೇ, ಕಳೆದ 24 ವರ್ಷಗಳಿಂದ 18 ಸಾವಿರ ಎಕರೆ ರೈತರ ಪಾಡು ಕಣ್ಣೀರು ಹಾಕುವುದೊಂದೇ ಉಳಿದಿದೆ. ತಾವು Land Act 2014ರ ಪ್ರಕಾರ ಪ್ರಾಜೆಕ್ಟ್ ಮಾಡಿ ಪರಿಹಾರ ಕೊಡಲಿಲ್ಲ. ಇದರ ಬಗ್ಗೆ ಪ್ರಶ್ನೆಯೇ ಮಾಡಲಿಲ್ಲ. ತಾವು ರಸ್ತೆ ಮಾಡದೇ ಅವರು ಯಾವ ವಹಿವಾಟು ಮಾಡುವುದಕ್ಕೂ ಬಿಡಲಿಲ್ಲ. ಇದನ್ನು 2014ರೊಳಗೆ ಮುಗಿಸಬೇಕೆಂಬ ನಿಯಮ ಇದೆ. ಅವರ ಜೊತೆ ಒಪ್ಪಂದ ಆಗಿದೆ. Peripheral ring road 2012ರೊಳಗೆ ಮುಗಿಸಬೇಕೆಂದರೆ, conditions ಗೆ ಒಳಪಟ್ಟು ಬೆಂಗಳೂರು–ಮೈಸೂರು ರಸ್ತೆಯನ್ನು 2016 ರೊಳಗೆ ಪೂರ್ಣ ಮಾಡಬೇಕು. ಇನ್ನು ಕಾರ್ಯಕ್ರಮವನ್ನು ಚಾಲನೆ ಮಾಡುವಂತಹ ಯಾವ ಸೂಚನೆಗಳು ಇಲ್ಲ. ಈ ಎರಡು ಮಹತ್ವದ ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾಗಿದೆ. 2016 ರಲ್ಲಿ ಮತ್ತೆ ಸರ್ಕಾರ ಈ ಜಮೀನುಗಳನ್ನೆಲ್ಲಾ ಅಡ ಇಟ್ಟು ಐಡಿಬಿಐ ಬ್ಯಾಂಕ್‌ನಲ್ಲಿ 2,160 ಕೋಟಿ ರೂಪಾಯಿಗಳನ್ನು ಮತ್ತೆ ಸಾಲವಾಗಿ ತೆಗೆದಿದ್ದಾರೆ. ಮಾನ್ಯ ಸಚಿವರಾದ ಮುರುಗೇಶ್ ನಿರಾಣಿಯವರಿಗೆ ಇದರ ಬಗ್ಗೆ ತಿಳಿದುಕೊಳ್ಳುವಂತಹ ಶಕ್ತಿ ಇದೆ. ಇದರಲ್ಲಿ 1,500 ಕೋಟಿ ರೂಪಾಯಿಗಳು ಡೆನ್ಮಾರ್ಕ್‌ಗೆ ಹೋಗಿದೆ ಎನ್ನುವ ಸುದ್ದಿ ಇದೆ. ಎಲ್ಲಿ ಹೋಯಿತು, ಏಕೆ ಹೋಯಿತು, ಏನಾಯಿತು ಎನ್ನುವ ಬಗ್ಗೆ ತಾವು ಖಚಿತಪಡಿಸಿಕೊಳ್ಳಬೇಕು. ಇವತ್ತು 200 ವರ್ಷಗಳ ಕಾಲ ಕಾವೇರಿ ವಿಚಾರದ ಹೋರಾಟದಲ್ಲಿ ಗಟ್ಟಿಯಾಗಿ ನಿಂತಿರುವವರು ಮಾನ್ಯ ಹೆಚ್.ಡಿ.ದೇವೇಗೌಡರವರು ಒಬ್ಬರೇ. ಇವರು tribunal face ಮಾಡಿದರು. ನಂತರ ಸುಪ್ರೀಂ ಕೋರ್ಟ್‌ವರೆಗೂ ಹೋದರು. 14.75 ಟಿಎಂಸಿ. ನೀರನ್ನು ತಂದುಕೊಟ್ಟರು. ಬೆಂಗಳೂರಿಗೆ ಕುಡಿಯುವ ನೀರನ್ನು ತಂದುಕೊಟ್ಟರು. ಅವರು ಛಲ ಬಿಡದ ತ್ರಿವಿಕ್ರಮರೆನ್ನಬಹುದು. ಇವತ್ತು ಸುಪ್ರೀಂ ಕೋರ್ಟ್ ಎಲ್ಲಾ ಹಳೆಯ ಆದೇಶಗಳನ್ನು ಹೊಡೆದುಹಾಕಿದೆ ಎಂದರೆ, ಅದರ ಹಿಂದೆ ಮಾನ್ಯ ಹೆಚ್.ಡಿ.ದೇವೇಗೌಡರವರ ಪಾತ್ರ ಇದೆ. ಇವತ್ತು ಹತ್ತಾರು ಜನ ರೈತರು ಬಲಿಯಾಗಿ ಹೋಗಿದ್ದಾರೆ. ಈ

18 ಸಾವಿರ ಎಕರೆಯ ಒಂದೂ ಕಾಲು ಲಕ್ಷ ಜನ ರೈತರು ಪ್ರತಿದಿನ ಪರಿತಪಿಸುತ್ತಿದ್ದಾರೆ ಮತ್ತು ಕಣ್ಣೀರು ಹಾಕುತ್ತಿದ್ದಾರೆ. ಅವರ ಜಮೀನನ್ನು ಏನು ಮಾಡುವ ಹಾಗಿಲ್ಲ, ಮುಟ್ಟುವ ಹಾಗಿಲ್ಲ, ಅನುಭವಿಸುವ ಹಾಗಿಲ್ಲ. ಅವನ ತಾತನ ಪಿತ್ರಾರ್ಜಿತ ಆಸ್ತಿಯನ್ನು ಇವತ್ತು ಯಾರು ಮುಟ್ಟದೇ ಇರುವಂತಹ ಪರಿಸ್ಥಿತಿಯನ್ನು ಇವರು ನಿರ್ಮಾಣ ಮಾಡಿಬಿಟ್ಟಿದ್ದಾರೆ. ಇವತ್ತು ಒಂದು ಹಂತದಲ್ಲಿ 150 ಕೋಟಿ ರೂಪಾಯಿಗಳ ಸಾಲ, ಇನ್ನೊಂದು ಹಂತದಲ್ಲಿ 2060 ಕೋಟಿ ರೂಪಾಯಿಗಳ ಸಾಲ ಮಾಡಿದ್ದಾರೆ. ಆವತ್ತಿನ ದಿವಸ ಐಸಿಐಸಿ ಬ್ಯಾಂಕ್‌ನಲ್ಲಿ ಸಾಲ. ಇವತ್ತು ಐಡಿಬಿಐ ಬ್ಯಾಂಕ್‌ನಲ್ಲಿ ಸಾಲ ಮಾಡಿದ್ದಾರೆ. ಪ್ರತಿದಿನ ಸುಮಾರು 2 ಕೋಟಿ ರೂಪಾಯಿಗಳು ಟೋಲ್‌ನಲ್ಲಿ ಹಣ ಸಂಗ್ರಹವಾಗುತ್ತದೆ. ಇದು ಯಾರ ಹಣ? ನಾನು ನೆನ್ನೆಯ ದಿವಸ ಹೇಳಿದ್ದೆ. ಆದರೆ, ತಾವು ಸದನದಲ್ಲಿ ಇರಲಿಲ್ಲ. ಬಹಳ ಜನ ದಾರ ಬುಗುರಿ ಇಟ್ಟುಕೊಂಡು ಆಟವಾಡುತ್ತಾರೆ, ಮೊದಲು ಬುಗುರಿ ಇಡುತ್ತಾರೆ, ಇಲ್ಲದಿದ್ದರೆ ದಾರ ಇಡುತ್ತಾರೆ, ಎರಡು ಇಲ್ಲದೇ ಆಡಿಸಿರುವ ಮನುಷ್ಯನೆಂದರೆ, ಈ ನೈಸ್ ಕಂಪನಿಯವನು ಎಂದು ಹೇಳುತ್ತೇನೆ. ನಾವು ಏನು ತಿಳಿದುಕೊಂಡಿದ್ದೇನೆ ಎಂದರೆ, ಅಮೇರಿಕಾದ ಕಂಪನಿಗಳು ಸ್ವಂತ ಬಂಡವಾಳ ಹಾಕಬೇಕೆಂದು ಇಲ್ಲಿ ಒಪ್ಪಂದವಾಗಿರುವುದು, ಲೋನ್ ತೆಗೆಯುವ ಹಾಗಿಲ್ಲ. ಸ್ವಂತ ಬಂಡವಾಳ ಹೂಡುವ ಕಾರಣಕ್ಕಾಗಿ ನಾವು ಭೂಮಿ ಕೊಡುತ್ತೇವೆ, ತಾವು ರಸ್ತೆ ಮಾಡಿ ಎಂದು ಆಗಿದೆ. ಈಗ ಏನಾಗಿದೆಯೆಂದರೆ, ಈಗ ನೀನು ಭೂಮಿ ಕೊಡು, ನಾನು ಹಣ ಮಾಡುತ್ತೇನೆ ಎಂದು ಹೇಳುತ್ತಾರೆ. ಇದಕ್ಕೆ ಅಗ್ರಿಮೆಂಟ್ ಪುಸ್ತಕ ಎಲ್ಲಾ ಕೂಡ ಸ್ಪಷ್ಟವಾಗಿ ಇದೆ. Arbitration ಗೆ ಹೋಗಬೇಕಾದರೆ, ಇಲ್ಲಿಗೆ ಯಾರು ಹೋಗುವ ಹಾಗಿಲ್ಲ. ಲಂಡನ್ ಕೋರ್ಟ್‌ಗೆ ಹೋಗಬೇಕು. ಅಗ್ರಿಮೆಂಟ್ ಮಾಡಿಕೊಂಡ ಮರು ವರ್ಷಕ್ಕೆ ಆ ಕಂಪನಿಯವರು ಹೊರಟು ಹೋಗುತ್ತಾರೆ. ಮತ್ತೆ ಈ ಮನುಷ್ಯ ಎಂಟರ್ ಆಗುತ್ತಾನೆ, ಹಾಗಾಗಿ, ಮಾನ್ಯ ಸಚಿವರೇ, arbitration ಗೆ ಹೋಗಬೇಕೆಂದರೆ, ಲಂಡನ್‌ಗೆ ಹೋಗಬೇಕು. ನಮ್ಮ ಸುದೈವ, ನಮ್ಮ ಅದೃಷ್ಟ ನಮ್ಮ ಪರವಾಗಿ ಇವತ್ತು ಸುಪ್ರೀಂ ಕೋರ್ಟ್ ನಿಂತಿದೆ. Framework ಏನಿತ್ತು, fundamental framework ಗೆ stick-on ಆಗಿದೆ. 20,190 ಎಕರೆಗೆ ನಿಲ್ಲಿಸಿದೆ. ಈಗ ನನ್ನ ಪ್ರಶ್ನೆಯೇನೆಂದರೆ, ಮಾನ್ಯ ವಿರೋಧ ಪಕ್ಷದ ನಾಯಕರೇ, ಒಂದು ಕಡೆ ಲೋನ್, ಇನ್ನೊಂದು ಕಡೆ ಇಷ್ಟೆಲ್ಲಾ ವ್ಯವಹಾರ ಏಕೆ ಪ್ರಾರಂಭವಾಯಿತು? ಇವತ್ತು ಕೆ.ಐ.ಎ.ಡಿ.ಬಿ.ರವರು ರೈತರ ಜಮೀನನ್ನು ಸ್ವಾಧೀನಪಡಿಸಿಕೊಂಡು Ashok Kheny ಯವರಿಗೆ ರಸ್ತೆ

---

ಮಾಡುವುದಕ್ಕೆ ಕೊಟ್ಟಿದ್ದಾರೆ. ನಮ್ಮ ಮೆಟ್ರೋ ಯೋಜನೆಯನ್ನು ಮಾಡುವುದಕ್ಕೆ ಕೊಟ್ಟಿಲ್ಲ. ಇದು ಸರ್ಕಾರದ ಜಮೀನು. ಸರ್ಕಾರದ ಜಮೀನನ್ನು 30 ವರ್ಷಗಳು ಆದ ಮೇಲೆ ವಾಪಸ್ಸು ಕೊಡಬೇಕೆನ್ನುವುದು ಪ್ರಾಜೆಕ್ಟ್. ನಮ್ಮ ಮೆಟ್ರೋ ಯೋಜನೆಗೆ ಇದೇ ಕೆಐಎಡಿಬಿ. ಅಧಿಕಾರಿಗಳು ಮತ್ತೆ ನೋಟಿಫಿಕೇಷನ್ ಅನ್ನು Ashok Kheny ರವರಿಂದ ಮಾಡಿಕೊಳ್ಳುತ್ತಾರೆ. Negotiation ಮಾಡುವುದಕ್ಕೆ 100 ಕೋಟಿ ರೂಪಾಯಿಗಳನ್ನು ಕೇಳುತ್ತಾರೆ. ನಂತರ 50 ರಿಂದ 60 ಕೋಟಿ ರೂಪಾಯಿಗಳಿಗೆ ಬರುತ್ತಾರೆ. ಈಗಾಗಲೇ 14 ಕೋಟಿ ರೂಪಾಯಿಗಳ ಪೇಮೆಂಟ್ ಆಗಿ ಹೋಯಿತು. ಇದು ಸರ್ಕಾರಕ್ಕೆ ಬರಬೇಕೆಂದು ಹೇಳಿದ ತಕ್ಷಣ ಕೋರ್ಟ್‌ನಿಂದ ತಡೆಯಾಜ್ಞೆಯನ್ನು ತೆಗೆದುಕೊಂಡು ಬಂದರು. ತಡೆಯಾಜ್ಞೆ ತೆಗೆದುಕೊಂಡು ಬರುವುದಕ್ಕೆ ನಮ್ಮ ಅಧಿಕಾರಿಗಳೇ ಪರವಾಗಿ ನಿಂತುಕೊಂಡರು. No. This is Government land. ಇದು ಸರ್ಕಾರಕ್ಕೆ ಬರಬೇಕು. ಕಂಪನಿಗೆ ಹಣ ಏಕೆ ಹೋಗಬೇಕು? ಇದು ನನ್ನ ಆಸ್ತಿ. ಇವತ್ತು ನಮ್ಮ ಮೆಟ್ರೋ ಯೋಜನೆಗೆ ಮತ್ತೆ 150 ಕೋಟಿ ರೂಪಾಯಿಗಳನ್ನು ಕೊಡುವಂತಹ ಹುನ್ನಾರ. ಈಗಾಗಲೇ ಒಂದು ಕಂತು ಕೊಟ್ಟಿದ್ದಾರೆ. ಅದಕ್ಕೆ ಮೊದಲೇ ತಡೆಯಾಜ್ಞೆ ತೆಗೆದುಕೊಂಡಿದ್ದಾರೆ. ಒಂದು ಕಡೆ 2,160 ಕೋಟಿ ರೂಪಾಯಿಗಳ ಹಣ ಪಡೆಯುತ್ತಾನೆ. ಇನ್ನೊಂದು ಕಡೆ 150 ಕೋಟಿ ರೂಪಾಯಿಗಳ ಸಾಲ ಪಡೆಯುತ್ತಾನೆ. ಮತ್ತೆ ನಮ್ಮ ಮೆಟ್ರೋ ಯೋಜನೆಗೆ ಕೊಟ್ಟು, ಇವತ್ತು 60 ರಿಂದ 70 ಕೋಟಿ ರೂಪಾಯಿಗಳ ಹಣ ಹೊಡೆಯುವಂತಹ ವ್ಯವಹಾರ ನಡೆಯುತ್ತಿದೆ. ಪ್ರತಿದಿನ ಟೋಲ್ ನಿಂದ 2 ಕೋಟಿ ರೂಪಾಯಿಗಳು ಬರುತ್ತಿದೆ. ಇನ್ನು ರಿಯಲ್ ಎಸ್ಟೇಟ್ ವ್ಯವಹಾರದ ಬಗ್ಗೆ ಕೇಳಬಿಟ್ಟರೆ, ತಾವು ಸುತ್ತಮುತ್ತ ಹೋಗಿ ನೋಡಿದರೆ ಗೊತ್ತಾಗುತ್ತದೆ. ಇದರ ಜೊತೆಗೆ ಇನ್ನೊಂದು ಇದೆ. ಅಲ್ಲಿ ನಿರಂತರವಾಗಿ ಗಣಿಗಾರಿಕೆ ನಡೆಯುತ್ತಿದೆ. ಬೇನಾಮಿ ಇದೇ ಮನುಷ್ಯ ಪ್ರತಿನಿತ್ಯ ಲಕ್ಷಗಟ್ಟಲೆ ವ್ಯವಹಾರದ ಗಣಿಗಾರಿಕೆಯನ್ನು ನಡೆಸುತ್ತಿದ್ದಾನೆ. 'No Asker, No Teller.' ಇದಕ್ಕೆ ಹೇಳುವವರು ಇಲ್ಲ, ಕೇಳುವವರು ಇಲ್ಲ. ಪ್ರತಿದಿನ ಹಣ ಹರಿದು ಬರುತ್ತಿದೆ. ಒಂದು ಕಡೆ ಗಣಿಗಾರಿಕೆ, ಇನ್ನೊಂದು ಕಡೆ ರಿಯಲ್ ಎಸ್ಟೇಟ್, ಮತ್ತೊಂದು ಕಡೆ ಜನರನ್ನು ಎದುರಿಸಿ ಅಗ್ರಿಮೆಂಟ್ ಹಾಕಿಕೊಂಡು ಮಾರಾಟ ಮಾಡುವುದು, ಇನ್ನೊಂದು ಕಡೆ ಸಾಲ ತೆಗೆಯುವುದು, ಇನ್ನೊಂದು ಕಡೆ ಟೋಲ್ ಸಂಗ್ರಹಣೆ; ಇವತ್ತು ಎಲ್ಲಿಯವರೆಗೆ ಹೋಗಿದೆ ಎಂದರೆ, ನಮ್ಮ ಮುನಿರಾಜುರವರಂತಹ ರೈತರು ಲಾಯರ್‌ಗಳ ಕಡೆ ಹೋದರೆ ಯಾವುದೇ

ಲಾಯರ್‌ಗಳು ಸಿಗುವುದಿಲ್ಲ. ಏಕೆಂದರೆ, ಅವರಿಗೆ 108 ಪ್ರಕರಣಗಳು ಇರುತ್ತವೆ. ಎಲ್ಲಾ ಲಾಯರ್‌ಗಳನ್ನು ಈ ಮನುಷ್ಯನೇ ಎಂಗೇಜ್ ಮಾಡಿಕೊಂಡು ಬಿಟ್ಟಿದ್ದಾನೆ. ಯಾವುದೇ ಲಾಯರ್ ಅನ್ನು ಕೇಳಿದರೆ, "ಖಾಲಿ ಇಲ್ಲ" ಎಂದು ಹೇಳುತ್ತಾರೆ. ಇವತ್ತು ರೈತರು ಅಕ್ಷರಶಃ ಕಣ್ಣೀರು ಹಾಕುತ್ತಿದ್ದಾರೆ. ಈ ಎಲ್ಲಾ ವ್ಯವಹಾರಗಳನ್ನು ನೋಡಿದರೆ, ಸಾವಿರಾರು ಎಕರೆಯನ್ನು ತೆಗೆದುಕೊಂಡು preliminary notification ಮಾಡಿ, 2,386 ಎಕರೆಯನ್ನು ಕೈಬಿಡಿಸಿ, ಅದಕ್ಕೆ ಎನ್.ಓ.ಸಿ. ಕೊಡಿಸಿ, ಅಷ್ಟನ್ನು ತಾನು ಕಬಳಿಸಿಕೊಂಡು, ಅದನ್ನು ಮತ್ತೆ ಮಾರಾಟ ಮಾಡಿ, ಅದರಲ್ಲಿ ಸಾವಿರಾರು ಕೋಟಿ ರೂಪಾಯಿಗಳನ್ನು ಮಾಡುವುದಲ್ಲದೇ, ರಸ್ತೆಗಾಗಿ ಕೊಟ್ಟಿರುವಂತಹ ಜಮೀನನ್ನು 7,777 ಕೋಟಿ ರೂಪಾಯಿಗಳಿಗೆ ಮಾರಾಟ ಮಾಡಿರುವ ಈ ಮನುಷ್ಯ ಕೇವಲ 145 ಕೋಟಿ ರೂಪಾಯಿಗಳನ್ನು ಪರಿಹಾರವಾಗಿ ಕೊಟ್ಟಿದ್ದಾನೆ.

(ಮುಂದು)

(615)24-03-2022(05-10)lm(bsd)-vk

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಮುಂದು)**

ಅದಕ್ಕಾಗಿ ಈ ಮನುಷ್ಯ ಕೇವಲ ರೂ.145 ಕೋಟಿಗಳನ್ನು ಕಟ್ಟಿದ್ದಾನೆ. ಇದರಿಂದ ಹೆಚ್ಚು ಲಾಭ ಆಯಿತು, ಇನ್ನು ಗುಣಮಟ್ಟದ ರಸ್ತೆ ನಿರ್ಮಾಣವಾಗಲಿಲ್ಲ. ಇಲ್ಲಿ ಐದಾರು ಸಾವಿರ ಕೋಟಿ ರೂಪಾಯಿಗಳು Toll ನಲ್ಲಿ collection ಆಗುತ್ತಿದೆ. ಇನ್ನು ಬೆಂಗಳೂರು-ಮೈಸೂರು ರಸ್ತೆಯನ್ನು ಮುಟ್ಟಲೇ ಇಲ್ಲ ಹಾಗೂ ಮುಟ್ಟುವ ಯಾವ ಸೂಚನೆಗಳು ಇಲ್ಲ, ರೈತರಿಗೆ ಬೆಂಗಳೂರು-ಮೈಸೂರು road ಇಲ್ಲ, ಏನೂ ಇಲ್ಲ. ಅಂದು accident ಆಗಿ 15 ಮಕ್ಕಳು ಸತ್ತಿದ್ದು, ಇದನ್ನು ತಡೆಗಟ್ಟಲು ಪರ್ಯಾಯವಾಗಿ Express Highway ಬರಲಿ ಎಂದು ಮಾನ್ಯ ದೇವೇಗೌಡರು ಕನಸು ಕಂಡರೆ ಇಂತಹ ಪರಿಸ್ಥಿತಿ ಆಗುವುದೇ? ಇದಕ್ಕೆ ಒಂದು ವಿಶೇಷ ಕಾಯ್ದೆಯನ್ನು ತರಬೇಕು. ಇವತ್ತು Bank, ಖಾಸಗಿ ಸಂಸ್ಥೆಗಳನ್ನು ರಾಷ್ಟ್ರೀಕರಣ ಮಾಡಲಿಲ್ಲವೇ? ನಮ್ಮ ಆಸ್ತಿ, ನಮ್ಮ ಯೋಜನೆಯಲ್ಲಿ ಉಂಡಿದ್ದು ಸಾಕು, ಕೊಂಡಿದ್ದು ಸಾಕು, ಕೊಳ್ಳೇ ಹೊಡೆದದ್ದು ಸಾಕು, ಇನ್ನು ಎಷ್ಟು ದಿವಸ ಸಹಿಸಿಕೊಳ್ಳುತ್ತಾರೆ? ಎಷ್ಟು ರೈತರನ್ನು ಬಲಿ ಪಡೆಯುತ್ತಾರೆ? ನಾನು ಅವರನ್ನು ಬೆಟ್ಟು ಮಾಡಿ ತೋರಿಸದೇ ಎಷ್ಟು ಜನ

ರೈತರನ್ನು ಈ ಯೋಜನೆಗೆ ಬಲಿಕೊಡುವುದು? ಇವತ್ತು ಇಡೀ ಯೋಜನೆಯನ್ನು ಸರ್ಕಾರ takeover ಮಾಡಿಕೊಳ್ಳಬೇಕು. ರಾಷ್ಟ್ರೀಕರಣ ಮಾಡಿಕೊಂಡು National Highway Authority of India ಗೆ handover ಮಾಡಲಿ, ನಮ್ಮ ತಕರಾರು ಇಲ್ಲ, ಏಕೆಂದರೆ it's a Government Authority. ಅವರು ಮೂರ್ನಾಲ್ಕು ಪಟ್ಟು ರೈತರಿಗೆ ಪರಿಹಾರ ಕೊಡುತ್ತಾರೆ!. ನಮಗೆ ರಸ್ತೆ ಬೇಕು ಹಾಗೂ ರಸ್ತೆ ಸಾಕು. ಯಾವ township ನಮಗೆ ಬೇಡ. Township ಹೆಸರಿನಲ್ಲಿ ಆಗಿದ್ದನ್ನು ನಾನು ನೋಡಿದ್ದೇನೆ. ರಸ್ತೆ ಹೆಸರಿನಲ್ಲಿ ಆಗಿದ್ದನ್ನು ನೋಡಿದ್ದೇನೆ. ಒಂದು ನಯಾ ಪೈಸೆ ತರದೇ ಸಾವಿರಾರು ಎಕರೆಗಳ ಜಮೀನಿನ ಮೂಲಕ ಸಾವಿರಾರು ಕೋಟಿ ರೂಪಾಯಿಗಳನ್ನು ಕಬಳಿಸಿರುವ ಈ ವ್ಯವಹಾರವನ್ನು ಕಣ್ಣುಮುಚ್ಚಿ ಕುಳಿತುಕೊಂಡು ನೋಡಬೇಕೇ? ಇನ್ನು ಈ ರೀತಿಯ ನಿರಂತರವಾದ ಶೋಷಿತ ಯೋಜನೆಯಾಗಲು ಬಿಡಬೇಕೆ? ಇನ್ನು ನಿರಂತರವಾಗಿ ಹಣವನ್ನು ಕೊಳ್ಳೆ ಹೊಡೆಯಲು ಬಿಡಬೇಕೆ? ನಾನು ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ, ಸರ್ಕಾರ ಗಟ್ಟಿಯಾದ ನಿರ್ಣಯವನ್ನು ಮಾಡಬೇಕು, ಇದಕ್ಕೆ ಎಲ್ಲರ ಸಹಮತ ಇದೆ. ಸುಮಾರು 400 ಪುಟಗಳ ಸದನ ಸಮಿತಿ ವರದಿ ಮೇಲೆ cabinet ಉಪ ಸಮಿತಿಯಲ್ಲಿ ಲೋಕೋಪಯೋಗಿ ಸಚಿವರಾದ ಶ್ರೀ ಸಿ.ಸಿ. ಪಾಟೀಲರು ಸಹಿ ಮಾಡಿದ್ದಾರೆ. ಶ್ರೀ ಜಾರಕಿಹೊಳಿ ರವರು, ಶ್ರೀ ಎಸ್.ಟಿ. ಸೋಮಶೇಖರ್ ಮತ್ತು ಶ್ರೀ ಆರ್. ಅಶೋಕ್ ರವರು ಇದ್ದಾರೆ. ಇದರಲ್ಲಿ ಕಾನೂನು ಸಚಿವರು ಏಕೆ ಇಲ್ಲ ಎಂದು ಆತಂಕವಾಗಿದೆ. ಅವರೂ ಕೂಡ ಇಲ್ಲಿಂದ Supreme Court ಗೆ ಹೋಗಿ ದಂಡ ಹಾಕಿಸಿಕೊಂಡು ಬಂದರು. ನ್ಯಾಯದ ಪರ ಮತ್ತು ರೈತರ ಪರ ಹೋರಾಟ ಮಾಡಿದ್ದಕ್ಕಾಗಿ ಅವರಿಗೆ ಸಿಕ್ಕಿದ್ದು ದಂಡ!. ಕಾನೂನು ಸಚಿವರಿಗೆ ಇದರ ಪೂರ್ಣ ಅರಿವು ಇದೆ. ಕಾನೂನು ಸಚಿವರನ್ನು cabinet ಉಪ ಸಮಿತಿಗೆ involve ಮಾಡಿಕೊಳ್ಳಬೇಕು. ಇವತ್ತು ಸಾವಿರಾರು case ಗಳು Court ನಲ್ಲಿವೆ, ಇಲ್ಲಿಂದ Supreme Court ವರೆಗೂ ಇದೆ. ನಾನು ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ, ಈ ನಾಡಿನ ಒಂದುಕಾಲು ರೈತರ ಹಿತರಕ್ಷಣೆ ಕಾಪಾಡಬೇಕಲ್ಲವೇ? ಅವರ ಜಮೀನುಗಳನ್ನು ವಾಪಸ್ಸು ಕೊಡಬೇಕು, ಇಲ್ಲವೇ ರಸ್ತೆ ಮಾಡಿ ಪರಿಹಾರವನ್ನು ಕೊಡಬೇಕು. 10 ವರ್ಷಗಳಲ್ಲಿ ಮಾಡಬೇಕಾದ ಯೋಜನೆಗೆ 24 ವರ್ಷಗಳು ಕಳೆದಿವೆ. ಇನ್ನು ಎಷ್ಟು ವರ್ಷ ತೆಗೆದುಕೊಳ್ಳುತ್ತಾರೆ? ಇನ್ನು ಎಷ್ಟು ದಂಧೆ ಮಾಡಲು ಬಿಡುತ್ತಾರೆ? ಇನ್ನೆಷ್ಟು ಸಾವಿರಾರು ಕೋಟಿ ರೂಪಾಯಿಗಳನ್ನು ಕೊಳ್ಳೆ ಹೊಡೆಯಲು ಬಿಡುತ್ತಾರೆ? ಸರ್ಕಾರ

ಕಣ್ಣುಮುಚ್ಚಿಕೊಂಡು ಕೂರುವುದಾದರೆ ಇದನ್ನು ನಾಗರಿಕ ಸರ್ಕಾರ ಎನ್ನಬಹುದೇ? ಇದನ್ನು ಯಾರಾದರೂ ಮನುಷ್ಯರು ಒಪ್ಪುತ್ತಾರೆಯೇ? ದೇವರು ಮೆಚ್ಚುತ್ತಾನೆಯೇ? ಆದ್ದರಿಂದ ನಾನು ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ. ಈ ನಾಡಿನ ಜನರಿಗೆ ಆಗುತ್ತಿರುವ ದ್ರೋಹವನ್ನು ನಿಲ್ಲಿಸೋಣ. ದಯಮಾಡಿ ಸರ್ಕಾರ ಇಡೀ ಯೋಜನೆಯನ್ನು takeover ಮಾಡಬೇಕು. National Highway Authority of India ಗೆ handover ಮಾಡಿ ನಮ್ಮ ರೈತರನ್ನು ಹಾಗೂ ಜನರನ್ನು ಉಳಿಸಬೇಕು. ನ್ಯಾಯವನ್ನು ಎತ್ತಿ ಹಿಡಿಯುವ ದಿಸೆಯಲ್ಲಿ ಇತಿಹಾಸಕ್ಕೆ ನಾಂದಿ ಹಾಡಬೇಕೆಂದು ಮನವಿ ಮಾಡುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಸಚಿವರು ಮಾತನಾಡಿ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಎರಡು ನಿಮಿಷ ಅವಕಾಶ ಕೊಡಿ.

**ಸಭಾಪತಿಯವರು:–** ಇಲ್ಲ, clarification ನಲ್ಲಿ ಕೇಳಿ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಯಡಿಯೂರಪ್ಪನವರ ಕಾಲದಲ್ಲಿ ಆಗಿರುವುದನ್ನು.....

**ಸಭಾಪತಿಯವರು:–** ಮೂರು ಜನ ಮಾತ್ರ ಹೆಸರು ಕೊಟ್ಟಿದ್ದಾರೆ.

**(ಗೊಂದಲ)**

**ಶ್ರೀ ಕೆ.ಎಸ್. ತಿಪ್ಪೇಸ್ವಾಮಿ:–** ದಯಮಾಡಿ ಈ 3 ಜನರಿಗೆ ಅವಕಾಶ ಮಾಡಿಕೊಡಿ.

**ಸಭಾಪತಿಯವರು:–** 3 ಜನ ಹೆಸರು ಕೊಟ್ಟು 23 ಮಂದಿ ಮಾತನಾಡುತ್ತೀರಿ. ಎಲ್ಲದ್ದರಲ್ಲಿಯೂ ಕೈ ಹಾಕುತ್ತೀರಿ. ನಾನು ಏನು ಮಾಡುವುದಕ್ಕೆ ಆಗುತ್ತದೆ?

**(ಗೊಂದಲ)**

**ಡಾ: ವೈ.ಎ. ನಾರಾಯಣಸ್ವಾಮಿ:–** 5 ನಿಮಿಷ ಆಡಳಿತ ಪಕ್ಷಕ್ಕೂ ಮಾತನಾಡಲು ಅವಕಾಶ ಕೊಡಿ.

**ಸಭಾಪತಿಯವರು:–** ಪೀಠದಲ್ಲಿ ನೀವೆ ಕೂರಬೇಕಷ್ಟೇ!

**ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ತಾವು ನನಗೆ ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಕಾರಣವೇನೆಂದರೆ ಬೆಂಗಳೂರು ನಗರಕ್ಕೆ ಒಂದು ವಿಶೇಷ ಯೋಜನೆಗಳನ್ನು ಸರ್ಕಾರಗಳು ಮಾಡಬೇಕು ಹಾಗೂ ನಗರದ ಅವಶ್ಯಕತೆಗಳಿಗೆ ತಕ್ಕಂತೆ ಮತ್ತು ಜನಸಂಖ್ಯೆ ಹೆಚ್ಚುವರಿಯಾಗುತ್ತಿದ್ದಂತೆ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸುವ ಬಗ್ಗೆ ಸಂವಿಧಾನ ಹಾಗೂ ಕಾಯ್ದೆಗಳಲ್ಲಿ ಅಳವಡಿಸಿಕೊಂಡಿರುವಂತೆ ಮಾಡಬೇಕು. ಇಲ್ಲಿ ಬಹಳ ವಿಶೇಷ ಎಂದರೆ 1995 ರಲ್ಲಿ ಅಂದಿನ ಮಾನ್ಯ ದೇವೇಗೌಡರ ಸರ್ಕಾರ ಇದ್ದಾಗ American ತಂಡವೊಂದು ಅವರ ರಾಜ್ಯಪಾಲರಾದ *Massachusetts Governor* ನೇತೃತ್ವದಲ್ಲಿ ಬರುತ್ತಾರೆ. ಆಗ ಒಂದೆರಡು company ಗಳಿರುತ್ತವೆ. Kalyani Group of Companies ಮತ್ತು S.A.B. *Engineering and Constructions* Inc and *Vanasse* Hangen Brustlin Inc ಗಳಿದ್ದು, ಇವುಗಳು ಸೇರಿ ಒಂದು meeting ಮಾಡಿ, ನಂತರ ಒಂದು MOU (Memorandum of Understanding) ಮಾಡಿಕೊಳ್ಳುತ್ತಾರೆ. ಆ MOU ನಲ್ಲಿ ಶ್ರೀ ಅಶೋಕ್‌ಖೇಣಿ ರವರು signatory authority ಆಗಿರುತ್ತಾರೆ. ಈ ಒಂದು ವಿಷಯವನ್ನು 1995 ರಲ್ಲಿ start ಮಾಡಿದ್ದರೂ ಸಹ survey ಮತ್ತು feasibility ಮತ್ತು environmental clearance ಇವುಗಳೆಲ್ಲವನ್ನು ತೆಗೆದುಕೊಂಡು Express Highway ಮಾಡಬೇಕೆಂಬ ಉದ್ದೇಶದಿಂದ ಈ corridor ಅನ್ನು ಮಾಡಬೇಕೆಂದು ಆಯಿತು. ಇಡೀ ದೇಶದಲ್ಲಿ ಪ್ರಪ್ರಥಮವಾಗಿ Public–Private Partnership ನಲ್ಲಿ ಒಂದು ಯೋಜನೆಯನ್ನು ರೂಪಿಸಲು ಹೊರಡುತ್ತಾರೆ. ಇದು ಬೆಂಗಳೂರಿಗೆ ಪ್ರತಿಷ್ಠೆ ಹಾಗೂ ಗೌರವ ತರುವ ಯೋಜನೆ ಎಂದು ನಾನು ಭಾವಿಸುತ್ತೇನೆ. ಇವತ್ತು ಬೆಂಗಳೂರು ಮೈಸೂರು ವೇಗ ಹೆದ್ದಾರಿ ಎಂದು ಇರುವುದು 111 km ಆಗುತ್ತದೆ. ಈ peripheral arch ಎಂದು ಏನಿದೆ, ಅದು 41 km ಆಗುತ್ತದೆ. ಅದಕ್ಕೆ linking

ರಸ್ತೆಗಳು ಸುಮಾರು 10 km ಆಗುತ್ತದೆ. ಜೊತೆಗೆ elevate ರಸ್ತೆಗಳು ಸುಮಾರು 3 km ಆಗುತ್ತದೆ. ಒಟ್ಟು ಈ ರೀತಿ ಇರುವ ಯೋಜನೆ ರೂಪಿಸಿ, ಇದನ್ನು ಮಾಡುವಾಗ ಸಾರ್ವಜನಿಕ ಹಿತದಲ್ಲಿ 5 Township ಮಾಡಬೇಕು. Intersect Hubs ಮಾಡಬೇಕು ಎಂದು ಹೇಳಿ, comprehensive ಆಗಿ ಮಾಡಬೇಕೆಂದು ಹೊರಡುತ್ತಾರೆ. ಇಲ್ಲಿ ಬಹಳ ಪ್ರಮುಖವಾಗಿ this infrastructure is an intellectual project. ಒಬ್ಬ ಯಾರೋ ಒಬ್ಬ ಅವನ intellectuals ಇಟ್ಟುಕೊಂಡು ಕೆಲಸ ಮಾಡುವುದಕ್ಕೆ ಬರುತ್ತಾನೆ. ಅದು ಮಾಡಿದ ಮೇಲೆ ಉತ್ತಮವಾದ ಯೋಜನೆ ಎಂದು ಗೊತ್ತಾಗುತ್ತದೆ. ಇಲ್ಲಿ ಕೆಲವರಿಗೆ ಹೊಟ್ಟೆ ಹುರಿ ಇರುತ್ತದೆ, ಕೆಲವರಿಗೆ ಸಿಗುವಂತಹದ್ದು ಸಿಕ್ಕಿರುವುದಿಲ್ಲ. ಇದೆಲ್ಲವೂ ಬರುತ್ತದೆ. ಇದು ಬಂದಾಗ automatic ಆಗಿ ದ್ವೇಷ ಆಗುವುದು ಜಾಸ್ತಿಯಾಗುತ್ತದೆ. ಒಬ್ಬರನ್ನು ನೋಡಿ ಅಸೂಯೆ ಪಡುವುದು, ಇಂತಹದ್ದನ್ನು ನಾವು ಮಾಡಲಿಲ್ಲವಲ್ಲ ಎಂದು ಅಸೂಯೆ ಸಹ ಬರಬಹುದು. ಇಂತಹವುಗಳು ಮನುಷ್ಯನಲ್ಲಿ ಸ್ವಾಭಾವಿಕ. ಇಲ್ಲಿ ಪ್ರಮುಖವಾಗಿ ಈ ಯೋಜನೆಗೆ master plan ಎಂದು ಮಾಡುತ್ತಾರೆ, ಈ Infrastructure ಗೆ ಒಂದು master plan ಮಾಡುತ್ತಾರೆ. ಈ master plan ನಲ್ಲಿ 2007ರಲ್ಲಿ BMICA (Bengaluru–Mysuru Infrastructure Corridor AREA) ಆಗುತ್ತದೆ. Master plan ಅನ್ನು ತಯಾರು ಮಾಡಿದಾಗ ಆಗಿನ ಮುಖ್ಯಮಂತ್ರಿಗಳು ಬಹಳ ವಿಶೇಷವಾಗಿ ಒಂದರಿಂದ ಎರಡು ವರ್ಷಗಳ ಕಾಲ ಆ ಯೋಜನೆಯನ್ನು ತಯಾರು ಮಾಡಲು personal interest ತೆಗೆದುಕೊಂಡಿರುತ್ತಾರೆ. ಅಂದು ಬೆಂಗಳೂರು ನೋಡುತ್ತಿರುವ ಮುಖ್ಯಮಂತ್ರಿಯವರೇ ಈ entire master plan ಅನ್ನು ತಯಾರು ಮಾಡುತ್ತಾರೆ. ಆ master plan ಅನ್ನು ತಯಾರು ಮಾಡುವಾಗ ಸುಮಾರು 760 square km ಈ ಯೋಜನೆಯ ಒಳಗಡೆ ತರುತ್ತಾರೆ. ಅಂದರೆ ಸುಮಾರು 1,87,800 ಎಕರೆ ಪ್ರದೇಶವನ್ನು ಇದರಲ್ಲಿ ತರುತ್ತಾರೆ. ಈ corridor express ಯೋಜನೆ ರೂಪಿಸಬೇಕೆಂದು 20,197 ಎಕರೆಗಳು ಮಾತ್ರ identify ಆಗುತ್ತದೆ. ತದನಂತರ ಇದು FWA (Frame Work Agreement) ಈ ಅಂಶ ಬೆಳಕಿಗೆ ಬರುತ್ತದೆ. ಇದರಲ್ಲಿ environmental clearance ಆಗುತ್ತದೆ, ಎಲ್ಲಾ ಆಗುತ್ತದೆ, ಕೊನೆಗೆ final notification ಆದಾಗ private land 18,246

ಎಕರೆ ಈ entire express highway ಮತ್ತು arch ಮತ್ತು link roads ಮತ್ತು ಅಲ್ಲಿನ Township ಸೇರಿದಂತೆ ಎಲ್ಲದ್ದಕ್ಕೂ private land 18,246 ಎಕರೆ ಆಗುತ್ತದೆ.

(ಮುಂದು)

(616)24-03-2022(05-20)bsd-bns

**ಶ್ರೀ ಪಿ.ಆರ್. ರಮೇಶ್ (ಮುಂದು)**

ಅದೇ ರೀತಿ Government land 5,138 ಎಕರೆ ಆಗುತ್ತದೆ. ಒಟ್ಟು 23,384 ಎಕರೆಗಳು ಬೇಕು ಎಂದಾಗುತ್ತದೆ. ಇದರಲ್ಲಿ 111 express highway ಮತ್ತು peripheral road, arc, link road, township ಇವೆಲ್ಲವುಗಳು ಬರುತ್ತದೆ. ಆದರೆ ಇದರಲ್ಲಿ ಈ ಯೋಜನೆ ಪ್ರಾರಂಭವಾದ ಮೇಲೆ ಅವಶ್ಯಕತೆ ಇರುವ link road ಮತ್ತು arc ಮಾಡುವಾಗ ಬೇಕಾದಂತಹ ಜಮೀನನ್ನು ಸರ್ಕಾರ ಹಸ್ತಾಂತರ ಮಾಡುತ್ತದೆ. ಈ Government land ಸುಮಾರು 2,091 ಎಕರೆ ಮಾತ್ರ ಹಾಗೂ private land 4,810 ಎಕರೆಗಳನ್ನು ಹಸ್ತಾಂತರ ಮಾಡಲಾಗಿದೆ. ಇದನ್ನು ಬಿಟ್ಟರೆ ಈ BMIC (Bangalore Mysore Infrastructure Corridor) Project ಗೆ ಇನ್ಯಾವುದೇ ರೀತಿಯ ಜಮೀನು ಇಲ್ಲ. ಇದರಲ್ಲಿ 2,091 ಎಕರೆ lease ಕೊಡಲಾಗಿದೆ. ಈ private land ಗೆ ಏನು title ಕೊಡುತ್ತಾರೋ, ಅದು 4,810 ಎಕರೆಗೆ ಮಾತ್ರ registration ಮಾಡಿಕೊಟ್ಟಿದ್ದು, ಒಟ್ಟು 6,901 ಎಕರೆಗಳನ್ನು ಮಾತ್ರ ಕೊಡುತ್ತಾರೆ. ಈ ಜಮೀನಿನಲ್ಲಿ ಯೋಜನೆ ಮಾಡುವುದಾಗಿದೆ. ಇಂತಹ ಯೋಜನೆಗಳನ್ನು ಅನುಷ್ಠಾನಕ್ಕೆ ತರುವುದು ಬಹಳ ಉಪಯೋಗಕರವಾದುದ್ದಾಗಿದೆ. ಮಧ್ಯದಲ್ಲಿ ಬಹಳಷ್ಟು ಜನರು ನ್ಯಾಯಾಲಯಕ್ಕೆ ಹೋಗುತ್ತಾರೆ. ಮಾನ್ಯ ಸದಸ್ಯರು ಬಹಳಷ್ಟು ವಿಷಯಗಳನ್ನು ಮಾತನಾಡಿದ್ದಾರೆ. ಇದರ ಬಗ್ಗೆ Supreme Court ಮತ್ತು High Court ಗೆ ಹೋಗಿದ್ದು, ಎಲ್ಲಾ ಕಡೆ ಇದು exhaust ಆಗಿ ಹೋಗಿದೆ. ಸಂಪೂರ್ಣವಾಗಿ ಇಲ್ಲಿ ಪ್ರಸ್ತಾಪವಾದಂತೆ, ಸರ್ಕಾರದಲ್ಲಿರುವ ಹಲವಾರು proceeding ಗಳು ಏನಿದೆ, ಇವು ಕೋರ್ಟ್‌ಗಳಲ್ಲಿ ಸಾಕಷ್ಟು

questionable ಆಗಿದೆ. ಇದೆಲ್ಲವೂ ಆದಮೇಲೆ ಒಬ್ಬರು ಎಂ. ನಾಗಭೂಷಣ್ ಎಂಬುವವರು 2011 ರಲ್ಲಿ ನ್ಯಾಯಾಲಯಕ್ಕೆ ಹೋಗುತ್ತಾರೆ. ಕೊನೆಗೆ ನ್ಯಾಯಾಲಯವು;

> *" In that view of the matter, this court makes it clear that the State Government should complete the project as early as possible and should not do anything, including releasing any land acquired under this project, as that may impede the completion of the project and would not be compatible with the larger public interest which the project is intended to serve.*
>
> *This Court, therefore, dismisses this appeal with costs assessed at Rs.10 Lacs, to be paid by the appellant in favour of Karnataka High Court Legal Services Authority…… "*

ಎಂದು ಹೇಳುತ್ತದೆ. ಈ applicant ಒಂದು ರೀತಿ habitual litigant ಆಗಿದ್ದು, ಪದೇ ಪದೇ Supreme Court ಮತ್ತು High Court ಗಳಿಗೆ ಅರ್ಜಿಗಳನ್ನು ಹಾಕುವುದೇ ಆತನ ಕೆಲಸವಾಗಿರುತ್ತದೆ. ಇದಕ್ಕೆ ಯಾರು direction ಕೊಡುತ್ತಿದ್ದಾರೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಇಂತಹ direction ನಲ್ಲಿ ಆತ ಸಿಕ್ಕಿಹಾಕಿಕೊಳ್ಳುತ್ತಾನೆ. ಆತನಿಗೆ ರೂ.10 ಲಕ್ಷ fine ಹಾಕಿ, Supreme Court ರಾಜ್ಯ ಸರ್ಕಾರಕ್ಕೆ immediate ಆಗಿ ಯೋಜನೆಯನ್ನು ಮುಗಿಸಿ, required ಇರುವುದನ್ನು handover ಮಾಡಲು direction ಕೊಡುತ್ತದೆ. ಇದಾದ ಮೇಲೆ ಕೆಲವು ಜಮೀನುಗಳನ್ನು KIADB ನವರು ಬೇರೆ ಯೋಜನೆಗಳಿಗೆ ಬೇಕಾಗುತ್ತದೆ ಎಂದು ಮತ್ತು ತಮಗೆ ಗೊತ್ತಿರುವಂತೆ ಸುಮಾರು ರೂ.14 ಕೋಟಿ ಕೊಡುವುದಕ್ಕೂ ನ್ಯಾಯಾಲಯದಿಂದ ಆದೇಶ ಬರುತ್ತದೆ. ಅದನ್ನು ಕೊಡಬಾರದು ಎಂದು ಸರ್ಕಾರದಲ್ಲಿ ಪ್ರಸ್ತಾಪವಿದ್ದರೂ, ಆ ಜಮೀನಿಗೆ NICE (Nandi Infrastructure Corridor Enterprises) ರವರಿಗೆ compensation ಕೊಡಬೇಕೆಂದು handover ಮಾಡುತ್ತಾರೆ. ಇಷ್ಟೆಲ್ಲಾ ಆದರೂ ಮಾನ್ಯ ದೇವೇಗೌಡರು ನ್ಯಾಯಾಲಯಕ್ಕೆ ಆಗಿಂದ್ದಾಗ್ಗೆ ಹೋಗುತ್ತಿರುತ್ತಾರೆ. ಇವರ ಮೇಲೆ ಸಾಕಷ್ಟು ಆಪಾದನೆಗಳಾಗುತ್ತದೆ. ಆ

company ಯವರು ಮಾನ್ಯ ದೇವೇಗೌಡರ ಮೇಲೆ ಮಾನನಷ್ಟದ ರೀತಿ ಅಂದರೆ defamatory case ಹಾಕುತ್ತಾರೆ.

**ಶ್ರೀ ಎಸ್. ರವಿ:–** ಅದು defamatory case ಆಗಿದೆ.

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, ಈ ದಾವೆಯಲ್ಲಿ ನ್ಯಾಯಾಲಯವು ಏನು ಹೇಳುತ್ತದೆ ಎಂಬುದನ್ನು ಓದುತ್ತೇನೆ.

**ಶ್ರೀ ಕೆ.ಎಸ್. ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಯೋಜನೆ ಬಗ್ಗೆ ಮಾತನಾಡಬೇಕು, ಬೇರೆ ವಿಷಯ ಏಕೆ ಬೇಕು? ಅವಶ್ಯಕತೆ ಇರುವ ಹಾಗೂ ಸಂಬಂಧಪಟ್ಟಿರುವುದನ್ನು ಮಾತನಾಡಲಿ.

**(ಗೊಂದಲ)**

**ಶ್ರೀ ಎಸ್. ರವಿ:–** ಇರುವ ಸತ್ಯಾಂಶ ಹೇಳುತ್ತಿದ್ದಾರೆ, ಕೋರ್ಟ್ ಆದೇಶ ಹೇಳುತ್ತಿದ್ದಾರೆ. ಮಾನ್ಯ ಶ್ರೀಕಂಠೇಗೌಡರು ಎಲ್ಲವನ್ನು ಮಾತನಾಡಿದರು.

**(ಗೊಂದಲ)**

**ಶ್ರೀ ಸಿ.ಎನ್. ಮಂಜೇಗೌಡ:–** ಹಲವಾರು ಬಾರಿ ದೇವೇಗೌಡರ ಹೆಸರನ್ನು ಪ್ರಸ್ತಾಪ ಮಾಡಿದ್ದಾರೆ. ಕಡತ ನೋಡಿ.

**ಶ್ರೀ ಪಿ.ಆರ್. ರಮೇಶ್:–** ನಾನು ಪ್ರಸ್ತಾಪ ಮಾಡಿದ್ದರೂ, ನಾನು ಮಾಜಿ ಪ್ರಧಾನ ಮಂತ್ರಿಗಳು ಎಂದೇ ಹೇಳುತ್ತೇನೆ. ಮಾನ್ಯ ಮಾಜಿ ಪ್ರಧಾನಿಗಳ ವಿರುದ್ಧ ಒಂದು ಕೇಸ್ ಹಾಕಿ ಒಂದು order ಆಗುತ್ತದೆ. ಅದೇನೆಂದರೆ;

*" The defendant is directed to pay damages of Rs.2,00,00,000/- to the plaintiff Company for the loss of reputation of the plaintiff Company on account of the defamatory comments made by the*

*defendant in the interview telecasted in the "Suvarna 24/7" Kannada news channel dated 28.6.2011 under the caption "Gowdara Garjane".*

*The defendant is permanently restrained from making any defamatory statements against the plaintiff Company in any media, news channel, T.V. channel or in any other means of mass communication in future."*

ನಾನು ಏಕೆ ಹೇಳುತ್ತಿದ್ದೇನೆಂದರೆ....

**ಶ್ರೀ ಎಸ್.ಎಲ್. ಭೋಜೇಗೌಡ:-** ಈಗ recent ಆಗಿ ಏನಾಗಿದೆ ಎಂಬುದನ್ನು ದಯವಿಟ್ಟು ಹೇಳಬೇಕು.

**(ಗೊಂದಲ)**

**ಶ್ರೀ ಪಿ.ಆರ್. ರಮೇಶ್:-** ಅದನ್ನೂ ಹೇಳುತ್ತೇನೆ.

**ಶ್ರೀ ಎಸ್.ಎಲ್. ಭೋಜೇಗೌಡ:-** What happened subsequent to the defamatory case. That also to be made known to the House. ನಿನ್ನೆ-ಮೊನ್ನೆ ಉಚ್ಚ ನ್ಯಾಯಾಲಯದಲ್ಲಿ ಏನಾಗಿದೆ ಎಂದು ಹೇಳಲಿ. In the same defamatory case, what happened in our High Court very recently, ಅದನ್ನು ಹೇಳಬಿಡಲಿ. We respect the verdict of any court order. Subsequently, what happened in the same matter in our High Court. ಅದನ್ನು ದಯವಿಟ್ಟು ಹೇಳಬೇಕು.

**ಶ್ರೀ ಸಿ.ಎನ್. ಮಂಜೇಗೌಡ:-** ಅದನ್ನು ಹೇಳಬಿಡಲಿ.

**(ಗೊಂದಲ)**

**ಶ್ರೀ ಎಸ್. ರವಿ:-** ಅವರು ಮಾತನಾಡಲಿ, ಅವರಿಗೆ ಅವಕಾಶ ಕೊಡಬೇಕು.

**ಶ್ರೀ ಕೆ.ಎಸ್. ತಿಪ್ಪೇಸ್ವಾಮಿ:–** ರಾಜ್ಯದ ಹಿತಾಸಕ್ತಿ ಬಗ್ಗೆ ಮತ್ತು ಯೋಜನೆ ಬಗ್ಗೆ ಮಾತನಾಡಬೇಕು.

**ಸಭಾಪತಿಯವರು:–** ಒಂದು ನಿಮಿಷ.

**(ಗೊಂದಲ)**

**ಶ್ರೀ ಎಸ್. ರವಿ:–** ಅವರು ನ್ಯಾಯಾಲಯದ ತೀರ್ಪನ್ನು ಹೇಳುತ್ತಿದ್ದಾರೆ. ಅವರಿಗೆ ಮಾತನಾಡುವುದಕ್ಕೆ ಬಿಡುತ್ತಿಲ್ಲ. ಶ್ರೀ ಭೋಜೇಗೌಡರು, ಶ್ರೀ ತಿಪ್ಪೇಸ್ವಾಮಿ ರವರು ಮಾತನಾಡುವಾಗ ಗಂಟೆಗಟ್ಟಲೆ ಮಾತನಾಡುವಾಗ ನಾವು ಕೈಕಟ್ಟಿಕೊಂಡು ಕೇಳಿದೆವು. ಮಾನ್ಯ ರಮೇಶ್ ರವರು ಮಾತನಾಡುವಾಗ ....

**(ಗೊಂದಲ)**

**ಶ್ರೀ ಎಸ್.ಎಲ್. ಭೋಜೇಗೌಡ:–** ಸತ್ಯ ಹೇಳಬೇಕಲ್ಲವೇ? ಇನ್ನೊಂದು ಆದೇಶ ಇಲ್ಲವೇ? ಮತ್ತೆ subsequently ಏನಾಯಿತು ಎಂದು ಹೇಳಬೇಕಲ್ಲವೇ? ಅಲ್ಲಿಗೆ ಏಕೆ ನಿಲ್ಲಿಸಬೇಕು?

**(ಗೊಂದಲ)**

**ಶ್ರೀ ನಸೀರ್ ಅಹಮದ್:–** ಮಾನ್ಯ ಸಭಾಪತಿಯವರೇ, ಇದು ಸರಿಯಿಲ್ಲ, ಪ್ರತಿಯೊಬ್ಬರಿಗೂ ಹೇಳಲು ಅವಕಾಶ ಇದೆ, ಅವರು ಮಾತನಾಡುತ್ತಾರಲ್ಲವೇ?

**(ಗೊಂದಲ)**

**ಶ್ರೀ ಎಸ್. ರವಿ:–** ಅವರು ಹೇಳಿದಂತೆ ಮಾತನಾಡುವುದಕ್ಕೆ ಆಗುವುದಿಲ್ಲ, ಈ ರೀತಿ ಬಾಯಿ ಹೊಡೆದರೆ, ಕಿರುಚಿದರೆ ಸತ್ಯ ಮುಚ್ಚಿಹೋಗುತ್ತದೆಯೇ?

**ಶ್ರೀ ಎಸ್.ಎಲ್. ಭೋಜೇಗೌಡ:–** ಇಡೀ ನಾಡಿಗೆ ಮತ್ತು ದೇಶಕ್ಕೆ ಗೊತ್ತಾಗಬೇಕು. ಮುಂದುವರೆಸಿ ಹೇಳಬೇಕು.

**(ಗೊಂದಲ)**

**ಶ್ರೀ ಎಸ್. ರವಿ:-** ಹೌದು, ಮಾನ್ಯ ರಮೇಶ್ ರವರಿಗೆ capacity ಇದೆ, knowledge ಇದೆ, ಅವರಿಗೆ capacity ಇಲ್ಲ ಎಂದಲ್ಲ, ಅವರು ಬೆಂಗಳೂರು Mayor ಆಗಿದ್ದವರಾಗಿದ್ದಾರೆ. ಅವರಿಗೆ ಹೇಳಬೇಕಾದ ಅವಶ್ಯಕತೆ ಇಲ್ಲ.

**ಸಭಾಪತಿಯವರು:-** ನಿಮಗೆ ಹೇಳುವವರು ಕೇಳುವವರು ಯಾರೂ ಇಲ್ಲವೇ? ಎಲ್ಲರೂ ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಬರುವುದಿಲ್ಲವೇ? ನಾನು ಇಲ್ಲಿ ಕುಳಿತಿಲ್ಲವೇ? ನೀವುಗಳು ಏಕೆ ಮಧ್ಯೆ ಮಧ್ಯೆ ಮಾತನಾಡುತ್ತೀರಿ?

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾವು ಎರಡು ದಿವಸಗಳಿಂದ ಸತತವಾಗಿ ಭಾಷಣವನ್ನು ಕೇಳುತ್ತಿದ್ದು, ನಾವ್ಯಾರೂ ಸಹ ಅವರು ಹೇಳಿದ್ದಕ್ಕೆ object ಮಾಡಲಿಲ್ಲ. ಸರ್ಕಾರದವರನ್ನು ಅವರು ಪ್ರಶ್ನೆ ಮಾಡುತ್ತಿದ್ದು, ಸರ್ಕಾರದವರು ಉತ್ತರ ಕೊಡುತ್ತಾರೆ. ಮಾನ್ಯ ರಮೇಶ್ ರವರು ಯಾರ ಬಗ್ಗೆ ಹೆಸರು ಹೇಳಿ ಹೇಳುತ್ತಿಲ್ಲ. ಸರ್ಕಾರದವರಿಗೆ ಪ್ರಶ್ನೆ ಮಾಡುತ್ತಿದ್ದು, ಸರ್ಕಾರದವರು ಉತ್ತರ ಕೊಡುತ್ತಾರೆ. ಆದರೆ ಮಾತನಾಡುವಾಗ ಅಡ್ಡ ಹಾಕುವುದು ತಪ್ಪು.

(ಮುಂದು)

(617) 24.03.2022 5.30 hv.bns

**ಶ್ರೀ ಬಿ.ಕೆ.ಹರಿಪ್ರಸಾದ್(ಮುಂದುವರಿದದ್ದು):-**

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಪಿ.ಆರ್.ರಮೇಶ್‌ರವರು ಬೆಂಗಳೂರು ನಗರದ ಮಹಾಪೌರರಾಗಿ ಕಾರ್ಯವನ್ನು ನಿರ್ವಹಿಸಿದ್ದಾರೆ. ಅವರಿಗೆ ಈ ವಿಚಾರದ ಬಗ್ಗೆ ಅಷ್ಟೇ ಕಾಳಜಿ ಇದೆ. ಯಾರ ಬಗ್ಗೆಯೂ ಅವರು ಟೀಕೆ-ಟಿಪ್ಪಣಿ ಮಾಡುತ್ತಿಲ್ಲ. ಕೋರ್ಟ್‌ನಿಂದ ಏನೇನು ಆದೇಶಗಳಾಗಿವೆ ಎನ್ನುವುದರ ಬಗ್ಗೆ ಅವರು ದಾಖಲೆಯ ಸಹಿತ ಹೇಳುತ್ತಿದ್ದಾರೆ. ಸರ್ಕಾರದವರು ಅದಕ್ಕೆ ಉತ್ತರವನ್ನು ನೀಡುತ್ತಾರೆ. ಮಾನ್ಯ

ಪಿ.ಆರ್.ರಮೇಶ್‌ರವರು ಮಾತನಾಡುವುದಕ್ಕೆ ಜೆ.ಡಿ.(ಎಸ್) ಸದಸ್ಯರು ಅಡ್ಡಿಪಡಿಸುತ್ತಿರುವುದು ತಪ್ಪು. ತಾವು ನಮ್ಮ ರಕ್ಷಣೆಗೆ ಬರಬೇಕಾಗಿದೆ.

ಸಭಾಪತಿಯವರು:- ನಾನು ಹೇಳುತ್ತಲೇ ಇದ್ದೇನೆ. ನನ್ನ ಮಾತು ಯಾರೂ ಕೇಳುತ್ತಿಲ್ಲ.

ಶ್ರೀ ಬಿ.ಕೆ.ಹರಿಪ್ರಸಾದ್:- ಸನ್ಮಾನ್ಯ ಸಭಾಪತಿಯವರೇ, ತಮಗೆ ಹಿರಿತನವಿದೆ. ತಾವು ಆ ಪೀಠದಲ್ಲಿ ಕುಳಿತಿದ್ದೀರಿ.

ಸಭಾಪತಿಯವರು:- ಈ ಪೀಠಕ್ಕೆ ಗೌರವ ಕೊಡಬೇಕಲ್ಲವೇ? ಯಾರೂ ಮಾತೇ ಕೇಳುವುದಿಲ್ಲ.

ಶ್ರೀ ಬಿ.ಕೆ.ಹರಿಪ್ರಸಾದ್:- ಸನ್ಮಾನ್ಯ ಸಭಾಪತಿಯವರೇ, ಪೀಠಕ್ಕೆ ಎಲ್ಲರೂ ಗೌರವ ಕೊಡಬೇಕಾಗುತ್ತದೆ.

ಸಭಾಪತಿಯವರು:- ಇದಕ್ಕಿಂತ ಹೆಚ್ಚಿಗೆ ನಾನು ಏನು ಹೇಳುವುದಕ್ಕೆ ಸಾಧ್ಯ? ಅವರವರೇ ತಿಳಿದುಕೊಳ್ಳಬೇಕು. ಮಾನ್ಯ ಪಿ.ಆರ್.ರಮೇಶ್‌ರವರೇ, ಒಂದೇ ಕಡೆ facts and figures ಅನ್ನು ಹೇಳುವುದು ಬೇಡ. ಎರಡೂ ಕಡೆಯ facts and figures ಹೇಳಬೇಕಾಗುತ್ತದೆ. ನೀವು ಮಾತನಾಡುವುದಕ್ಕೆ ಪ್ರಾರಂಭ ಮಾಡಿ 22 ನಿಮಿಷಗಳಾಗಿವೆ. ಬೇಗನೇ ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಿ.

**ಶ್ರೀ ಪಿ.ಆರ್.ರಮೇಶ್:-** ಸನ್ಮಾನ್ಯ ಸಭಾಪತಿಯವರೇ, ಎರಡೂ ಕಡೆ ಹೇಳುತ್ತೇನೆ. ಅವರುಗಳು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದರೆ ನಾನು ಇಷ್ಟೊತ್ತಿಗಾಗಲೇ ನನ್ನ ಮಾತುಗಳನ್ನು ಮುಕ್ತಾಯಗೊಳಸುತ್ತಿದ್ದೆ. ಯಾರ ಅವಧಿಯಲ್ಲಿ ಎಷ್ಟೆಷ್ಟು ಎಕರೆ ಜಮೀನನ್ನು ರಿಜಿಸ್ಟ್ರೇಶನ್ ಮಾಡಿ ಜಮೀನನ್ನು ಹಸ್ತಾಂತರ ಮಾಡಿಕೊಟ್ಟಿದ್ದಾರೆನ್ನುವುದನ್ನು ಹೇಳುತ್ತೇನೆ. ಎಲ್ಲರಿಗೂ ಗೊತ್ತಾಗಲಿ.

ಸನ್ಮಾನ್ಯ ಸಭಾಪತಿಯವರೇ, ಈ ಯೋಜನೆ 1995ರಲ್ಲಿ ಪ್ರಾರಂಭವಾಗಿದ್ದರೂ ಸಹ ಇದು ಟೇಕ್‌ಆಫ್ ಆಗಿರುವುದು 2003-04ನೇ ಇಸವಿಯಲ್ಲಿ. ಆಗ ಮಾನ್ಯ ಎಸ್.ಎಂ.ಕೃಷ್ಣಾರವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಸುಮಾರು 5198 ಎಕರೆ ಸರ್ಕಾರಿ ಜಮೀನನ್ನು leaseಗೆ ಕೊಟ್ಟಿದ್ದಾರೆ. ಅದೇ ರೀತಿಯಲ್ಲಿ ಖಾಸಗಿಯವರಿಂದ ಸುಮಾರು 902 ಎಕರೆ ಜಮೀನನ್ನು sale deed ಮಾಡಿಕೊಟ್ಟಿದ್ದಾರೆ. ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಜನತಾದಳ ಮತ್ತು ಕಾಂಗ್ರೆಸ್ ಪಕ್ಷದ ಸಮಿಶ್ರ ಸರ್ಕಾರ ಅಧಿಕಾರದಲ್ಲಿ ಇದ್ದಂತಹ ಸಂದರ್ಭದಲ್ಲಿ ಸುಮಾರು 862 ಎಕರೆ ಜಮೀನನ್ನು ರಿಜಿಸ್ಟ್ರೇಶನ್ ಮಾಡಿ ಕೊಟ್ಟಿದ್ದಾರೆ. ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಸುಮಾರು 142 ಎಕರೆ ಜಮೀನನ್ನು ರಿಜಿಸ್ಟ್ರೇಶನ್ ಮಾಡಿಕೊಟ್ಟಿದ್ದಾರೆ. ಅದೇ ರೀತಿಯಲ್ಲಿ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಸುಮಾರು 237 ಎಕರೆ ಖಾಸಗಿ ಜಮೀನನ್ನು ಕೊಟ್ಟಿದ್ದಾರೆ. ಹೀಗೆ ಪ್ರತಿಯೊಂದು ಹಂತದಲ್ಲಿಯೂ ಯೋಜನೆಗೆ ಪೂರಕವಾಗಿ ಆಗಿಂದಾಗ್ಯೆ ಜಮೀನನ್ನು ಹಸ್ತಾಂತರಗೊಳಸಲಾಗಿದೆ. ಮಾಜಿ ಪ್ರಧಾನಮಂತ್ರಿಗಳಗೆ ಸಂಬಂಧಪಟ್ಟಂತೆ ಒಂದು defamatory case ನಲ್ಲಿ court ಒಂದು ಆದೇಶವನ್ನು ಕೊಟ್ಟಿದೆ. ಅದರ ಬಗ್ಗೆ ಪ್ರಶ್ನೆ ಮಾಡಿ, ಮಾಜಿ ಪ್ರಧಾನಮಂತ್ರಿಗಳಾದವರು ಹೈಕೋರ್ಟ್‌ನಲ್ಲಿ R.F.A. No.729/2021 ನಲ್ಲಿ ಒಂದು ಮೊಕದ್ದಮೆಯನ್ನು ಸಲ್ಲಿಸುತ್ತಾರೆ. ದಿನಾಂಕ:17.02.2022ರಲ್ಲಿ ಅದಕ್ಕೆ ಒಂದು affidavit ಸಲ್ಲಿಸುತ್ತಾರೆ. ಅಂದರೆ ಇವತ್ತಿಗೆ ಸುಮಾರು ಒಂದು ತಿಂಗಳು 5 ದಿನ ಅಥವಾ 5 ವಾರಗಳಾಗಿರಬಹುದು. ಈ affidavit ನಲ್ಲಿ ಏನು ಹೇಳಿದ್ದಾರೆಂದರೆ;

*" I state that I am the Appellant in the above case and I know the facts and circumstances of the case. Hence, I am competent to swear to this affidavit.*

*I state that the above appeal is filed seeking to challenge the judgment and decree dated 17.06.2021 passed by the Learned VIII Additional City Civil and Sessions Judge, Bangalore City (CCH-15) in O.S. No.4545/2012.*

*I undertake that I will not make any defamatory statements about the Respondent. The present undertaking by way of affidavit should not be construed to preclude me from making any factual statements about the Respondent Company and its activities in discharge of my duty as a people's representative who owes responsibility to agitate about public grievance and exercising my Constitutional rights."*

*I pray that my undertaking may kindly be taken on record."*

ಸಭಾಪತಿಯವರು:- ಮಾನ್ಯ ಪಿ.ಆರ್.ರಮೇಶ್‌ರವರೇ, 4 ಗಂಟೆ 50 ನಿಮಿಷಗಳಿಗೆ ತಮ್ಮ ಮಾತುಗಳನ್ನು ಪ್ರಾರಂಭ ಮಾಡಿದ್ದೀರಿ. ಈಗ 5 ಗಂಟೆ 35 ನಿಮಿಷಗಳಾಗಿವೆ. ಬೇಗ ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಿ.

ಶ್ರೀ ಎಸ್.ಎಲ್.ಭೋಜೇಗೌಡ:- ಸನ್ಮಾನ್ಯ ಸಭಾಪತಿಯವರೇ, with due respect to the verdict of High Court, affidavit ಹಾಕಿದ್ದಾರೆ. ತಪ್ಪೇನಿದೆ? ಹೈಕೋರ್ಟ್ ಆದೇಶಕ್ಕೆ respect ಮಾಡಬೇಕಲ್ಲವೇ? We are not going to dispute that affidavit. ಆ affidavit ಅನ್ನು ನಾವು dispute ಮಾಡುವುದಿಲ್ಲ.

(ಗೊಂದಲ)

ಸಭಾಪತಿಯವರು:- ಮಾನ್ಯ ಪಿ.ಆರ್.ರಮೇಶ್‌ರವರೇ, ಇನ್ನೂ ತಮಗೆ 5 ನಿಮಿಷಗಳ ಕಾಲಾವಕಾಶವನ್ನು ನೀಡಲಾಗುತ್ತಿದೆ. ಅಷ್ಟರಲ್ಲಿ ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಿ.

ಶ್ರೀ ಪಿ.ಆರ್.ರಮೇಶ್:- ಸನ್ಮಾನ್ಯ ಸಭಾಪತಿಯವರೇ, ಇವತ್ತಿನ ಸಮಸ್ಯೆ ಏನೆಂದರೆ, ಮಾಜಿ ಪ್ರಧಾನಮಂತ್ರಿಗಳು ಮಾತನಾಡುವುದಕ್ಕೆ ಆಗುತ್ತಿಲ್ಲ because of this affidavit. ಹಾಗಾಗಿ ಅವರ ಕೆಲವು ಸದಸ್ಯರುಗಳು ಇವತ್ತು ಇಲ್ಲ..........

(ಗೊಂದಲ)

ಶ್ರೀ ಎಸ್.ಎಲ್.ಭೋಜೇಗೌಡ:- ಸನ್ಮಾನ್ಯ ಸಭಾಪತಿಯವರೇ, it is my right sir. I am a member of this Legislative Council. I am expressing my views by obtaining the permission from the Chair. Who is he to question me? How can he question about my right?

Sri P.R.RAMESH:- I am not curbing the right of the member.

(ಗೊಂದಲ)

ಸಭಾಪತಿಯವರು:- ಮಾನ್ಯ ಭೋಜೇಗೌಡರೇ, ಏತಕ್ಕೋಸ್ಕರ ಟೆಂಪರ್ ಕಳೆದುಕೊಳ್ಳುತ್ತಿದ್ದೀರಿ?

(ಗೊಂದಲ)

ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):- ಸನ್ಮಾನ್ಯ ಸಭಾಪತಿಯವರೇ, absolutely it is the right of those members and he is not denying it.

(ಗೊಂದಲ)

ಸಭಾಪತಿಯವರು:- ಮಾನ್ಯ ಭೋಜೇಗೌಡರೇ,"..... ಕೆಲವು ಸದಸ್ಯರು ಮಾತನಾಡುತ್ತಿದ್ದಾರೆ" ಎಂದು ಮಾನ್ಯ ಪಿ.ಆರ್.ರಮೇಶ್‌ರವರು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಎಸ್.ಎಲ್.ಭೋಜೇಗೌಡ:- ಸನ್ಮಾನ್ಯ ಸಭಾಪತಿಯವರೇ, "......ಅವರು ಮಾತನಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಕೆಲವು ಸದಸ್ಯರನ್ನು ಬಿಟ್ಟಿದ್ದಾರೆ" ಎಂದು ಹೇಳಿದರೆ ಏನರ್ಥ? He is not the member of this House and I am a member of this House and I have taken permission from the Chair.

(ಗೊಂದಲ)

Sri P.R.RAMESH:- You have a right. That is not the point.

ಶ್ರೀ ಬಿ.ಕೆ.ಹರಿಪ್ರಸಾದ್:- ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ಮಾತನಾಡುತ್ತಿರುವುದರ ಬಗ್ಗೆ ಯಾರೂ dispute ಮಾಡುತ್ತಿಲ್ಲ. ಯಾವುದೇ ಸದಸ್ಯರು ಮಾತನಾಡಬಾರದೆಂದು ಹೇಳುವುದಕ್ಕೆ ಆಗುವುದಿಲ್ಲ. They have all the rights.

(ಗೊಂದಲ)

ಸಭಾಪತಿಯವರು:- ಮಾನ್ಯ ಭೋಜೇಗೌಡರೇ, "..... ಅವರ ಪರವಾಗಿ ಕೆಲವು ಸದಸ್ಯರು ಮಾತನಾಡುತ್ತಿದ್ದಾರೆ" ಎಂದು ಹೇಳಿದ್ದಾರೆ. ಅದರರ್ಥ ನಿಮ್ಮನ್ನು ಘೂಡಾಯಿಸುವ ರೀತಿಯಲ್ಲಿ ಮಾತನಾಡಿಲ್ಲ. ನಿಮಗೆ ಮಾತನಾಡುವಂತಹ ಎಲ್ಲ ರೀತಿಯ ಹಕ್ಕು ಇದೆ. ನೀವು ಮಾತನಾಡಿದ್ದೀರಿ. ಇನ್ನೂ ಬೇಕಾದರೆ ಮಾತನಾಡಿ. ಮಾನ್ಯ ಪಿ.ಆರ್.ರಮೇಶ್‌ರವರು "......ಅವರ ಪರವಾಗಿ ಕೆಲವು ಸದಸ್ಯರು ಮಾತನಾಡುತ್ತಿದ್ದಾರೆ" ಎಂದು ಹೇಳಿದ್ದಾರೆ ಅಷ್ಟೇ, ಅದರಲ್ಲಿ ಬೇರೆ ಉದ್ದೇಶವಿಲ್ಲ.

ಶ್ರೀ ಸಿ.ಎನ್.ಮಂಜೇಗೌಡ:- ಸನ್ಮಾನ್ಯ ಸಭಾಪತಿಯವರೇ, ಅಫಿಡವಿಟ್ ಹಾಕಿರುವ ಹಿನ್ನೆಲೆಯಲ್ಲಿ ಅವರು ಮಾತನಾಡುವುದಕ್ಕೆ ಅಗುತ್ತಿಲ್ಲ ಆದ್ದರಿಂದ ಬೇರೆಯವರು ಮಾತನಾಡುತ್ತಿದ್ದಾರೆ ಎನ್ನುವುದು ಅವರ ಮಾತಿನ ಅರ್ಥವಾಗಿದೆ.

(ಗೊಂದಲ)

ಶ್ರೀ ಎಸ್.ಎಲ್.ಭೋಜೇಗೌಡ:- ಸನ್ಮಾನ್ಯ ಸಭಾಪತಿಯವರೇ, ನಾನು ನನ್ನ ಹಕ್ಕಿನಿಂದ ಮಾತನಾಡುತ್ತಿದ್ದೇನೆ. I have come here from my right. I am a member of this Legislative Council. ಅದಕ್ಕೋಸ್ಕರ ಮಾತನಾಡುತ್ತಿದ್ದೇನೆ. ಮಾಜಿ ಪ್ರಧಾನಮಂತ್ರಿಗಳ ಪರವಾಗಿ ಮಾತನಾಡುವುದಕ್ಕೆ ಬಂದಿದ್ದೇನೆಯೇ?

(ಗೊಂದಲ)

ಶ್ರೀ ಸಲೀಂ ಅಹಮದ್:- ಸನ್ಮಾನ್ಯ ಸಭಾಪತಿಯವರೇ, ಅವರಿಗೆ ಹೇಗೆ ಮಾತನಾಡುವುದಕ್ಕೆ ಹಕ್ಕಿದೆ, ಅದೇ ರೀತಿ ನಮಗೂ ಮಾತನಾಡುವುದಕ್ಕೆ ಹಕ್ಕಿದೆ.

(ಗೊಂದಲ)

ಸಭಾಪತಿಯವರು:- ಮಾನ್ಯ ಭೋಜೇಗೌಡರೇ, ಸಮಾಧಾನದಿಂದ ಮಾತನಾಡಿ. ತಮಗೆ ಅವಕಾಶ ಕೊಡುತ್ತೇನೆ. ಎಲ್ಲರೂ ಸುಮ್ಮನೆ ಕುಳಿತುಕೊಳ್ಳುತ್ತಾರೆ.

ಶ್ರೀ ಎಸ್.ಎಲ್.ಭೋಜೇಗೌಡ:- ಸನ್ಮಾನ್ಯ ಸಭಾಪತಿಯವರೇ, ನನಗೆ ಸಾಮ, ಭೇದ ದಂಡ ಎಲ್ಲವೂ ಗೊತ್ತಿದೆ. ಯಾವಾಗ ಯಾವುದನ್ನು ಉಪಯೋಗಿಸಬೇಕು ಅದನ್ನು ಉಪಯೋಗಿಸುತ್ತೇನೆ. ಇನ್ನೂ ಎಷ್ಟು ಸೈಲೆಂಟ್ ಆಗಿ ಮಾತನಾಡಬೇಕೆಂದು ಹೇಳಿ, ಅಷ್ಟು ಸೈಲೆಂಟಾಗಿ ಮಾತನಾಡುತ್ತೇನೆ.

ಸಭಾಪತಿಯವರು:- ಏನಾಯಿತು ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಎಸ್.ಎಲ್.ಭೋಜೇಗೌಡ:- ಸನ್ಮಾನ್ಯ ಸಭಾಪತಿಯವರೇ, ಅವರು ದೇವೇಗೌಡರ ಮೇಲೆ ಹೈಕೋರ್ಟ್‌ನಲ್ಲಿ ಈ ರೀತಿ ಒಂದು ಕೇಸ್ ಬಂತು ಎಂದು ಹೇಳಿದರು.

ಸಭಾಪತಿಯವರು:- ಏನು?

ಶ್ರೀ ಎಸ್. ರವಿ:- ಸನ್ಮಾನ್ಯ ಸಭಾಪತಿಯವರೇ, ಅವರು ಹೆಸರು ಹೇಳಲಿಲ್ಲ.

ಶ್ರೀ ಎಸ್.ಎಲ್.ಭೋಜೇಗೌಡ:- ಸನ್ಮಾನ್ಯ ಸಭಾಪತಿಯವರೇ, ಮಾಜಿ ಪ್ರಧಾನ ಮಂತ್ರಿಗಳು ಎಂದರೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಇರುವುದು ಅವರೊಬ್ಬರೇ. ಅದಕ್ಕಾಗಿಯೇ "ಮಾನ್ಯ ಹೆಚ್.ಡಿ.ದೇವೇಗೌಡರು" ಎಂದು ಹೆಸರು ಹೇಳಿದ್ದೇನೆ.

---

ಶ್ರೀ ಸಿ.ಎನ್.ಮಂಜೇಗೌಡ:- ಸನ್ಮಾನ್ಯ ಸಭಾಪತಿಯವರೇ, ಮೊದಲು ಅವರು ಶ್ರೀ ಹೆಚ್.ಡಿ.ದೇವೇಗೌಡರು ಎಂದು ಹೆಸರು ಹೇಳಿದರು.

ಶ್ರೀ ಎಸ್.ಎಲ್.ಭೋಜೇಗೌಡ:- ಸನ್ಮಾನ್ಯ ಸಭಾಪತಿಯವರೇ, ಮಾಜಿ ಪ್ರಧಾನ ಮಂತ್ರಿಗಳು ಎಂದು ಹೇಳಿದ್ದಾರೆ ಅದರ ಜೊತೆಗೆ ಹೆಸರನ್ನು ಸಹ ಉಲ್ಲೇಖ ಮಾಡಿದ್ದಾರೆ. ಎರಡೂ ಬಂದಿದೆ. ಹೈಕೋರ್ಟ್‌ನಲ್ಲಿ verdict ಬಂದಿರುವುದನ್ನು ಅವರು ಓದಿದ್ದಾರೆ. ಸಂತೋಷ. ಆಮೇಲೆ ಏನಾಗಿದೆ ಎನ್ನುವುದನ್ನು ಅವರು ಹೇಳಬೇಕೆಂದು ನಾನು ಕೇಳಿದೆ. ಅವರು ಅದನ್ನು ಹೇಳಿಲ್ಲ. ಮಾನ್ಯ ಪಿ.ಆರ್.ರಮೇಶ್‌ರವರು ತಮ್ಮ ಮಾತುಗಳನ್ನು affidavit ಗೆ ನಿಲ್ಲಿಸಿದ್ದಾರೆ. It is the bounden duty of every citizen of this Country to respect the verdict of any court order. In that aspect, ಆ ಕೋರ್ಟ್ ಆರ್ಡರ್‌ನಲ್ಲಿ ಏನೇನು ಹೇಳಿದೆ. ಅದಕ್ಕೆ ನಾನು ಇನ್ನು ಮುಂದೆ ಆ ವ್ಯಕ್ತಿಯ ಬಗ್ಗೆ ಮಾತನಾಡುವುದಿಲ್ಲ ಎಂದು affidavit ಹಾಕಿದ್ದಾರೆ. What is wrong in it? ಇಷ್ಟು ವಿಚಾರಗಳನ್ನು ಮಾನ್ಯ ಪಿ.ಆರ್.ರಮೇಶ್‌ರವರು ಸದನಕ್ಕೆ ತಿಳಿಸಿದ್ದಾರೆ. ಸಂತೋಷ. ಆಮೇಲೆ ಏನಾಯಿತು ಎನ್ನುವುದನ್ನು ತಿಳಿಸಿಲ್ಲ.

ಸಭಾಪತಿಯವರು:- ಮಾನ್ಯ ಭೋಜೇಗೌಡರೇ, ಅವರು ಹೇಳುವುದಕ್ಕೆ ತಾವು ಅವರಿಗೆ ಮಾತನಾಡುವುದಕ್ಕೆ ಬಿಟ್ಟೇ ಇಲ್ಲ.

ಶ್ರೀ ಎಸ್.ಎಲ್.ಭೋಜೇಗೌಡ:- ಸನ್ಮಾನ್ಯ ಸಭಾಪತಿಯವರೇ, ನನಗೆ ಟೈಂ ಸಿಗಲಿಲ್ಲ. ಈಗ ಅವರು ಹೇಳದಿದ್ದರೆ ನಾನು ಹೇಳುತ್ತೇನೆ. ಅದನ್ನು ತೋರಿಸಬೇಕಾಗಿರುವುದು ನಮ್ಮ ಕರ್ತವ್ಯವಾಗಿದೆ. ಆ ಕೆಲಸವನ್ನು ನಾವು ನಾಳೆ ಮಾಡುತ್ತೇವೆ. “ಮಾನ್ಯ ಹೆಚ್.ಡಿ.ದೇವೇಗೌಡರು ಈ ರೀತಿಯಾಗಿ

affidavit ಹಾಕಿರುವುದರಿಂದ ಅವರು ಮಾತನಾಡುವುದಕ್ಕೆ ಆಗುತ್ತಿಲ್ಲ. ಅವರ ಪರವಾಗಿ.......” ಎಂದು ಹೇಳಿದ್ದಾರೆ. I request my friend to take back those words.

ಸಭಾಪತಿಯವರು:- ಮಾನ್ಯ ಭೋಜೇಗೌಡರೇ, ತಾವು ಏನು ಹೇಳಿದ್ದೀರಿ ಅದನ್ನು ಮತ್ತೊಂದು ಬಾರಿ ಹೇಳಿ.

ಶ್ರೀ ಎಸ್.ಎಲ್.ಭೋಜೇಗೌಡ:- ಸನ್ಮಾನ್ಯ ಸಭಾಪತಿಯವರೇ, “ಮಾನ್ಯ ಹೆಚ್.ಡಿ.ದೇವೇಗೌಡರು ಈ ರೀತಿಯಾಗಿ affidavit ಹಾಕಿರುವುದರಿಂದ ಅವರು ಮಾತನಾಡುವುದಕ್ಕೆ ಆಗುತ್ತಿಲ್ಲ. Sure, he is not the member of this House. ಅವರ ಪರವಾಗಿ.......” ಎಂದು ಹೇಳುತ್ತಿದ್ದಾರೆ. Then, what is my right?

ಶ್ರೀ ಎಸ್.ರವಿ:- ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಭೋಜೇಗೌಡರು ಅವರ ಪಾರ್ಟಿಯವರೇ ಆಗಿದ್ದಾರೆ.

ಶ್ರೀ ಎಸ್.ಎಲ್.ಭೋಜೇಗೌಡ:- ಸನ್ಮಾನ್ಯ ಸಭಾಪತಿಯವರೇ, ಪಾರ್ಟಿ ಎನ್ನುವುದು ನನ್ನ ವೈಯಕ್ತಿಕ ವಿಚಾರವಾಗಿದೆ. ಒಂದು ಹಕ್ಕಿನಿಂದ ನಾನು ಈ ಸದನವನ್ನು ಪ್ರವೇಶ ಮಾಡಿದ್ದೇನೆ. ಅದೇ ಹಕ್ಕಿನಿಂದ ನಾನು ನಿಯಮ ೬೮ರಡಿಯಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. Chair has permitted for it. ಮಾನ್ಯ ರಮೇಶ್‌ರವರು ಹೇಗೆ ಮಾತನಾಡಬೇಕಾಗಿತ್ತು ಎಂದರೆ, “ಮಾನ್ಯ ಹೆಚ್.ಡಿ.ದೇವೇಗೌಡರು affidavit ಹಾಕಿದ್ದಾರೆ” ಎನ್ನುವ ಕಡೆ ನಿಲ್ಲಿಸಿ, “ನಮ್ಮ ಸ್ನೇಹಿತರು ನಿಯಮ ೬೮ರಡಿಯಲ್ಲಿ ಆ ವಿಚಾರವನ್ನು ಪ್ರಸ್ತಾಪ ಮಾಡಿ, ಅದರ ಮೇಲೆ ಮಾತನಾಡುತ್ತಿದ್ದಾರೆ” ಎಂದು

ಹೇಳಿದ್ದರೇ, I accept it. ಅದನ್ನು ಬಿಟ್ಟು "ಮಾನ್ಯ ಹೆಚ್.ಡಿ.ದೇವೇಗೌಡರ ಪರವಾಗಿ ಮಾತನಾಡುತ್ತಿದ್ದಾರೆ" ಎಂದರೆ, It gives some other meaning.

(ಮುಂದುವರಿದಿದೆ)

(618) 24.3.2022 5.40 ಪಿಕೆ:ಕೆಎಸ್

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ(ಮುಂದು)**

ಮಾನ್ಯ ಸಭಾಪತಿಗಳೆ, ತಾವು ಹಿರಿಯರಿದ್ದೀರಿ. ಅದರ ಅರ್ಥ ಏನು ಎನ್ನುವುದನ್ನು ಚೆಕ್ ಮಾಡಿ. "ಮಾನ್ಯ ದೇವೇಗೌಡರು . . . ಅಫಿಡವಿಟ್ . . ." ಇದೆಲ್ಲಾ ಆಯಿತು. ಒಬ್ಬ ಸದಸ್ಯರು ನಿಯಮ 68ರ ಅಡಿಯಲ್ಲಿ ಒಂದು ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ; ಅವರು ಮಾತನಾಡುತ್ತಿದ್ದಾರೆ ಎಂದರೆ, it gives different meaning. ಅದು ಬೇರೆ ತರಹ ಅರ್ಥ ಕೊಡುತ್ತದೆ.

**ಸಭಾಪತಿಯವರು:-** ಮಾನ್ಯ ಸದಸ್ಯರು ಬೇಕೆಂತಲೇ ಆ ರೀತಿ ಹೇಳಿಲ್ಲ.

ಶ್ರೀ **ಎಸ್.ಎಲ್.ಭೋಜೇಗೌಡ:-** ನಾನು ಮಾನ್ಯ ದೇವೇಗೌಡರ ಪರವಾಗಿ ಮಾತನಾಡುವುದಕ್ಕೆ ಇಲ್ಲಿ ಬಂದಿಲ್ಲ. ಈ ಸದನದ ಒಬ್ಬ ಸದಸ್ಯನಾಗಿ ನನಗೆ ಮಾತನಾಡುವ ಹಕ್ಕಿದೆ. ಆ ನಿಟ್ಟಿನಲ್ಲಿ ನನ್ನ ಮಾತುಗಳನ್ನು ಹೇಳುತ್ತಿದ್ದೇನೆ.

**Mr. CHAIRMAN:-** Sri. S.L.Bhojegowda rectified it. ಮಾನ್ಯ ರಮೇಶ್‌ರವರೇ 4 ಗಂಟೆ 50 ನಿಮಿಷಕ್ಕೆ ನೀವು ಶುರೂ ಮಾಡಿದ್ದು, 5 ನಿಮಿಷದಲ್ಲಿ ಮುಗಿಸಿ.

**ಶ್ರೀ ಪಿ.ಆರ್.ರಮೇಶ:-** ಮಾನ್ಯ ಸಭಾಪತಿಗಳೆ, ಇನ್ನು 5 ನಿಮಿಷದಲ್ಲಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಗಳೆ, ನೈಸ್ ವಿಷಯ ತಿಳಿದುಕೊಳ್ಳಬೇಕೆಂದು ನನಗೆ ಬಹಳ ಕುತೂಹಲ ಇದೆ. ಅದು ಏನೇನಿದೆ ಎಂದು ಅದರ ಗರ್ಭಕೋಶದಲ್ಲಿರುವುದೆಲ್ಲಾ ಹೊರಗಡೆ ಬರುತಿದೆ. ನೈಸ್ ವಿಷಯವನ್ನು ನೈಸ್ ಆಗಿ ಮಾತನಾಡಲಿ. ಅದೇಕೆ rough ಆಗಿ ಮಾತನಾಡುತ್ತಿದ್ದೀರಿ? ನಮಗೆ ಈ ಚರ್ಚೆ ಕೇಳಿದರೆ ಬಹುಶಃ ಖುಷಿಯಾಗುವ ಹಾಗಿದೆ. ಕರ್ಣಕಠೋರವಾಗದ ಹಾಗೆ ನೈಸ್ ಆಗಿ ಹೇಳಿದರೆ ಒಳ್ಳೆಯದು.

**ಸಭಾಪತಿಯವರು:-** ಎಲ್ಲರೂ ಫ್ರೆಂಡ್ಲಿ ಆಗಿರಬೇಕು.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಗಳೆ, ಈ ಯೋಜನೆ ಏನು ಆರಂಭವಾಯಿತೋ, ಆ ದಿಸೆಯಲ್ಲಿ ಏನಾಗಿತ್ತೋ ಅದು ಇವತ್ತು ಸಂಪೂರ್ಣ ಆಗಬೇಕಿದೆ. ರೈತರಿಗೆ ಪ್ರತಿಯೊಂದು ಎಕರೆಗೆ 40X 60 ನಿವೇಶನ ಕೊಡತಕ್ಕಂಥದ್ದು ಅಗ್ರೀಮೆಂಟ್‌ನಲ್ಲಿದೆ. ಆ ನಿವೇಶನಗಳನ್ನು ಕೊಡುವ ಸಲುವಾಗಿ ಜಾಗ ಕೂಡ ಇದೆ. ಇವತ್ತು ಸರ್ಕಾರದ ಜೊತೆಗೆ ಸ್ವಾಧೀನಪಡಿಸಿಕೊಂಡಿರುವಂತಹ ಜಾಗ ಕೂಡ ಇದೆ. ಆ ಸ್ವಾಧೀನಪಡಿಸಿಕೊಂಡಿರುವ ಜಾಗದಲ್ಲಿ ಆದಷ್ಟು ಬೇಗ layout ಮಾಡಿ, ಜಮೀನು ಕಳೆದು ಕೊಂಡಿರುವ ರೈತರಿಗೆ ಆ ನಿವೇಶನಗಳನ್ನು ಕೊಡುವ ಕೆಲಸವನ್ನು ಮಾಡಲೇ ಬೇಕು. ಈ ಯೋಜನೆಗೆ ಏನೆಲ್ಲವನ್ನು ತೆಗೆದುಕೊಂಡಿದ್ದೀರೋ ಆ ಎಲ್ಲಾ ಜಾಗಗಳು ಸರ್ಕಾರದ ಹತ್ತಿರವೇ ಇದೆ. ಇದನ್ನು ಆದಷ್ಟು ಬೇಗ express highway ಮಾಡಿದರೆ, ನೀವೇನು 1995ರಲ್ಲಿ concept ಇಟ್ಟುಕೊಂಡಿದ್ದಿರೋ... ಒಂದು Proverb ಇದೆ, *"Begin with the end in mind"*, which means to start or begin a task keeping a goal in mind to reach the destination. ಎಂದು ಹೇಳುತ್ತಾರೆ. ಇಲ್ಲೇನಾಗಿದೆ ಎಂದರೆ, ನೀವು ಒಂದು arc ಮತ್ತು link road ಕೊಟ್ಟಿದ್ದೀರಿ. ಆದರೆ, it is useful. ಬೆಂಗಳೂರಿಗೆ ಅದರ ಅವಶ್ಯಕತೆ ಇತ್ತು; ಅದರಿಂದ ಪ್ರಯೋಜನ ಪಡೆಯುತ್ತಲೂ ಇದ್ದಾರೆ. ಆದರೆ, ಇದರ ಸಂಪೂರ್ಣವಾದ ದಿಕ್ಕು ಏನಿತ್ತು ಆ ದಿಕ್ಕನ್ನು ನೀವು ತಲುಪಿಲ್ಲ. ಹಾಗಾಗಿ, ರೀಚ್ ಆಗುವುದಕ್ಕೆ ಏನೆಲ್ಲಾ ತೊಡಕಿತ್ತೋ ಅವೆಲ್ಲವನ್ನೂ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ತೆರವು ಮಾಡಿದೆ. ರೈತರಿಗೆ ಏನು ಸಲ್ಲಬೇಕೋ ಅದನ್ನೂ ಸಲ್ಲಿಸಿ, ಈ ಯೋಜನೆಯನ್ನು ಸಂಪೂರ್ಣ ಮಾಡುವುದಕ್ಕೆ ನಿಮಗೆ ಎಲ್ಲಾ ಶಕ್ತಿ ಇದೆ. There is no hurdle.

ಹಾಗಾಗಿ, ಏನು ಬಾಕಿ ಇದೆಯೋ ಅದನ್ನು ಮುಗಿಸಿ. It is an intellectual project. ಯಾರೋ ಕೆಲಸವನ್ನು ಚೆನ್ನಾಗಿ ಮಾಡಿದ್ದಾರೆ ಎಂದು ಅವರಿಗೆ ಪ್ರೋತ್ಸಾಹ ಕೊಟ್ಟರೆ ಅದನ್ನು ನೋಡಿಕೊಂಡು ಇನ್ನೊಬ್ಬರೂ ಬೆಂಗಳೂರಿಗೆ ಬರುತ್ತಾರೆ. ಇದರಿಂದ ಇದೇ ರೀತಿಯ ಇನ್ನೊಂದು ಯೋಜನೆ ಆಗುತ್ತದೆ. It will benefit our citizens. ನಮ್ಮ ಜನಗಳಿಗೆ ಅನುಕೂಲ ಆಗುತ್ತದೆ. ಈ ದಿಸೆಯಲ್ಲಿ ನೀವು ಚಿಂತನೆ ಮಾಡಬೇಕು. ಇವತ್ತು ಇವರಿಗೆ ತೊಂದರೆ ಕೊಡುವಂಥದ್ದು ಮಾಡಿದರೆ 10 ಜನ ಬೆಂಗಳೂರಿಗೆ ಬರಬೇಕು ಎಂದಿದ್ದವರೂ ಬರುವುದೇ ಇಲ್ಲ. It will not attract the people. ಅಂಥವರನ್ನು ನಾವು ಕಳೆದುಕೊಳ್ಳುತ್ತೇವೆ. ಆದ್ದರಿಂದ ನಾವು ಪಕ್ಷಾತೀತವಾಗಿ ನಮ್ಮ ಜನಗಳಿಗೆ ಕೊಡಬೇಕಾದ ಯೋಜನೆಗಳಿಗೆ ಪೂರಕವಾಗಿ ಮಾಡಬೇಕಾಗಿವುದೆಲ್ಲವನ್ನೂ ಮಾಡಬೇಕಾಗುತ್ತದೆ. ನಾವು ಇದರಲ್ಲಿ ರಾಜಕೀಯ ಮಾಡುತ್ತಿದ್ದರೆ, it is never-ending. ಇದು 25 ವರ್ಷಗಳಿಂದ ನಡೆಯುತ್ತಿರುವಂಥದ್ದು ಇವತ್ತೂ ಕೂಡ ಮುಕ್ತಾಯಗೊಳಿಸಲು ಆಗಿಲ್ಲ. ಕನ್ನಡಿಗರಾದ ನಮಗೆ, ಇದು ಒಂದು ರೀತಿಯ ಅವಮಾನದಂತೆ ಭಾಸವಾಗುತ್ತದೆ. ಆದ್ದರಿಂದ ಈ ಯೋಜನೆಗೆ ಸಕಾರಾತ್ಮಕವಾಗಿ ಸ್ಪಂದಿಸುವ ನಿಟ್ಟಿನಲ್ಲಿ ಎಲ್ಲಾ ರೀತಿಯ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ, ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದನೆ ಸಲ್ಲಿಸುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ದಿನಾಂಕ: 16.12.2019ರಂದು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನೈಸ್ ಸಂಸ್ಥೆಯಿಂದ ಬೆಂಗಳೂರು ಮೆಟ್ರೋ ಯೋಜನೆಗೆ ಅವಶ್ಯವಿರುವ ಭೂಮಿಯ ಹಸ್ತಾಂತರ ಕುರಿತು ನಡೆದ ಸಭೆಯ ನಡವಳಿಗಳು ನನ್ನ ಹತ್ತಿರ ಇದೆ. ಅಧ್ಯಕ್ಷತೆ, ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು. ಶ್ರೀ ಆರ್.ಅಶೋಕ್, ಶ್ರೀ ಬಸವರಾಜ ಬೊಮ್ಮಾಯಿ, ಶ್ರೀ ಜೆ.ಮಾಧುಸ್ವಾಮಿ ಮತ್ತು ಎಲ್ಲಾ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು ಆ ಸಭೆಯಲ್ಲಿದ್ದರು. ಈ ಸಭೆಯ ನಡವಳಿಯ ಕೊನೆ ಪ್ಯಾರವನ್ನು ಓದುತ್ತೇನೆ. "*ಸಭೆಯ ಅಧ್ಯಕ್ಷತೆ ವಹಿಸಿದ್ದ ಮಾನ್ಯ ಮುಖ್ಯಮಂತ್ರಿಗಳು ಮೆಟ್ರೋ ಯೋಜನೆಯ ಪ್ರಗತಿ ಯಾವುದೇ ಕಾರಣದಿಂದ ಕುಂಠಿತವಾಗಬಾರದೆಂದು ಸೂಚಿಸುತ್ತಾ ಮಾನ್ಯ ಕಾನೂನು ಸಚಿವರು ಅಭಿಪ್ರಾಯ ಪಟ್ಟಂತೆ ನೈಸ್ ಸಂಸ್ಥೆಗೆ ಸೇರಿದ ಜಮೀನುಗಳ ಭೂಸ್ವಾಧೀನ*

*ಪ್ರಕ್ರಿಯೆಯನ್ನು ನಿಯಮಾನುಸಾರ ಮುಕ್ತಾಯಗೊಳಿಸಿ ಕೆಐಎಡಿ ಕಾಯ್ದೆಯ ವಿಧಾನದಂತೆ ಸಾಮಾನ್ಯ ಅವಾರ್ಡ್ ರಚಿಸಿ ಪರಿಹಾರ ಧನವನ್ನು ಸಿವಿಲ್ ನ್ಯಾಯಾಲಯದಲ್ಲಿ ಜಮಾ ಮಾಡಬಹುದಾಗಿದೆ ಎಂದು ಸೂಚಿಸಿದರು. ಅಲ್ಲದೇ ಈ ಉರಿತು ನೈಸ್ ಸಂಸ್ಥೆ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದಲ್ಲಿ ಆ ಕುರಿತು ಸೂಕ್ತ ಕಾನೂನು ಕ್ರಮ ಜರುಗಿಸಲು ಅಡ್ವೊಕೇಟ್ ಜನರಲ್ ಅವರಿಗೆ ಸೂಚಿಸಲಾಯಿತು ಮತ್ತು ಕೆಐಎಡಿಬಿ ಅಧಿಕಾರಿಗಳಿಗೆ ಈ ಎಲ್ಲಾ ಜಮೀನುಗಳ ಭೂಸ್ವಾಧೀನತೆಯನ್ನು ತೀವ್ರಗತಿಯಲ್ಲಿ ಮುಕ್ತಾಯಗೊಳಿಸಿ ಜಮೀನುಗಳನ್ನು ಮೆಟ್ರೋ ನಿಗಮಕ್ಕೆ ಹಸ್ತಾಂತರಿಸಲು ಸೂಚಿಸಲಾಯಿತು"* ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದಂತಹ ಸಭೆಯಲ್ಲಿ ಹಣವನ್ನು ಕೋರ್ಟ್‌ನಲ್ಲಿ ಡೆಪಾಸಿಟ್ ಮಾಡಬೇಕು ಎಂದು ತೀರ್ಮಾನಿಸಲಾಯಿತು. ಆದರೆ ನಂತರ, ಈ ಮೊತ್ತವನ್ನು ಫಲಾನುಭವಿಗಳಿಗೆಯೇ ಕೊಟ್ಟರೂ ಎಂದು ಟಿಪ್ಪಣಿ ಕೂಡ ಆಗಿದೆ. ಆಗ ಮಾನ್ಯ ಜಗದೀಶ್ ಶೆಟ್ಟರ್‌ರವರು ಆ ಸಂಬಂಧಪಟ್ಟ ಅಧಿಕಾರಿಯ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದರು. Bengaluru Metro Rail Project (Airport Metro line) Phase 2B ಯೋಜನೆಗಾಗಿ, ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ ಅಕ್ಕಲೇನಹಳ್ಳಿ ಗ್ರಾಮಕ್ಕೆ ಸಂಬಂಧಪಟ್ಟಂತೆ 37 ಕಿ.ಮೀ. . . ." ಮಾನ್ಯ ಸಭಾಪತಿಗಳೆ, ಇಲ್ಲಿ ಇಬ್ಬರು ಭೂಸ್ವಾಧೀನ ಅಧಿಕಾರಿಗಳಿದ್ದಾರೆ. ಶ್ರೀ ಬಾಳಪ್ಪ ಹುದಿಗುಂದಿ ಮತ್ತು ಶ್ರೀ ಮಂಜುನಾಥ್. "ಒಟ್ಟಾರೆ ಅಕ್ರಮವಾಗಿ, ಅತುರದ ಕ್ರಮದಿಂದ ಮೊಬಲಗು ರೂ. 79 ಕೋಟಿ 30 ಲಕ್ಷ 60 ಸಾವಿರಗಳನ್ನು ಫಲಾನುಭವಿಗಳಿಗೆ ಪಾವತಿಸಿದ್ದು, ಅದೇ ದಿನಾಂಕದಂದು ಫಲಾನುಭವಿಗಳ ಖಾತೆಗೆ ಜಮಾ ಆಗಿರುವುದು ದುರುದ್ದೇಶದಿಂದ ಕೂಡಿರುತ್ತದೆ. ಆದ್ದರಿಂದ ಇವರನ್ನು ಸಸ್ಪೆಂಡ್ ಮಾಡಬೇಕು" ಎಂದು ಹೇಳಿದೆ. ನಂತರ ಮತ್ತೆ, ಆ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕೆಂದು ಟಿಪ್ಪಣಿ ಆಗುತ್ತದೆ. ಆದರೆ ಅದೇ ಅಧಿಕಾರಿ ಇವತ್ತಿಗೂ ಇದ್ದಾರೆ; ಅವರೇ ರೂ.17 ಕೋಟಿ ಹಣವನ್ನು ಬಿಡುಗಡೆ ಮಾಡಿದ್ದಾರೆ. ಇವತ್ತಿನವರೆಗೂ ಅವರ ಮೇಲೆ ಕ್ರಮ ಆಗಿಲ್ಲ. ಇದನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಹೆಚ್.ಎಸ್.ಗೋಪಿನಾಥ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ನೈಸ್ ರಸ್ತೆಯ ಬಗ್ಗೆ ಮಾತನಾಡುವಾಗ ಶ್ರೀ ಹೆಚ್.ಡಿ.ಸೋಮಶೇಖರ್ ರೆಡ್ಡಿ ಅವರ ಹೆಸರು ಬಂತು. ಅವರು

ನಮ್ಮ ತಂದೆ. ಅದಕ್ಕೋಸ್ಕರ ನಾನು ಈ ಕುರಿತು ಪ್ರಸ್ತಾಪ ಮಾಡಬಯಸುತ್ತೇನೆ. ಈ ವಿಚಾರವಾಗಿ ನಾನು ಅವರ ಹತ್ತಿರ ಕೇಳಿದಾಗ ಅವರು ಕೆಲವು ವಿಷಯಗಳನ್ನು ಹೇಳಿದರು. ಈ ರಸ್ತೆ ಮಾಡಬೇಕಾದರೆ ಇಷ್ಟೊಂದು ಜಾಗದ ಅವಶ್ಯಕತೆ ಇದೆಯೇ ಎನ್ನುವುದು ಮುಖ್ಯ ವಿಷಯವಾಗಿತ್ತು. ಮಾನ್ಯ ಮುಕ್ಕಣ್ಣಪ್ಪರವರು ಭ್ರಷ್ಟಾಚಾರ ನಿರ್ಮೂಲನ ಸಮಿತಿಯ ಅಧ್ಯಕ್ಷರೂ ಹಾಗೂ ವಿಧಾನಸಭೆಯ ವಿರೋಧ ಪಕ್ಷದ ನಾಯಕರಾಗಿದ್ದರು. ನಮ್ಮ ತಂದೆಯವರು ಸಹ ಭ್ರಷ್ಟಾಚಾರ ನಿರ್ಮೂಲನ ಸಮಿತಿಯ ಸೆಕ್ರೆಟರಿ ಆಗಿದ್ದರು; ಆದ್ದರಿಂದ ಕೇಸ್‌ಗೆ ಹೋಗಿದ್ದರು. ಆ ಕೇಸ್‌ನಲ್ಲಿ, 20,193 ಎಕರೆಯನ್ನು ಈ ಪ್ರಾಜೆಕ್ಟ್‌ಗೆ ಕೊಡಬೇಕು, ಕೊಟ್ಟಮೇಲೆ ಸರ್ಕಾರ ಒಂದು ಅಫಿಡೆವಿಟ್‌ಅನ್ನು ಕೊಡುತ್ತದೆ; ಮತ್ತೆ ನೈಸ್ ಕಂಪನಿಯೂ ಕೊಡುತ್ತದೆ. 41 ಕಿ.ಮೀ peripheral road ಗೆ 2193 ಎಕರೆ, ಲಿಂಕ್ ರೋಡ್‌ಗೆ 270 ಎಕರೆ, 111 ಕಿ.ಮೀ. expressway ಗೆ 4528 ಎಕರೆ ಮತ್ತು ಒಟ್ಟು ಟೋಲ್ ರಸ್ತೆ 6999 ಎಕರೆ. 5 ಟೌನ್‌ಶಿಪ್‌ಗಳಿಗೆ 13,194 ಎಕರೆಯನ್ನು ಕೊಟಿದ್ದಾರೆ. ಇಲ್ಲಿರುವ ಪ್ರಶ್ನೆ ಏನೆಂದರೆ, ಬಿ.ಎಂ.ಆರ್.ಸಿ.ಎಲ್. ಮೆಟ್ರೋ ಕೊಡುವ ಪರಿಹಾರ ನೈಸ್ ಸಂಸ್ಥೆಗೆ ಹೋಗಬೇಕೇ ಬೇಡವೇ ಎನ್ನುವುದಾಗಿದೆ. ಹೈಕೋರ್ಟ್ ಆದೇಶದ ಪ್ರಕಾರ 2193 ಎಕರೆ ಜಾಗವನ್ನು 41 ಕಿ.ಮೀ. peripheral road ಗೆಂದು ಕೊಟ್ಟಾಗ, 30 ವರ್ಷ ಆದಮೇಲೆ ಆ ಸಂಪೂರ್ಣ ರಸ್ತೆಯ ನಿಯಂತ್ರಣವನ್ನು ಸರ್ಕಾರಕ್ಕೆ ಕೊಡಬೇಕು. ಅದರಲ್ಲಿ ಇದ್ದಂಥ ಜಾಗದಲ್ಲಿ ಮೆಟ್ರೋಗೆಂದು ಜಾಗವನ್ನು ಬಿಟ್ಟುಕೊಟ್ಟಿದ್ದಿರೋ ಅದರ ಪರಿಹಾರ ಯಾರಿಗೆ ಹೋಗಬೇಕು? ಸರ್ಕಾರಕ್ಕೆ ಬರಬೇಕು ಅಲ್ಲವೇ? ಎರಡನೆಯದಾಗಿ, ಈ ರಸ್ತೆ ಮಾಡುವಾಗ 2193 ಎಕರೆಗೆ ಬದಲಾಗಿ, peripheral road ಮಾಡುವುದಕ್ಕೆ 2747 ಎಕರೆಯನ್ನು ಕೆ.ಐ.ಎ.ಡಿ.ಬಿ. ಯಿಂದ ಕೊಟ್ಟಿದ್ದೀರಿ.

(ಮುಂದು . . .)

---

(619) 24/03/2022 / 5:50/ ಎಸ್‌ಪಿಆರ್/ಕೆಎಸ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಹೆಚ್.ಎಸ್.ಗೋಪಿನಾಥ್(ಮುಂದು):-**

554 ಎಕರೆಗಳಷ್ಟು ಜಮೀನನ್ನು ಹೊಸದಾಗಿ ನೀಡಲಾಗಿದೆ. ಈ ವಿಷಯವು ನ್ಯಾಯಾಲಯದಲ್ಲಿ ಇರಲಿಲ್ಲ. ಬಿ.ಎಂ.ಆರ್.ಸಿ.ಎಲ್. ಸಂಸ್ಥೆಗೆ ಸರ್ಕಾರವು ಹೊಸದಾಗಿ ನೀಡಿದ ಭೂಮಿಯಲ್ಲಿ ಅದು ಬರುವುದಾದರೆ, ಅಷ್ಟು ಭೂಮಿ ರೈತರಿಗೆ ಹೋಗಬೇಕು. ಏಕೆಂದರೆ ಭೂಮಿ ರೈತರದ್ದೇ ಆಗಿದೆ. ಈ ಭೂಮಿಯನ್ನು ಸರ್ಕಾರವು ಬಿ.ಎಂ.ಆರ್.ಸಿ.ಎಲ್. ಸಂಸ್ಥೆಗೆ ಹೇಗೆ ನೀಡಿತು? 30 ವರ್ಷಗಳ ಗುತ್ತಿಗೆ ಅವಧಿ ಪೂರ್ಣಗೊಂಡ ನಂತರ ವಾಪಸ್ಸು ಕೊಡಬೇಕಾದ ಜಮೀನಿನಲ್ಲಿ ಕೆ.ಐ.ಎ.ಡಿ.ಬಿ. (Karnataka Industrial Area Development Board) ಸಂಸ್ಥೆಯವರು ನೈಸ್ ಕಂಪೆನಿಗೆ ಯಾವ ಕಾರಣಕ್ಕಾಗಿ ಕ್ರಯ ಪತ್ರ ಮಾಡಿಕೊಡುತ್ತಾರೆ? ಈ ಅಂಶಗಳನ್ನು ಸರ್ಕಾರವು ಸ್ಪಷ್ಟಪಡಿಸಬೇಕು. ಇದು ನನ್ನ ನೇರ ಪ್ರಶ್ನೆಯಾಗಿದೆ. ಈ ಉದ್ದೇಶಗಳಿಂದ ನಾವು ವಿಶ್ಲೇಷಣೆ ಮಾಡಿದಾಗ, ಮಾನ್ಯ ಪಿ.ಆರ್.ರಮೇಶ್‌ರವರು ಪ್ರಸ್ತಾಪಿಸಿದಂತೆ, ಯೋಜನೆಯ ಕಾಮಗಾರಿಗಳಲ್ಲಿ ಪ್ರಗತಿಯುಂಟಾಗಬೇಕು. At what cost ಎನ್ನುವ ಪ್ರಶ್ನೆ ಮುಖ್ಯವಾಗುತ್ತದೆ. ಯಾರೋ ದುಡ್ಡು ಮಾಡುವ ಕಾರಣಕ್ಕಾಗಿ ನಾವುಗಳು ಇದರಲ್ಲಿ ಏಕೆ ಭಾಗವಹಿಸಿಬೇಕು? ಸರ್ಕಾರದ ದುಡ್ಡನ್ನು ಏಕೆ ದುರುಪಯೋಗಪಡಿಸಬೇಕು ಎನ್ನುವುದು ನನ್ನ ಪ್ರಶ್ನೆಯಾಗಿದೆ. ಇಷ್ಟು ಭೂಮಿಯನ್ನು ಸರ್ಕಾರವು ಕೆ.ಐ.ಎ.ಡಿ.ಬಿ. ಸಂಸ್ಥೆಗೆ ಯಾವ ಉದ್ದೇಶಕ್ಕಾಗಿ ಕ್ರಯ ಪತ್ರ ಮಾಡಿಕೊಟ್ಟಿತು? ಗುತ್ತಿಗೆ ಆಧಾರದ ಮೇಲೆ ನೀಡಬೇಕಾದ ಸ್ವತ್ತನ್ನು ಸರ್ಕಾರವು ಯಾವ ಕಾರಣಕ್ಕಾಗಿ ಕ್ರಯ ಮಾಡಿಕೊಟ್ಟಿದೆ ಎನ್ನುವುದರ ಬಗ್ಗೆ ಸರ್ಕಾರವು ಸ್ಪಷ್ಟೀಕರಣವನ್ನು ನೀಡಬೇಕು.

**ಶ್ರೀ ಮುನಿರಾಜು ಗೌಡ ಪಿ.ಎಂ. (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ನೈಸ್ ಎನ್ನುವ ರಸ್ತೆಯ ಮುಖಾಂತರವಾಗಿ ಇವತ್ತಿನ ದಿವಸ ನಮಗೆಲ್ಲಾ ಅದರಲ್ಲೂ ವಿಶೇಷವಾಗಿ ನನಗೆ ಹೊಟ್ಟೆ ಮೇಲೆ ಈಗಾಗಲೇ ಹೊಡೆದಿದ್ದಾರೆ ಹಾಗೂ ನಂತರದಲ್ಲಿ ನನ್ನ ಬೆನ್ನಿನ ಮೇಲೆಯೂ ಸಹ ಹೊಡೆಯುತ್ತಿದ್ದಾರೆ. ನಮ್ಮ ತಾತ,

ತಂದೆಯವರುಗಳು ಅಲ್ಲಿ 1948 ನೇ ಇಸ್ವಿಯಲ್ಲಿ ಗೊಟ್ಟಿಗೇರೆಯಲ್ಲಿನ ಶಾನುಭೋಗರಾದ ವಲ್ಲಭಯ್ಯ, ಶೇಷಗಿರಿ ರಾವ್, ಚಿಕ್ಕಬೈರಪ್ಪ ಎನ್ನುವವರಿಂದ ಜಮೀನನ್ನು ಖರೀದಿಸಿದ್ದಾರೆ. ಈ ಶಾನುಭೋಗರವರುಗಳು ಸರ್ಕಾರಕ್ಕೆ ಕಿಮ್ಮತ್ತನ್ನು ಕಟ್ಟಿ, ಸುಮಾರು 42 ಎಕರೆಯಷ್ಟು ಭೂಮಿಯನ್ನು ಸರ್ಕಾರದಿಂದ ಖರೀದಿಸಿದ್ದರು. 1952 ನೇ ಇಸ್ವಿಯಲ್ಲಿ ನಮ್ಮ ತಾತ ಮತ್ತು ತಂದೆಯವರು ಈ ಜಮೀನನ್ನು ಜೊತೆಯಲ್ಲಿ ಖರೀದಿಸಿದ್ದರು. ಈ ಜಮೀನನ್ನು ತೆಗೆದುಕೊಂಡ ನಂತರ, ನೈಸ್ ರಸ್ತೆಯವರು ಬಂದರು. ಆಗ ಅಲ್ಲಿನ ರಸ್ತೆ ಅಭಿವೃದ್ಧಿಯಾಯಿತು, ನಮಗೆ ಒಳ್ಳೆಯ ರಸ್ತೆ ಬರುತ್ತಿದೆ ಎಂದು ನಾವು ಬಹಳ ಸಂತೋಷಪಟ್ಟೆವು. ಇದರಿಂದಾಗಿ ನಾವು ಅಲ್ಲಿ ಮಾಡುತ್ತಿದ್ದ ವ್ಯವಹಾರಗಳನ್ನು ನಿಲ್ಲಿಸುವಂತಾಯಿತು. ಆದರೆ, ಇವತ್ತಿನ ದಿವಸ ನಾವು ನಮ್ಮ ಜಮೀನಿನಲ್ಲಿ ಕಾಂಪೌಂಡ್‌ನ್ನು ನಿರ್ಮಿಸಲು ಸಹಾ ಅವಕಾಶ ನೀಡುತ್ತಿಲ್ಲ ಮತ್ತು ಅಲ್ಲಿ ಯಾವುದೇ ರೀತಿಯ ವ್ಯವಸಾಯಗಳನ್ನು ಮಾಡಲು ಅವಕಾಶವನ್ನೂ ಸಹ ಅವರು ನೀಡುತ್ತಿಲ್ಲ. 1970 ನೇ ಇಸ್ವಿಯ ನಂತರ ಗೊಲ್ಲಹಳ್ಳಿ ಮತ್ತು ಅಂಜನಾಪುರ ಭಾಗದಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಾಂಗದವರು ತಮಗೆ ತಿನ್ನುವುದಕ್ಕೆ ಆಹಾರವಿಲ್ಲ, ನಮಗೆ ದುಡಿಯಲು ಕೈ ಮತ್ತು ಶಕ್ತಿ ಇದೆ, ಆದರೆ ಉಳಮೆ ಮಾಡಲು ಜಮೀನು ಇಲ್ಲ ಎಂದು ಜಿಲ್ಲಾಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದಾಗ ಸುಮಾರು 30 ಕ್ಕಿಂತ ಹೆಚ್ಚು ಜನರಿಗೆ ಸರ್ಕಾರದ ವತಿಯಿಂದ 50 ಎಕರೆಗಳಗಿಂತ ಹೆಚ್ಚು ಜಮೀನನ್ನು ಉಚಿತವಾಗಿ ಮಂಜೂರು ಮಾಡಲಾಗುತ್ತದೆ. ಆದರೆ ಇವತ್ತಿನ ದಿವಸ ಆ ಇಡೀ ಪ್ರದೇಶವನ್ನು ನೈಸ್ ಕಂಪೆನಿಯವರು ಕಬ್ಜಾ ಮಾಡಿಕೊಂಡಿದ್ದಾರೆ. ಇವತ್ತಿನ ದಿವಸ ಅಲ್ಲಿನ ಬಡವರು ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದರೆ, ನೈಸ್ ಕಂಪೆನಿಯವರು ಉತ್ತಮವಾದ ದೊಡ್ಡ ದೊಡ್ಡ ವಕೀಲರುಗಳನ್ನು ನೇಮಿಸಿಕೊಳ್ಳುತ್ತಾರೆ. ಸಾಮಾನ್ಯ ರೈತ, ಬಡವ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ ಜನಾಂಗದವರು ಬಹಳ ದೊಡ್ಡ ಮಟ್ಟದಲ್ಲಿ ಹಣವನ್ನು ಖರ್ಚು ಮಾಡಿ ವಕೀಲರನ್ನು ನೇಮಿಸಿಕೊಳ್ಳಲು ಆಗದೇ ಇರುವ ಕಾರಣದಿಂದಾಗಿ ಕೇವಲ ತಮ್ಮಗಳ ಕೈಗಳನ್ನು ಕಟ್ಟಿಕೊಂಡು ಆಕಾಶವನ್ನು ನೋಡಿಕೊಂಡು ಕುಳಿತುಕೊಳ್ಳುವ ಪರಿಸ್ಥಿತಿಯು ಇವತ್ತಿನ ದಿವಸ ನಿರ್ಮಾಣವಾಗಿದೆ.

ಇವತ್ತಿನ ದಿವಸ ನಾವು ಸದರಿ ಜಮೀನಿನ ಕಡೆಗೆ ಹೋದರೆ, ನೈಸ್ ಸಂಸ್ಥೆಯ ಅಧಿಕಾರಿಗಳು ತಮ್ಮೊಂದಿಗೆ ಹತ್ತಾರು ಜನ ರೌಡಿಗಳನ್ನು ಕರೆದುಕೊಂಡು ಬರುತ್ತಾರೆ. ನಾವು ಅಲ್ಲಿ ಯಾವುದೇ ರೀತಿಯ ಕೆಲಸಗಳನ್ನು ಮಾಡಲು ಪ್ರಾರಂಭಿಸಿದರೆ, ನಮ್ಮನ್ನು ಬೆದರಿಸುತ್ತಾರೆ. ನಮಗೆ ಪರಿಹಾರದ ಹಣವನ್ನೂ ನೀಡುತ್ತಿಲ್ಲ ; ವ್ಯವಸಾಯಕ್ಕೂ ಅವಕಾಶವನ್ನೂ ಸಹ ನೀಡುತ್ತಿಲ್ಲ ; ಅಭಿವೃದ್ಧಿ ಮಾಡುತ್ತಿದ್ದೇವೆ ಎಂದು ರಸ್ತೆಯನ್ನು ತೋರಿಸುತ್ತಿದ್ದಾರೆ. ರಸ್ತೆಯ ಮೂಲಕ ಅವರುಗಳು ಕೋಟ್ಯಾಂತರ ಹಣವನ್ನು ಸಂಪಾದಿಸುತ್ತಿದ್ದಾರೆ. ಅಲ್ಲಿಯೇ ಇರುವ ನಮ್ಮಂಥ ರೈತರು, ಅಲ್ಲಿನ ಜಮೀನುದಾರರು ಏನು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರ ಹಾಗೂ ಸಚಿವರನ್ನು ಕೇಳಬಯಸುತ್ತೇನೆ. ಒಂದು ವೇಳೆ ಸರ್ಕಾರವು ಈ ಜಮೀನನ್ನು ನೈಸ್ ಸಂಸ್ಥೆಗೆ ಕೊಟ್ಟಿದೆ ಎನ್ನುವುದಾದರೆ, ನಮಗೆ ಪರಿಹಾರ ನೀಡಬೇಕು. ಇಲ್ಲವೆಂದಾದರೆ, ಆ ಜಮೀನಿನಲ್ಲಿ ವ್ಯವಸಾಯ ಅಥವಾ ಇನ್ಯಾವುದೇ ವ್ಯವಹಾರವನ್ನು ಮಾಡುವುದಕ್ಕೆ ಸ್ಥಳಾವಕಾಶವನ್ನು ಮಾಡಿಕೊಡಬೇಕು. ಯಾವುದೇ ವ್ಯಕ್ತಿ 30 ವರ್ಷಗಳಿಂದ ಯಾವುದೇ ಸ್ಥಳದಲ್ಲಿದ್ದರೆ, ಆ ಜಮೀನನ್ನು ಅವನಿಗೆ ಬಿಟ್ಟುಕೊಡಬೇಕೆಂಬ ವ್ಯವಸ್ಥೆಯನ್ನು ನಾವು ಕಂಡಿದ್ದೇವೆ. ಆದರೆ, ಕಳೆದ 25 ವರ್ಷಗಳಿಂದ ಬದುಕಲು ಆಗದೇ, ಸಾಯಲೂ ಆಗದೇ ನೂರಾರು ಬಡ ಕುಟುಂಬಗಳು ಅದರಲ್ಲೂ ಪರಿಶಿಷ್ಟ ಜಾತಿ ಮತ್ತು ಪಂಡಗದವರು ಇವತ್ತಿನ ದಿವಸ ಪರಿತಪಿಸುತ್ತಿದ್ದಾರೆ. ಈ ವರ್ಗದ ಜನರಿಗೆ ನ್ಯಾಯ ಕೊಡುವ ಕೆಲಸವನ್ನು ಸರ್ಕಾರವು ದಯಮಾಡಿ ಮಾಡಬೇಕು. ಈಗಾಗಲೇ ಹಿರಿಯ ಸದಸ್ಯರುಗಳು ಪ್ರಸ್ತಾಪಿಸಿದ ಸಂಗತಿಗಳು ಸತ್ಯವಾಗಿವೆ. ಇವತ್ತಿನ ದಿವಸ ನಾನು ಉತ್ತಮವಾದ ವಕೀಲರನ್ನು ನೇಮಿಸಿ ನೈಸ್ ಸಂಸ್ಥೆಯ ವಿರುದ್ಧ ಹೋರಾಟವನ್ನು ಮಾಡಬೇಕೆಂದರೆ, ಬೆಂಗಳೂರು ನಗರದಲ್ಲಿ ಯಾವ ವಕೀಲರೂ ಸಹ ನಮ್ಮ ಪ್ರಕರಣವನ್ನು ತೆಗೆದುಕೊಳ್ಳಲು ಸಿದ್ಧರಿಲ್ಲ. ಏಕೆಂದರೆ, "ನೈಸ್ ಸಂಸ್ಥೆಯ ವಿರುದ್ಧ ನಾವು ಯಾವುದೋ ಪ್ರಕರಣದಲ್ಲಿ appear ಆಗಿದ್ದೇವೆ, ಹೀಗಾಗಿ ನಿಮ್ಮ ಪ್ರಕರಣವನ್ನು ಕೈಗೆತ್ತಿಕೊಳ್ಳಲು ಆಗುವುದಿಲ್ಲ" ಎಂಬುದಾಗಿ ತಿಳಿಸುತ್ತಾರೆ. ನೈಸ್ ಸಂಸ್ಥೆಯವರು ಈ ರೀತಿಯಾಗಿ ಸಂಪೂರ್ಣವಾಗಿ ಅಲ್ಲಿನ ವ್ಯವಸ್ಥೆಯನ್ನು ದುರ್ಬಳಕೆ ಮಾಡಿಕೊಳ್ಳುವುದರ ಮುಖಾಂತರ ಕೆಲಸ ನಿರ್ವಹಿಸುತ್ತಿದ್ದಾರೆ. ಪೀಠದ ಮೂಲಕ ನಾನು ತಿಳಿಸುವುದೇನೆಂದರೆ, ನಾವು ಅಲ್ಲಿನ ಜಮೀನನ್ನು ಬಿಟ್ಟು ಕೊಡಲು ಸಿದ್ಧರಿದ್ದೇವೆ. ಆದರೆ ಇವತ್ತಿನ ಮಾರುಕಟ್ಟೆಯ ಮೌಲ್ಯದಂತೆ ನಮಗೆ ಪರಿಹಾರವನ್ನು

ನೀಡಬೇಕು; ಇಲ್ಲವೆಂದಾದರೆ, ನಮಗೆ ಜಮೀನನ್ನು ವಾಪಸ್ಸು ಬಿಟ್ಟುಕೊಡಬೇಕು ನಾವು ಏನಾದರೂ ಮಾಡಿಕೊಂಡು ಬದುಕುತ್ತೇವೆ. ದಯಮಾಡಿ ಸಚಿವರು ಉತ್ತರಿಸಬೇಕೆಂದು ನಾನು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಮುರುಗೇಶ್ ಆರ್.ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):-** ಮಾನ್ಯ ಸಭಾಪತಿಯವರೇ, ನೈಸ್ ವಿಷಯವಾಗಿ ಇಲ್ಲಿಯವರೆಗೆ ಗೌರವಾನ್ವಿತ ಸದಸ್ಯರುಗಳಾದ ಮಾನ್ಯ ಕೆ.ಎ.ತಿಪ್ಪೇಸ್ವಾಮಿ, ಮಾನ್ಯ ಎಸ್.ಎಲ್.ಭೋಜೇಗೌಡ, ಮಾನ್ಯ ಪಿ.ಆರ್.ರಮೇಶ್, ಮಾನ್ಯ ಮರಿತಿಬ್ಬೇಗೌಡ, ಮಾನ್ಯ ಮುನಿರಾಜುಗೌಡ, ಮಾನ್ಯ ಕೆ.ಟಿ.ಶ್ರೀಕಂಠೇಗೌಡ ಮತ್ತು ಮಾನ್ಯ ಹೆಚ್.ಎಸ್.ಗೋಪಿನಾಥ್ ರವರುಗಳು ಸುಮಾರು 3 ಗಂಟೆಗಳಗಿಂತಲೂ ಅಧಿಕವಾಗಿ ಚರ್ಚಿಸಿದ್ದಾರೆ.

**ಸಭಾಪತಿಯವರು:-** ವಾಸ್ತವವಾಗಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳು – 68 ರ ಪ್ರಕಾರ ಕೇವಲ ಒಂದು ಗಂಟೆಗಳಷ್ಟೇ ಮಾತನಾಡಬೇಕು. ಸಾರ್ವಜನಿಕರ ಹಿತದೃಷ್ಟಿಯಿಂದ ನಾವು ಸುಮ್ಮನೆ ಇದ್ದು ಕೇಳಿಸಿಕೊಳ್ಳುತ್ತೇವೆ.

**ಶ್ರೀ ಮುರುಗೇಶ್ ಆರ್.ನಿರಾಣಿ:-** ಮಾನ್ಯ ಸಭಾಪತಿಯವರೇ, ಇದನ್ನು ನಾನು ಪಾಯಿಂಟ್ ಆಫ್ ಆರ್ಡರ್‌ನಲ್ಲಿ ತಿಳಿಸಿದ್ದೇನೆ. ನಮ್ಮ ಸರ್ಕಾರ ರೈತರ ಮತ್ತು ಸಾರ್ವಜನಿಕರ ಹಿತವನ್ನು ನೈಸ್ ಕಂಪೆನಿಯ ವಿಷಯದಲ್ಲಿ ನಿರ್ಧಾರವನ್ನು ತೆಗೆದುಕೊಳ್ಳಲು ನಾವು ಬದ್ಧರಾಗಿದ್ದೇವೆ ಎನ್ನುವ ಮಾತನ್ನು ನಾನು ಮೊಟ್ಟ ಮೊದಲನೇಯದಾಗಿ ತಿಳಿಸಲು ಇಚ್ಛಿಸುತ್ತೇನೆ. ಇಲ್ಲಿರುವ ಮುಖ್ಯವಾದ ವಿಚಾರವೇನೆಂದರೆ, 1994-95 ನೇ ಸಾಲಿನಿಂದ ಚರ್ಚೆ ಪ್ರಾರಂಭವಾಗಿ 1995 ನೇ ಸಾಲಿನಲ್ಲಿ ಅಂದಿನ ಮುಖ್ಯಮಂತ್ರಿಗಳಾದ ಮಾನ್ಯ ಹೆಚ್.ಡಿ.ದೇವೇಗೌಡ ರವರು, ಚರ್ಚೆಯ ನಂತರ MOU (Memorandum of Understanding) ಗೆ ಸಹಿ ಮಾಡುತ್ತಾರೆ. ಅವರು ಈ ಯೋಜನೆಗೆ ಬಗ್ಗೆ ಬಹಳ ಒಳ್ಳೆಯ ಉದ್ದೇಶವನ್ನಿಟ್ಟುಕೊಂಡಿರುತ್ತಾರೆ. ಹೊರ ವರ್ತುಲ ರಸ್ತೆ ಬೆಂಗಳೂರು – ಮೈಸೂರು ಕಾರಿಡಾರ್ ಆಗುವುದರಿಂದ ಸಾರ್ವಜನಿಕರ ಸಂಚಾರಕ್ಕೆ ಕಡಿಮೆ ಸಮಯವು ಹಿಡಿಯುತ್ತದೆ.

ಕಾರಿಡಾರ್ ರಸ್ತೆಯ ಅಕ್ಕ-ಪಕ್ಕದಲ್ಲಿನ ಎಲ್ಲಾ ಗ್ರಾಮಗಳು ಎಲ್ಲಾ ರೀತಿಯಿಂದಲೂ ಅಭಿವೃದ್ಧಿ ಹೊಂದುತ್ತವೆ. ಇದರಿಂದ ಬೆಂಗಳೂರು ನಗರದ ಒಳಗಡೆ ಸಂಚಾರ ದಟ್ಟಣೆಯಾಗುವುದಿಲ್ಲ. ನೆರೆಯ ಮಹಾರಾಷ್ಟ್ರ ಮತ್ತು ಕೇರಳ ರಾಜ್ಯಗಳಿಂದ ಬರುವವರು ನಗರ ಪ್ರದೇಶದೊಳಗಡೆ ಹಾದು ಹೋಗದೇ, ನಗರದ ಹೊರ ಪ್ರದೇಶದ ರಿಂಗ್ ರಸ್ತೆಯಿಂದಲೇ ಸಾಗಿ ರಾಷ್ಟ್ರೀಯ ಹೆದ್ದಾರಿ ಮೂಲಕ ಹೊರಗೆ ಹೋಗಬಹುದಾಗಿರುತ್ತದೆ. ಇಂತಹ ಒಳ್ಳೆಯ ಉದ್ದೇಶವನ್ನಿಟ್ಟುಕೊಂಡು ಯೋಜನೆಯನ್ನು ಪ್ರಾರಂಭಿಸಲಾಗುತ್ತದೆ. ದೇಶದಲ್ಲಿಯೇ ಮೊಟ್ಟ ಮೊದಲನೇ ಬಾರಿಗೆ 1995 ರಲ್ಲಿ ಅಂದಿನ ಮುಖ್ಯಮಂತ್ರಿಗಳಾದ ಮಾನ್ಯ ಹೆಚ್.ಡಿ.ದೇವೇಗೌಡರವರು ಒಳ್ಳೆಯ ಉದ್ದೇಶವನ್ನಿಟ್ಟುಕೊಂಡು ಇಂತಹ ಯೋಜನೆಯ ಬಗ್ಗೆ ತೀರ್ಮಾನವನ್ನು ತೆಗೆದುಕೊಂಡಿದ್ದರು. ಇದನ್ನು ನಾವು ಬಹಳವಾಗಿ ಪ್ರಶಂಸಿಸುತ್ತೇವೆ. ಈ ಯೋಜನೆಯು ಸಕಾಲದಲ್ಲಿ ಸಂಪೂರ್ಣಗೊಂಡಿದ್ದರೆ, ಇದರ ಜೊತೆಗೆ ಇನ್ನೂ ಹಲವಾರು ಅಂತರ್‌ರಾಷ್ಟ್ರೀಯ ಕಂಪೆನಿಗಳು ನಮ್ಮ ರಾಜ್ಯಕ್ಕೆ ಬರುತ್ತಿದ್ದವು. "ಗಂಡ ಹೆಂಡಿರ ಜಗಳದಲ್ಲಿ ಕೂಸು ಬಡವಾಯಿತು" ಎನ್ನುವ ನಾಣ್ಣುಡಿಯಂತೆ ಇವತ್ತಿನ ದಿವಸ ಯೋಜನೆಯ ಪರಿಸ್ಥಿತಿಯಾಗಿದೆ. ಇದರಿಂದಾಗಿ ನಮ್ಮ ರಾಜ್ಯದಲ್ಲಿ ಬಹಳಷ್ಟು ವಿವಾದಗಳು ಆಗಿವೆ ಎನ್ನುವ ಸಂದೇಶವೂ ಸಹ ಬಹಳಷ್ಟು ಬಾರಿ ಹೋಗಿದೆ. ಯೋಜನೆ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ 27 ವರ್ಷಗಳಷ್ಟು ಸುದೀರ್ಘ ಅವಧಿಯಲ್ಲಿ ನಮ್ಮ ರಾಜ್ಯದಲ್ಲಿ 11 ಜನ ಮುಖ್ಯಮಂತ್ರಿಗಳಾಗಿ ಕರ್ತವ್ಯ ನಿರ್ವಹಿಸಿ, ಸರ್ಕಾರವನ್ನು ನಡೆಸಿದ್ದಾರೆ. ಈ ಅವಧಿಯಲ್ಲಿ ಆಡಳಿತ ನಡೆಸಿದ ಎಲ್ಲಾ ಸರ್ಕಾರಗಳ ಅವಧಿಯಲ್ಲಿ ಯೋಜನೆಗೆ ಸಂಬಂಧಪಟ್ಟಂತೆ ಭೂಸ್ವಾಧೀನ ಪ್ರಕ್ರಿಯೆಗಳಾಗಿವೆ, ಭೂಮಿಯ ಗುತ್ತಿಗೆ ಮತ್ತು ಕ್ರಯ ಪತ್ರಗಳನ್ನು ಮಾಡಿಕೊಡಲಾಗಿದೆ. ಈ ರೀತಿಯಾಗಿ ಯೋಜನೆಯ ಸಂಬಂಧಿತ ಎಲ್ಲಾ ಪ್ರಕ್ರಿಯೆಗಳು ನಡೆದಿವೆ. ಈ ಅಂಶಗಳ ಬಗ್ಗೆ ಎಲ್ಲಾ ಸದಸ್ಯರುಗಳು ಮಾತನಾಡುವ ಸಂದರ್ಭದಲ್ಲಿ ಪ್ರಸ್ತಾಪಿಸಿರುವುದರಿಂದ ನಾನು ಅದನ್ನು ಪುನರಾವರ್ತಿಸುವುದಿಲ್ಲ. ಈ ಯೋಜನೆಯ ಬಗ್ಗೆ ತಿಳಿದುಕೊಳ್ಳಲು ನಾನು ಪ್ರತಿ ದಿವಸ 3-4 ಗಂಟೆಗಳ ಕಾಲ ಅಧ್ಯಯನ ಮಾಡುತ್ತಿದ್ದೇನು. ಈ ರೀತಿಯಾಗಿ ನಾನು ಸುಮಾರು 15 ದಿನಗಳಿಗಿಂತಲೂ ಹೆಚ್ಚಿನ ಸಮಯವನ್ನು ಅಧ್ಯಯನಕ್ಕಾಗಿ ತೆಗೆದುಕೊಂಡಿದ್ದೇನೆ. ಈ ಯೋಜನೆಗೆ ಸಂಬಂಧಪಟ್ಟಂತೆ 400 ಕ್ಕೂ ಹೆಚ್ಚು ಪ್ರಥಮ ವರ್ತಮಾನ ವರದಿಗಳು ದಾಖಲಾಗಿವೆ. 27 ವರ್ಷಗಳಷ್ಟು ಸುದೀರ್ಘ ಅವಧಿಯಲ್ಲಿ ದಾಖಲಾದ ಪ್ರಥಮ ವರ್ತಮಾನಗಳ ಪೈಕಿ ನೈಸ್ ರಸ್ತೆಯ

ಕಂಪೆನಿಗಳು, ಸರ್ಕಾರ ಮತ್ತು ಬೇರೆ ಕಡೆಗಳಿಂದ ಪ್ರಥಮ ವರ್ತಮಾನ ವರದಿಗಳು ದಾಖಲಾಗಿದ್ದವು. ಈ ಪೈಕಿ ಈಗಾಗಲೇ 300 ಪ್ರಥಮ ವರ್ತಮಾನ ವರದಿಗಳು ಇತ್ಯರ್ಥಗೊಂಡಿವೆ. ಇನ್ನೂ 100 ಕ್ಕಿಂತಲೂ ಹೆಚ್ಚಿನ ಪ್ರಥಮ ವರ್ತಮಾನ ವರದಿಯ ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿವೆ. ಈ ವಿಷಯವಾಗಿ across the table ಎನ್ನುವ ರೀತಿಯಲ್ಲಿ ಎಲ್ಲರೂ ಕುಳಿತುಕೊಂಡು ಚರ್ಚಿಸಬೇಕು. ಇದರಲ್ಲಿ ಯಾರದ್ದು ಸರಿಯಿದೆ ; ಯಾರದ್ದು ತಪ್ಪು ಇದೆ ಎನ್ನುವುದನ್ನು ಇವತ್ತಿನ ದಿನವೇ ಹೇಳುವುದಕ್ಕಾಗುವುದಿಲ್ಲ. ಏಕೆಂದರೆ 100 ರಷ್ಟು ಪ್ರಕರಣಗಳು ವಿಚಾರಣೆಯಲ್ಲಿವೆ. ಇಂತಹ ಪರಿಸ್ಥಿತಿಯಲ್ಲಿ ನಾವು ಮಾತನಾಡಿದರೆ, ನ್ಯಾಯಾಲಯದ ವಿರುದ್ಧ ಮಾತನಾಡಿದಂತಾಗುತ್ತದೆ. ಆದ್ದರಿಂದ ನಾನು ಒಟ್ಟಾರೆಯಾಗಿ ಹೇಳುವುದೇನೆಂದರೆ, ಒಳ್ಳೆಯ ಉದ್ದೇಶದಿಂದ ಈ ರೀತಿಯ ಹೊರ ವರ್ತುಲ ರಸ್ತೆಗಳ ನಿರ್ಮಾಣವಾಗಬೇಕು. ಅಭಿವೃದ್ಧಿಯಾಗುವ ಯಾವುದೇ ರೀತಿಯ ಯೋಜನೆಗಳು ಬಂದಾಗ ಅದರ ಸಾಧಕ-ಬಾಧಕಗಳು ಸ್ವಲ್ಪ ಪ್ರಮಾಣದಲ್ಲಿ ಹೆಚ್ಚು ಕಡಿಮೆಯಾಗಿರುತ್ತವೆ. ಯಾವುದೇ ವ್ಯಾಪಾರಿಯು ದೂರದಿಂದ ಬಂದು ಇಲ್ಲಿ ಬಂಡವಾಳ ಹೂಡಿ ವ್ಯವಹಾರವನ್ನು ಮಾಡಬೇಕೆಂದರೆ, ಸಹಜವಾಗಿಯೇ ಅವರು "ನಾಲ್ಕು ಕಾಸು" ಸಂಪಾದನೆ ಮಾಡುವ ಉದ್ದೇಶವನ್ನಿಟ್ಟುಕೊಂಡಿರುತ್ತಾರೆ. ಇದಕ್ಕೆ ಯಾವುದೇ ಗುತ್ತಿಗೆದಾರ, ಕಾರ್ಖಾನೆಯ ಮಾಲೀಕ, ಬೇರೆ ಯಾವುದೇ ರೀತಿಯ ವ್ಯವಹಾರಸ್ಥರು ಯಾರೂ ಸಹ ಹೊರತಾಗಿಲ್ಲ. ಅವರುಗಳು ಯಾವುದೇ ವ್ಯವಹಾರಗಳನ್ನು ಮಾಡಿದರೂ ಸಹ, it should be reasonable; ಹಾಗೂ ಇದು ಅಸಹಜವಾಗಿರಬಾರದು. ಈ ಯೋಜನೆಯಲ್ಲಿ ಭೂಮಿಯ ಕ್ರಯ ಪತ್ರವನ್ನು ಕೊಡಬೇಕಾಗಿದೆ. ಇದಕ್ಕಿಂತಲೂ ಮುಖ್ಯವಾಗಿ ನಾನು ಪ್ರಸ್ತಾಪಿಸಬಯಸುವುದೇನೆಂದರೆ ..., ಬಹಳಷ್ಟು ಸದಸ್ಯರು ಮಾತನಾಡುವ ಸಂದರ್ಭದಲ್ಲಿ ಈ ಬಗ್ಗೆ ಪ್ರಸ್ತಾಪಿಸಿದರು. ಅದೇನೆಂದರೆ, 29,267 ಎಕರೆ ಭೂಮಿಯನ್ನು ಪ್ರಶ್ನಿತ ಯೋಜನೆಗಾಗಿ ಸ್ವಾಧೀನಪಡಿಸಿಕೊಳ್ಳಲಾಗಿದೆ. ಆ ಪೈಕಿ 9 ಸಾವಿರಕ್ಕಿಂತಲೂ ಹೆಚ್ಚು ಹೆಚ್ಚುವರಿಯಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದಾರೆ. ಇದೇ ಅಂಶವನ್ನು ಬಹಳಷ್ಟು ಸದಸ್ಯರೂ ಸಹ ಪುನರಾವರ್ತಿಸಿದರು. ಆದರೆ ವಾಸ್ತವವಾಗಿ, ಪ್ರಶ್ನಿತ ಯೋಜನೆಗಾಗಿ 1994-95 ನೇ ಇಸ್ವಿಯಲ್ಲಿ, 13,237 ಎಕರೆಯಷ್ಟು ಖಾಸಗಿ ಜಮೀನು ಹಾಗೂ 6,956 ಎಕರೆಗಳಷ್ಟು ಸರ್ಕಾರಿ ಜಮೀನು ಅಂದರೆ ಒಟ್ಟಾರೆಯಾಗಿ 20,193 ಎಕರೆಗಳಷ್ಟು ಜಮೀನಿಗೆ ಪ್ರಾಥಮಿಕ ಅಧಿಸೂಚನೆಯನ್ನು

ಹೊರಡಿಸಲಾಗಿದೆ. ಇದಕ್ಕಿಂತಲೂ ಮುಂಚಿತವಾಗಿ, ನಾವು KIAD Act ನ ಕಲಂ 3(1) ಎಂದು ಯಾವುದನ್ನು ಕರೆಯುತ್ತೇವೆಯೋ ಆ ಪ್ರಕ್ರಿಯೆಯು ಆಗಿದೆ ಹಾಗೂ ಅದೇ ಕಾಯ್ದೆಯ ಕಲಂ 28 (1) ರಲ್ಲಿ ಪ್ರಶ್ನಿತ ಯೋಜನೆಗೆ ಎಷ್ಟು ಭೂಮಿಯ ಅವಶ್ಯಕತೆ ಇದೆ ಎಂದು ಅಂದಾಜಿಸಲಾಗುತ್ತದೆ.

(ಮುಂದು)

620 24-3-2022 6-00 ಬಿಕೆಪಿ-ಜಿಆರ್(ಎಂ.ಡಿ)

(ಸಭಾಪತಿಯವರು ಪೀಠದಲ್ಲಿದ್ದರು)

**ಶ್ರೀ ಮುರುಗೇಶ್ ಆರ್. ನಿರಾಣಿ** ( ಮುಂದು..)

28(1) ಆಗುವ ಪೂರ್ವದಲ್ಲಿ 3/1 ಎಂದು ಕರೆಯುತ್ತೇವೆ. ಇದಕ್ಕೆ ಅಂದಾಜು ಎಷ್ಟು ಭೂಮಿ ಈ ಯೋಜನೆಗೆ ಬೇಕು. 3/1 ಎಂದರೆ ಇನ್ನು ನೋಟಿಫಿಕೇಷನ್ ಆಗಿರುವುದಿಲ್ಲ. ಕೇವಲ ಮೌಖಿಕ ಚರ್ಚೆಯಾದಾಗ 3/1 ಆಗಿರುತ್ತದೆ. ಭೂಸ್ವಾಧೀನ ಮಾಡುವಂತಹ ಸಂದರ್ಭದಲ್ಲಿ ವಾಸ್ತವವಾಗಿ ಎಷ್ಟು ಜಮೀನು ಬೇಕೆಂದು ನೋಡಿಕೊಂಡು 28/1 ಮಾಡುತ್ತೇವೆ. ನಾವು ಅಂದಾಜು ಮಾಡಿರುವಂತಹದ್ದು 1995 ರಲ್ಲಿ 29,267 ಎಕರೆ ಜಮೀನು ವಾಸ್ತವವಾಗಿ 1996 ರಲ್ಲಿ ಭೂಸ್ವಾಧೀನ ಮಾಡಿರುವುದು 20,193 ಎಕರೆ ಜಮೀನು. ಮುಂದಿನ ವರ್ಷಗಳಲ್ಲಿ ಹೆಚ್ಚುವರಿ ಜಮೀನುಗಳನ್ನು ಯಾವುದೇ ಸಂದರ್ಭದಲ್ಲಿ ಬಂದಿಲ್ಲ. ಇದು ಬಹಳ ಸ್ಪಷ್ಟವಾಗಿರುವಂತಹದ್ದು. 1996 ರಿಂದ ಹೆಚ್ಚುವರಿ ಜಮೀನನ್ನು ಮಾಡಿಲ್ಲ. ಬಹಳ ಮುಖ್ಯವಾಗಿ 1995 ರಲ್ಲಿ MOU (Memorandum of Understanding) ಆಗಿದೆ. FWA (Frame Work Agreement) 1997 ರಲ್ಲಿ ಆಗಿದೆ. ಒಂದು ಬಾರಿ Frame Work Agreement ಆದ ಮೇಲೆ ಯಾವುದೇ ರೀತಿಯಿಂದ ಹೆಚ್ಚುವರಿ ಜಮೀನನ್ನು ಭೂಸ್ವಾಧೀನ ಮಾಡಲಿಕ್ಕೆ ಮುಂದುವರಿಯುತ್ತಾ ಹೋಗಲಿಲ್ಲ. ನಂತರ ಅವರಿಗೆ ಏನು 28(1) ಆಯಿತು, 28(3) ಆಯಿತು, 28(4) ಆಯಿತು, ಆದಮೇಲೆ ಫೈನಲ್ ನೋಟಿಫಿಕೇಷನ್ ಆಯಿತು. Final Notification ಆದಮೇಲೆ ರೈತರಿಗೆ

ನೋಟೀಸ್ ಬಂದೇ ಬರುತ್ತದೆ. ಇವತ್ತು ಪರಿಹಾರ ಸಿಗದೇ ಇರುವ ರೈತರು ಪರಿಹಾರ ಸಿಕ್ಕಿರುವ ರೈತರು ಈ 20193 ಎಕರೆ ಜಮೀನಿನಲ್ಲಿ ಮಾತ್ರ ಬರುತ್ತಾರೆಂದು ನಾನು ಸ್ಪಷ್ಟೀಕರಣ ಕೊಡಲಿಕ್ಕೆ ಹೇಳುತ್ತಿದ್ದೇನೆ. ಮೊನ್ನೆ ಮಾನ್ಯ ಸದಸ್ಯರಾದ ಶ್ರೀ ಹೆಚ್.ಎಸ್. ಗೋಪಿನಾಥ್ ರವರು ಒಂದು ವಿಚಾರವನ್ನು ಹೇಳಿದರು. ನಾವು 30 ವರ್ಷಗಳಾದ ನಂತರ ನಾವು ಕರ್ನಾಟಕ ರಾಜ್ಯಕ್ಕೆ BOOT (Build Own Operate Transfer) system ನಲ್ಲಿ ವಾಪಸ್ಸು ಕೊಡಬೇಕೆನ್ನುವ ನಿಯಮ ಇದ್ದಾಗ ನೀವು ಏತಕ್ಕೆ Absolute Sale Deed ಎಂದು ಮಾಡಿಕೊಡುತ್ತೀರಿ ಎನ್ನುವ ಬಗ್ಗೆ ಹೇಳಿದರು. ಇದು ಬಹಳ ಉತ್ತಮವಾಗಿರುವಂತಹ ಪ್ರಶ್ನೆಯಾಗಿದೆ. ಇದರಲ್ಲಿ ಏನಿದೆ, FWA (Frame Work Agreement) ಮಾಡುವಂತಹ ಸಂದರ್ಭದಲ್ಲಿ Conditional Sale Deed ಮಾಡಿಕೊಟ್ಟಿದ್ದಾರೆ. 30 ವರ್ಷಗಳಾದ ಮೇಲೆ ಈ Frame Work Agreement ನಲ್ಲಿರುವಂತಹ ಎಲ್ಲಾ asset ಗಳನ್ನು ಸರ್ಕಾರಕ್ಕೆ ಮರುಪಾವತಿಸಬೇಕು ಎನ್ನುವಂತಹ ಷರತ್ತು ಹಾಕಲಾಗಿದೆ. ಏತಕ್ಕೆ ಈ ರೀತಿಯ Sale Deed Agreement ಮಾಡಿದಿರಿ ಎಂದರೆ ಇದರ ಮೇಲೆ ಅವರು ಲೋನ್ ತೆಗೆದುಕೊಂಡು, ಅಭಿವೃದ್ಧಿ ಮಾಡಲಿಕ್ಕೆ ಬ್ಯಾಂಕ್‌ಗಳಿಂದ ಸಾಲವನ್ನು ತೆಗೆದುಕೊಳ್ಳಲಿಕ್ಕೆ Frame Work Agreement ನಲ್ಲಿಯೇ ಇರುವುದರಿಂದ ಅವರಿಗೆ Sale Deed ಮಾಡಿಕೊಡುವಂತಹದ್ದು ಆ ಸಂದರ್ಭದಲ್ಲಿ ನಿರ್ಧಾರವಾಗಿದೆ. ಆ Frame Work Agreement ಇರುವುದರಿಂದ ನಾವು Conditional Sale Deed ಗಳನ್ನು ಮಾಡಿಕೊಡುತ್ತಿದ್ದೇವೆ. ಇದು ಒಂದು ವಿಚಾರ. ಬಂದಿರುವಂತಹದ್ದರಲ್ಲಿ ಮಾನ್ಯ ಸದಸ್ಯರಾದ ಶ್ರೀ ಪಿ.ಆರ್. ರಮೇಶ್‌ರವರು ಹೇಳಿದರು. 1994-96ರಿಂದ ಹಿಡಿದು ಇವತ್ತು 2021-22 ರವರೆಗೆ ಕಾರ್ಯನಿರ್ವಹಿಸಿದ ಒಟ್ಟು 11 ಜನ ಮುಖ್ಯಮಂತ್ರಿಗಳ ಅವಧಿಯಲ್ಲಿ project company ಗೆ ಹಸ್ತಾಂತರಿಸಿದ ಜಮೀನು ಇಲ್ಲಿಯವರೆಗೆ ನಾವು ಮಾಡಿಕೊಟ್ಟಿರುವಂತಹದ್ದು ಒಟ್ಟು ಫೈನಲ್ ನೋಟಿಫಿಕೇಷನ್ ಮಾಡಿ ಭೂಸ್ವಾಧೀನ ಮಾಡಿಕೊಂಡ 20193 ಎಕರೆ ಜಮೀನಿನ ಪೈಕಿ 2148 ಎಕರೆ ಜಮೀನು ಮಾತ್ರ. ಇದರ ಬಗ್ಗೆ ಒಟ್ಟಾರೆ ನಾವು ಹೇಳುವುದಾದರೆ ಈ ನೈಸ್ ರಸ್ತೆ, ನನಗೆ ಅನಿಸಿದ ಮಟ್ಟಿಗೆ ನಮ್ಮ ಸರ್ಕಾರ ಇದಕ್ಕೆ ಒಂದು ಸಬ್ ಕಮಿಟಿ ಮಾಡಿದ್ದು, ಆ ಸಬ್ ಕಮಿಟಿಯಲ್ಲಿ ಎಲ್ಲರೂ

ಸೇರಿಕೊಂಡು ಚರ್ಚೆ ಮಾಡುವಂತಹದ್ದು ಇದೆ. ಎಲ್ಲಾ ಗೌರವಾನ್ವಿತ ಸದಸ್ಯರು ಹೇಳುವಂತಹದ್ದನ್ನು ನಮ್ಮ ಅಧಿಕಾರಿಗಳು ನೋಟ್ ಮಾಡಿಕೊಂಡಿದ್ದೇವೆ. ಈ ಎಲ್ಲಾ ವಿಚಾರವನ್ನು ಅವರ ಗಮನಕ್ಕೆ ತಂದು ಇದರ ಬಗ್ಗೆ ನಾವು ಯಾವ ರೀತಿ ತೀರ್ಮಾನ ಮಾಡಬೇಕು ಎನ್ನುವುದನ್ನು ಸನ್ಮಾನ್ಯ ಮುಖ್ಯಮಂತ್ರಿಗಳ ಜೊತೆ ನಾವು ಕುಳಿತುಕೊಂಡು ಸಾಧ್ಯವಾದಲ್ಲಿ ಮಾನ್ಯ ಸಭಾಧ್ಯಕ್ಷರು ಮತ್ತು ಮಾನ್ಯ ಸಭಾಪತಿಗಳಾದ ತಾವು ಸೇರಿದಂತೆ Floor Leader ಗಳೆಲ್ಲರೂ ಬಂದಾಗ ಇದನ್ನು ಬೇಗನೆ ಇತ್ಯರ್ಥ ಮಾಡಿದರೆ ಸಾರ್ವಜನಿಕರಿಗೆ ಮತ್ತು ರಾಜ್ಯದಲ್ಲಿ ಭೂಮಿಯನ್ನು ಕಳೆದುಕೊಂಡ ರೈತರು ಏನಿದ್ದಾರೆ, ಅವರುಗಳಿಗೆ ಬೇಗನೆ ಪರಿಹಾರ ಸಿಗುವಲ್ಲಿ ತೀರ್ಮಾನ ಮಾಡುವಲ್ಲಿ ಆ ಕಂಪನಿಯವರನ್ನು ಸಹ ಕರೆಸಿ ಇತ್ಯರ್ಥ ಮಾಡಿದರೆ, ಪರಿಹಾರ ಸಿಗುತ್ತಿದೆ ಮತ್ತು ಬೇಗನೆ ನೈಸ್ ರಸ್ತೆ ಕಾಮಗಾರಿ ಪೂರ್ಣಗೊಳ್ಳುತ್ತದೆ. ಒಂದು ನೈಸ್ ರಸ್ತೆ, ತುಮಕೂರು ರಸ್ತೆಯಿಂದ ರಿಂಗ್ ರೋಡ್ 180 ಡಿಗ್ರಿ. ಇದು ಎಲೆಕ್ಟ್ರಾನಿಕ್ ಸಿಟಿಯವರೆಗೆ ಮುಗಿಸಬೇಕಾದರೆ 180 ಡಿಗ್ರಿ ಮುಗಿಸಲಿಕ್ಕೆ ಆಗಿರುವುದಿಲ್ಲ. ಮತ್ತೆ ಈ ಕಡೆ ಉಳಿದಿರುವಂತಹ ಬೇರೆ 180 ಡಿಗ್ರಿ ತುಮಕೂರು ರಸ್ತೆಯಿಂದ ಹಿಡಿದು ನಾವು ಮತ್ತೆ ಎಲೆಕ್ಟ್ರಾನಿಕ್ ಸಿಟಿಗೆ ಬರಬೇಕಾದರೆ, 27 ವರ್ಷಗಳಿಂದ ನಾವು ಯಾವುದೇ ವ್ಯವಸ್ಥೆಯನ್ನು ತೆಗೆದುಕೊಂಡಿರಲಿಲ್ಲ. ಒಂದು ತಿಂಗಳ ಹಿಂದೆಯೇ ನಾವು ಮತ್ತೆ ಕ್ಯಾಬಿನೆಟ್‌ನಲ್ಲಿ ಒಂದು Swiss Challenge method ಅಥವಾ global tender ಗಳ ಮೂಲಕ ಇದನ್ನು ಪೂರ್ಣಗೊಳಿಸಬೇಕೆಂದು ನಮ್ಮ ಕ್ಯಾಬಿನೆಟ್ ತೀರ್ಮಾನ ತೆಗೆದುಕೊಂಡಿದೆ. 27 ವರ್ಷಗಳಾದರೂ ಸಹಿತ ನಾವು ಪೂರ್ಣವಾಗಿ ಬೆಂಗಳೂರಿನ Peripheral Ring Road ಅನ್ನು ನಾವು ಪೂರ್ಣ ಮಾಡಲಿಕ್ಕೆ ಆಗಲಿಲ್ಲ. ಭೂಮಿಯನ್ನು ಗುರುತಿಸಲಿಕ್ಕೆ ಆಗಲಿಲ್ಲ. ಏಕೆಂದರೆ, ನೈಸ್ ರಸ್ತೆ ಸಮಸ್ಯೆಯಿಂದಾಗಿ ಆಗಲಿಲ್ಲ. ಇವತ್ತು ಇಸ್ರೇಲ್ ಕಂಪನಿಯವರು ಮುಂದೆ ಬಂದು ನಮಗೂ approach ಮಾಡಿದ್ದಾರೆ. ಆಗ ನಾನು ಏನು ಹೇಳಿದೆ ಎಂದರೆ ನಾವು global tender ಕರೆಯುತ್ತೇವೆ, ಯಾರು ಬೇಕಾದರೂ ಅಪ್ಲೈ ಮಾಡಿ, ಇದರ ಬಗ್ಗೆ ಆ ಕಮಿಟಿಯವರು ಕುಳಿತುಕೊಂಡು ಚರ್ಚೆ ಮಾಡುತ್ತಾರೆ. ಅದಕ್ಕೆ ಯಾರು ಅರ್ಹರು ಇರುತ್ತಾರೆ, ಮುಂದೆ ಅದನ್ನು ಅವರಿಗೆ ಕೊಡುವುದಕ್ಕೆ ಸಾಧ್ಯವಾಗುತ್ತದೆ ಎಂದು

ಹೇಳಿದ್ದೇನೆ. ಬೆಂಗಳೂರಿಗೆ Peripheral Ring Road ರಸ್ತೆ ಬಹಳ ಅವಶ್ಯಕತೆ ಇರುತ್ತದೆ. Without Peripheral Ring Road ಮುಂದೆ ಬರುವಂತಹ ದಿವಸಗಳಲ್ಲಿ ಈಗಿನ ಬೆಂಗಳೂರು ಏರ್ಪೋರ್ಟ್‌ನಿಂದ ಇಲ್ಲಿಗೆ ಬರಬೇಕಾದರೆ ಒಂದು ತಾಸು ಬೇಕು. ಟ್ರಾಫಿಕ್ ಸಮಯದಲ್ಲಿ ಒಂದೂವರೆ ತಾಸು ಬೇಕಾಗುತ್ತದೆ. ಅದರ ಸಲುವಾಗಿ ಬೆಂಗಳೂರಿನ Peripheral Ring Road ರಸ್ತೆ ಉಳಿದಿರುವಂತಹ 180 ಡಿಗ್ರಿಯಲ್ಲಿ ಏನು ಬರುತ್ತದೆ, ಅದು ಪೂರ್ಣವಾಗಬೇಕು ಮತ್ತು ಇದರಲ್ಲಿ ಏನ ನ್ಯೂನ್ಯತೆಗಳಿವೆ, ಅದನ್ನು ಇತ್ಯರ್ಥ ಮಾಡಿ, ನೈಸ್ ಕಂಪನಿಯವರದ್ದು ಸರಿ ಇದೆ, ತಪ್ಪು ಇದೆ ಎನ್ನುವುದರ ಬಗ್ಗೆ ನಾನು ವಿವರವಾಗಿ ಮಾತನಾಡಲಿಕ್ಕೆ ಹೋಗುವುದಿಲ್ಲ. ಇದು ನಮ್ಮ ಸರ್ಕಾರದ್ದು ಮತ್ತು ಬೇರೆ ಅವಧಿಯಲ್ಲಿ ಬೇರೆ ಸರ್ಕಾರಗಳಲ್ಲಿ ಒಟ್ಟು 11 ಮುಖ್ಯಮಂತ್ರಿಗಳು ಬಂದು ಹೋದಾಗ ತಪ್ಪು ಮತ್ತು ಸರಿ ನಿರ್ಧಾರಗಳನ್ನು ತೆಗೆದುಕೊಂಡಿದ್ದರ ಬಗ್ಗೆ ಮಾತನಾಡಲಿಕ್ಕೆ ಹೋಗುವುದಿಲ್ಲ. ಮಾತನಾಡಲಿಕ್ಕೂ ಆಗುವುದಿಲ್ಲ. ಏಕೆಂದರೆ, ಇನ್ನು ನೂರಾರು ಕೇಸ್‌ಗಳು ಕೋರ್ಟ್‌ನಲ್ಲಿ ಪೆಂಡಿಂಗ್ ಇವೆ. ಏಕೆಂದರೆ, ಅದು Contempt of Court ಆಗಬಹುದು. ಆದ್ದರಿಂದ, ನಾನು ಈ ಸದನಕ್ಕೆ ಇಷ್ಟೇ ಹೇಳಲಿಕ್ಕೆ ಬಯಸುತ್ತೇನೆ. ಇದರ ಬಗ್ಗೆ ಒಳ್ಳೆಯ ರೀತಿಯಿಂದ ಚರ್ಚೆಯಾಗಿದೆ. ಈ ವಿಚಾರದಲ್ಲಿ ತಾವು ಕೂಡಿಕೊಂಡು ಚರ್ಚೆ ಮಾಡಬಹುದಾಗಿದೆ. ಈ ವಿಚಾರದಲ್ಲಿ ಚರ್ಚೆ ಮಾಡಲು ಬೇಕಾದರೆ, ನೈಸ್ ಕಂಪನಿಯವರನ್ನೂ ಸಹ ಕರೆಸುತ್ತೇನೆ. ತಾವು ಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ Floor Leader ಗಳ ಜೊತೆ ಚರ್ಚೆ ಮಾಡಿ, ಇದನ್ನು ಬೇಗನೆ ಇತ್ಯರ್ಥ ಮಾಡುವುದರಿಂದ ರೈತರಿಗೆ ಬೇಗನೆ ಪರಿಹಾರ ಸಿಗುತ್ತದೆ, ಈ ಕೆಲಸವನ್ನು ಮಾಡುವುದರಿಂದ ಸಾರ್ವಜನಿಕರಿಗೂ ಅನುಕೂಲವಾಗುತ್ತದೆ. ಈ ಒಂದು ಕೆಲಸವನ್ನು ಮಾಡೋಣ ಎಂದು ಉತ್ತರವನ್ನು ಹೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೆ, ಒಂದು ವಿಚಾರ ಇದೆ, ಸಾಕಷ್ಟು ರೀತಿಯಲ್ಲಿ ಕೆಲವು ಅಂಶಗಳೂ ಕೂಡ ಲೋಕೋಪಯೋಗಿ ಇಲಾಖೆಗೆ

ಸಂಬಂಧಪಡುತ್ತವೆ. Project Technical Report ಮತ್ತು Toll ಗೆ ಸಂಬಂಧಪಟ್ಟಂತೆ ಕೆಲವು ಉತ್ತರಗಳು ಬರಬೇಕಾಗಿದೆ. ನಾವು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇವೆ. ಅದಕ್ಕೆ ಸನ್ಮಾನ್ಯ ಲೋಕೋಪಯೋಗಿ ಸಚಿವರಿಂದ ಉತ್ತರ ಬಂದರೆ, ಅದರ ಬಗ್ಗೆ clarification ಕೇಳುತ್ತೇವೆ.

**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ(ಲೋಕೋಪಯೋಗಿ ಸಚಿವರು):-** ಮಾನ್ಯ ಸಭಾಪತಿಯವರೆ, BMIC (Bengaluru–Mysuru Infrastructure Corridor) ಯೋಜನೆಯಾದ ಬೆಂಗಳೂರು-ಮೈಸೂರು ತಡೆ ರಹಿತ ರಸ್ತೆ ನಿರ್ಮಾಣ, ನಗರ ಯೋಜನೆ, ಬೆಂಗಳೂರು Peripheral Ring Road, ಲಿಂಕ್ ರಸ್ತೆ ನಿರ್ಮಾಣದ ಯೋಜನೆಗೆ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಸಾರಿಗೆ ಇಲಾಖೆ ಒಂದು Nodal Agency ಆಗಿರುತ್ತದೆ. ಏನು KIADB (Karnataka Industrial Area Development Board) ಯಿಂದ ಹಸ್ತಾಂತರವಾಗುತ್ತದೆ, ಆ ಸಂಬಂಧ Frame Work Agreement ನಲ್ಲಿ ಏನು ರಸ್ತೆ ಇರುತ್ತದೆ, ಆ ರಸ್ತೆಯನ್ನು Nodal Agency ಮತ್ತು ಲೋಕೋಪಯೋಗಿ ಇಲಾಖೆ ನಿರ್ಮಾಣ ಮಾಡುತ್ತದೆ. ಈ ವಿಚಾರದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮಾನ್ ಬಸವರಾಜ ಬೊಮ್ಮಾಯಿಯವರು ಮುಖ್ಯಮಂತ್ರಿಗಳಾದ ನಂತರ ಇದಕ್ಕೆ ಒಂದು ಸಚಿವ ಸಂಪುಟದ ಉಪ ಸಮಿತಿಯನ್ನು ರಚನೆ ಮಾಡಿದ್ದು, ಅದರ ಅಧ್ಯಕ್ಷರನ್ನಾಗಿ ನನ್ನನ್ನು ನೇಮಕ ಮಾಡಿದ್ದಾರೆ. ಈ ಬಗ್ಗೆ ಸಂಪೂರ್ಣವಾಗಿ ಈಗಾಗಲೇ ನಾನು ಪ್ರಾರಂಭಿಕವಾಗಿ ಉತ್ತಮ ಹೆಜ್ಜೆಗಳನ್ನು ಇಟ್ಟಿದ್ದೇನೆಂದು ತಮ್ಮಿಂದಲೂ ಕೂಡ ಅಭಿಪ್ರಾಯ ವ್ಯಕ್ತವಾಗಿದೆ. ಆ ರೀತಿಯಾಗಿ ನಾನು ಅತ್ಯಂತ ಪ್ರಾಮಾಣಿಕತೆಯಿಂದ ಯಾವ ರೈತನಿಗೂ ಅನ್ಯಾಯವಾಗದ ರೀತಿಯಲ್ಲಿ ಆದಷ್ಟು ಬೇಗನೆ ಈ ನಿಟ್ಟಿನಲ್ಲಿ ಪ್ರಯತ್ನ ನಡೆಸಿ, ಒಂದು ತೀರ್ಮಾನಕ್ಕೆ ಬರುತ್ತೇನೆ ಎನ್ನುವುದನ್ನು ಸನ್ಮಾನ್ಯ ಗೌರವಾನ್ವಿತ ಸದಸ್ಯರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ.

---

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೆ, ಈ ಸರ್ಕಾರಿ ಜಾಗಕ್ಕೆ ಸುಮಾರು ೫೦–೬೦ ಕೋಟಿ ರೂಪಾಯಿಗಳಾಗುತ್ತದೆ. ಇದನ್ನು clarify ಮಾಡಬೇಕು ಮತ್ತು ಈ ದುಡ್ಡು ಸರ್ಕಾರಕ್ಕೆ ಬರಬೇಕಲ್ಲವೇ?

**ಸಭಾಪತಿಯವರು:–**ಶ್ರೀಯುತ ಕೆ.ಟಿ. ಶ್ರೀಕಂಠೇಗೌಡರೆ, ಸುಮ್ಮನೆ ಕುಳಿತುಕೊಳ್ಳಿ.

**ಶ್ರೀ. ಕೆ.ಎ. ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೆ, ಈ ವಿಚಾರವಾಗಿ ನಾವು ಎಲ್ಲರೂ ಚರ್ಚೆ ಮಾಡಿದ್ದೇವೆ. ಈ ವಿಚಾರವಾಗಿ ಶ್ರೀಮಾನ್ ಪಿ.ಆರ್.ರಮೇಶ್ ರವರು ಮಾತನಾಡಿರಬಹುದು, ನಾನು ಸಹ ಮಾತನಾಡಿರಬಹುದು. ನಾನು ಇದರಲ್ಲಿ ರಾಜಕೀಯವನ್ನು ಬೆರಸಲಿಕ್ಕೆ ಹೋಗುವುದಿಲ್ಲ. ಇದರಲ್ಲಿ ಒಂದು ವಿಷಯ ಸತ್ಯ ಇದೆ. ಈಗ ಶ್ರೀಯುತ ಸೋಮಶೇಖರ ರೆಡ್ಡಿ ಕೇಸ್‌ನಲ್ಲಿ ಏನು ಇತ್ಯರ್ಥ ಆಗಿದೆ, ಅದನ್ನೂ ಕೂಡ ಸರ್ಕಾರ in letter and spirit ಮಾಡಬೇಕು, Frame Work Agreement ನಲ್ಲಿ ಯಾವ ರೀತಿ ಇದೆ, ಆ ರೀತಿಯಲ್ಲಿ ಮಾಡಬೇಕು. ಮತ್ತೆ, road construction ಕೂಡ ಏನು project technical report ಬಂದಿದೆ, ಆ ರೀತಿಯಲ್ಲಿ ಆಗಬೇಕು. ಆಗ ತಾವು ಏನು ಹೇಳಿದಿರಿ ಎಂದರೆ ಹೆಚ್ಚುವರಿ ಜಮೀನನ್ನು ಮಾಡಿಲ್ಲವೆಂದು ಹೇಳಿದಿರಿ. ತಾವು ೩/1 ರಲ್ಲಿ ತಾವು notification ಮಾಡಿದಿರಿ. ನನಗೆ ತಿಳಿದ ಮಟ್ಟಿಗೆ, that is the intention of the Government to establish the Karnataka Industrial Area.

**ಸಭಾಪತಿಯವರು:–** ದಯವಿಟ್ಟು ಮುಗಿಸಿ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೆ, ಇದು clarify ಆಗಬೇಕು. ಈ ರೀತಿಯಲ್ಲಿ ನೋಟಿಫೈ ಆದಾಗ ಅಂದರೆ ಸಾಮಾನ್ಯವಾಗಿ ಭೂಸ್ವಾಧೀನವಾಗಿ 4(1) notification issue ಮಾಡಿದಾಗ ಆ ಲ್ಯಾಂಡ್ ವಿಷಯವಾಗಿ ಒಂದು ಬಾರಿ notify ಮಾಡಿದಾಗ ಅಲ್ಲಿ ಇರತಕ್ಕಂತಹ ರೈತರು ಆ ಲ್ಯಾಂಡ್ ಅನ್ನು ಯಾವುದೇ ರೀತಿಯಲ್ಲಿ alienate ಮಾಡಲಿಕ್ಕೆ ಆಗುವುದಿಲ್ಲ. Permanent structure ಮಾಡಲಿಕ್ಕೆ ಆಗುವುದಿಲ್ಲ.

ಯಾವುದೇ ರೀತಿಯಲ್ಲಿ ತೆಗೆದು ಕೊಳ್ಳಲಿಕ್ಕೆ ಆಗುವುದಿಲ್ಲ. ಏಕೆಂದರೆ, 3/1 ರಲ್ಲಿ notification ಆಗಿದೆ.

**ಶ್ರೀ ಮುರುಗೇಶ್ ಆರ್. ನಿರಾಣಿ:–** 3/1 ರಲ್ಲಿ ನೋಟಿಫಿಕೇಷನ್ ಮಾಡಿದಾಗ ಆಗಲಿ, ಮತ್ತೊಂದರಲ್ಲಿ ಆಗಲಿ, ಹೆಸರು ಬರುವುದಿಲ್ಲ. 28(1) ರಲ್ಲಿ ಮಾಡಿದಾಗ ಆ ಸಮಯದಲ್ಲಿ ಹೆಸರು ಬರುತ್ತದೆ. 3/1 ರಲ್ಲಿ ಬರುವುದೇ ಇಲ್ಲ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ದಯಮಾಡಿ ಇದರ ಬಗ್ಗೆ ನೋಡಿ.

**ಶ್ರೀ ಮುರುಗೇಶ್ ಆರ್. ನಿರಾಣಿ:–** ನಾವು ಭೂಸ್ವಾಧೀನ ಮಾಡುತ್ತಿರುತ್ತೇವೆ, 3/1 discussion stage ನಲ್ಲಿರುತ್ತದೆ. It is totally in the initial stage.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೆ,

**ಸಭಾಪತಿಯವರು:–** ಸಾಕು ಮುಗಿಸಿ, ಈಗ ಗಮನ ಸೆಳೆಯುವ ಸೂಚನೆ ಬಗ್ಗೆ ಸಭಾ ನಾಯಕರು ಮಾತನಾಡಿ.

**(ಮುಂದು).**

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(621) 24.03.2022 06.10 ಎಸ್‌ವಿ-ಜಿಆರ್ (ಎಂಡಿ)**

**(ಸಭಾಪತಿಯವರ ಉಪಸ್ಥಿತಿ)**

**11. ನಿಯಮ 72ರ ಅಡಿಯಲ್ಲಿ ಗಮನ ಸೆಳೆಯುವ ಸೂಚನೆಗಳು**

**ಆ)ವಿಷಯ: ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಂಬತ್ತಳ್ಳಿ ಸರ್ವೆ ನಂ.85 ನೆಲ್ಲೂ ರೆಡ್ಡಿ ಕ್ವಾರಿ ಪ್ರದೇಶದಲ್ಲಿ ಅನಧಿಕೃತ ಜೈವಿಕ ತ್ಯಾಜ್ಯದ ವಿಲೇವಾರಿಯಿಂದ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಾಸಿಸುತ್ತಿರುವ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಕುರಿತು**

***

**ಶ್ರೀ ಮುನಿರಾಜುಗೌಡ ಪಿ.ಎಂ. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಂಬತ್ತಳ್ಳಿ ಸರ್ವೆ ನಂ.85 ನೆಲ್ಲೂ ರೆಡ್ಡಿ ಕ್ವಾರಿ ಪ್ರದೇಶದಲ್ಲಿ ಅನಧಿಕೃತ ಜೈವಿಕ ತ್ಯಾಜ್ಯದ ವಿಲೇವಾರಿಯಿಂದ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಾಸಿಸುತ್ತಿರುವ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಕುರಿತು ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು) (ಮುಖ್ಯಮಂತ್ರಿಯವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಮುನಿರಾಜುಗೌಡ ಪಿ.ಎಂ. ಇವರು ನಿಯಮ 72ರ ಅಡಿಯಲ್ಲಿ ಕೇಳಿರುವ ಸೂಚನೆಗೆ ಉತ್ತರವನ್ನು ಮಂಡಿಸಲಾಗಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ 198 ವಾರ್ಡ್‌ಗಳಲ್ಲಿ ಪಾಲಿಕೆಯ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು/ಹೆರಿಗೆ ಆಸ್ಪತ್ರೆಗಳು/ರೆಫರಲ್ ಆಸ್ಪತ್ರೆಗಳು/ಡಯಾಲಿಸಿಸ್ ಘಟಕಗಳಲ್ಲಿ ಉತ್ಪತ್ತಿಯಾಗುವ ಜೈವಿಕ ತ್ಯಾಜ್ಯದ ವಿಲೇವಾರಿಯ ಬಗ್ಗೆ ಮಾನ್ಯ ಸದಸ್ಯರು ಉಲ್ಲೇಖ ಮಾಡಿದ್ದಾರೆ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಮಾನ್ಯ ಸದಸ್ಯರ ಕೈಗೆ ಉತ್ತರವನ್ನು ಕೊಟ್ಟಿದ್ದೀರಲ್ಲವೆ? ಈಗ ಅವರಿಗೆ ಸ್ಪಷ್ಟೀಕರಣವನ್ನು ಕೇಳಲು ಬಿಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಆಗಲಿ ಮಾನ್ಯ ಸಭಾಪತಿಯವರೆ, ಉತ್ತರವನ್ನು ಮಂಡಿಸಲಾಗಿದೆ ಹಾಗೂ ಮಾಹಿತಿಯನ್ನು ಒದಗಿಸಲಾಗಿದೆ. ಮಾನ್ಯ ಮುನಿರಾಜುಗೌಡ ಅವರೇ, ತಾವೇನಾದರೂ ಕೇಳುವುದಿದ್ದರೆ ಕೇಳಿ.

**(ಸಚಿವರ ಹೇಳಿಕೆಯನ್ನು ಲಗತ್ತಿಸಲಾಗಿದೆ)**

**ಶ್ರೀ ಮುನಿರಾಜುಗೌಡ ಪಿ.ಎಂ. (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬೆಂಗಳೂರು ದಕ್ಷಿಣ ತಾಲ್ಲೂಕು ಕೆಂಬತ್ತಳ್ಳಿ ಗ್ರಾಮ ವಿಧಾನಸೌಧದಿಂದ 12 ರಿಂದ 13 ಕಿಲೋಮೀಟರ್ ದೂರದಲ್ಲಿದೆ. ಕೆಂಬತ್ತಳ್ಳಿ, ಗೊಲ್ಲಹಳ್ಳಿ, ಅಂಜನಾಪುರ, ಅಮೃತ್‌ನಗರ, ಕುಲುಮೆಪಾಳ್ಯ, ಗೊಟ್ಟಿಗೆರೆ ಹೀಗೆ ಹಲವು ಕಡೆಗಳಲ್ಲಿ ರೈತರು ವಾಸಿಸುತ್ತಿದ್ದು, ಇದು ನೈಸ್ ರಸ್ತೆಯ ಪಕ್ಕದಲ್ಲಿದೆ. ನಿನ್ನೆ ಮಾನ್ಯ ಆರೋಗ್ಯ ಸಚಿವರು ಮಾತನಾಡುವಾಗ 'Health Tourism' ಎಂದು ನಮ್ಮ ದೇಶದ ವೈದ್ಯರ ಬಗ್ಗೆ ಅತ್ಯಂತ ಹೆಚ್ಚು ನಂಬಿಕೆಯನ್ನು ಇಟ್ಟು ಇಲ್ಲಿ ಒಳ್ಳೆಯ ವೈದ್ಯಕೀಯ ಸೌಲಭ್ಯಗಳು ಲಭ್ಯವಾಗುತ್ತವೆ ಎಂದು ವಿದೇಶಗಳಿಂದ ರೋಗಿಗಳು ಬರುತ್ತಿದ್ದಾರೆ ಎಂದು ಹೇಳಿದರು. ಉತ್ತಮ ವೈದ್ಯಕೀಯ ಸೌಲಭ್ಯ ದೊರೆಯುತ್ತದೆ ಎನ್ನುವುದು ಸರಿಯಷ್ಟೆ. ಆದರೆ ಹೊಸೂರು ರಸ್ತೆ ಇರಬಹುದು, ಬನ್ನೇರುಘಟ್ಟ ರಸ್ತೆ ಇರಬಹುದು, ಕನಕಪುರ ರಸ್ತೆ ಇರಬಹುದು. ಇಲ್ಲಿರುವಂತಹ ಆಸ್ಪತ್ರೆಗಳಲ್ಲಿ ಉತ್ಪತ್ತಿಯಾಗುವಂತಹ ತ್ಯಾಜ್ಯವನ್ನು ಸರಿಯಾಗಿ ವಿಲೇವಾರಿ ಮಾಡದೆ ಅಲ್ಲಿರುವ ಕ್ವಾರಿ ಪ್ರದೇಶಗಳಲ್ಲಿ dump ಮಾಡಲಾಗುತ್ತಿದೆ. ವಿಶೇಷವಾಗಿ ರಾತ್ರಿ ಹೊತ್ತಿನಲ್ಲಿ ನೈಸ್ ರಸ್ತೆಯವರ ಸಹಕಾರದೊಂದಿಗೆ ಇಲ್ಲಿ ಬಂದು dump ಮಾಡುವ ಕೆಲಸವನ್ನು ಮಾಡಲಾಗುತ್ತಿದೆ. ಅಲ್ಲಿಗೆ ಬರುವವರು ಕೆ.ಜಿ.ಎಫ್.ಸಿನಿಮಾದಲ್ಲಿ ಯಾವ ರೀತಿ ವಿಲನ್ ಬರುವಾಗ ಹಿಂದೆ ಎರಡು ಬುಲೆಟ್‌ಗಳಲ್ಲಿ ಮತ್ತು ಮುಂದೆ ಎರಡು ಬುಲೆಟ್‌ಗಳಲ್ಲಿ ಬಂದು ಕಸವನ್ನು ತಂದು ಅಲ್ಲಿ dump ಮಾಡಲಾಗುತ್ತಿದೆ. ಪ್ರತಿದಿನ ರಾತ್ರಿ ಕಸವನ್ನು dump ಮಾಡಿದ ನಂತರ ಅದಕ್ಕೆ ಬೆಂಕಿ ಇಡುವ ಕೆಲಸವನ್ನು ಮಧ್ಯರಾತ್ರಿಯಲ್ಲಿ ಮಾಡಲಾಗುತ್ತದೆ. ಬೆಂಕಿ ಇಟ್ಟ ನಂತರ ಸುತ್ತಮುತ್ತಲಿರುವ ಹಳ್ಳಿಗಳಲ್ಲಿ ವಾಸಿಸುತ್ತಿರುವ ಜನರಿಗೆ ಅತ್ಯಂತ ಹೆಚ್ಚು ತೊಂದರೆಯಾಗುತ್ತಿದೆ. ಕ್ವಾರಿ ಪ್ರದೇಶದಲ್ಲಿ ತಂದು ಕಸವನ್ನು ಸುರಿಯುತ್ತಿರುವುದರಿಂದ ಅಂತರ್ಜಲ ಕಲುಷಿತವಾಗುತ್ತಿದೆ.

ವೈದ್ಯಕೀಯ ತ್ಯಾಜ್ಯದ ಸಂಸ್ಕರಣೆಗೆ ದಾಬಸ್‌ಪೇಟೆಗೆ ಹೋಗಬೇಕು ಅಥವಾ ಚಿಕ್ಕಬಳ್ಳಾಪುರದ ಕಡೆಗೆ ಹೋಗಬೇಕು. ಬೆಂಗಳೂರಿನ ದಕ್ಷಿಣ ಭಾಗದಲ್ಲಿ ಇಂತಹ ಸಂಸ್ಕರಣಾ ಘಟಕಗಳು ಇಲ್ಲ ಎನ್ನುವ ಏಕೈಕ ಕಾರಣಕ್ಕೆ ವೈದ್ಯಕೀಯ ತ್ಯಾಜ್ಯವನ್ನು ಸಂಸ್ಕರಣೆ ಮಾಡಲು ಅತ್ಯಂತ ಹೆಚ್ಚಿನ ಹಣವನ್ನು ವ್ಯಯ ಮಾಡಬೇಕೆಂದು ಸ್ಥಳೀಯ ಯುವಕರು, ಪೋಲೀಸ್ ಅಧಿಕಾರಿಗಳು,

ಬಿ.ಬಿ.ಎಂ.ಪಿ. ಆರೋಗ್ಯ ಅಧಿಕಾರಿಗಳಿಗೆ ಹಣವನ್ನು ಕೊಟ್ಟು ಖಾಲಿ ಇರುವ ಈ ಪ್ರದೇಶದಲ್ಲಿ dump ಮಾಡಿಸುತ್ತಿದ್ದಾರೆ. ಆ ಮುಖಾಂತರ ಸುತ್ತಮುತ್ತಲ ಪ್ರದೇಶವನ್ನು ಕಲುಷಿತಗೊಳಿಸುತ್ತಿದ್ದಾರೆ. ಅಮೃತ್‌ನಗರ ಎನ್ನುವುದು ಒಂದು ಕಾಲದಲ್ಲಿ ಅಮೃತಮಹಲ್ ಕಾವಲ್ ಎಂದಿದ್ದು, ಸುಮಾರು ೩೦೦೦ ಕ್ಕಿಂತಲೂ ಹೆಚ್ಚು ದನಕರುಗಳು ಆ ಗೋಮಾಳ ಜಮೀನುಗಳಲ್ಲಿ ಮೇಯುತ್ತಿದ್ದವು. ಇಂದು ಆ ಗೋಮಾಳ ಜಮೀನುಗಳಲ್ಲಿ ಬೆಂಗಳೂರಿನ ಸಂಪೂರ್ಣ ಕಸವನ್ನು ಅದರಲ್ಲಿಯೂ ವಿಶೇಷವಾಗಿ ವೈದ್ಯಕೀಯ ತ್ಯಾಜ್ಯವನ್ನು ಅಲ್ಲಿ dump ಮಾಡುವ ಮೂಲಕ ಸ್ಥಳೀಯ ಜನರು ವಾಸಿಸಲು ಯೋಗ್ಯವಿಲ್ಲದಂತೆ ಮಾಡಿದ್ದಾರೆ.

ಇಂದು ಬೆಂಗಳೂರಿನಲ್ಲಿ ಉಸಿರಾಡಲು ಆಮ್ಲಜನಕವನ್ನು ಒದಗಿಸುತ್ತಿರುವ ಲಾಲ್‌ಬಾಗ್, ಕಬ್ಬನ್‌ಪಾರ್ಕ್, ಜಾರಕಬಂಡೆ, ಜಿಕೆವಿಕೆ ಅಥವಾ ತುರಹಳ್ಳಿ ಅರಣ್ಯ ಪ್ರದೇಶವಿರಬಹುದು. ಇವುಗಳ ಜೊತೆಯಲ್ಲಿ ಈ ಕೆಂಬತ್ತಳ್ಳಿ ಕ್ವಾರಿ ಪ್ರದೇಶವು ಸಹ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಸುತ್ತಮುತ್ತಲೂ ಬರುತ್ತದೆ. ಬನ್ನೇರುಘಟ್ಟದಲ್ಲಿ ಚಿಟ್ಟೆ ಪಾರ್ಕ್ ಇದೆ. ಅದರ ಜೊತೆಯಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿ ನಗರ ಎಂದು ಬಿ.ಡಿ.ಎ.ಯಿಂದ ಲೇಔಟ್ ಅನ್ನು ಮಾಡಲಾಗಿದೆ. ಮಾನ್ಯ ಎಸ್.ಎಂ.ಕೃಷ್ಣ ಅವರು ರಾಜ್ಯದ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಸಿದ್ಧಪಡಿಸಲಾದ ಆ ಬಡಾವಣೆಗೆ ಇಂದಿಗೂ ಜನರು ಬರಲು ಭಯಪಡುತ್ತಾರೆ. ಕಾರಣ ಈ ರೀತಿಯಾಗಿ ಕಸವನ್ನು ಹಾಕುವುದು ಅದರಲ್ಲಿಯೂ ವೈದ್ಯಕೀಯ ಕಸವನ್ನು ಹಾಕುವುದರಿಂದ ಅಲ್ಲಿ ದನಕರುಗಳೂ ಸಹ ಬದುಕದಂತೆ ಆಗಿದೆ. ಅವುಗಳಿಗೆ ಆಹಾರವೇ ಇಲ್ಲದಂತಾಗಿದೆ. ವೈದ್ಯಕೀಯ ತ್ಯಾಜ್ಯವನ್ನು ತಿಂದು ದನಕರುಗಳು ಸಾಯುತ್ತಿವೆ. ನಾಯಿಗಳಿಗೆ ಹುಚ್ಚು ಹಿಡಿದು ತಿರುಗುತ್ತಿವೆ. ಹೀಗೆ ವೈದ್ಯಕೀಯ ತ್ಯಾಜ್ಯಕ್ಕೆ ಬೆಂಕಿ ಹಚ್ಚುವುದರಿಂದ ಸಾಕಷ್ಟು ತೊಂದರೆಯಾಗುತ್ತಿದೆ.

ಇದರ ಹಿಂದೆ ಬಹುದೊಡ್ಡ ಷಡ್ಯಂತ್ರ ಇದೆ. ಈ ಕ್ವಾರಿ ಪ್ರದೇಶಕ್ಕೆ ಹೋಗಲು ನೈಸ್ ರಸ್ತೆಯ ಮೂಲಕ ರಸ್ತೆಯಿದೆ. ಬನ್ನೇರುಘಟ್ಟ ರಸ್ತೆಯಿಂದ ತುಮಕೂರು ರಸ್ತೆಯವರೆಗೆ ಎರಡೂ ಕಡೆ ನೈಸ್ ರಸ್ತೆಗೆ ಕಾಂಪೌಂಡ್ ಹಾಕಿದ್ದಾರೆ. ಆದರೆ ಈ ಕೆಂಬತ್ತಳ್ಳಿ ಪ್ರದೇಶದಲ್ಲಿ ಒಂದು ಗೇಟ್ ಅನ್ನು ಇಟ್ಟು ಆ ಮೂಲಕ ಕ್ವಾರಿ ಪ್ರದೇಶಕ್ಕೆ ಹೋಗಿ ವೈದ್ಯಕೀಯ ತ್ಯಾಜ್ಯವನ್ನು ಹಾಕಲಾಗುತ್ತದೆ. ಇದರಲ್ಲಿ

ಸಂಪೂರ್ಣವಾಗಿ ನೈಸ್ ರಸ್ತೆಯವರು, ಸರ್ಕಾರದ ಅಧಿಕಾರಿಗಳು ಶಾಮೀಲಾಗಿದ್ದಾರೆ. ಇದನ್ನು ಕೂಡಲೇ ನಿಲ್ಲಿಸಬೇಕೆಂದು ನಾನು ಸರ್ಕಾರದಲ್ಲಿ ಮನವಿ ಮಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಗಂಭೀರವಾದ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಜೈವಿಕ ತ್ಯಾಜ್ಯವನ್ನು ವಿಲೇವಾರಿ ಮಾಡುವ ಬಗ್ಗೆ ಆರೋಗ್ಯ ಇಲಾಖೆಯ ಅಧಿಕಾರಿಗಳು ನೋಟಿಸ್ ಅನ್ನು ಕೊಟ್ಟಿದ್ದಾರೆ. ಅವರು ಹೇಳಿರುವಂತಹ ಸರ್ವೆ ನಂ.೮೫ರ ಬದಲಿಗೆ ಸರ್ವೆ ನಂ.೫೫ರಲ್ಲಿ ಜೈವಿಕ ಘನತ್ಯಾಜ್ಯವನ್ನು ಸುರಿಯುತ್ತಿರುವುದು ಕಂಡುಬಂದಿದ್ದು, ಅಪೊಲೋ ಸ್ಪೆಷಾಲಿಟಿ ಆಸ್ಪತ್ರೆಯವರಿಗೆ ನೋಟಿಸ್ ಅನ್ನು ಕೊಡಲಾಗಿದೆ. ಜೈವಿಕ ಘನತ್ಯಾಜ್ಯದ ವಿಲೇವಾರಿಗೆ ಒಡಂಬಡಿಕೆ ಮಾಡಿಕೊಂಡಿರುವ ಸಂಸ್ಥೆಯಾಗಿರುವ ಮೆ:ಮರಡಿ ಏಜೆನ್ಸೀಸ್ ಅವರಿಗೆ ನೋಟಿಸ್ ಜಾರಿ ಮಾಡಲಾಗಿದ್ದು, ಅದನ್ನು ಶೀಘ್ರವಾಗಿ ವಿಲೇವಾರಿ ಮಾಡುವಂತೆ ಹೇಳಿದ್ದೇವೆ. ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಆಸ್ಪತ್ರೆಗಳು ಮತ್ತು ಕ್ಲಿನಿಕ್‍ಗಳಿಗೆ ಭೇಟಿ ಕೊಟ್ಟು ಜೈವಿಕ ಘನ ತ್ಯಾಜ್ಯವನ್ನು ಯಾವ ರೀತಿಯಲ್ಲಿ ವಿಲೇವಾರಿ ಮಾಡುತ್ತಾರೆ ಎನ್ನುವುದರ ಬಗ್ಗೆ ಕೂಡ ಸಮೀಕ್ಷೆ ಮಾಡಲಾಗಿದೆ. ವೈಜ್ಞಾನಿಕವಾಗಿ ಮಾಡಬೇಕು ಎನ್ನುವುದರ ಬಗ್ಗೆ ಚರ್ಚೆ ಕೂಡ ನಡೆಯುತ್ತಿದೆ. ಆದಷ್ಟು ಬೇಗ ಇದನ್ನು ವಿಲೇವಾರಿ ಮಾಡುತ್ತೇವೆ. ಅಗತ್ಯವಿದ್ದರೆ ಮಾನ್ಯ ಶಾಸಕರೊಂದಿಗೆ ಬಿ.ಬಿ.ಎಂ.ಪಿ. ಅಧಿಕಾರಿಗಳೊಂದಿಗೆ ಚರ್ಚೆ ಮಾಡಿ ಕ್ರಮ ಕೈಗೊಳ್ಳುತ್ತೇವೆ.

**ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನಾನು ಮಾಲಿನ್ಯ ನಿಯಂತ್ರಣ ಮಂಡಳಿಯ ಸದಸ್ಯನಾಗಿದ್ದೆನು. ಆ ಮರಡಿ ಏಜೆನ್ಸಿಸ್‍ಗಳಿಗೆ ನಾನು ಭೇಟಿ ಕೊಟ್ಟಿದ್ದೇನೆ. ನಾನು ದಾವಣಗೆರೆ ಆಸ್ಪತ್ರೆಯನ್ನು ಸಹ ಸ್ಥಳಪರಿಶೀಲನೆ ಮಾಡಿದ್ದೇನೆ. ಎಲ್ಲವೂ ಅತ್ಯಂತ ಕೆಟ್ಟ ಪರಿಸ್ಥಿತಿಯಲ್ಲಿವೆ. Pollution Control Board is mainly responsible. Pollution Control Board officials ಸಾಮಾನ್ಯವಾಗಿ consent ಅನ್ನು ಕೊಟ್ಟುಬಿಡುತ್ತಾರೆ. ಯಾರೂ spot inspection ಮಾಡುವುದಿಲ್ಲ. ಡಾ:ಜೀವರಾಜ್ ಆಳ್ವ, ಜಯಪ್ರಕಾಶ್ ಮತ್ತು ನಾನು ಸದಸ್ಯರಿದ್ದೆವು. ನಾವೇ ವೈಯಕ್ತಿಕವಾಗಿ ಹೋಗಿ ನೋಡಿದ್ದೇವೆ. ಮೆ:ಮರಡಿ ಏಜೆನ್ಸೀಸ್‍ಗೆ

monopoly ಇದೆ ಎಂದು ಬೆಂಗಳೂರಿನಲ್ಲಿ ನಾಲ್ಕು permission ಗಳನ್ನು ಕೊಡಿಸಿದ್ದೇನೆ. Pollution Control Board ಕೂಡ ಈ ವಿಷಯದಲ್ಲಿ ತುಂಬಾ responsible ಆಗುತ್ತದೆ. Serious act ಇದೆ, ಆದರೆ ಯಾರೂ ಗಂಭೀರವಾಗಿ ಪರಿಗಣಿಸುವುದಿಲ್ಲ. ಈ ವೈದ್ಯಕೀಯ ತ್ಯಾಜ್ಯದಿಂದಾಗಿಯೇ ಎಷ್ಟೋ ಕಾಯಿಲೆಗಳು ಬರುತ್ತವೆ. ಯಾವುದೇ ಸರ್ಕಾರವಿದ್ದರೂ ಅದರ ಬಗ್ಗೆ ಯಾರೂ bother ಮಾಡುತ್ತಿಲ್ಲ. Pollution Control Board Chairman and officials serious ಆಗಿ ತೆಗೆದುಕೊಂಡರೆ ಈ ಸಮಸ್ಯೆ ಪರಿಹಾರವಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, Pollution Control Board ಸದಸ್ಯರನ್ನು ಮತ್ತು ಅಧಿಕಾರಿಗಳನ್ನು ಕರೆದು ಸಭೆ ಮಾಡಲಾಗುವುದು.

**ಇ) ವಿಷಯ: ಮೈಸೂರು ನಗರದಲ್ಲಿ ಚಿತ್ರ ನಗರಿ (ಫಿಲಂ ಸಿಟಿ) ನಿರ್ಮಾಣಕ್ಕೆ ಸರ್ಕಾರದಿಂದ ಆಗುತ್ತಿರುವ ವಿಳಂಬದ ಕುರಿತು**

**ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಮೈಸೂರು ನಗರದಲ್ಲಿ ಚಿತ್ರ ನಗರಿ ನಿರ್ಮಾಣಕ್ಕೆ ಸರ್ಕಾರದಿಂದ ವಿಳಂಬವಾಗುತ್ತಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ವಿವರವಾದ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಯವರಿಂದ ಪಡೆದು ಮಾನ್ಯ ಸದಸ್ಯರಿಗೆ ಒದಗಿಸಲಾಗಿದೆ.

**(ಸಚಿವರ ಹೇಳಿಕೆಯನ್ನು ಲಗತ್ತಿಸಲಾಗಿದೆ)**

**ಶ್ರೀ ಸಿ.ಎನ್.ಮಂಜೇಗೌಡ:-** ಮಾನ್ಯ ಸಭಾಪತಿಯವರೇ, ಉತ್ತರ ಸರಿಯಾಗಿದ್ದು, ತೃಪ್ತಿಕರವಾಗಿದೆ. ತಾವು ಕುಳಿತಿರುವ ಘನತೆವೆತ್ತ ಸ್ಥಾನದಿಂದ ತಮ್ಮ ಕಾಲದಲ್ಲಿಯೇ ಈ ಚಿತ್ರ ನಗರಿ ಪ್ರಕ್ರಿಯೆ ಚಾಲನೆಯಲ್ಲಿ ತಾವು ಸಹ ಭಾಗಿಯಾಗಬೇಕು. ತಾವು ಘನತೆವೆತ್ತ ಪೀಠದಿಂದ ತಮ್ಮ ಅಮೃತವಾಣಿಯಲ್ಲಿ ಸರ್ಕಾರಕ್ಕೆ ನಿರ್ದೇಶನ ನೀಡಿ ಮೈಸೂರಿನಲ್ಲಿ ಚಿತ್ರನಗರಿ ಸಹಭಾಗಿತ್ವವು ತಮ್ಮದಾಗಲಿ ಎಂದು ನಮ್ರತೆಯಿಂದ ಮನಃಪೂರ್ವಕವಾಗಿ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಬಹಳ ಪರಿಣಾಮಕಾರಿಯಾದಂತಹ ವಿಚಾರಗಳನ್ನು ಹೇಳಿದ್ದಾರೆ. ನಾವು ಉತ್ತರವನ್ನು ಕೊಟ್ಟಿದ್ದೇವೆ. ಈಗ ಇರುವ ಸಣ್ಣ ಚರ್ಚೆಯೇನೆಂದರೆ ನಮ್ಮ ವಾರ್ತಾ ಇಲಾಖೆಯ ಮೂಲಕ ಅಭಿವೃದ್ಧಿ ಪಡಿಸುವುದಕ್ಕೆ ಖಾಸಗಿಯವರ ಸಹಭಾಗಿತ್ವದ ಮೂಲಕ ಈ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಾಗುವುದು. ಕಂದಾಯ ಇಲಾಖೆಯವರು ಭೂಮಿಯನ್ನು ಹಸ್ತಾಂತರ ಮಾಡುವುದು ಮಾತ್ರ ಬಾಕಿಯಿದೆ. ಅವರು ಹಣ ಕೇಳುತ್ತಿದ್ದಾರೆ. ಇದು ಸರ್ಕಾರದ ಪ್ರಸ್ತಾವನೆಯಾಗಿರುವುದರಿಂದ ಉಚಿತವಾಗಿ ಕೊಡುವಂತೆ ನಾವು ಕೇಳುತ್ತಿದ್ದೇವೆ. ಕಂದಾಯ ಮಂತ್ರಿಗಳೊಂದಿಗೆ ಮಾತನಾಡಿ ಇದನ್ನು ಉಚಿತವಾಗಿ ತೆಗೆದುಕೊಂಡು ಈ ಕಾಮಗಾರಿಯನ್ನು ಮಾಡಲಾಗುವುದು. ಇದರಿಂದ ಸಮಾಜಕ್ಕೆ ಮತ್ತು ಚಿತ್ರರಂಗಕ್ಕೆ ಹೆಚ್ಚಿನ ಅನುಕೂಲವಾಗುತ್ತದೆ.

**ಸಭಾಪತಿಯವರು:-** ಮಾನ್ಯ ಮಂಜೇಗೌಡರೇ, ಸರ್ಕಾರದ ಉತ್ತರದಿಂದ ತಮಗೆ ಸಮಾಧಾನವಾಗಿದೆಯೆಂದು ಭಾವಿಸುತ್ತೇನೆ. ನಿಮ್ಮ ಬೇಡಿಕೆ ಮತ್ತು ವಿನಂತಿಯನ್ನು ಸರ್ಕಾರ ಸಂಪೂರ್ಣವಾಗಿ ಮನ್ನಿಸುತ್ತದೆ. ಸದನವನ್ನು ನಾಳೆ ಬೆಳಗ್ಗೆ 10 ಗಂಟೆಯವರೆಗೆ ಮುಂದೂಡಲಾಗಿದೆ.

**(ಸಂಜೆ 06 ಗಂಟೆ 19 ನಿಮಿಷಗಳಿಗೆ ಮುಕ್ತಾಯಗೊಂಡ ಸದನವು ಪುನಃ ದಿನಾಂಕ 25ನೇ ಮಾರ್ಚ್ 2022ರ ಶುಕ್ರವಾರದಂದು ಬೆಳಗ್ಗೆ 10 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)**

**<><><>**